ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜೈಲಿನಲ್ಲಿ ಸತ್ಯೇಂದ್ರ ಜೈನ್‌ಗೆ ಮಸಾಜ್? 14

'ಆರೋಪಿಗಳ ಮನೆ ಕೆಡವುವಂತಿಲ್ಲ' 14

ಇಂದು ಭಾನುವಾರದ ಪುರವಣಿ 10

ಶಾಸಕರನ್ನು ಖರೀದಿಸಲು ಪ್ರಯತ್ನಿಸಿದ್ದ ಪ್ರಕರಣ 7

ಬಿ.ಎಲ್.ಸಂತೋಷ್ ಬಂಧನಕ್ಕೆ ತೆಲಂಗಾಣ ಹೈಕೋರ್ಟ್ ತಡೆ 7

ದಲಿತರ ಶಕ್ತಿಗೆ ರೂಪಿಸಿದ್ದ ಪಿಟಿಸಿಎಲ್ ಕಾಯ್ದೆ ದುರ್ಬಲ • ಉಲ್ಲಂಘನೆ ಪ್ರಕರಣಗಳು ಹೇರಳ

ಉಳ್ಳವರಿಗೆ ಆಸ್ತಿ; ದಲಿತರಿಗೆ ನಾಸ್ತಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: 'ಸರ್ಕಾರ ಮಂಜೂರು ಮಾಡಿದ್ದ ಭೂಮಿ ಉಳ್ಳವರ ಪಾಲಾಯಿತು. ವಾಪಸ್ ಪಡೆಯಲು ಜೀವನವನ್ನೇ ಸವೆಸಿದ ಅಪ್ಪ ಅನಾರೋಗ್ಯಕ್ಕೀಡಾಗಿ ಹಾಸಿಗೆ ಹಿಡಿದರು. ನಾನು ಸ್ವಿಗ್ಗಿ, ಜೊಮ್ಯಾಟೊ ಸೇಲ್ಸ್ ಬಾಯ್ ಆಗಬೇಕಾಗಿ ಬಂತು. ಹತ್ತಾರು ಕೋಟಿ ಬೆಲೆ ಬಾಳುವ ಆಸ್ತಿಗೆ ಒಡೆಯನಾಗಬೇಕಿದ್ದ ಬದುಕು ಹೀಗೆ ಬೀದಿ ಪಾಲಾಯಿತು...'

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆ(ಪಿಟಿಸಿಎಲ್) ಉಲ್ಲಂಘಿಸಿ ಪರಭಾರೆ ಆಗಿರುವ ಜಮೀನು ವಾಪಸ್ ಪಡೆಯಲು ಹೋರಾಟ ನಡೆಸಿದ ಯಲ್ಲಪ್ಪ ಎಂಬುವವರ ಹತಾಶೆಯ ನುಡಿ ಇದು.

ಜಮೀನು ಮರಳಿ ಪಡೆಯಲು ಕೋರ್ಟು–ಕಚೇರಿ ಅಲೆದಾಡಿ ಸುಸ್ತಾಗಿರುವ ಹೊಸಕೋಟೆ ತಾಲ್ಲೂಕಿನ ಮಲ್ಲಸಂದ್ರದ ಯಲ್ಲಪ್ಪ, ಈಗ ಯಕೃತ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಚಿಕಿತ್ಸೆಗೆ ವೆಚ್ಚ ಭರಿಸಲಾಗದ ಸ್ಥಿತಿಯಲ್ಲಿ ಕುಟುಂಬ ಇದ್ದರೆ, ಹಾಸಿಗೆಯಿಂದ ಮೇಲೇಳಲು ಸಾಧ್ಯವಾಗದ ಸ್ಥಿತಿ ಅವರದ್ದು.

1938ರಲ್ಲಿ 2 ಎಕರೆ 4 ಗುಂಟೆ ಜಮೀನನ್ನು ಸರ್ಕಾರ ಮಂಜೂರು ಮಾಡಿತ್ತು. ಯಲ್ಲಪ್ಪ ಅವರ ತಂದೆ ಅವರಿಂದ 1980ರಲ್ಲಿ ಬೇರೊಬ್ಬರು ಖರೀದಿಸಿದ್ದರು. ಪಿಟಿಸಿಎಲ್ ಕಾಯ್ದೆ ಪ್ರಕಾರ, ಸರ್ಕಾರ ಮಂಜೂರು ಮಾಡಿದ ಜಮೀನು ಮಾರಾಟಕ್ಕೂ ಮುನ್ನ ಬದಲಿ ಜಮೀನು ಖರೀದಿಸಬೇಕು, ಜತೆಗೆ ಜಿಲ್ಲಾಧಿಕಾರಿಯಿಂದ ಅನುಮತಿ ಪಡೆಯಬೇಕು. ಇದ್ಯಾವುದನ್ನೂ ಮಾಡದೆ ಕಾಯ್ದೆ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ 1992ರಿಂದ ಯಲ್ಲಪ್ಪ ಹೋರಾಟ ನಡೆಸುತ್ತಾ ಬಂದಿದ್ದಾರೆ.

ಜಮೀನು ಪರರ ಪಾಲಾದ ಬಳಿಕ ಬೀದಿ ಬದಿಯಲ್ಲಿ ಸೊಪ್ಪು ಮಾರಾಟ ಮಾಡಿ ಜೀವನ ನಡೆಸುತ್ತಿದ್ದ ಯಲ್ಲಪ್ಪ, ಪಿಟಿಸಿಎಲ್ ಕಾಯ್ದೆ ಬಗ್ಗೆ ತಿಳಿದುಕೊಂಡು ಹೋರಾಟ ಆರಂಭಿಸಿದರು. 30 ವರ್ಷ ನಿರಂತರವಾಗಿ ಕಚೇರಿಗಳ ಬಾಗಿಲು ಎಡತಾಕಿದರು. 'ಉಪವಿಭಾಗಾಧಿಕಾರಿ ನ್ಯಾಯಾಲಯ ಜಮೀನು ಮರು ಮಂಜೂರಾತಿಗೆ ಆದೇಶ ನೀಡಿತ್ತು. ಆದರೆ, ಜಾಗ ಸ್ವಾಧೀನ ಮಾಡಿಕೊಳ್ಳಲು ಅವಕಾಶ ಆಗಲಿಲ್ಲ. ಬಿಡಿಸಿಕೊಡಬೇಕಾದ ಪೊಲೀಸರು ಕೂಡ ಖರೀದಿಸಿದವರ ಪರ ನಿಂತರು. ಅಷ್ಟರಲ್ಲಿ ಜಮೀನು ಖರೀದಿ ಮಾಡಿದವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದರು. ಪೊಲೀಸರು ನಮ್ಮಿಂದಲೇ ಮುಚ್ಚಳಿಕೆ ಬರೆಸಿಕೊಂಡಿದ್ದಾರೆ' ಎಂದು ಯಲ್ಲಪ್ಪ ಅವರ ಮಗ ಚಂದ್ರಶೇಖರ್ ಬೇಸರದಿಂದ ಹೇಳುತ್ತಾರೆ.

6ನೇ ಪುಟ ನೋಡಿ

ಒಳನೋಟ
ನೆರವಿಗೆ ಬಾರದ ಕಾಯ್ದೆ
ಪ್ರತಿಕ್ರಿಯಿಸಿ: 9606038256
feedback@prajavani.co.in

ಅಂಕಿ–ಅಂಶ (2018-2022)



	ಆದೇಶವಾಗಿರುವ ಪ್ರಕರಣಗಳು	ಬಾಕಿ ಇರುವ ಪ್ರಕರಣಗಳು	ಒಟ್ಟು
ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ನ್ಯಾಯಾಲಯ	6,169	7,382	13,551
ಹೈಕೋರ್ಟ್	1,609	989	2,598
ಸುಪ್ರೀಂ ಕೋರ್ಟ್	115	104	219

ಭೂ ಮಾಫಿಯಾದಿಂದ ಅನ್ಯಾಯ

ದಲಿತರಿಗೆ ಬಲ ನೀಡಲು ರೂಪಿಸಿದ ಈ ಕಾಯ್ದೆಯನ್ನೇ ಮುಂದಿಟ್ಟುಕೊಂಡು ದಲಿತರ ಜಮೀನಿಗೆ ಕಡಿಮೆ ಬೆಲೆ ನಿಗದಿ ಮಾಡಿ ಕಸಿದುಕೊಳ್ಳುವ ಪ್ರಯತ್ನಗಳೂ ಸದ್ದಿಲ್ಲದೆ ನಡೆಯುತ್ತಿವೆ.

ಬದಲಿ ಜಮೀನು ಖರೀದಿಗೆ ಜಿಲ್ಲಾಧಿಕಾರಿಯಿಂದ ಅನುಮತಿ ಪಡೆದುಕೊಂಡರೆ, ಮತ್ತೊಮ್ಮೆ ಈ ಕಾಯ್ದೆಯಡಿ ಅರ್ಜಿ ಸಲ್ಲಿಸಿ ಮರು ಮಂಜೂರಾತಿ ಕೋರಲು ಅವಕಾಶ ಇಲ್ಲ. ಇದು ದಲಿತರಿಗೆ ಸರ್ಕಾರ ಮಂಜೂರು ಮಾಡಿದ್ದ ಭೂಮಿಯನ್ನು ಕಾನೂನುಬದ್ಧವಾಗಿ ಮಾರಾಟ ಮಾಡಲು ಇರುವ ಅವಕಾಶ.

ಆದರೆ, ದಲಿತರ ಭೂಮಿ ಎಂದ ಕೂಡಲೇ ಪಿಟಿಸಿಎಲ್ ಕಾಯ್ದೆಯನ್ನು ತೋರಿಸಿ ಕಡಿಮೆ ಬೆಲೆ ನಿಗದಿ ಮಾಡಿ ಖರೀದಿಸಲಾಗುತ್ತದೆ. ಈ ಕಾಯ್ದೆ ಅನ್ವಯವಾಗುವುದು ಸರ್ಕಾರ ಮಂಜೂರು ಮಾಡಿದ ಜಮೀನಿಗೆ ಮಾತ್ರ. ಪಿತ್ರಾರ್ಜಿತ ಆಸ್ತಿ ಅಥವಾ ಸ್ವಯಾರ್ಜಿತ ಆಸ್ತಿಗೆ ಈ ಕಾಯ್ದೆ ಅನ್ವಯವಾಗುವುದಿಲ್ಲ. ಆದರೆ, ಖಾತೆದಾರ ಪರಿಶಿಷ್ಟ ಜಾತಿ ಅಥವಾ ಪಂಗಡ ಎಂಬುದು ಗೊತ್ತಾದ ಕೂಡಲೇ ಕಡಿಮೆ ಬೆಲೆ ನಿಗದಿ ಮಾಡಲಾಗುತ್ತದೆ. ಈ ಬಗ್ಗೆ ಅರಿವಿಲ್ಲದ ಪರಿಶಿಷ್ಟರು ರಿಯಲ್ ಎಸ್ಟೇಟ್ ಮಾಫಿಯಾಗಳು ನಿಗದಿ ಮಾಡುವ ದರಕ್ಕೆ ಮಾರಾಟ ಮಾಡಿ ಕೈ ತೊಳೆದುಕೊಳ್ಳುತ್ತಿದ್ದಾರೆ. ದಲಿತರ ಜಮೀನನ್ನು ಈ ರೀತಿಯಾಗಿ ಕಬಳಿಸುತ್ತಿದೆ ಎಂದು ಸಂಘಟನೆಗಳ ಮುಖಂಡರು ವಿವರಿಸುತ್ತಾರೆ.

ಈ ಎಲ್ಲಾ ಅಂಶಗಳನ್ನೂ ಸೂಕ್ಷ್ಮವಾಗಿ ಗಮನಿಸಿ ಸರ್ಕಾರ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಬೇಕು. ಪರಿಶಿಷ್ಟರ ಭೂಮಿ ಹಕ್ಕನ್ನು ಸಂರಕ್ಷಿಸಬೇಕು ಎಂದು ಒತ್ತಾಯಿಸುತ್ತಾರೆ.

'ಕಾಯ್ದೆ ತಿದ್ದುಪಡಿಯೊಂದೇ ಮಾರ್ಗ'

ದಲಿತರ ಭೂ ಒಡೆತನದ ಹಕ್ಕು ಉಳಿಸಲು ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರುವುದೊಂದೇ ಮಾರ್ಗ. ಪಿಟಿಸಿಎಲ್ ಕಾಯ್ದೆಯಡಿ ಸಲ್ಲಿಕೆಯಾಗುವ ಎಲ್ಲಾ ಅರ್ಜಿಗಳಿಗೂ ಸುಪ್ರೀಂ ಕೋರ್ಟ್ ಆದೇಶವನ್ನೇ ತೋರಿಸಿ ವಜಾ ಮಾಡಲಾಗುತ್ತಿದೆ. ಇದರಿಂದ ಪರಿಶಿಷ್ಟರಿಗೆ ಅನ್ಯಾಯವಾಗುತ್ತಿದೆ.

ಡಿ.ವಿ. ಶೈಲೇಂದ್ರ ಕುಮಾರ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಮೀಸಲಾತಿಗಿಂತ ಪಿಟಿಸಿಎಲ್ ಕಾಯ್ದೆಯೇ ಮುಖ್ಯ

ಎಸ್‌ಸಿಎಸ್‌ಟಿ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಲಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಮೀಸಲಾತಿಗಿಂತಲೂ ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಮುಖ್ಯ. ಎಲ್ಲವೂ ಖಾಸಗೀಕರಣ ಆಗಿರುವಾಗ ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಿಸಿದರೆ ಅಷ್ಟೇನು ಪ್ರಯೋಜನವಾಗದು. ಈ ವಿಷಯವನ್ನು ಮುಖ್ಯಮಂತ್ರಿ ಅವರಿಗೆ ಹಲವು ಬಾರಿ ಮನವರಿಕೆ ಮಾಡಲಾಗಿದೆ. ಆದರೂ, ಕಾಯ್ದೆ ತಿದ್ದುಪಡಿಗೆ ಸರ್ಕಾರ ಮನಸ್ಸು ಮಾಡುತ್ತಿಲ್ಲ. ನಿರ್ಲಕ್ಷ್ಯ ಮಾಡಿದರೆ ಪಕ್ಷ ಬೆಲೆ ತೆರಬೇಕಾಗುತ್ತದೆ.

ಎಂ.ಪಿ.ಕುಮಾರಸ್ವಾಮಿ, ವಿಧಾನ ಮಂಡಲ ಎಸ್‌ಸಿಎಸ್‌ಟಿ ಕಲ್ಯಾಣ ಸಮಿತಿ ಅಧ್ಯಕ್ಷ

'ತಿದ್ದುಪಡಿ ಆಗಲೇಬೇಕು'

'ಈ ಕಾಯ್ದೆಯನ್ನು ತಪ್ಪಾಗಿ ಅರ್ಥೈಸಿಕೊಂಡು ಸುಪ್ರೀಂ ಕೋರ್ಟ್ ಈ ರೀತಿಯ ಆದೇಶ ನೀಡಿದಂತಿದೆ. ಕಾಯ್ದೆಗೆ ತಿದ್ದುಪಡಿ ತಂದು ಪೂರ್ವಾನ್ವಯ ಆಗುವಂತೆ ಆದೇಶ ಹೊರಡಿಸಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹೇಳಿದರು.

ಸ್ವಯಂಪ್ರೇರಿತವಾಗಿ ಜಿಲ್ಲಾಧಿಕಾರಿ ಪ್ರಕರಣ ದಾಖಲಿಸಿಕೊಂಡು ದಲಿತರಿಗೆ ಬಿಡಿಸಿಕೊಡಲು ಅವಕಾಶ ಇದೆ. ಅದನ್ನು ಯಾವ ಜಿಲ್ಲಾಧಿಕಾರಿಯೂ ಇದನ್ನು ಮಾಡಿಲ್ಲ. ಕಾಯ್ದೆಗೆ ತಿದ್ದುಪಡಿ ತಂದು ಮತ್ತೆ ಬಲ ನೀಡಬೇಕಾದ ಅನಿವಾರ್ಯ ಇದೆ ಎಂದರು.

'ಪರಿಶಿಷ್ಟ ಮಹಿಳೆ ನೀರು ಕುಡಿದಿದ್ದಕ್ಕೆ ಗೋಮೂತ್ರದಿಂದ ಟ್ಯಾಂಕ್ ಶುದ್ಧೀಕರಣ'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಾಲ್ಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮಹಿಳೆಯೊಬ್ಬರು ನೀರು ಕುಡಿದರೆಂದು, ಕಿರು ನೀರು ಸರಬರಾಜು ಟ್ಯಾಂಕ್‌ನ ನೀರೆಲ್ಲವನ್ನೂ ಹೊರಕ್ಕೆ ಹರಿಸಿ, ಗೋಮೂತ್ರದಿಂದ ಶುದ್ಧೀಕರಿಸಿರುವ ಪ್ರಕರಣ ನಡೆದಿದೆ.

ಟ್ಯಾಂಕ್‌ನ ಎಲ್ಲ ನಲ್ಲಿಗಳಿಂದಲೂ ನೀರನ್ನು ಹರಿಸುತ್ತಿರುವ ವಿಡಿಯೊವನ್ನು ವ್ಯಕ್ತಿಯೊಬ್ಬರು ಫೇಸ್‌ಬುಕ್‌ನಲ್ಲಿ ಹಾಕಿದ್ದಾರೆ.

ಘಟನೆಯು ತಾಲ್ಲೂಕು ಆಡಳಿತದ ಗಮನಕ್ಕೆ ಬಂದಿದೆ. ಸ್ಥಳೀಯ ಕಂದಾಯ ನಿರೀಕ್ಷಕ ಸೇರಿ ಅಧಿಕಾರಿಗಳು ಶನಿವಾರ ಗ್ರಾಮಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದು, ತಹಶೀಲ್ದಾರ್‌ಗೆ ವರದಿ ನೀಡಿದ್ದಾರೆ. 'ಸಮುದಾಯದ ಸುಮಾರು 20 ಯುವಕರು ಘಟನೆ ಕುರಿತು ಲಿಖಿತವಾಗಿ ದೃಢಪಡಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಘಟನೆ ನಿಜವೇ ಆಗಿದ್ದರೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ತಹಶೀಲ್ದಾರ್ ಐ.ಇ.ಬಸವರಾಜು ಅವರು ಪ್ರತಿಕ್ರಿಯಿಸಿದರು.

'ಪರಿಶಿಷ್ಟ ಸಮುದಾಯದ ಯುವಕನೊಬ್ಬನ ಮದುವೆಗೆ ಶುಕ್ರವಾರ ಬಂದಿದ್ದ ವಧುವಿನ ಕಡೆಯ ಮಹಿಳೆಯೊಬ್ಬರು ಮಧ್ಯಾಹ್ನದ ಊಟ ಮುಗಿಸಿ ತೆರಳುವಾಗ ಗ್ರಾಮದ ಹಳೆ ಮಾರಿಗುಡಿ ಬಳಿ ಲಿಂಗಾಯತರ ಬೀದಿಯಲ್ಲಿರುವ ಟ್ಯಾಂಕ್‌ನ ನಲ್ಲಿಯಲ್ಲಿ ನೀರು ಕುಡಿದಿದ್ದರು. ಆಕೆ ಪರಿಶಿಷ್ಟರೆಂದು ತಿಳಿಯುತ್ತಿದ್ದಂತೆ ಸ್ಥಳೀಯರು ಬೈದಿದ್ದರು. ನಂತರ ನೀರು ಖಾಲಿ ಮಾಡಿ ಗಂಜಲ ಹಾಕಿ ಸ್ವಚ್ಛಗೊಳಿಸಿದರು' ಎಂದು ಗ್ರಾಮಸ್ಥರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಗ್ರಾಮಕ್ಕೆ ತೆರಳಿ ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿ ಸಮಗ್ರ ವರದಿ ನೀಡಲು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಸೂಚಿಸಲಾಗುವುದು. ಗ್ರಾಮದಲ್ಲಿ ಎಲ್ಲ ಸಮುದಾಯದವರ ಸಭೆ ನಡೆಸಲಾಗುವುದು' ಎಂದು ತಹಶೀಲ್ದಾರ್ ಅವರು ತಿಳಿಸಿದ್ದಾರೆ.

ನಿರ್ದೇಶಕ ಕೃಷ್ಣೇಗೌಡ ಬಂಧನ • 'ಪ್ರಭಾವಿ'ಯ ಚೆಕ್, ಲೆಟರ್‌ಹೆಡ್ ವಶ

ದತ್ತಾಂಶ ಮಾರಾಟದ 'ಚಿಲುಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ದತ್ತಾಂಶ ಕಳವಿನ ಆರೋಪ ಹೊತ್ತಿರುವ 'ಚಿಲುಮೆ' ಸಂಸ್ಥೆ ಬೆನ್ನು ಹತ್ತಿರುವ ಪೊಲೀಸರಿಗೆ ಆಘಾತಕಾರಿ ಮಾಹಿತಿ ಸಿಕ್ಕಿದ್ದು, ಈ ಸಂಸ್ಥೆಯು ದತ್ತಾಂಶ ಮಾರಾಟಕ್ಕೆ ಮುಂದಾಗಿದ್ದ ಸಂಗತಿ ತನಿಖೆಯಿಂದ ಹೊರಬಿದ್ದಿದೆ.

ಈ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಚಿಲುಮೆ ಸಂಸ್ಥೆಯ ವಿವಿಧ ಕಚೇರಿಗಳ ಶೋಧ ನಡೆಸಿದಾಗ ಪ್ರಭಾವಿ ರಾಜಕಾರಣಿಯೊಬ್ಬರ ಲೆಟರ್ ಹೆಡ್, ಖಾಲಿ ಚೆಕ್‌ಗಳು, ನೋಟು ಎಣಿಸುವ ಯಂತ್ರಗಳು, ಐಎಎಸ್–ಕೆಎಎಸ್ ಅಧಿಕಾರಿಗಳ ವಿಸಿಟಿಂಗ್ ಕಾರ್ಡ್‌ಗಳು, ಬಿಬಿಎಂಪಿ ಅಧಿಕಾರಿಗಳ ಹೆಸರಿನ ಗುರುತಿನ ಚೀಟಿಗಳು ಸಿಕ್ಕಿವೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಕರಣ ದಾಖಲಾದ ಬಳಿಕ ಸಂಸ್ಥೆಯ ಮುಖ್ಯಸ್ಥ ರವಿಕುಮಾರ್ ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ಶೋಧ ನಡೆದಿದೆ. ಸಂಸ್ಥೆಯ ಹಣಕಾಸು ವ್ಯವಹಾರ ನೋಡಿಕೊಳ್ಳುತ್ತಿದ್ದ ನಿರ್ದೇಶಕ ಕೃಷ್ಣೇಗೌಡ ಅಲಿಯಾಸ್ ಕೆಂಪೇಗೌಡ ಅವರನ್ನು ಬಂಧಿಸಲಾಗಿದೆ. ರವಿಕುಮಾರ್ ಅವರ ಪತ್ನಿ ಐಶ್ವರ್ಯಾ ಹಾಗೂ ರವಿ ಅವರ ಪೋಷಕರು, ಕೃಷ್ಣೇಗೌಡರ ಪತ್ನಿ ಶ್ರುತಿ ಹಾಗೂ ಆಕೆಯ ಪೋಷಕರನ್ನು ಹಲಸೂರು ಗೇಟ್ ಪೊಲೀಸರು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸಿದರು.

'ಐಶ್ವರ್ಯಾ ಮತ್ತು ಶ್ರುತಿ ಅವರು ಸಂಸ್ಥೆಯ ನಿರ್ದೇಶಕರಾಗಿದ್ದು, ಇಬ್ಬರಿಗೂ ಸಂಸ್ಥೆಯ ವ್ಯವಹಾರಗಳು ತಿಳಿದಿದ್ದವು. ಎಫ್‌ಐಆರ್ ದಾಖಲಾದ ಮೇಲೆ ದಾಖಲೆಗಳನ್ನು ಬಚ್ಚಿಡಲು ಟಿ. ಬೇಗೂರಿನಲ್ಲಿರುವ ತೋಟದ ಮನೆಗೆ ಒಯ್ಯುತ್ತಿದ್ದಾಗ ಇಬ್ಬರನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹಣಕಾಸು ವಹಿವಾಟಿನ ಸಾಕ್ಷ್ಯ: ಚಿಲುಮೆ ಸಂಸ್ಥೆಯು ಬೆಂಗಳೂರಿನ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಮಾಹಿತಿ ಸಂಗ್ರಹಿಸಿತ್ತು. ಹಿಂದಿನ ಚುನಾವಣೆಯಲ್ಲಿ ಮತದಾನ ಮಾಡಿದವರ ವಿವರ, ಮುಂದಿನ ಚುನಾವಣೆಯಲ್ಲಿ ಮತದಾರ ಬೆಂಬಲಿಸುವ ಪಕ್ಷದ ಮಾಹಿತಿಯನ್ನೂ ಸಂಸ್ಥೆ ಕಲೆ ಹಾಕಿತ್ತು. ಆ ಮಾಹಿತಿಯ ಮಾರಾಟಕ್ಕೆ ಮಾಜಿ ಶಾಸಕರೊಬ್ಬರೂ ಸೇರಿ ಹಲವರನ್ನು ಇ–ಮೇಲ್ ಮೂಲಕ ಸಂಪರ್ಕಿಸಿರುವ ಮಾಹಿತಿ ತನಿಖಾ ತಂಡಕ್ಕೆ ಲಭಿಸಿದೆ. ಈ ಸಂಸ್ಥೆಯ ಸಿಬ್ಬಂದಿ ಬಸವನಗುಡಿಯ ಬಾಲಾಜಿ ಎಂಬುವವರ ಮನೆಗೆ ಸಮೀಕ್ಷೆಗೆ ತೆರಳಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದೂ ಮೂಲಗಳು ಹೇಳಿವೆ.

8ನೇ ಪುಟ ನೋಡಿ

'ಚಿಲುಮೆಗೆ ಆದೇಶ ನೀಡಿದ್ದು ಕಾಂಗ್ರೆಸ್ ಸರ್ಕಾರ'

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆಯ ಕೆಲಸವನ್ನು ಖಾಸಗಿ ಸಂಸ್ಥೆಯಾದ ಚಿಲುಮೆಗೆ ನೀಡುವ ಮೊದಲ ಆದೇಶ ಹೊರಡಿಸಿದ್ದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ. ಈಗ ಕಾಂಗ್ರೆಸ್‌ನವರು ಸತ್ಯಾಂಶ ಮುಚ್ಚಿಟ್ಟು ಆರೋಪ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮತದಾರರ ಮಾಹಿತಿ ಕಳವು ಪ್ರಕರಣ ಕುರಿತು ಶನಿವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಣೆಗೆ 2017ರ ಸೆಪ್ಟೆಂಬರ್ 15ರಂದು ಚಿಲುಮೆ ಸಂಸ್ಥೆಗೆ ಅನುಮತಿ ನೀಡಿ ಆದೇಶ ಹೊರಡಿಸಲಾಗಿತ್ತು. ಮತಗಟ್ಟೆ ಹಂತದ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಅಧಿಕಾರವನ್ನೂ ಆ ಸಂಸ್ಥೆಗೆ ನೀಡಲಾಗಿತ್ತು.

4ನೇ ಪುಟ ನೋಡಿ

ಸಿಐಡಿಗೆ ವರ್ಗಾವಣೆ ಸಾಧ್ಯತೆ

'ಚಿಲುಮೆ' ಸಂಸ್ಥೆಯ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಿದ್ದು, ಪ್ರಕರಣವನ್ನು ಸಿಐಡಿಗೆ ವಹಿಸುವ ಸಾಧ್ಯತೆಯಿದೆ. ಆ ನಿಟ್ಟಿನಲ್ಲಿ ಚಿಂತನೆ ನಡೆದಿದೆ. ಸದ್ಯಕ್ಕೆ ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸಗೌಡ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ.

ಡಿ.7ರಿಂದ ಸಂಸತ್‌ನ ಚಳಿಗಾಲದ ಅಧಿವೇಶನ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನ ಡಿ.7 ರಿಂದ 29ರವರೆಗೆ ನಡೆಯಲಿದೆ.

ಕಾಂಗ್ರೆಸ್ ಮತ್ತಿತರ ಪಕ್ಷಗಳು ಬೆಲೆ ಏರಿಕೆ, ನಿರುದ್ಯೋಗ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಪ್ರಸ್ತಾಪಿಸಲು ಸಜ್ಜಾಗಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮುಚ್ಚುವ ಸ್ಥಿತಿಯಲ್ಲಿದ್ದ ಶಾಲೆಯಲ್ಲೀಗ ಮಕ್ಕಳ ಕಲರವ

ಸ್ಥಿತಿವಂತರನ್ನೂ ಆಕರ್ಷಿಸುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರ ಪ್ರದೇಶಗಳ ಬಹುತೇಕ ಸರ್ಕಾರಿ ಶಾಲೆಗಳು ಮಕ್ಕಳಿಲ್ಲದೇ ಬಾಗಿಲು ಮುಚ್ಚುವ ಸ್ಥಿತಿ ತಲುಪುತ್ತಿದ್ದರೆ, ಮೈಸೂರು ರಸ್ತೆಯ ಮುತ್ತುರಾಯ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮಕ್ಕಳನ್ನು ಸೇರಿಸಲು ಸ್ಥಿತಿವಂತರೂ ದುಂಬಾಲು ಬೀಳುತ್ತಿದ್ದಾರೆ.

ಮೂಲಸೌಕರ್ಯಗಳ ಜತೆಗೆ, ಉತ್ತಮ ಗುಣಮಟ್ಟದ ಶಿಕ್ಷಣ ನೀಡಿದರೆ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಲು ಪೋಷಕರು ಮನಸ್ಸು ಮಾಡುತ್ತಾರೆ ಎನ್ನುವುದಕ್ಕೆ ಈ ಶಾಲೆ ಮಾದರಿಯಾಗಿದೆ. ಮುತ್ತುರಾಯ ನಗರದ ಮಕ್ಕಳಲ್ಲದೇ, ನಾಗದೇವನಪುರ, ದುಬಾಸಿಪಾಳ್ಯ, ಭೈರವನಗರ, ಕಾರ್ಮಿಕರ ಕಾಲೊನಿಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಖಾಸಗಿ ಶಾಲೆ ಆಡಳಿತ ಮಂಡಳಿಗಳು ಭೇಟಿ ನೀಡಿ, ಕಲಿಕಾ ವಿಧಾನ ಕುರಿತು ಮಾಹಿತಿ ಪಡೆಯುತ್ತಿದ್ದಾರೆ. ಸರ್ಕಾರ, ಈ ಶಾಲೆಯಿಂದ ಸ್ಫೂರ್ತಿ ಪಡೆದು ಬೆಂಗಳೂರಿನ 20 ಶಾಲೆಗಳನ್ನು ಇದೇ ಮಾದರಿಯಲ್ಲಿ ರೂಪಿಸಲು ಮುಂದಾಗಿದೆ.

ಬೆಂಗಳೂರಿನ ಮುತ್ತುರಾಯ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

8ನೇ ಪುಟ ನೋಡಿ

ಭಾನುವಾರದ ಉಷ್ಣಾಂಶ 27° ಗರಿಷ್ಠ 17° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ: ಸೋಮವಾರ 27° 18° | ಮಂಗಳವಾರ 27° 18° | ಬುಧವಾರ 28° 18°

ಶನಿವಾರದ ಹವಾಮಾನ : ಗರಿಷ್ಠ 27° ಕನಿಷ್ಠ 15°

ಮತದಾರರ ಪಟ್ಟಿ: ಆಕ್ಷೇಪಣೆಗೆ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗಾಗಲೇ ಪ್ರಕಟವಾಗಿರುವ ನಗರದ ಮತದಾರರ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಬಿಬಿಎಂಪಿ ವಿಶೇಷ ಅಭಿಯಾನ ಹಮ್ಮಿಕೊಂಡಿದೆ.

ಕರಡು ಪಟ್ಟಿ ನ.9ರಂದು ಪ್ರಕಟವಾಗಿದ್ದು, ಆಕ್ಷೇಪಣೆ ಸಲ್ಲಿಸಲು ಡಿ.8ರವರೆಗೆ ಅವಕಾಶ ಇದೆ. ಹೆಸರು ಸೇರ್ಪಡೆ ಮತ್ತು ತಿದ್ದುಪಡಿಗೆ ಅವಕಾಶ ಇದೆ. ಇದಕ್ಕಾಗಿ ನ.20, ಡಿ.3 ಮತ್ತು ಡಿ.4ರಂದು ವಿಶೇಷ ಅಭಿಯಾನ ನಡೆಸಲಾಗುತ್ತಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸುಧಾ, ಮಯೂರ ಓದಿರಿ



ಪೆಪ್ಪಾ ಪಿಗ್ ಸೆಲಬ್ರೇಷನ್!

ನಗರದ ಮಿಲ್ಲರ್ಸ್ ರಸ್ತೆಯಲ್ಲಿನ ಅಂಬೇಡ್ಕರ್ ಭವನದಲ್ಲಿ 'ಪೆಪ್ಪಾ ಪಿಗ್ ಮ್ಯೂಸಿಕಲ್ ಲೈವ್' ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಟೂನ್ ಪಾತ್ರ ಪೆಪ್ಪಾ ಪಿಗ್ ಮತ್ತದರ ಬಳಗವನ್ನು ಆಧರಿಸಿದ ಈ ಷೋದಲ್ಲಿ ಚಿಣ್ಣರು ಹಿರಿಯರು ಪೆಪ್ಪಾನೊಟ್ಟಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. – ಪ್ರಜಾವಾಣಿ ಚಿತ್ರ

ಸಸ್ಯಕಾಶಿ... ಸಮಸ್ಯೆಗಳ ರಾಶಿ

ಸಸ್ಯಕಾಶಿಯಲ್ಲಿ ಸಮಸ್ಯೆಗಳ ರಾಶಿ ಇರುವುದಕ್ಕೆ ಜನರಿಂದ ಬಂದಿರುವ ಪ್ರತಿಕ್ರಿಯೆಗಳೇ ಸಾಕ್ಷಿ. ತೋಟಗಾರಿಕಾ ಸಚಿವ ಮುನಿರತ್ನ ಅವರು ಅಲ್ಲಿ 'ಜನಸ್ಪಂದನ' ನಡೆಸಬೇಕೆಂಬ ವಿನಂತಿಗೆ ಒಪ್ಪಿಗೆ ನೀಡಲಿಲ್ಲ. ಇದರಿಂದ ಜನರಿಗೆ ಅಹವಾಲು ಹೇಳಿಕೊಂಡು, ಅಲ್ಲಿಯೇ ಪರಿಹಾರ ಪಡೆಯುವ ಅವಕಾಶವೊಂದನ್ನು ತಪ್ಪಿಸಿದಂತೆ ಆಗಿದೆ. ಅಂತಹ ಜನದನಿಗೆ 'ಪ್ರಜಾವಾಣಿ' ಈ ಮೂಲಕ ವೇದಿಕೆ ಒದಗಿಸಿದೆ.

ಆಳುವ ವರ್ಗಕ್ಕೆ ಇರಲಿ ಇಚ್ಛಾಶಕ್ತಿ



ಬೆಂಗಳೂರಿಗೆ 'ಗಾರ್ಡನ್ ಸಿಟಿ' ಎಂಬ ಕಿರೀಟ ತೊಡಿಸಿದ್ದು ಈ ಸಸ್ಯಕಾಶಿ. ಇತ್ತೀಚೆಗೆ ನಾನಾ ಕಾರಣಗಳಿಂದಾಗಿ ವಲಸಿಗರ ಪ್ರಮಾಣ ಹೆಚ್ಚಿ, ಕಾಂಕ್ರೀಟ್ ಕಾಡು, ಗಾರ್ಬೇಜು ಸಿಟಿ, ರಾಕ್ಷಸ ನಗರಿ ಎಂಬೆಲ್ಲ ಕೆಟ್ಟ ಹೆಸರಿಗೆ ಗುರಿಯಾಗುತ್ತಿದ್ದರೂ ಮಹಾನಗರದ ಹೃದಯ ಭಾಗದಲ್ಲಿ ಹಸಿರು ಹಸಿರಾಗಿ ಉಸಿರಾಡುವ ಶ್ವಾಸಕೋಶ ಇದು. ಉದ್ಯಾನ ನಗರಿಯ 'ದೇವಾಲಯವೀ ಹೂವಿನ ತೋಟಂ' ಇನ್ನೂ ಜೀವ ಹಿಡಿದುಕೊಂಡಿರುವುದು ನಮ್ಮ ಹೆಮ್ಮೆ. ಹಾಗೆಯೇ ಇದನ್ನು ಕಾಪಿಟ್ಟುಕೊಳ್ಳಬೇಕಾದದ್ದು ನಮ್ಮ ಧರ್ಮ, ಆಳುವ ವರ್ಗಕ್ಕೆ ಆ ಇಚ್ಛಾಶಕ್ತಿಯಿದೆಯೆ?

ಈರಪ್ಪ ಎಂ ಕಂಬಳಿ, ಲೇಕ್ ವಿನ್ ಸಂಕ್ರಾಂತಿ ಅಪಾರ್ಟ್‌ಮೆಂಟ್, ರಾಜರಾಜೇಶ್ವರಿನಗರ

ಪ್ರಜಾವಾಣಿ @75
ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು 'ಪ್ರಜಾವಾಣಿ'ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.
9606038256

ವರ್ಷಕ್ಕೆರಡು ಸಲ ಇಲಾಖೆ ಜನರ ಸಲಹೆ ಪಡೆಯಲಿ

ಸುಮಾರು 50 ವರ್ಷಗಳಿಂದ ಲಾಲ್‌ಬಾಗ್ ಉದ್ಯಾನವನ್ನು ನೋಡುತ್ತಾ ಬಂದಿದ್ದೇನೆ. ಈ ಅರ್ಧ ಶತಮಾನದಲ್ಲಿ ಈ ಉದ್ಯಾನ ಯಾವುದೇ ರೀತಿಯಲ್ಲಿ ಹಾಳಾಗಿಲ್ಲ. ಬದಲಾಗಿ ಅದರ ಘನತೆಯನ್ನು, ಸೌಂದರ್ಯವನ್ನು ಕಾಪಾಡುತ್ತ ಬಂದಿರುವುದಲ್ಲದೆ, ಅನೇಕ ರೀತಿಯ ಅಭಿವೃದ್ಧಿ ಕಾರ್ಯಗಳಾಗಿವೆ. ಆದರೆ ಉದ್ಯಾನಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಅಧಿಕವಾಗಿದೆ. ಅದಕ್ಕೆ ತಕ್ಕನಾದ ಕಸದ ಪೆಟ್ಟಿಗೆಗಳು, ಕುಡಿಯುವ ನೀರಿನ ಸೌಲಭ್ಯ ಒದಗಿಸಿಲ್ಲ. ವಿದ್ಯುತ್ ಚಾಲಿತ ವಾಹನಗಳಂತಹ ಪ್ರವಾಸಿಸ್ನೇಹಿ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ. ಇಂತಹ ಸಂದರ್ಭದಲ್ಲಿ ಕೇವಲ ಸರ್ಕಾರ ಇಲಾಖೆಗಳನ್ನು ದೂರದೆ ಪ್ರವಾಸಿಗರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಅರಿತುಕೊಂಡು ಲಾಲ್‌ಬಾಗ್ ಅನ್ನು ಒಂದು ಉತ್ತಮ ಪ್ರವಾಸಿ ತಾಣವನ್ನಾಗಿ ಮಾಡಲು ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಅರಿತು, ಇಲಾಖೆಯ ಜೊತೆ ಸಹಕರಿಸಬೇಕು. ಇಲಾಖೆ ಮತ್ತು ಸರ್ಕಾರ ವರ್ಷಕ್ಕೆರಡು ಬಾರಿ, ಸಾರ್ವಜನಿಕರ, ವಾಯುವಿಹಾರಿ ಸಂಘ–ಸಂಸ್ಥೆಗಳಿಂದ ಸಲಹೆ ಸೂಚನೆ ಪಡೆದು ಉಪಯುಕ್ತವಾದ ಸಲಹೆಗಳನ್ನು ಅನುಷ್ಠಾನಗೊಳಿಸಬೇಕು.

ಟಿ. ವಿ. ಬಿ. ರಾಜನ್, ನಮ್ಮನೆ ಅಪಾರ್ಟ್‌ಮೆಂಟ್, ತಲಘಟ್ಟಪುರ

ಹೆಸರಿಗಷ್ಟೇ ಇರುವ ಕ್ಲಿನಿಕ್

ನಾನು ಲಾಲ್‌ಬಾಗ್‌ನಲ್ಲಿ 30 ವರ್ಷದಿಂದ ನಿಯಮಿತವಾಗಿ ವಾಯುವಿಹಾರ ಮಾಡುತ್ತಿದ್ದೇನೆ. ಆದರೆ ಈಗ ಖಾಸಗಿ ವ್ಯಾಪಾರಸ್ಥರ ಹಾವಳಿ ಹೆಚ್ಚಾಗಿದೆ. ನಾಯಿಗಳ ಸಂತತಿ ಹೆಚ್ಚಾಗಿದ್ದು, ಅವುಗಳಿಗೆ ಆಹಾರ ಹಾಕುವವರ ಸಂಖ್ಯೆ ಹೆಚ್ಚಾಗಿದೆ. ಸರಿಯಾದ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಹೆಸರಿಗಷ್ಟೇ ಒಂದು ಕ್ಲಿನಿಕ್ ಇದೆ. ಆದರೆ ಅಲ್ಲಿ ಯಾರೂ ಇರುವುದಿಲ್ಲ. ನಿಯಮಿತವಾಗಿ ಹಳೆಯ ಮತ್ತು ಒಣಗಿದ ರೆಂಬೆ–ಕೊಂಬೆಗಳನ್ನು ತೆರವು ಮಾಡುತ್ತಿಲ್ಲ. ನಿರ್ವಹಣೆಯ ಕೊರತೆಯಿಂದ ಲಾಲ್‌ಬಾಗ್ ಸೊರಗುತ್ತಿದೆ.

ಲಕ್ಷ್ಮಿಕಾಂತ್ ಎಲ್, ದೊಡ್ಡ ಮಾವಳ್ಳಿ

ತಿಂಗಳಿಗೆ ಒಮ್ಮೆ ವಿದ್ಯಾರ್ಥಿಗಳಿಗೆ ಸಿಗಲಿ ಉಚಿತ ಪ್ರವೇಶ



ಲಾಲ್‌ಬಾಗ್ ಸಸ್ಯಗಳ ಸುಂದರ ತೋಟವನ್ನು ನೋಡಲು, ಸುತ್ತಾಡಲು ಬೆಳಗಿನ ಸಮಯದಲ್ಲಿ ಉಚಿತ ಪ್ರವೇಶ ಇರುತ್ತದೆ. ಬೆಳಿಗ್ಗೆ ವಾಯುವಿಹಾರಕ್ಕೆ ಹೇಳಿ ಮಾಡಿಸಿದ ಸ್ಥಳ. ನಗರದ ಸರ್ಕಾರಿ ಶಾಲೆ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತಿಂಗಳಲ್ಲಿ ಒಂದು ದಿನ ಉಚಿತ ಪ್ರವೇಶ ಕಲ್ಪಿಸಬೇಕು. ಇದು ಸಚಿವ ಮುನಿರತ್ನ ಅವರಿಗೆ ನಮ್ಮ ಒತ್ತಾಯ.

ಗ.ಮ.ಜಯಪ್ರಕಾಶ್, ಗವೀಪುರ

ವಾಣಿಜ್ಯ ಚಟುವಟಿಕೆಗೆ ಅವಕಾಶ ಬೇಡ



ಲಾಲ್‌ಬಾಗ್ ನಮ್ಮೆಲ್ಲರ ಹೆಮ್ಮೆ. ಈ ಉದ್ಯಾನದಲ್ಲಿ ಸಾರ್ವಜನಿಕರು ತೆಗೆದುಕೊಂಡು ಬರುವ ಆಹಾರ ಪದಾರ್ಥಗಳ ಪ್ಲಾಸ್ಟಿಕ್ ಕವರ್‌ಗಳನ್ನು ಎಲ್ಲೆಂದರಲ್ಲಿ ಎಸೆಯಬಾರದು. ಪ್ರಜ್ಞಾವಂತ ನಾಗರಿಕರ ಜವಾಬ್ದಾರಿಗಳನ್ನು ಎಲ್ಲರೂ ಪಾಲಿಸಿ ಉದ್ಯಾನದ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಇಲ್ಲಿ ಯಾವುದೇ ರೀತಿಯ ವಾಣಿಜ್ಯ ಚಟುವಟಿಕೆಗೆ ಅವಕಾಶ ನೀಡಬಾರದರು. ಅದು ಸಸ್ಯಕಾಶಿಯಾಗಿ ಮುಂದಿನ ಪೀಳಿಗೆಗೆ ಹಸಿರಿನಿಂದ ಕಂಗೊಳಿಸುವ ರೀತಿಯಲ್ಲಿ ಉಳಿಸಲು ಪಣ ತೊಡಬೇಕು.

ಸಂಪತ್ ಎನ್, ಬಿಎಚ್‌ಇಎಲ್ ಲೇಔಟ್, ನಂದಿನಿ ಬಡಾವಣೆ

ದರಪಟ್ಟಿಯ ಹಣ ಮಾತ್ರ ಪಾವತಿಸಿ: ಆರೋಗ್ಯ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ ಅನ್ವಯ ಆಸ್ಪತ್ರೆಗಳು ವಿವಿಧ ವೈದ್ಯಕೀಯ ಚಿಕಿತ್ಸೆಗಳ ದರಪಟ್ಟಿಯನ್ನು ಪ್ರವೇಶದ್ವಾರದಲ್ಲಿಯೇ ಪ್ರಕಟಿಸಬೇಕು. ರೋಗಿಗಳು ದರಪಟ್ಟಿಯಲ್ಲಿ ನಿಗದಿಪಡಿಸಿದ ಹಣವನ್ನು ಮಾತ್ರ ಪಾವತಿಸಬೇಕು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ರಾಜ್ಯದಲ್ಲಿ ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡುವ ಉದ್ದೇಶದಿಂದ ಪ್ರತ್ಯೇಕ ಕಾಯ್ದೆ ಜಾರಿಗೆ ತರಲಾಗಿದೆ. ಒಂದು ಕಾಯಿಲೆಗೆ ಹಲವಾರು ಚಿಕಿತ್ಸಾ ವಿಧಾನಗಳಿವೆ. ರೋಗಿಯು ತನಗೆ ಸರಿ ಹೊಂದುವ ಚಿಕಿತ್ಸಾ ವಿಧಾನವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹೊಂದಿದ್ದಾನೆ. ವೈದ್ಯಕೀಯ ಸ್ಥಿತಿಗತಿಯ ಬಗ್ಗೆ ಮತ್ತೊಬ್ಬ ವೈದ್ಯರ ಅಭಿಪ್ರಾಯ ಪಡೆದುಕೊಳ್ಳಬಹುದು'

'ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ರೋಗಿ ಒಂದು ವೇಳೆ ಮೃತಪಟ್ಟಲ್ಲಿ, ಹಣವನ್ನು ಪಡೆಯಲು ಒತ್ತಾಯ ಮಾಡದೆಯೇ ಅವರ ಮೃತದೇಹವನ್ನು ಕುಟುಂಬದ ಸದಸ್ಯರಿಗೆ ತಕ್ಷಣ ಹಸ್ತಾಂತರಿಸಬೇಕು' ಎಂದು ಇಲಾಖೆ ಸೂಚಿಸಿದೆ.

'ರೋಗಿಗೆ ಹೆಚ್ಚಿನ ದರ ವಿಧಿಸಿದಲ್ಲಿ ಅಥವಾ ಈ ಬಗ್ಗೆ ಆರೋಪ ಸಾಬೀತಾದಲ್ಲಿ ಕೆಪಿಎಂಇ ಕಾಯ್ದೆ ಅನ್ವಯ ಹೆಚ್ಚುವರಿ ಹಣವನ್ನು ರೋಗಿಗೆ ಪಾವತಿಸಬೇಕು' ಎಂದು ಹೇಳಿದೆ.

ಮೋದಿ 'ಸ್ವಯಂ ಸೇವಕ': ಭಾಗವತ್

ಜಬಲ್ಪುರ, ಮಧ್ಯಪ್ರದೇಶ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸ್ವಯಂ ಸೇವಕರಾಗಿದ್ದು, ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದಾರೆ. ಹೀಗೆ ಸ್ವತಂತ್ರವಾಗಿ ಕೆಲಸ ಮಾಡುವ ಯಾವುದೇ ವ್ಯಕ್ತಿ ಅಥವಾ ಸಂಘಟನೆಯನ್ನು ಸಂಘ ನಿಯಂತ್ರಿಸುವುದಿಲ್ಲ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘ ಚಾಲಕ ಮೋಹನ್ ಭಾಗವತ್ ಶನಿವಾರ ಹೇಳಿದರು.

ಸ್ಥಳೀಯ ಸಮುದಾಯದ ಪ್ರಮುಖ ಸದಸ್ಯರೊಂದಿಗೆ ಸಂವಾದದಲ್ಲಿ ಮಾತನಾಡಿದ ಅವರು, ಸಂಘದ ಹೆಸರು ಬಂದಾಗ, ಜನರು ಮೋದಿ ಅವರನ್ನು ನೆನಪಿಸಿಕೊಳ್ಳುತ್ತಾರೆ. ಅವರು ನಮ್ಮ 'ಸ್ವಯಂ ಸೇವಕರು' ಎಂದರು.

'ಯಾರಾದರೂ ಆರ್‌ಎಸ್‌ಎಸ್ ಬಗ್ಗೆ ಮಾತನಾಡುವಾಗ ಜನರು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಬಗ್ಗೆಯೂ ಯೋಚಿಸುತ್ತಾರೆ. ಆ ಸಂಘಟನೆಯಲ್ಲೂ ಸ್ವಯಂ ಸೇವಕರಿದ್ದಾರೆ ಮತ್ತು ಅವರ ಆಲೋಚನೆಯೂ ಇದೇ ರೀತಿ ಇರುತ್ತದೆ. ಸಂಘವು ತನ್ನದೇ ಆದ ಸ್ವತಂತ್ರ ಕೆಲಸ ಮಾಡುತ್ತಿದೆ' ಎಂದರು.

ಅಂತಹ ಸಂಘಟನೆಗಳು, ವ್ಯಕ್ತಿಗಳ ಮೇಲೆ ಆರ್‌ಎಸ್‌ಎಸ್ ನೇರ ನಿಯಂತ್ರಣ ಹೊಂದಿರುವುದಿಲ್ಲ ಅಥವಾ ರಿಮೋಟ್ ಕಂಟ್ರೋಲ್ ಆಗಿಯೂ ಇರುವುದಿಲ್ಲ ಎಂದು ಅವರು ಹೇಳಿದರು.

'ಹಾಲು ವಿತರಕರ ಕಮಿಷನ್ ಹೆಚ್ಚಿಸಿ'

ಬೆಂಗಳೂರು: ನಂದಿನಿ ಹಾಲು ಮಾರಾಟಗಾರರಿಗೆ ನೀಡುತ್ತಿರುವ ಕಮಿಷನ್ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ಬೆಂಗಳೂರು ನಂದಿನಿ ಹಾಲು ವಿತರಕರ ಸಂಘ ಒತ್ತಾಯಿಸಿದೆ.

ಹಾಲು ಮಾರಾಟದ ಮೂಲಕವೇ ಬದುಕು ಕಟ್ಟಿಕೊಂಡಿರುವ ವಿತರಕರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸ್ವಲ್ಪ ಪ್ರಮಾಣದಲ್ಲಿ ಕಮಿಷನ್ ಹೆಚ್ಚಿಸುವುದರಿಂದ ರಾಜ್ಯದ ಎಲ್ಲ ಹಾಲು ವಿತರಕರಿಗೆ ನೆರವು ನೀಡಿದಂತಾಗುತ್ತದೆ ಎಂದು ಸಂಘದ ಅಧ್ಯಕ್ಷ ಕೆ.ಎಸ್. ಮಂಜುನಾಥ್ ಮತ್ತು ಪ್ರಧಾನ ಕಾರ್ಯದರ್ಶಿ ಎನ್. ನಟರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂ: ಬೆಂಅಪ್ರಾ/ಆರ್.ಎಂ.ಪಿ–2015/ವಿಭೂಸ್ವಾಅ–6/74/2022–23 ದಿನಾಂಕ: 19.11.2022

ಪತ್ರಿಕಾ ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ "RMP-2015 Road & Bye-Pass to improve connectivity in Dr. K. Shivarama Karantha Layout" ನಿರ್ಮಾಣಕ್ಕಾಗಿ, ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿಯ ಬ್ಯಾಲಕೆರೆ ಗ್ರಾಮದ ಜಮೀನುಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಭೂಸ್ವಾಧೀನಪಡಿಸಿಕೊಳ್ಳಲು ಈಗಾಗಲೇ ದಿನಾಂಕ: 19.03.2022ರಂದು ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆಯಂತೆ, ದಿನಾಂಕ: 08.08.2022ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. 3 ಸರ್ವೆ ನಂಬರು ಜಮೀನುಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಕಾಯ್ದೆ 1894ರ ಕಲಂ 11ರಡಿ ಹೊರಡಿಸಿರುವ ಐತೀರ್ಪು ಉಪ ಆಯುಕ್ತರು (ಭೂಸ್ವಾ)ರವರು ಅನುಮೋದಿಸಿರುತ್ತಾರೆ. ಘೋಷಣೆ ಮಾಡಲಾದ 3 ಪ್ರಕರಣಗಳಲ್ಲಿ ಭೂಪರಿಹಾರ ಪಡೆದುಕೊಳ್ಳಲು ಬ್ಯಾಲಕೆರೆ ಗ್ರಾಮದ ಭೂಮಾಲೀಕರಿಗೆ ಈಗಾಗಲೇ ಭೂಸ್ವಾಧೀನ ಕಾಯ್ದೆ 1894ರ ಕಲಂ12(2)ರಡಿ ನೋಟಿಸ್ ಜಾರಿ ಮಾಡಲಾಗಿದೆ.

ಭೂಸ್ವಾಧೀನ ಕಾಯ್ದೆ 1894ರ ಕಲಂ12(2)ರಡಿ ಜಾರಿ ಮಾಡಲಾದ ನೋಟೀಸ್‌ಗಳಲ್ಲಿ ಒಳಗೊಂಡ ಜಮೀನುಗಳ ಮತ್ತು ಅಂತಿಮ ಅಧಿಸೂಚನೆಂತೆ ಭೂಮಾಲೀಕರ/ಹಿತಾಸಕ್ತಿದಾರರ ವಿವರಗಳ ಈ ಕೆಳಗಿನಂತೆ ಇರುತ್ತದೆ.

ತಾಲ್ಲೂಕು: ಯಲಹಂಕ ಹೋಬಳಿ: ಹೆಸರುಘಟ್ಟ ಗ್ರಾಮ: ಬ್ಯಾಲಕೆರೆ

ಕ್ರ. ಸಂ.	ಎಲ್.ಎ.ಸಿ ಸಂಖ್ಯೆ	ಅಧಿಸೂಚಿತ ಖಾತೆದಾರರ ಹೆಸರು	ಸರ್ವೆ ನಂ.	ಹಿಸ್ಸಾ	ಒಟ್ಟು ವಿಸ್ತೀರ್ಣ		ಖರಾಬು		ಭೂಸ್ವಾಧೀನಪಡಿಸಿರುವ ವಿಸ್ತೀರ್ಣ		ಐತೀರ್ಪು ಅನುಮೋದನೆಯಾದ ದಿನಾಂಕ (ಉಪಆಯುಕ್ತರು (ಭೂಸ್ವಾ)ರವರಿಂದ)	12(2) ನೋಟಿಸ್ ಜಾರಿ ಮಾಡಿರುವ ದಿನಾಂಕ
					ಎ	ಗು	ಎ	ಗು	ಎ	ಗು		
1	32	Katamma, Muttanna (joint)	21	7	0	0.5	0	0	0	0.5	16.11.2022	17.11.2022
2	33	Ramesh S/o Muttanna	21	8	0	2.25	0	0.25	0	2.25	16.11.2022	17.11.2022
3	34	Ramesh S/o Muttanna	21	9	0	4.25	0	0.25	0	1.75	16.11.2022	17.11.2022

ಆದ್ದರಿಂದ ಬ್ಯಾಲಕೆರೆ ಗ್ರಾಮದ ಭೂಮಾಲೀಕರಿಗೆ/ಹಿತಾಸಕ್ತಿದಾರರಿಗೆ ಭೂಸ್ವಾಧೀನ ಕಾಯ್ದೆ ಕಲಂ12(2)ರಡಿ ಜಾರಿ ಮಾಡಲಾದ ನೋಟೀಸ್‌ಗಳು ಒಂದು ವೇಳೆ ಅವರಿಗೆ ತಲುಪದೇ ಇದ್ದ ಪಕ್ಷದಲ್ಲಿ ಈ ಮೇಲಿನ ಪತ್ರಿಕಾ ಪ್ರಕಟಣೆಯನ್ನು ನೋಟೀಸ್ ಎಂದು ಭಾವಿಸತಕ್ಕದ್ದು ಮತ್ತು ಮೇಲ್ಕಂಡ ಜಮೀನಿನ ನಗದು ಭೂಪರಿಹಾರ ಅಥವಾ 40:60 ಅನುಪಾತದಲ್ಲಿ ಬರುವ ಅಭಿವರದ್ಧಿಪಡಿಸಿದ ನಿವೇಶನ ರೂಪದ ಪರಿಹಾರವನ್ನು ಪಡೆಯುವ ಸಂಬಂಧ ಮೇಲ್ಕಂಡ ಜಮೀನಿನ ಮೇಲೆ ತಮಗೆ ಇರುವ ಹಕ್ಕು ಸಾಬೀತುಪಡಿಸುವ ಹಕ್ಕು–ದಾಖಲೆಗಳನ್ನು ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಹಾಜರುಪಡಿಸಲು ತಿಳಿಸಿದೆ. ಈ ಕಛೇರಿ ರಾಜಸ್ವ ನಿರೀಕ್ಷಕರಿಗೆ ಮೇಲ್ಕಂಡ ಜಮೀನಿನಲ್ಲಿ 2022ರ ಪೂರ್ವದಲ್ಲಿ ಇದ್ದಂತಹ ಮರ ಮಾಲ್ಕೀ, ಕಟ್ಟಡಗಳ ಸಮೇತವಾಗಿ ಸದರಿ ಜಮೀನಿನ ಸ್ವಾಧೀನವನ್ನು ಭೂಸ್ವಾಧೀನ ಕಾಯ್ದೆ ಕಲಂ 16(1) ರನ್ವಯ ಜಮೀನಿನ ಕಬ್ಜೆ ನೀಡಲು ತಿಳಿಯಪಡಿಸಿದೆ ಹಾಗೂ ಅವಶ್ಯವಿರುವ ಹಕ್ಕು ದಾಖಲೆಗಳನ್ನು ಸದರಿ ದಿನಾಂಕದೊಳಗಾಗಿ ಹಾಜರುಪಡಿಸದಿದ್ದಲ್ಲಿ ನಗದು ಭೂಪರಿಹಾರದ ಮೊತ್ತವನ್ನು ಭೂಸ್ವಾಧೀನ ಕಾಯ್ದೆ ಕಲಂ 30, 31 (2) ರನ್ವಯ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು. ತಿಳಿಯುವುದು.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–6,
(ಡಾ||, ಕೆ.ಶಿವರಾಮಕಾರಂತ ಬಡಾವಣೆ), ಬೆಂ.ಅ.ಪ್ರಾ. ಬೆಂಗಳೂರು

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055

ಬಹಿರಂಗ ಹರಾಜು ಇಸಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್.ರಸ್ತೆ, ಬೆಂಗಳೂರು–560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ**ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55. ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ **ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55 ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 23442648, 23449450, ಮೊಬೈಲ್ 9900856389, 9844048485**

ಸುಸ್ತಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀ ನಾಗರಾಜ್ ಡಿ.ಎಮ್.	ಎ.ಆರ್.ಇ/ಯು.ಬಿ.ಎಫ್/ 08/2022–23	ನಂ.14/3, (ಹಳೆ ನಂ.) ಸರ್ವೆ ನಂ.15/3, 8ನೇ 'ಎ' ಅಡ್ಡರಸ್ತೆ, ಗೋಕುಲ 1ನೇ ಹಂತ, 2ನೇ ಫೇಸ್, ಬೆಂಗಳೂರು–22 ಪಿ.ಐ.ಡಿ ನಂ.4–136–14/3, ಬಿ.ಬಿ.ಎಮ್.ಪಿ ವಾರ್ಡ್ ನಂ.4 (ಮತ್ತಿಕೆರೆ) ಇಲ್ಲಿರುವ ಪೂರ್ವ ಪಶ್ಚಿಮ 60 ಅಡಿಗಳು & ಉತ್ತರ ದಕ್ಷಿಣ 34+40/2 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ– ಎ.ಹಬಿಬ್ ರವರ ಸ್ವತ್ತು ಪಶ್ಚಿಮಕ್ಕೆ– ರಾಮಕೃಷ್ಣ.ಬಿ.ಎಮ್.ರವರ ಸ್ವತ್ತು ಉತ್ತರಕ್ಕೆ– ರಸ್ತೆ ದಕ್ಷಿಣಕ್ಕೆ–ಎಸ್.ಕೆ.ಗೀತಾ ಮತ್ತು ಲತಾ ರವರ ಸ್ವತ್ತು	ನಂ.14/3, (ಹಳೆ ನಂ.) ಸರ್ವೆ ನಂ.15/3, 8ನೇ 'ಎ' ಅಡ್ಡರಸ್ತೆ, ಗೋಕುಲ 1ನೇ ಹಂತ, 2ನೇ ಫೇಸ್, ಬೆಂಗಳೂರು–22. ದಿನಾಂಕ: 30.11.2022 ರ ಬುಧವಾರ ಬೆಳಿಗ್ಗೆ 11–30 ಘಂಟೆ ರೂ.1,00,80,000/– (ದಿನಾಂಕ: 30.09.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ)
ಶ್ರೀ.ಕುಪ್ಪಸ್ವಾಮಿ. ವಿ ಮರಣ ಹೊಂದಿದ್ದು, ಇವರ ಕಾನೂನು ವಾರಸುದಾರರಾದ **1. ಶ್ರೀಮತಿ. ಎಮ್.ವಿಜಯಕುಮಾರಿ ಕೋಂ ಲೇಟ್. ಕುಪ್ಪಸ್ವಾಮಿ.ವಿ 2. ಶ್ರೀ. ಕೆ. ದಕ್ಷಿಣಾಮೂರ್ತಿ ಬಿನ್ ಲೇಟ್ ಟಿಕುಪ್ಪಸ್ವಾಮಿ. ವಿ 3. ಶ್ರೀ. ಪ್ರಶಾಂತ್. ಕೆ. ಬಿನ್ ಲೇಟ್ ಕುಪ್ಪಸ್ವಾಮಿ.ವಿ**	ಎ.ಆರ್.ಇ/ಯು.ಬಿ.ಎಫ್/291/2016–17	ನಂ.43, ಹಳೇ ನಂ:35/ಎ, 12 ಮೈನ್, 1ನೆ ಸ್ಟೇಜ್, ಗೋಕುಲ, ಪಿ.ಐ.ಡಿ. ನಂ: 3–16–43, ಮತ್ತಿಕೆರೆ, ಬೆಂಗಳೂರು–54. ಇಲ್ಲಿರುವ ಪೂರ್ವ ಪಶ್ಚಿಮ 30 ಅಡಿಗಳು & ಉತ್ತರ ದಕ್ಷಿಣ 51 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ – ನಿವೇಶನ ಸಂಖ್ಯೆ: 20 ಮತ್ತು21 ಪಶ್ಚಿಮಕ್ಕೆ – ನಿವೇಶನ ಸಂಖ್ಯೆ: 34 ಮತ್ತು 35 ಉತ್ತರಕ್ಕೆ – ರಸ್ತೆ ದಕ್ಷಿಣಕ್ಕೆ – ನಿವೇಶನ ಸಂಖ್ಯೆ: 22 ಮತ್ತು 23	ನಂ.43, ಹಳೇ ನಂ:35/ಎ, 12 ಮೈನ್, 1ನೆ ಸ್ಟೇಜ್, ಗೋಕುಲ, ಪಿ.ಐ.ಡಿ. ನಂ: 3–16–43, ಮತ್ತಿಕೆರೆ, ಬೆಂಗಳೂರು–54. ದಿನಾಂಕ: 02.12.2022 ರ ಶುಕ್ರವಾರ ಬೆಳಿಗ್ಗೆ 11–30 ಘಂಟೆ ರೂ.42,00,000/– (ದಿನಾಂಕ. 30.09.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ.
ಶ್ರೀಮತಿ.ಶೋಭ.ಬಿ	ಎ.ಆರ್.ಇ/ಯು.ಬಿ.ಎಫ್/ 126, 127 & 128/2021–22	ನಂ.30/10–1, ಹೊಸ ನಂ.10/1,(ಹಳೆ ನಂ.30) 10ನೇ ಅಡ್ಡರಸ್ತೆ, ಗಣೇಶ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು. ಬಿ.ಬಿ.ಎಂ.ಪಿ. ವಾರ್ಡ್ ನಂ–12 (ನಂದಿನಿ ಲೇಔಟ್) (ಪಿ.ಐ.ಡಿ. ನಂ.12–13.10/1) ಇಲ್ಲಿರುವ ಪೂರ್ವ ಪಶ್ಚಿಮ 12 ಅಡಿಗಳು & ಉತ್ತರ ದಕ್ಷಿಣ 54 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ–ಬೇರೆಯವರ ಸ್ವತ್ತು ಪಶ್ಚಿಮಕ್ಕೆ–ಸ್ವತ್ತಿನ ಸಂಖ್ಯೆ.32/19 ಉತ್ತರಕ್ಕೆ–ಸ್ವತ್ತಿನ ಸಂಖ್ಯೆ.32/18 ದಕ್ಷಿಣಕ್ಕೆ–ರಸ್ತೆ	ನಂ.30/10–1, ಹೊಸ ನಂ.10/1, (ಹಳೆ ನಂ.30) 10ನೇ ಅಡ್ಡರಸ್ತೆ, ಗಣೇಶ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು. ದಿನಾಂಕ: 09.12.2022 ರ ಶುಕ್ರವಾರ ಬೆಳಿಗ್ಗೆ 11–30 ಘಂಟೆ ರೂ.57,50,000/– (ದಿನಾಂಕ.30.09.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ.

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡಯಾವರೀತಿಯಲ್ಲಿದೆಯೋಅದೇರೀತಿಯಲ್ಲಿ ಹರಾಜು ಮಾಡಲಾಗುವುದು.
3. **ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.50,00,000/– ಗಳ ಕೆಳಗೆ ಬಾಕಿ ಇರುವ ಪ್ರಕರಣಗಳಲ್ಲಿ ರೂ.50,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
4. **ರೂ.50,00,001/– ಮೇಲೆ ಬಾಕಿಯಿರುವ ಪ್ರಕರಣಗಳಲ್ಲಿ ರೂ.1,00,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
5. **ಹರಾಜಿನಲ್ಲಿ ಬಿಡ್ ನಿಂತತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.**
6. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವಅಥವಾತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
7. ಹರಾಜಿನಲ್ಲಿಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
8. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತುಅಂದಾಜು ವಿಸ್ತೀರ್ಣದ ವಿಷಯದಲ್ಲಿಯಾವುದಾದರೂ ತಪ್ಪುಗಳಿದ್ದರೆ ಸರ್ಕಾದವರುಜವಾಬ್ದಾರರಾಗುವುದಿಲ್ಲ.
9. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
10. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀಅಥವಾಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆಠೇವಣಿ ಮಾಡಿದ ಹಣದ ಮೇಲೆ ಶೇ 5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಮೊತ್ತ ಮತ್ತುಅದರಮೇಲೆ ಶೇ 5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವಾಗಿರುತ್ತಾರೆ ಹಾಗೂ ಹರಾಜಿನಲ್ಲಿಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 20.10.2022
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು – 55.

BANGALORE TURF CLUB LTD.

Post Box No. 5038, Race Course Road, Bangalore - 560 001.
Phone: 22281763, EPABX: 2226391/2/3 Extn: 240/227/228
CIN : U99999KA1962PLC001449

TENDER NOTICE - 20-11-2022

Sealed Tenders duly superscribed are invited for supply of 2500 Cubic meter (CMT) of Coarse River Sand. Closing time for receipt of Tender - 12.00 Noon on Wednesday, 28th November 2022.
Details are available in our website: **www.bangaloreraces.com**

Date: 20-11-2022 Sd/-
Place: Bangalore. CEO & Secretary

Industrial Property For Sale at Peenya, Bangalore

Public E-auction on 15-12-2022 of Industrial Land (2 acres 36 guntas) together with Building and machineries situated at Survey No.15,II Cross, Phase I, Peenya Village,Yeswanthpur Hobli, Bangalore North Taluk.
Base Reserve Price-RS.38 Crores

For details, please contact P. Krishnan (9880171436) or mail info@parijatha.co.in

ಕಾನೂನು ಮಾಪನಶಾಸ್ತ್ರ ಇಲಾಖೆ

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ, ನಂ.1, ಅಲಿ ಅಸ್ಕರ್ ರಸ್ತೆ, ಪಿ.ಬಿ.ನಂ.175, ಬೆಂಗಳೂರು–560052.

ಸಂ: ಕಾಮಾಇ:ಇ.ವ.ಸೇ:ಸಿಆರ್:15:19–20 ದಿನಾಂಕ: 16.11.2022

ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ನಗರ / ಜಿಲ್ಲಾ ಹಾಗೂ ತಾಲ್ಲೂಕು ಕಛೇರಿಗಳ ಕ್ಷೇತ್ರಾಧಿಕಾರಿಗಳು ವ್ಯಾಪಾರ ವಾಣಿಜ್ಯ ಸಂಸ್ಥೆಗಳಲ್ಲಿ ಉಪಯೋಗಿಸುವ ತೂಕ ಮತ್ತು ಅಳತೆ ಸಾಧನ ಹಾಗೂ ಪೊಟ್ಟಣ ಸಾಮಾಗ್ರಿಗಳಡಿಯಲ್ಲಿ ಇಲಾಖೆಯ ಕಾನೂನು / ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗುತ್ತಿದೆ. ಈ ಮೊಕದ್ದಮೆಗಳಲ್ಲಿ ನ್ಯಾಯಾಲಯಕ್ಕೆ ದಾಖಲಿಸುವಂತ್ಹ ಪ್ರಕರಣಗಳನ್ನು ಹಾಗೂ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾಖಲಿಸುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಈ ಇಲಾಖೆಗೆ ಒಬ್ಬರು ಕಾನೂನು ಸಲಹೆಗಾರರನ್ನಾಗಿ ಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಬೇಕಾಗಿರುತ್ತದೆ. ಪ್ರಸ್ತುತ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ವಿವರಗಳನ್ನು ತಿಳಿಸಿದ್ದು, ಪ್ರಕರಣಗಳ ಸಂಖ್ಯೆಯು ಹೆಚ್ಚು ಅಥವಾ ಕಡಿಮೆಯಾಗುವ ಸಾಧ್ಯತೆಗಳು ಸಹ ಇರುತ್ತದೆ.

ಗುತ್ತಿಗೆ ಆಧಾರದಲ್ಲಿ ಕಾನೂನು ಸಲಹೆಗಾರರಾಗಿ ಈ ಇಲಾಖೆಗೆ ಬರಲು ಇಚ್ಚಿಸಿದ್ದಲ್ಲಿ ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ, ನಂ.1, ಅಲಿ ಅಸ್ಕರ್ ರಸ್ತೆ, ಪಿ.ಬಿ.ನಂ. 175, ಬೆಂಗಳೂರು–56 ಇವರಿಗೆ ತಾವು ಕೋರುವ ಮಾಸಿಕ ಸಂಭಾವನೆಯ ಮೊತ್ತವನ್ನು ಮುಚ್ಚಿದ ಲಕೋಟೆಯ ಮೂಲಕ **ದಿನಾಂಕ: 22–11–2022ರ ಅಪರಾಹ್ನ 4.00 ಗಂಟೆಯ** ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಕೋರಿದೆ.

ಕ್ರ. ಸಂ.	ಜೆ.ಎಂ.ಎಫ್.ಸಿ/ ಎ.ಸಿ.ಟಿ.ಎಂ/ಎಂ.ಟಿ.ಸಿ	ಕೆ.ಎ.ಟಿ	ಉಚ್ಚ ನ್ಯಾಯಾಲಯ	ಸರ್ವೋಚ್ಚ ನ್ಯಾಯಾಲಯ	ಒಟ್ಟು
1.	242	08	33	03	286

ಸಹಿ/–
ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ

ವಾಸಾಸಂಇ/ವಾಪ್ರ/3138/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ, ಸಂಚಾರ ಶಾಖೆ, ರಾಮನಗರ

ನಂ.: ಕರಾಸಾ.ರಾನವಿ.ಸಂ.ವಾ/2382/2383/2384/22–23 ದಿನಾಂಕ: 18.11.2022

ಸಂಧಾನ ಪ್ರಕಟಣೆ ಸಂಖ್ಯೆ:11 & 12 ಹಾಗೂ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 13–2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕೋಡಿಹಳ್ಳಿ, ಕನಕಪುರ, ಮಾಗಡಿ ಹಾಗೂ ಸೋಲೂರು ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಮತ್ತು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ಲೋಸೈನ್ / ಫ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿ: **13.12.2022**ರಂದು **15:00 ಗಂಟೆ**ಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು / ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು ದಿನಾಂಕ: **21.11.2022**ರಿಂದ ದಿನಾಂಕ: **12.12.2022**ರ **15:00 ಗಂಟೆ**ಗಳವರೆಗೆ ಪಡೆಯಬಹುದು. ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಕೋಡಿಹಳ್ಳಿ, ಆನೇಕಲ್ ಹಾಗೂ ಸೋಲೂರು ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿ: **15.12.2022**ರಂದು **11:00 ಗಂಟೆ**ಗೆ ಇ–ಟೆಂಡರ್ ನಡೆಸಲು / ತೆರೆಯಲು ಸಮಯವನ್ನು ನಿಗದಿಪಡಿಸಲಾಗಿರುತ್ತದೆ. ದಿ: **21.11.2022** ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in**ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: **13.12.2022**ರಂದು **17:00 ಗಂಟೆ**ಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 7760990852.

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ, ರಾಮನಗರ

ವಾಸಾಸಂಇ/ವಾಪ್ರ/ಎಲ್‌ಸಿ/3162/2022–23

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, (1) ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಅಡಿಗಾರಕಲ್ಲಹಳ್ಳಿ ಗ್ರಾಮದಲ್ಲಿ ವಾಸವಾಗಿರುವ – **ವೆಂಕಟರೆಡ್ಡಿ ಅಲಿಯಾಸ್ ಬಾಬು.ಜೆ** ಬಿನ್ ವಿ. ಜಯರಾಮರೆಡ್ಡಿ (2) ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಾರೋಹಳ್ಳಿ ಗ್ರಾಮದಲ್ಲಿ ವಾಸವಾಗಿರುವ – **ಪಾಪಮ್ಮ ಜೆ ಅಲಿಯಾಸ್ ವೆಂಕಟಮ್ಮ** ಬಿನ್ ವಿ. ಜಯರಾಮರೆಡ್ಡಿ ಹಾಗು ಕೋಂ ರಾಜಪ್ಪ, (3) ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಬಿದರಗುಪ್ಪೆ ಗ್ರಾಮ, ಸಿಲ್ಕ್ ಫಾರ್ಮ್ ರಲ್ಲಿ ವಾಸವಾಗಿರುವ – **ಸಾವಿತ್ರಮ್ಮ ಜೆ.** ಬಿನ್ ವಿ. ಜಯರಾಮರೆಡ್ಡಿ ಹಾಗು ಕೋಂ ಪ್ರಭಾಕರ್, ಹಾಗು (4) ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ನೆರಳೂರು ಗ್ರಾಮದಲ್ಲಿ ವಾಸವಾಗಿರುವ – **ಗೌರಮ್ಮ ಜೆ.** ಬಿನ್ ವಿ. ಜಯರಾಮರೆಡ್ಡಿ ಹಾಗು ಕೋಂ ಶಿವಪ್ಪ, ("ಮಾಲೀಕರು") ಇವರಿಗೆ ಸೇರಿದ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಅಡಿಗಾರಕಲ್ಲಹಳ್ಳಿ ಗ್ರಾಮದಲ್ಲಿಯ ಸರ್ವೆ ನಂ. 119/2, 2 ಎಕರೆ 22 ಗುಂಟೆ (3 ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ವ್ಯವಸಾಯದ ಜಮೀನನ್ನು ಈ ಕೆಳಗೆ ವಿವರವಾಗಿ ತಿಳಿಸಲಾದ ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತು"** ಎಂದು ಉಲ್ಲೇಖಿಸಲಾಗುವ ಜಮೀನನ್ನು ಖರೀದಿಸಲು ಇಚ್ಛಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಶಃ ಜಮೀನಿನ ಆಸಕ್ತಿ ಹೊಂದಿರುವ ಅಥವಾ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ, ವ್ಯಾಜ್ಯ, ಆಸಕ್ತಿ ಹೊಂದಿರುವ ಅಥವಾ ಅವುಗಳ ದಾಖಲೆಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ ಮಾಡಲಿಚ್ಛಿಸುವ ಯಾವುದೇ ವ್ಯಕ್ತಿ ಇದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ಸದರಿ ಖರೀದಿಯ ವಿರುದ್ಧ ಆಕ್ಷೇಪಣೆ ಇದ್ದಲ್ಲಿ, ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ವ್ಯಾಜ್ಯ, ಮಾಲೀಕತ್ವ, ಆಸಕ್ತಿ ಹೊಂದಿರುವಿರಿ ಎಂಬುದರ ಬಗ್ಗೆ ದಾಖಲೆಗಳ ಸಹಿತ, ಈ ಸಾರ್ವಜನಿಕ ಪ್ರಕಟಣೆ ಪ್ರಕಟಗೊಂಡ 10 **(ಹತ್ತು)** ದಿನಗಳೊಳಗೆ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು, ಸದರಿ ಅವಧಿಯಲ್ಲಿ ಅಂತಹ ಯವುದೇ ಹಕ್ಕು ಪ್ರತಿಪಾದನೆ, ಮಾಲೀಕತ್ವ ಅಥವಾ ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಭಾಗಶಃ ಜಮೀನಿಗೆ ಸಂಬಂಧಿಸಿದಂತೆ ಮೇಲಿನ ಮಾಲೀಕರ ಹೊರತಾಗಿ ಮತ್ಯಾರಿಗೂ ಯಾವುದೇ ಹಕ್ಕು, ಅಧಿಕಾರ, ಆಸಕ್ತಿಗಳಿಲ್ಲ ಎಂದು ಪರಿಗಣಿಸಿ ಮತ್ತು ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಖರೀದಿಗೆ ಮುಂದಾಗುವರು ಹಾಗು ನಾವು ಮಾಲೀಕರುಗಳು ಷೆಡ್ಯೂಲ್ ಸ್ವತ್ತಿಗೆ ಹಕ್ಕುಉಳ್ಳವರೆಂದು ಅಭಿಪ್ರಾಯ ನೀಡುತ್ತೇವೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಅಡಿಗಾರಕಲ್ಲಹಳ್ಳಿ ಗ್ರಾಮದಲ್ಲಿಯ ಸರ್ವೆ ನಂ. 119/2, 2 ಎಕರೆ 22 ಗುಂಟೆ (3 ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ವ್ಯವಸಾಯದ ಜಮೀನಿಗೆ ಚಕ್ಕುಬಂದಿ:–
ಪೂರ್ವಕ್ಕೆ : ಅಡಿಗಾರಕಲ್ಲಹಳ್ಳಿ ಗ್ರಾಮದ ಸರ್ವೆ ನಂ.79.
ಪಶ್ಚಿಮಕ್ಕೆ : ಎಸ್.ಮೇಡಹಳ್ಳಿ ಗ್ರಾಮದ ಗಡಿ.
ಉತ್ತರಕ್ಕೆ : ಅಡಿಗಾರಕಲ್ಲಹಳ್ಳಿ ಗ್ರಾಮದ ಸರ್ವೆ ನಂ.119/1. ಹಾಗು
ದಕ್ಷಿಣಕ್ಕೆ : ಅಡಿಗಾರಕಲ್ಲಹಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 115.

ದಿನಾಂಕ: 20.11.2022
ಸ್ಥಳ: ಬೆಂಗಳೂರು

ಜೆರಾಲ್ಡ್ ಮನೋಹರನ್, ಪಾಲುದಾರರು, ವಕೀಲರು, ಜೆ.ಎಸ್.ಎ., ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್, 3, ಕಸ್ತೂರಬಾ ರಸ್ತೆ, ಬೆಂಗಳೂರು – 560 001, ದೂ: 080–43503600/080–43503610, ಈ–ಮೇಲ್– gerald@jsalaw.com

ಪೆಟ್‌ಫೆಡ್ ಸಂಸ್ಥೆ ಆಯೋಜಿಸಿದ್ದ ಸಾಕುಪ್ರಾಣಿಗಳ ಉತ್ಸವ

ತರಹೇವಾರಿ ಶ್ವಾನ... ಮನಸೋತ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಗೆ ಬಗೆಯ ವೇಷ, ಚಿತ್ತಾರಗಳೊಂದಿಗೆ ಬಳಕುತ ಬಂದ ಹಲವು ಜಾತಿಯ ಶ್ವಾನಗಳು, ಜಯಮಹಲ್ ಪ್ಯಾಲೆಸ್ ಮೈದಾನದಲ್ಲಿ ಸ್ಪರ್ಧೆಗೆ ಇಳಿದಿದ್ದವು. ನಾಯಿಗಳ ವೈಯಾರ ಹಾಗೂ ಕಸರತ್ತು ಕಂಡ ಜನ ಮನಸೋತು ಸೈ ಎಂದು ಹೇಳಿದರು.

ಪೆಟ್‌ಫೆಡ್ ಸಂಸ್ಥೆ ಆಯೋಜಿಸಿರುವ ಸಾಕುಪ್ರಾಣಿಗಳ ಉತ್ಸವದಲ್ಲಿ ಪ್ರಾಣಿಪ್ರಿಯರ ಕೂಟವೇ ನೆರೆದಿತ್ತು. ವಿಶಾಲವಾದ ಜಾಗದಲ್ಲಿ ಆಯೋಜಿಸಿರುವ ಮೇಳದಲ್ಲಿ ಶ್ವಾನಗಳ ದಂಡೇ ನೆರೆದಿತ್ತು. ಪೋಷಕರು ತಮ್ಮ ಮುದ್ದಿನ ಸಾಕುಪ್ರಾಣಿಗಳೊಂದಿಗೆ ಉತ್ಸಾಹದಿಂದ ನೆರೆದಿದ್ದರು. ನಗರದ ಹಲವೆಡೆಯಿಂದ ಜನ ಬಂದಿದ್ದರಿಂದ ಇಡೀ ಆವರಣ ತುಂಬಿ ತುಳುಕುತ್ತಿತ್ತು.

ಚಿತ್ತಾರದ ಬೊಂಬೆಗಳಂತೆ ಕಾಣಿಸುತ್ತಿದ್ದ ಬಗೆ ಬಗೆ ಜಾತಿಯ ನಾಯಿಗಳು ನೋಡುಗರನ್ನು ಆಕರ್ಷಿಸಿದ್ದವು. ಕೆಲವು ದೈತ್ಯಾಕಾರದ ನಾಯಿಗಳ ದೇಹದಾರ್ಢ್ಯ ಕಂಡು ಜನ ಹುಬ್ಬೇರಿಸಿದರು. ಅಳುಕುತ್ತಲೇ ಅವುಗಳ ಬಳಿ ನಿಂತು ಸೆಲ್ಫಿ ತೆಗೆಸಿಕೊಂಡರು. ಯುವಕ–ಯುವತಿಯರು ಶ್ವಾನಗಳನ್ನು ವಿಶಿಷ್ಟ ಹೆಸರುಗಳಿಂದ ಕರೆಯುತ್ತಾ ಮುದ್ದಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ದೇಶ, ವಿದೇಶಗಳ ವಿವಿಧ ತಳಿಗಳ ಶ್ವಾನಗಳು ಅಲ್ಲಿದ್ದವು. ಸ್ಪರ್ಧಾ ಕಣದಲ್ಲಿ ಮಾಲೀಕರ ಜತೆ ಅತ್ತಿತ್ತ ಓಡಾಡುತ್ತಿದ್ದ ಅವುಗಳ ಗತ್ತು–ಗೈರತ್ತು ನೋಡುಗರ ಗಮನ ಸೆಳೆದಿದ್ದವು.

ಸಾಕಪ್ರಾಣಿಗಳ ಉತ್ಸವದ ಸ್ಪರ್ಧೆಯಲ್ಲಿ ಭಾಗವಹಿಸಿರುವ ನಾಯಿ ಮತ್ತು ಅದರ ಪೋಷಕರು (ಎಡಚಿತ್ರ). ಬಣ್ಣ ಬಣ್ಣದ ಉಡದ ಜಾತಿಗೆ ಸೇರಿದ ಸರೀಸೃಪವನ್ನು ಸಾಕಿರುವ ವ್ಯಕ್ತಿಯೊಬ್ಬರು ಮೈಮೇಲೆ ಆಡಿಸುತ್ತಿದ್ದ ದೃಶ್ಯ ಜನರನ್ನು ಆಕರ್ಷಿಸಿತ್ತು –ಪ್ರಜಾವಾಣಿ ಚಿತ್ರ

ನಾಯಿಗಳಿಗಾಗಿ ವಿಶೇಷ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಪೋಷಕರ ಮಾತಿನಂತೆ ನಡೆದುಕೊಳ್ಳುತ್ತಿದ್ದ ನಾಯಿಗಳು ಚಪ್ಪಾಳೆ ಗಿಟ್ಟಿಸುತ್ತಿದ್ದವು. ಪೋಷಕರ ಮಾತು ಕೇಳದೆ ಮನಸೋಇಚ್ಛೆ ಓಡುತ್ತಿದ್ದ ನಾಯಿಗಳೂ ಜನರನ್ನು ರಂಜಿಸಿ ಹೆಚ್ಚಿನ ಚಪ್ಪಾಳೆ ಗಿಟ್ಟಿಸುತ್ತಿದ್ದವು.

ಶ್ವಾನಗಳಿಗೆ ಬಣ್ಣ ಬಣ್ಣದ ಬಟ್ಟೆ ತೊಡಿಸಿ ಅದಕ್ಕೆ ಹೊಂದಿಕೆ ಆಗುವಂತೆ ತಾವೂ ಅದೇ ಬಣ್ಣದ ಬಟ್ಟೆ ತೊಟ್ಟಿದ್ದ ಪೋಷಕರು ಗಮನ ಸೆಳೆದರು. ಶ್ವಾನಗಳ ಸ್ವಭಾವ, ಚುರುಕುತನ, ಮಾಲೀಕರು ನೀಡುವ ಸೂಚನೆಗಳ ಪಾಲನೆಯ ಆಧಾರದಲ್ಲಿ ಸ್ಪರ್ಧೆ ನಡೆಸಲಾಯಿತು.

ವಿಶೇಷವಾಗಿ ಸಿಂಗಾರಗೊಂಡಿದ್ದ ಶ್ವಾನಗಳು ತೀರ್ಪುಗಾರರ ಮುಂದೆ ಬಿಂಕದಿಂದ ಸಾಗಿ ಬರುತ್ತಿದ್ದಂತೆಯೇ ಚಪ್ಪಾಳೆಯ ಸುರಿಮಳೆ. ನೆಚ್ಚಿನ ನಾಯಿ ಜನಮೆಚ್ಚುಗೆಗೆ ಪಾತ್ರವಾದ ಬಗ್ಗೆ ಮಾಲೀಕರಲ್ಲಿ ಏನೋ ಪುಳಕ. ಮುದ್ದಿನ ನಾಯಿ ಪ್ರಶಸ್ತಿ ಗಿಟ್ಟಿಸಿದಾಗಲಂತೂ ಅವರ ಹರ್ಷಕ್ಕೆ ಪಾರವೇ ಇರಲಿಲ್ಲ.

ಕೋವಿಡ್ ಸಾಂಕ್ರಾಮಿಕ ಬಳಿಕ ನಡೆಯುತ್ತಿರುವ ಮೊದಲ ಉತ್ಸವ ಆಗಿರುವುದರಿಂದ ನಿರೀಕ್ಷೆಗೂ ಮೀರಿ ಜನ ಭಾಗವಹಿಸಿದ್ದರು ಎಂದು ಪೆಟ್‌ಫೆಡ್ ಸಂಸ್ಥೆಯ ಸಂಸ್ಥಾಪಕ ಅಕ್ಷಯ್ ಗುಪ್ತಾ ಅವರು ಹೇಳಿದರು.

ದೇಸಿ ಸಾಕುಪ್ರಾಣಿಗಳಿಗೆ ಉಚಿತ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಸಾಕುಪ್ರಾಣಿಗಳ ವಾತಾವರಣ ಕಾಪಾಡಿಕೊಳ್ಳಲು ಸಂಘಟಕರು ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರು. ನಾಯಿ ಮತ್ತು ಬೆಕ್ಕುಗಳನ್ನು ದತ್ತು ಪಡೆಯಲೂ ಶಿಬಿರದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಶ್ವಾನಗಳ ಕುತ್ತಿಗೆಗೆ ಹಾಕುವ ಬೆಲ್ಟ್, ಆಹಾರ, ಔಷಧ, ಅಲಂಕಾರಿಕ ವಸ್ತುಗಳನ್ನು ಖರೀದಿಸಲು ಗ್ರಾಹಕರು ಮಳಿಗೆಗಳಿಗೆ ಮುಗಿಬಿದ್ದರು. ಭಾನುವಾರ ಕೂಡ ಉತ್ಸವ ನಡೆಯಲಿದೆ.



ಮೂವರಿಗೆ 'ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ'



ಗೋಪಾಲರಾವ್



ದೇವರಕೊಂಡಾ ರೆಡ್ಡಿ

ಪ್ರೊ. ಲಕ್ಷ್ಮಣ ತೆಲಗಾವಿ

ಬೆಂಗಳೂರು: ಕನ್ನಡ ಗೆಳೆಯರ ಬಳಗ ನೀಡುವ 'ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ'ಗೆ ಪ್ರೊ. ಲಕ್ಷ್ಮಣ ತೆಲಗಾವಿ, ದೇವರ ಕೊಂಡಾರೆಡ್ಡಿ ಹಾಗೂ ಎಚ್.ಎಸ್.ಗೋಪಾಲ ರಾವ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹ 5 ಸಾವಿರ ನಗದು ಒಳಗೊಂಡಿದೆ. ಕೋವಿಡ್ ಕಾರಣ ಕಳೆದ ಎರಡು ವರ್ಷ ಈ ಪ್ರಶಸ್ತಿ ನೀಡಿರಲಿಲ್ಲ. ಚಿತ್ರದುರ್ಗದ ಲಕ್ಷ್ಮಣ ತೆಲಗಾವಿ ಅವರು ಇತಿಹಾಸ ತಜ್ಞರು ಹಾಗೂ ದೇವರಕೊಂಡಾ ರೆಡ್ಡಿ ಕನ್ನಡ ವಿದ್ವಾಂಸರು. ಇವರಿಬ್ಬರೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. ಎಚ್.ಎಸ್. ಗೋಪಾಲರಾವ್ ಅವರು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ. ಡಿ.12ರಂದು ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

'ಸರ್ಕಾರಿ ಶಾಲೆ, ಆಸ್ಪತ್ರೆ ಅಭಿವೃದ್ಧಿಗೆ ಪಣ'

ಬೆಂಗಳೂರು: 'ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಆಸ್ಪತ್ರೆಗಳನ್ನು ಖಾಸಗಿ ವಲಯವನ್ನು ಮೀರಿಸುವಂತೆ ಅಭಿವೃದ್ಧಿಪಡಿಸಲು ಪಣತೊಡಲಾಗಿದೆ' ಎಂದು ಶಾಸಕ ಆರ್.ಮಂಜುನಾಥ್ ಹೇಳಿದರು.

ಶಿಕ್ಷಕರ ಸಮ್ಮಿಲನ ವೇದಿಕೆ, ಅಧ್ಯಾ ವೆಲ್ಫೇರ್ ಸರ್ವೀಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು, 1500 ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದರು.

'ದಾಸರಹಳ್ಳಿ ಕ್ಷೇತ್ರದಲ್ಲಿ ಹಿಂದೆ ಇದ್ದ ದೌರ್ಜನ್ಯದ ವಾತಾವರಣ ಈಗ ಇಲ್ಲ. ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗಳನ್ನು ನಂ.1 ಸ್ಥಾನಕ್ಕೆ ಕೊಂಡೊಯ್ಯುವ ಗುರಿ ಹೊಂದಿದ್ದೇನೆ ಎಂದು ಹೇಳಿದರು.

ವಿಧಾನ ಪರಿಷತ್ತಿನ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಪೂರ್ಣಪ್ರಜ್ಞ ಶಾಲೆಯ ಕಾರ್ಯದರ್ಶಿ ರಾಜಾರಾಮ್, ಶಿಕ್ಷಕರ ಸಮ್ಮಿಲನ ವೇದಿಕೆ ಅಧ್ಯಕ್ಷ ಆರ್.ಜಿ. ಗೋವಿಂದಪ್ಪ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಅಂದನಪ್ಪ, ಮುನಿಸ್ವಾಮಣ್ಣ ಭಾಗವಹಿಸಿದ್ದರು.

ಸಿಎಂಆರ್ ವಿ.ವಿ ಸಂಸ್ಥಾಪನಾ ದಿನ ಆಚರಣೆ

ಬೆಂಗಳೂರು: ಸಿಎಂಆರ್ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನವನ್ನು ಶನಿವಾರ ಆಚರಿಸಲಾಯಿತು. ಇದರ ಅಂಗವಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ₹5.7 ಕೋಟಿ ವಿದ್ಯಾರ್ಥಿವೇತನ ವಿತರಣೆ ಮಾಡಲಾಯಿತು.

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ನಡೆದ ಕಾರ್ಯಕ್ರಮವನ್ನು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಉದ್ಘಾಟಿಸಿದರು. ಎನ್‌ಜಿಒ ಸಹಯೋಗದಲ್ಲಿ ಸ್ಥಾಪಿಸಿರುವ ಪ್ರಾಣಿ ಪಾಲನಾ ಕೇಂದ್ರಕ್ಕೂ ಇದೇ ವೇಳೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿ ಸಚಿವರು, ಇದು ಪ್ರಾಣಿ ಪಾಲನಾ ಕೇಂದ್ರವನ್ನು ಹೊಂದಿರುವ ದೇಶದ ಏಕೈಕ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆ, ಸೇವಾ ಮನೋಭಾವವನ್ನು ಬೆಳೆಸಲು ಈ ಕೇಂದ್ರ ಮಾದರಿಯಾಗಲಿದೆ ಎಂದು ಶ್ಲಾಘಿಸಿದರು.

ವಿವಿಧ ಕ್ಷೇತ್ರಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಿಎಂಆರ್ ಶಿಕ್ಷಣ ಸಂಸ್ಥೆ ನೀಡಿದ ₹5.7 ಕೋಟಿ ವಿದ್ಯಾರ್ಥಿವೇತನವನ್ನು ಶಾಸಕ ಎಸ್.ಆರ್. ವಿಶ್ವನಾಥ್ ಮತ್ತು ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜ್ ವಿತರಣೆ ಮಾಡಿದರು.

ಚಾಣಕ್ಯ ವಿಶ್ವವಿದ್ಯಾಲಯ ಉದ್ಘಾಟಿಸಿದ ಗಣಿತಶಾಸ್ತ್ರ ಪ್ರಾಧ್ಯಾಪಕ ಮಂಜುಲ್ ಭಾರ್ಗವ

ಪ್ರಾಚೀನ ಬಹುಶಿಸ್ತೀಯ ವ್ಯವಸ್ಥೆ ಪುನರ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳು ಅನುಸರಿಸುತ್ತಿದ್ದ ಬಹು ಹಾಗೂ ಅಂತರ್‌ಶಿಸ್ತೀಯ ವ್ಯವಸ್ಥೆಯನ್ನು ಭಾರತೀಯ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಅಮೆರಿಕ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ಪ್ರಾಧ್ಯಾಪಕ ಮಂಜುಲ್ ಭಾರ್ಗವ ಸಲಹೆ ನೀಡಿದರು.

ಎನ್‌ಇಪಿ ಶಿಫಾರಸಿನಂತೆ ಬೆಂಗಳೂರಿನಲ್ಲಿ ಸ್ಥಾಪಿಸಲಾದ ಚಾಣಕ್ಯ ವಿಶ್ವವಿದ್ಯಾಲಯವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಚೀನ ಭಾರತೀಯರಾದ ಪಾಣಿನಿ, ವಾಸವದತ್ತ, ಆರ್ಯಭಟ, ಬ್ರಹ್ಮಗುಪ್ತ ಮತ್ತಿತರರು ಬಹುಶಿಸ್ತೀಯ ವ್ಯವಸ್ಥೆಯ ಮೂಲಕ ಶ್ರೇಷ್ಠ ಆವಿಷ್ಕಾರಗಳನ್ನು ಮಾಡಿದರು. ಧ್ಯಾನ, ಸಂಗೀತ, ಸಾಹಿತ್ಯ, ಅಂತರಿಕ್ಷ ಜ್ಞಾನ ಹಾಗೂ ಕೊನೆಗೆ ಸೊನ್ನೆಯ ಆವಿಷ್ಕಾರದ ಗಣಿತ ಪ್ರವೇಶವು ಅಂತರ್‌ಶಿಸ್ತೀಯ ವ್ಯವಸ್ಥೆಯನ್ನು ಗಟ್ಟಿಗೊಳಿಸಿದ್ದವು. ಇಂದು ಜಾಗತಿಕ ಮಟ್ಟದಲ್ಲಿ ಬಹುಶಿಸ್ತೀಯ ಮತ್ತು ಅಂತರಶಿಸ್ತೀಯ ಕೋರ್ಸ್‌ಗಳು ಪ್ರಾಮುಖ್ಯ ಪಡೆದಿವೆ. ಹೊಸ ಜ್ಞಾನದ ಆವಿಷ್ಕಾರಕ್ಕೆ ನಾಂದಿ ಹಾಡಿದೆ ಎಂದರು.

ಹೊಸ ಜ್ಞಾನದ ಸೃಷ್ಟಿಗೆ ಭಾರತೀಯ ಶಿಕ್ಷಣ ಸಾಕಷ್ಟು ಕೊಡುಗೆ ನೀಡಿದೆ. ದೇಶವು ಅಭಿವೃದ್ಧಿಗೆ ಜ್ಞಾನ ಉತ್ತಮ ಮಾರ್ಗವಾಗಿದೆ. ಸ್ವಾತಂತ್ರ್ಯಾ ನಂತರ ಭಾರತದ ಶಿಕ್ಷಣವು ಒಂದೇ ವ್ಯವಸ್ಥೆಯ ಕೊಂಡಿಯಾಗಿತ್ತು. ಇದರಿಂದ ವಿದ್ಯಾರ್ಥಿಗಳು ಸೂಕ್ತ ಸಂಪರ್ಕ ಸಾಧಿಸಲು ಸಾಧ್ಯವಾಗಲಿಲ್ಲ, ಅಮೆರಿಕದ ವಿಶ್ವವಿದ್ಯಾಲಯಗಳು ಬಹುಶಿಸ್ತೀಯ ಮಾದರಿ ಅನುಸರಿಸುತ್ತವೆ. ಒಂದು ವ್ಯವಸ್ಥೆಯಿಂದ ಪಡೆದ ವಿಷಯಗಳನ್ನು ಬೇರೆಡೆ ವಿಭಿನ್ನವಾಗಿ ಬಳಸಿದರೆ ಅದು ನಾವೀನ್ಯವಾಗುತ್ತದೆ. ಸ್ಟೀವ್ ಜಾಬ್ಸ್ ಅವರ ಕಂಪನಿಗಳು ಬಹುಶಿಸ್ತೀಯ ಕಾರ್ಯವಿಧಾನಕ್ಕೆ ಆದ್ಯತೆ ನೀಡುತ್ತವೆ. ಭಾರತದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅಂತಹ ಆಶಯಗಳನ್ನು ಸಾಕಾರಗೊಳಿಸುತ್ತಿದೆ ಎಂದು ವಿವರಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಕರಡು ರಚನಾ ಸಮಿತಿ ಅಧ್ಯಕ್ಷ ಡಾ.ಕಸ್ತೂರಿ ರಂಗನ್, 'ವಿಶ್ವವಿದ್ಯಾಲಯ ಸಂಶೋಧನೆಗಳಿಗೆ ಒತ್ತು ನೀಡಲಿದೆ. ಸಂಶೋಧಕರು ಮಾಡುವ ತಪ್ಪುಗಳನ್ನೂ ಪ್ರೋತ್ಸಾಹಿಸುವ ಮನೋಭಾವ ಇರಬೇಕು' ಎಂದರು.

ತಂತ್ರಜ್ಞಾನ ಕ್ರಾಂತಿಯ ಫಲವಾಗಿ ಭಾರತ ಐದು ವರ್ಷಗಳಲ್ಲಿ ವಿಶ್ವದ ಮೂರನೇ ಬಲಿಷ್ಠ ಆರ್ಥಿಕ ವ್ಯವಸ್ಥೆ ಹೊಂದಲಿದೆ. ಇದಕ್ಕೆ ಪೂರಕವಾಗಿ ಯುವ ಜನರು ಆಧುನಿಕ ಕೌಶಲಗಳನ್ನು ಹೊಂದಬೇಕು. ಚಾಣಕ್ಯ ವಿಶ್ವವಿದ್ಯಾಲಯ ಅಂತಹ ಆಶಯಗಳನ್ನು ಪೂರೈಸಲಿದೆ ಎಂದು ಆಶಿಸಿದರು.

ಇನ್ಫೊಸಿಸ್ ಫೌಂಡೇಶನ್‌ನ ಸುಧಾ ಮೂರ್ತಿ, ಕರ್ನಾಟಕ ಸರ್ಕಾರದ ಐ.ಟಿ. ವಿಷನ್ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣ, ಬಯೋಕಾನ್ ಲಿಮಿಟೆಡ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಜಿಂದಾಲ್‌ನ ಸೀತಾರಾಮ್ ಜಿಂದಾಲ್, ಮಣಿಪಾಲ್ ಗ್ಲೋಬಲ್ ಎಜುಕೇಶನ್ ಸರ್ವೀಸ್‌ನ ಮೋಹನ್‌ದಾಸ್ ಪೈ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕುಲಾಧಿಪತಿ ಎಂ.ಕೆ.ಶ್ರೀಧರ್, ಕುಲಪತಿ ಯಶವಂತ ಡೋಂಗ್ರೆ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಶನಿವಾರ ನಡೆದ ಚಾಣಕ್ಯ ವಿಶ್ವವಿದ್ಯಾಲಯದ ಉದ್ಘಾಟನಾ ಸಮಾರಂಭದಲ್ಲಿ ಎಂ.ಕೆ.ಶ್ರೀಧರ್, ಸೀತಾರಾಮ್ ಜಿಂದಾಲ್, ಡಾ.ಕಸ್ತೂರಿ ರಂಗನ್, ಮಂಜುಲ್ ಭಾರ್ಗವ, ಸುಧಾ ಮೂರ್ತಿ, ಕಿರಣ್ ಮಜುಂದಾರ್ ಶಾ ಇದ್ದಾರೆ.

ವಿವಿಗೆ ದೇಣಿಗೆಯ ಆಸರೆ

ವಿಶ್ವವಿದ್ಯಾಲಯ ದೇಣಿಗೆ ಮೂಲಕ ಆರ್ಥಿಕ ನಿಧಿಯನ್ನು ಸ್ಥಾಪಿಸುತ್ತಿದೆ. ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಮಧ್ಯಮ ವರ್ಗದವರಿಗೆ ಕಡಿಮೆ ಶುಲ್ಕದಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ರೂಪಿಸುತ್ತಿದೆ. ಸಾಕಷ್ಟು ಉದ್ಯಮಿಗಳು, ದಾನಿಗಳು ಉದಾರವಾಗಿ ನೆರವು ನೀಡುತ್ತಿದ್ದಾರೆ ಎಂದು ವಿಶ್ವವಿದ್ಯಾನಿಲಯದ ಸಹ ಕುಲಪತಿ ಎಂ.ಪಿ.ಕುಮಾರ್ ಹೇಳಿದರು.

ನಗರದಲ್ಲಿ ಇಂದು

ವಾಕಥಾನ್: ಅತಿಥಿಗಳು: ಪಿ.ಸಿ. ಮೋಹನ್, ಕಲಾ ಕೃಷ್ಣಮೂರ್ತಿ, ಸಪ್ತಮಿ ಗೌಡ, ಆಯೋಜನೆ: ರೈನ್‌ಬೋ ಆಸ್ಪತ್ರೆ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 8

'ಪ್ರತಿಭೋತ್ಸವ' ವಿದ್ಯಾ ಮಾಣಿಕ್ಯಗಳಿಗೆ ಅಭಿನಂದನೆ ಸಮಾರಂಭ: ಸಾನ್ನಿಧ್ಯ: ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಧ್ವಜಾರೋಹಣ, ಎಚ್.ಪಿ. ಮಂಜುನಾಥ್, ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರತಿಭಾ ಪುರಸ್ಕಾರ: ಸಿದ್ದರಾಮಯ್ಯ, ಕೋಟ ಶ್ರೀನಿವಾಸ ಪೂಜಾರಿ, ಆರ್. ಅಶೋಕ್, ಬಿ.ಸಿ. ನಾಗೇಶ್,ಡಿ.ಎಚ್. ಶಂಕರಮೂರ್ತಿ, ಪಿ.ಸಿ. ಮೋಹನ್, ಡಿ.ಎಸ್. ಅರುಣ್, ಅತಿಥಿಗಳು: ಶ್ಯಾಮನೂರು ಶಿವಶಂಕರಪ್ಪ, ಬಾಲಕೃಷ್ಣ ಗೌಡ, ಅಧ್ಯಕ್ಷತೆ: ಆರ್.ಪಿ. ರವಿಶಂಕರ್, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಗೇಟ್ ನಂ.02, ಮೇಖ್ರಿ ವೃತ್ತ, ಬೆಳಿಗ್ಗೆ 8.30

69ನೇ ಸಹಕಾರ ಸಪ್ತಾಹದ ಅಂಗವಾಗಿ ಉಚಿತ ಆರೋಗ್ಯ ತಪಾಸಣ ಶಿಬಿರ: ಆಯೋಜನೆ ಮತ್ತು ಸ್ಥಳ: ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್, ಕತ್ತರಿಗುಪ್ಪೆ ಶಾಖೆ, ಬನಶಂಕರಿ 3ನೇ ಹಂತ, ಬೆಳಿಗ್ಗೆ 9

'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಪುರಂದರದಾಸರ ಕೃತಿ ಆಧಾರಿತ ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಸೀತಾ ಕೋಟೆ ಮತ್ತು ತಂಡ, ಆಯೋಜನೆ: ಪುರಂದರದಾಸ ಮೆಮೋರಿಯಲ್ ಟ್ರಸ್ಟ್, ಸ್ಥಳ: ಪುರಂದರ ಮಂಟಪ, ಇಸ್ರೋ ಲೇಔಟ್, ದೇವರಕೆರೆ ಸಮೀಪ, ಸಂಜೆ 6

ಸೀತಾ ಕೋಟೆ

ರವಿ ಮಡೋಡಿ ಅವರ 'ನಮ್ಮಲ್ಲೇ ಮೊದಲು' ಮತ್ತು ಪೂರ್ಣಿಮಾ ಹೆಗಡೆ ಅವರ 'ಅಂತರ್ವೀಕ್ಷಣೆ' ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಬಿ.ಆರ್. ಲಕ್ಷ್ಮಣರಾವ್, ಕೃತಿ ಬಿಡುಗಡೆ: ಗಿರೀಶ್ ಹತ್ವಾರ್–ಜೋಗಿ, ಕೃತಿಗಳ ಕುರಿತು: ಆನಂದರಾಮ ಉಪಾಧ್ಯ, ಭಾರತಿ ಹೆಗಡೆ, ಉಪಸ್ಥಿತಿ: ರವಿ ಮಡೋಡಿ, ಪೂರ್ಣಿಮಾ ಹೆಗಡೆ, ಆಯೋಜನೆ: ಯಕ್ಷ ಸಾಹಿತ್ಯ ವೇದಿಕೆ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5

ಬಿ.ಆರ್. ಲಕ್ಷ್ಮಣರಾವ್

ಗಾನ ವಾದ್ಯ ವೈಭವ: ಬಾನ್ಸುರಿ ವಾದನ: ಪ್ರಕಾಶ್ ಹೆಗಡೆ, ಹಿಂದೂಸ್ಥಾನಿ ಗಾಯನ: ಆಶಿಶ್ ನಾಯಕ್, ಪ್ರತಿಮಾ ಕಾರಂತ, ತಬಲಾ ಸೋಲೋ: ರಾಮನಾಥ ಪೈ, ನಾಗಶಯನ ಬಿ., ಮನೋಹರ್ ಬಿ.ಬಿ., ಸುಮೇಧ್ ಪುರಾಣಿಕ್, ಸಾಥ್ ಸಂಗತ್: ಸತೀಶ್ ಹಂಪಿಹೊಳಿ, ಅಭಯ್ ಕುಲಕರ್ಣಿ, ಅಮಿತ್ ಭಟ್, ಎನ್. ಪ್ರಜ್ವಲ್ ಶರ್ಮಾ, ಗೌರವ್ ಗಡಿಯಾರ್, ಉಪಸ್ಥಿತಿ: ವೈ.ವಿ. ಗುಂಡೂರಾವ್, ಆಯೋಜನೆ: ಸಂಗೀತ ಕೃಪಾ ಕುಟೀರ, ಸತೀಶ್ ಹಂಪಿಹೊಳಿ, ಸ್ಥಳ: ಸ್ವಾಮಿ ವಿವೇಕಾನಂದ ವಿದ್ಯಾಶಾಲೆ, ಬನಶಂಕರಿ, 1ನೇ ಹಂತ, ಹನುಮಂತನಗರ, ಪಿಇಎಸ್ ಕಾಲೇಜು ಹಿಂಭಾಗ, ಬೆಳಿಗ್ಗೆ 10

ಕಾರ್ತಿಕ ಮಾಸದ ಪೂಜಾ ಸಂಭ್ರಮ: ಉದ್ಘಾಟನೆ: ಉದಯಶಂಕರ ನೆಜ್ಜೂರು, ಅತಿಥಿಗಳು: ಡಾ. ಅಶೋಕ್ ಕುಮಾರ್ ಪಿ., ಅಧ್ಯಕ್ಷತೆ: ಬಸವರಾಜ ಕೋಣಿ, ಆಯೋಜನೆ ಮತ್ತು ಸ್ಥಳ: ವಿದ್ಯಾರಣ್ಯಪುರ ವೀರಶೈವ ಸೇವಾ ಸಮಿತಿ, ವೀರಭದ್ರಸ್ವಾಮಿ ದೇವಸ್ಥಾನ, ತಿಂಡ್ಲುಗ್ರಾಮ, ವಿದ್ಯಾರಣ್ಯಪುರ, ಬೆಳಿಗ್ಗೆ 10

'ಸಂಸ್ಕೃತಿ ಸಿರಿ'–2022 ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಐ.ಎಂ. ವಿಠ್ಠಲಮೂರ್ತಿ, ಪ್ರಶಸ್ತಿ ಪ್ರದಾನ: ಕೆ.ಎನ್. ಫಣೀಂದ್ರ, ಪ್ರಾಸ್ತಾವಿಕ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ವೇಮಗಲ್ ನಾರಾಯಣಸ್ವಾಮಿ, ಪ್ರಶಸ್ತಿ ಪುರಸ್ಕೃತರು: ನಾಗೇಶ್ ಹೆಗಡೆ, ಕಸ್ತೂರಿ ಶಂಕರ್, ರಾಮಣ್ಣ ಕೋಡಿಹೊಸಳ್ಳಿ, ಕೋಟಗಾನಹಳ್ಳಿ ರಾಮಯ್ಯ, ಕಡಿದಾಳ್ ಪ್ರಕಾಶ್, ಬಿ.ಕೆ. ಶಿವರಾಂ, ಸುಧಾ ಬರಗೂರು, ಸುಪರ್ಣ ವೆಂಕಟೇಶ್, ಆಯೋಜನೆ: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ: ಅತಿಥಿಗಳು: ಎಂ.ಜೆ. ಅಕ್ಬರ್, ಎಂ.ಪಿ. ಶ್ಯಾಮ್, ಆಯೋಜನೆ ಮತ್ತುಸ್ಥಳ: ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಮೈಸೂರು ರಸ್ತೆ, ಬೆಳಿಗ್ಗೆ 10

ಚಿಂತನೆಯ ಚಿಗುರು ರಂಗಸ್ವಾಮಿ ಅವರ 'ಜಾಂಬವ ಜಗತ್ತಿನ ಚಿಗುರು', ಜಾಂಬವ ಎಂ. ಗಂಗಾಧರ್ ಅವರ 'ಆದಿ ಜಾಂಬವರ ಕಥೆ–ವ್ಯಥೆ' ಕೃತಿಗಳ ಬಿಡುಗಡೆ: ಸಾನ್ನಿಧ್ಯ: ವೀರಭದ್ರ ಚೆನ್ನಮಲ್ಲ ಸ್ವಾಮೀಜಿ, ಅತಿಥಿಗಳು: ಎಂ. ರಾಮಕೃಷ್ಣ, ಕೃತಿಗಳ ಬಿಡುಗಡೆ: ಬಿ. ವೀರಪ್ಪ, ಆರ್. ದೇವದಾಸ್, ಅತಿಥಿಗಳು: ವೂಡೇ.ಪಿ. ಕೃಷ್ಣ, ಪಿಳ್ಳ ಮುನಿಶಾಮಪ್ಪ, ಪರಶುರಾಮ್ ಶಿನ್ನಾಳ್‌ಕರ್, ಎ. ಅಮೃತ್ ರಾಜ್, ಕೃತಿಗಳ ಕುರಿತು: ನಿಜಲಿಂಗಪ್ಪ ಮಟ್ಟಿಹಾಳ್, ಎಚ್.ನಟರಾಜ್, ಆಯೋಜನೆ: ಆದಿಜಾಂಬವ ಜಾಗೃತಿ, ಸ್ಥಳ: ಗಾಂಧಿಭವನ, ಶಿವಾನಂದ ವೃತ್ತ, ಬೆಳಿಗ್ಗೆ 10.15

ಸಾಂಸ್ಕೃತಿಕ ಕಾರ್ಯಕ್ರಮಗಳು: ಬೆಳಿಗ್ಗೆ 10ರಿಂದ ಕರ್ನಾಟಕ ಸಂಗೀತ ಗಾಯನ: ರಂಗನಾಥ್, 11ಕ್ಕೆ ಭರನಾಟ್ಯ ಪ್ರದರ್ಶನ: ಕಮಲೇಶ್ವರ್, ಅತಿಥಿಗಳು: ಉದಯ ರೆಡ್ಡಿ, ಸಂಜೆ 6.30: ಭರತನಾಟ್ಯ: ರಶ್ಮಿ ಆನಂದ, ಅತಿಥಿಗಳು: ಎಂ ಗೌತಮ್ ಕುಮಾರ್, ಎಚ್.ಎಸ್. ಶಿವರುದ್ರಪ್ಪ, ರಶ್ಮಿ ಪ್ರಸಾದ್, ಆಯೋಜನೆ: ರಂಗ ಕಲಾಕ್ಷೇತ್ರ, ಸ್ಥಳ: ಕೊದಂಡ ರಾಮಲಿಂಗೇಶ್ವರ ದೇವಸ್ಥಾನ, ದೊಮ್ಮಲೂರು, ಬಿಡಿಎ ಕಾಂಪ್ಲೆಕ್ಸ್ ಹಿಂದೆ

ಕನ್ನಡ ರಾಜ್ಯೋತ್ಸವ ಆಚರಣೆ: ಅತಿಥಿಗಳು: ಎಂ. ಗೌತಮ್ ಕುಮಾರ್, ಬಿ.ವಿ. ತೇಜಮೂರ್ತಿ, ಹೇಮಲತಾ, ಕನಕರತ್ನ, ಶಿವಗುಹರಾಮನ್, ಕಾರ್ತಿಕೇಯನ್, ಸರಳಾ, ಜಯಾರೇವಣ್ಣಸಿದ್ದಯ್ಯ, ಯಶೋದ್ಯಾ, ಆಯೋಜನೆ: ಗಾಯತ್ರಿ ಸೋಶಿಯಲ್ ಟ್ರಸ್ಟ್, ಸ್ಥಳ: ಸೋಮೇಶ್ವರಪುರ ವೆಲ್‌ಫೇರ್ ಅಸೋಸಿಯೇಷನ್, 5ನೇ ಅಡ್ಡರಸ್ತೆ, ಸೋಮೇಶ್ವರಪುರ ಲೇಔಟ್, ಬೆಳಿಗ್ಗೆ 10.30

ಡಾ.ಎಚ್.ಎಸ್. ಗೋಪಾಲರಾವ್ ಅವರ 'ಬಹುಮುಖಿ' ಅಭಿನಂದನಾ ಗ್ರಂಥ ಬಿಡುಗಡೆ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಎಂ.ಜಿ. ನಾಗರಾಜ್, ಪ್ರಾಸ್ತಾವಿಕ: ಡಿ.ವಿ. ಪರಮಶಿವಮೂರ್ತಿ, ಗ್ರಂಥ ಬಿಡುಗಡೆ: ಎನ್. ಸಂತೋಷ ಹೆಗ್ಡೆ, ಅಭಿನಂದನಾ ನುಡಿ: ವಿ. ನಾಗರಾಜ್, ಅಭಿನಂದಿತರ ಮಾತು: ಎಚ್.ಎಸ್. ಗೋಪಾಲರಾವ್, ಆಯೋಜನೆ: ಡಾ.ಎಚ್.ಎಸ್. ಗೋಪಾಲರಾವ್ ಅಭಿನಂದನಾ ಸಮಿತಿ, ಸ್ಥಳ: ದಿ ಮಿಥಿಕ್ ಸೊಸೈಟಿ, ಬೆಳಿಗ್ಗೆ 10.30

ಹಂ.ಪ. ನಾಗರಾಜಯ್ಯ

ಪ್ರತಿಭಾ ಪುರಸ್ಕಾರ–2022: ಅತಿಥಿಗಳು: ಸ್ವಾಮಿ ವೀರೇಶಾನಂದ ಸರಸ್ವತಿ, ಗುರುರಾಜ ಕರಜಗಿ, ಪ್ರದೀಪ್ ಕುಮಾರ್, ನಾರಾಯಣ್ ಮಾನೆ, ಅಧ್ಯಕ್ಷತೆ: ಅಶೋಕ್ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸಪ್ತರ್ಷಿ ಫೌಂಡೇಷನ್, ಸ್ಥಳ: ಬಿ.ಎನ್.ಎಂ.ಐ.ಟಿ ಆಡಿಟೋರಿಯಂ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

ಗುರುರಾಜ ಕರಜಗಿ

ಕನ್ನಡ ಮಾತೆಗೆ ಕಲಾಭರಣ ಸಮರ್ಪಣಾ ಸಮಾರಂಭ: ಆಯೋಜನೆ: ಮೆಯ್ವಳಿ ಕನ್ನಡ ಸಹೋದರರ ತಂಡ, ಸ್ಥಳ: ಜಯರಾಮ ಸೇವಾ ಮಂಡಳಿ, 8ನೇ ಬಡಾವಣೆ, ಜಯನಗರ, ಬೆಳಿಗ್ಗೆ 10.30

'ಸ್ನೇಹಿತರ ಕೂಟ'ದ 25ನೇ ವಾರ್ಷಿಕೋತ್ಸವ: ಮಧ್ಯಾಹ್ನ 2: ರಾಜ್ಯ ಮಟ್ಟದ ರಂಗೋಲಿ ಸ್ಪರ್ಧೆ, ಸಂಜೆ 4: ಪ್ರತಿಭಾ ಪುರಸ್ಕಾರ, ಸಂಜೆ 5: ರಾಜ್ಯಮಟ್ಟದ ಬಾಲಗೋಪಾಲ ಸ್ಪರ್ಧೆ, ಸ್ಥಳ: ಬಿಬಿಎಂಪಿ ಕಚೇರಿ ಮುಂಭಾಗ, ಯಲಹಂಕ ಓಲ್ಡ್ ಟೌನ್

ಕರಾವಳಿ ರತ್ನ ಪ್ರಶಸ್ತಿ ಮತ್ತು ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಕೆ.ಇ. ರಾಧಾಕೃಷ್ಣ, ಯು.ಬಿ. ವೆಂಕಟೇಶ್, ಪಟ್ಲ ಸತೀಶ್ ಶೆಟ್ಟಿ, ಕರಾವಳಿ ಚಿತ್ರ ರತ್ನ ಪುರಸ್ಕೃತ ಚಿತ್ರ: ಕಾಂತಾರ, ಅತಿಥಿಗಳು: ಕೋಟ ಶ್ರೀನಿವಾಸ ಪೂಜಾರಿ, ನಾಗರಾಜ ಐತಾಳ್, ಪಿ. ದಯಾನಂದ ಪೈ, ಕೆ. ಪ್ರಕಾಶ್ ಶೆಟ್ಟಿ, ಸಭಾಧ್ಯಕ್ಷರು: ಬಾ. ರಾಮಚಂದ್ರ ಉಪಾಧ್ಯ, ಆಯೋಜನೆ: ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ಹೋಟೆಲ್ ಅಜಂತಾ, ರೋಹಿಣಿ ಸಭಾಂಗಣ, ಎಂ.ಜಿ. ರಸ್ತೆ, ಸಂಜೆ 4

14ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಕೆ. ಸಿ. ನಾರಾಯಣಗೌಡ, ಶಾಲಿನಿ ರಜನೀಶ್, ಎಂ.ಪಿ. ಮಲ್ಲೈ ಮುಹಿಲನ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಉಪಸ್ಥಿತಿ: ಎಂ.ಎನ್. ನಟರಾಜ್, ಆಯೋಜನೆ: ನೆಹರೂ ಯುವಕೇಂದ್ರ, ಸ್ಥಳ: ಯುವನಿಕಾ ಸಭಾಂಗಣ, ನೃಪತುಂಗ ರಸ್ತೆ, ಸಂಜೆ 4

ಕನ್ನಡ ರಾಜ್ಯೋತ್ಸವ ಆಚರಣೆ: ಉದ್ಘಾಟನೆ: ಜಿ. ಮಂಜುನಾಥ್, ಅಧ್ಯಕ್ಷತೆ: ಲಿಂಗರಾಜು ಡಿ. ನೊಣವಿನಕೆರೆ, ಉಪನ್ಯಾಸ: ಸಿ. ತಿಮ್ಮಪ್ಪ, ಅತಿಥಿಗಳು: ಬಿ.ಎಸ್. ಪುಟ್ಟರಾಜು, ರಘುನಾಥ್, ರಘುವೀರ.ಎಸ್. ಗೌಡ, ಬಿ.ಎಂ. ಕುಮಾರ್, ಆಯೋಜನೆ: ವಿಶ್ವಚೇತನ ಟ್ರಸ್ಟ್, ಸ್ಥಳ: ಕಂಬಿ ಸಿದ್ರಾಮಣ್ಣ ಸಭಾಂಗಣ, ಹಾವನೂರು ವೃತ್ತ, ಬಸವೇಶ್ವರನಗರ, ವೇದಿಕೆ ಕಾರ್ಯಕ್ರಮ ಸಂಜೆ 6

ಕಾರ್ತಿಕ ವಿಶೇಷೋಪನ್ಯಾಸ: ವಿಷಯ: ಶಿವನ ಕಲ್ಯಾಣ ಬಸವ ಕಲ್ಯಾಣ, ಉಪನ್ಯಾಸಕರು: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಲಕ್ಷ್ಮಣ, ಆಯೋಜನೆ: ಬಸವ ಸಮಿತಿ, ವೀರಶೈವ ಮಹಾಸಭಾ, ಸ್ಥಳ: ಕಲ್ಯಾಣ ಸುಂದರೇಶ್ವರಸ್ವಾಮಿ ದೇವಸ್ಥಾನ, 8ನೇ ಅಡ್ಡರಸ್ತೆ, ವೆಂಕಟಾಪುರ, ಕೋರಮಂಗಲ, ಸಂಜೆ 5.30

ವಾಕಥಾನ್: ಅತಿಥಿಗಳು: ಪಿ.ಸಿ. ಮೋಹನ್, ಕಲಾ ಕೃಷ್ಣಮೂರ್ತಿ, ಸಪ್ತಮಿ ಗೌಡ, ಆಯೋಜನೆ: ರೈನ್‌ಬೋ ಆಸ್ಪತ್ರೆ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 8

ಸಪ್ತಮಿ ಗೌಡ

ಚಿತ್ರಾವಳಿ

ಅಡವಿ ಅಲರ್ಟ್ ಫೌಂಡೇಷನ್ ವತಿಯಿಂದ ಅರಣ್ಯ ಇಲಾಖೆ ಮತ್ತು ಮುಂಚೂಣಿ ಸಿಬ್ಬಂದಿ ಪರಿಶ್ರಮದ ಚಿತ್ರೀಕರಣ ಬಳಸಿಕೊಂಡು 'ವರ್ಲ್ಡ್ ಲೈಫ್ ಕನ್ಸರ್ವೇಶನ್ ಕ್ಯಾಲೆಂಡರ್–2023' ಅನ್ನು ಮುಖ್ಯ ಅರಣ್ಯಾಧಿಕಾರಿ ಆರ್.ಕೆ. ಸಿಂಗ್ ಗುರುವಾರ ಬಿಡುಗಡೆಗೊಳಿಸಿದರು. ಅಡವಿ ಅಲರ್ಟ್ ಸಂಸ್ಥಾಪಕ ಪವನ್ ಜೋಶಿ, ನಿರ್ದೇಶಕಿ ರಶ್ಮಿ ಸಿ.ಎ., ಸಂದೀಪ್, ಪ್ರೀತಿ ಇದ್ದರು.

ಬ್ರಿಗೇಡ್ ಗೇಟ್ ವೇನಲ್ಲಿರುವ ಒರಾಯನ್ ಮಾಲ್‌ನಲ್ಲಿ ಕಲಾವಿದ ಬಾದಲ್ ನಂಜುಂಡಸ್ವಾಮಿ ಅವರ 3ಡಿ ವರ್ಣಚಿತ್ರ ಕಲಾಕೃತಿಯನ್ನು ಬ್ರಿಗೇಡ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ನಿರೂಪಾ ಶಂಕರ್ ಅವರು ಶನಿವಾರ ಅನಾವರಣ ಮಾಡಿದರು.

ಶಬರಿಮಲೆಗೆ ಕೆಎಸ್‌ಆರ್‌ಟಿಸಿ ಬಸ್

ಬೆಂಗಳೂರು: ಶಬರಿಮಲೆಗೆ ತೆರಳುವ ಭಕ್ತರ ಅನುಕೂಲಕ್ಕಾಗಿ ಬೆಂಗಳೂರಿನಿಂದ ಪಂಪಾಗೆ (ಶಬರಿಮಲೆ) ರಾಜಹಂಸ ಮತ್ತು ವೋಲ್ವೊ ಬಸ್‌ಗಳ ಕಾರ್ಯಾಚರಣೆಯನ್ನು ಕೆಎಸ್‌ಆರ್‌ಟಿಸಿ ಆರಂಭಿಸಿದೆ.

ಡಿ.1ರಿಂದ ಬಸ್‌ಗಳ ಸಂಚಾರ ಆರಂಭವಾಗಲಿದೆ. ಬೆಂಗಳೂರು-ನಿಲಕ್ಕಲ್ ರಾಜಹಂಸ ಬಸ್ ಬೆಂಗಳೂರಿನಿಂದ ಪ್ರತಿದಿನ ಮಧ್ಯಾಹ್ನ 1.30ಕ್ಕೆ ಹೊರಟು ಮರುದಿನ ಬೆಳಿಗ್ಗೆ 8.15ಕ್ಕೆ ಪಂಪಾ ತಲುಪುತ್ತದೆ. ಅದೇ ದಿನ ಸಂಜೆ 5ಕ್ಕೆ ಪಂಪಾದಿಂದ ಹೊರಟು ಮರುದಿನ ಮಧ್ಯಾಹ್ನ 12ಕ್ಕೆ ಬೆಂಗಳೂರು ತಲುಪುತ್ತದೆ. ಪ್ರಯಾಣ ದರ ₹1,150 ನಿಗದಿ ಮಾಡಲಾಗಿದೆ. ಬೆಂಗಳೂರು-ನಿಲಕ್ಕಲ್ ವೋಲ್ವೊ ಬಸ್ ಪ್ರತಿದಿನ ಮಧ್ಯಾಹ್ನ 2ಕ್ಕೆ ಹೊರಟು ಮರು ದಿನ ಬೆಳಿಗ್ಗೆ 6.15ಕ್ಕೆ ಪಂಪಾ ತಲುಪುತ್ತದೆ. ಅದೇ ದಿನ ಸಂಜೆ 6ಕ್ಕೆ ಪಂಪಾದಿಂದ ಹೊರಟು ಮರುದಿನ ಬೆಳಿಗ್ಗೆ 9.45ಕ್ಕೆ ಬೆಂಗಳೂರು ತಲುಪುತ್ತದೆ. ಈ ಬಸ್ ಪ್ರಯಾಣ ದರ ₹1,490 ನಿಗದಿ ಮಾಡಲಾಗಿದೆ. ಈ ಎರಡೂ ಬಸ್‌ಗಳು ಶಾಂತಿನಗರ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡಲಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಮೂರು ದಿನದ ಪರಿಷೆಗೆ ಬೀಡು ಬಿಟ್ಟಿರುವ ಎರಡು ಸಾವಿರ ಕಡಲೆಕಾಯಿ ಅಂಗಡಿಗಳು

ಕಡಲೆಕಾಯಿ ಪರಿಷೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐತಿಹಾಸಿಕ ಕಡಲೆಕಾಯಿ ಪರಿಷೆಗೆ ಬಸವನಗುಡಿಯ ದೊಡ್ಡಗಣಪತಿ ದೇವಸ್ಥಾನ ಆವರಣ ಮತ್ತು ಸುತ್ತಮುತ್ತಲ ಪ್ರದೇಶ ಸಜ್ಜಾಗಿದೆ. 2 ಸಾವಿರಕ್ಕೂ ಹೆಚ್ಚು ಕಡಲೆಕಾಯಿ ಅಂಗಡಿಗಳು ಬೀಡುಬಿಟ್ಟಿವೆ.

ಭಾನುವಾರದಿಂದ ಮೂರು ದಿನ ಪರಿಷೆ ನಡೆಯಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಸಂಜೆ ತುಲಾಭಾರ ಕಾರ್ಯಕ್ರಮದ ಮೂಲಕ ಚಾಲನೆ ನೀಡಲಿದ್ದಾರೆ. ಪಾರಂಪರಿಕ ಹಿನ್ನೆಲೆ ಇರುವ ಈ ಕಾರ್ಯಕ್ರಮಕ್ಕೆ ಪಾಲಿಕೆ ಸಂಪೂರ್ಣ ಸಿದ್ಧತೆ ಮಾಡಿಕೊಂಡಿದೆ. ಪಾಲಿಕೆ ವಿಶೇಷ ಆಯುಕ್ತ ಜಯರಾಮ್ ರಾಯಪುರ ಅವರು ಶನಿವಾರ ಸಿದ್ಧತೆ ಪರಿಶೀಲನೆ ನಡೆಸಿದರು.

ಸಾರ್ವಜನಿಕರಿಗೆ ವಾಹನಗಳ ನಿಲುಗಡೆಗೆ ತಾತ್ಕಾಲಿಕವಾಗಿ ಎ.ಪಿ.ಎಸ್ ಕಾಲೇಜಿನ ಆಟದ ಮೈದಾನ ಮತ್ತು ಕೊಹಿನೂರು ಆಟದ ಮೈದಾನ ಆಶ್ರಮ ವೃತ್ತದಲ್ಲಿ ಜಾಗ ಕಲ್ಪಿಸಲಾಗಿದೆ. ದೇವರ ದರ್ಶನವನ್ನು ಎಲ್.ಇ.ಡಿ ಮೂಲಕ ಮಾಡಿಸಲು ಅಲ್ಲಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಅಹಿತಕರ ಚಟುವಟಿಕೆ ನಿಯಂತ್ರಿಸಲು ಹಲವು ಕಡೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಭಕ್ತರಿಗೆ ಮಾರ್ಗದರ್ಶನ ನೀಡಲು ಹೋಂ ಗಾರ್ಡ್ಸ್, ಪೊಲೀಸ್ ಇಲಾಖೆ ಸಿಬ್ಬಂದಿಗೆ ಧ್ವನಿವರ್ಧಕಗಳನ್ನು ಬಳಸಲು ವ್ಯವಸ್ಥೆ ಮಾಡಲಾಗಿದೆ. ತುರ್ತು ಸಂದರ್ಭದಲ್ಲಿ ಮಕ್ಕಳು, ವೃದ್ಧರ ಅನುಕೂಲಕ್ಕಾಗಿ ವೈದ್ಯಕೀಯ ಸಿಬ್ಬಂದಿ ನಿಯೋಜಿಸಲಾಗಿದೆ. ಸಂಚಾರಕ್ಕೆ ತೊಂದರೆ ಆಗದಂತೆ ಪಾದಚಾರಿ ಮಾರ್ಗಗಳಲ್ಲಿ 2 ಸಾವಿರ ತಾತ್ಕಾಲಿಕ ಅಂಗಡಿಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಆಲಂಕಾರಿಕ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ. ಮುನ್ನೆಚ್ಚರಿಕೆ ಸಲುವಾಗಿ ಅಗ್ನಿಶಾಮಕ ವಾಹನ ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ವಿದ್ಯುತ್ ಸರಬರಾಜು ಸಮರ್ಪಕವಾಗಿ ನಿರ್ವಹಿಸಲು ಬೆಸ್ಕಾಂ ಇಲಾಖೆಯಿಂದಲೂ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆಯಿಂದ 600 ಸಿಬ್ಬಂದಿ ನಿಯೋಜಿಸಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಹಲವು ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರತಿದಿನ ಸಂಜೆ 6ರಿಂದ 7.30ರವರೆಗೆ ಕಹಳೆ ಬಂಡೆ ಉದ್ಯಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಕೊನೆಯ ದಿನವಾದ ಮಂಗಳವಾರ ನರಸಿಂಹಸ್ವಾಮಿ ಉದ್ಯಾನದಲ್ಲೂ ರಾತ್ರಿ 9.30ರವರೆಗೆ ಕಾರ್ಯಕ್ರಮಗಳು ನಡೆಯಲಿವೆ ಎಂದು ವಿವರಿಸಿದ್ದಾರೆ.



ಪರಿಷೆಗೆ ಸಜ್ಜಾಗಿರುವ ಕಡಲೆಕಾಯಿ ವ್ಯಾಪಾರಿಗಳು ಪ್ಲಾಸ್ಟಿಕ್ ಬ್ಯಾಗ್‌ಗಳ ಬಳಕೆಯಿಂದ ದೂರ ಇರುವ ಜಾಗೃತಿ ಫಲಕಗಳನ್ನು ಪ್ರದರ್ಶಿಸುತ್ತಿದ್ದಾರೆ –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

500 ವರ್ಷಗಳ ಇತಿಹಾಸ

1537ರಲ್ಲಿ ಕೆಂಪೇಗೌಡರು ನಿರ್ಮಾಣ ಮಾಡಿದ್ದ ಈ ಗ್ರಾಮಕ್ಕೆ ಸುಂಕೇನಹಳ್ಳಿ ಎಂಬ ಹೆಸರಿಟ್ಟಿದ್ದರು. ಈ ಗ್ರಾಮದ ರೈತರು ಬೆಳೆದ ಕಡಲೆಕಾಯಿಯ ಮೊದಲ ಫಸಲನ್ನು ದೇವರಿಗೆ ಅರ್ಪಿಸುತ್ತಿದ್ದರು. ಅದು ಸಂಪ್ರದಾಯವಾಗಿ ಬೆಳೆದುಬಂದಿದೆ. 500 ವರ್ಷಗಳಷ್ಟು ಇತಿಹಾಸವಿದ್ದು, ಪರಿಷೆಯಲ್ಲಿ 3 ಲಕ್ಷದಿಂದ 4 ಲಕ್ಷ ಜನ ಸೇರುವ ನಿರೀಕ್ಷೆ ಇದೆ ಎಂದು ಬಿಬಿಎಂಪಿ ಅಂದಾಜಿಸಿದೆ.

ಪರಿಷೆಯ ಮುನ್ನಾದಿನವಾದ ಶನಿವಾರ ಬೆಳಿಗ್ಗೆಯಿಂದಲೇ ಬಸವನಗುಡಿ ರಸ್ತೆಯಲ್ಲಿ ಕಡಲೆಕಾಯಿ ವ್ಯಾಪಾರ ಕಳೆಕಟ್ಟಿತ್ತು. ಸಂಜೆ ವೇಳೆಗೆ ಸಾವಿರಾರು ಜನ ಭೇಟಿ ನೀಡಿದ್ದರಿಂದ ಜನದಟ್ಟಣೆ ಉಂಟಾಗಿತ್ತು.

ಕೋಲೆಬಸವನ ಕಲಾಕೃತಿಗೆ ಶನಿವಾರ ಬಣ್ಣ ಬಳಿಯಲಾಯಿತು

ಸುದ್ದಿ 2 ನಿಮಿಷ

ರೇಷ್ಮೆ ಇಲಾಖೆ ವಿಲೀನಕ್ಕೆ ತಡೆ

ಬೆಂಗಳೂರು: ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯನ್ನು ತಡೆ ಹಿಡಿಯುವಂತೆ ರೇಷ್ಮೆ ಸಚಿವ ನಾರಾಯಣಗೌಡ ಸೂಚಿಸಿದ್ದಾರೆ.

ರೇಷ್ಮೆ ಇಲಾಖೆಯನ್ನು ವಿಲೀನಗೊಳಿಸುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಲಿದ್ದು, ಇದನ್ನು ತಡೆಹಿಡಿಯುವಂತೆ ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಮಾಡಿದ್ದರು.

ಈ ಮನವಿಯನ್ನು ಉಲ್ಲೇಖಿಸಿ, ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಟಿಪ್ಪಣಿ ಬರೆದಿರುವ ಸಚಿವರು, ರಾಜ್ಯ ಸರ್ಕಾರವು ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವ ಬಗ್ಗೆ ಪ್ರಕ್ರಿಯೆ ಆರಂಭಿಸಿರುವುದು ಗಮನಕ್ಕೆ ಬಂದಿದೆ. ಹೀಗೆ ವಿಲೀನ ಮಾಡಿದಲ್ಲಿ, ರೈತರಿಗೆ ತೊಂದರೆಯಾಗಲಿದೆ. ಹೀಗಾಗಿ, ಯಥಾಸ್ಥಿತಿ ಕಾಪಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಇಲಾಖೆಯನ್ನು ಕೃಷಿ ಇಲಾಖೆ ಜತೆ ವಿಲೀನ ಮಾಡಿದಲ್ಲಿ, ರೇಷ್ಮೆ ಸಂಶೋಧನೆ, ಬೆಳೆ ವಿಸ್ತರಣೆ, ರೈತರಿಗೆ ನೆರವು ನೀಡುವ ಪ್ರಕ್ರಿಯೆಗಳಿಗೆ ಹಿನ್ನಡೆಯಾಗಲಿದೆ. ವಾಣಿಜ್ಯ ಬೆಳೆಯಾದ ರೇಷ್ಮೆಯನ್ನು ನೆಚ್ಚಿಕೊಂಡಿರುವವರಿಗೆ ತೊಂದರೆಯಾಗಲಿದೆ ಎಂದು ದಿನೇಶ್ ಗೂಳಿಗೌಡ ತಮ್ಮ ಪತ್ರದಲ್ಲಿ ವಿವರಿಸಿದ್ದರು.



ಗರೋಡಿ: ಆಟೊರಿಕ್ಷಾದಲ್ಲಿ ಬೆಂಕಿ– ಚಾಲಕ, ಪ್ರಯಾಣಿಕನಿಗೆ ಗಾಯ

ಮಂಗಳೂರು: ನಗರದ ಗರೋಡಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಆಟೊರಿಕ್ಷಾದಲ್ಲಿ ಶನಿವಾರ ಸಂಜೆ ಬೆಂಕಿ ಕಾಣಿಸಿಕೊಂಡಿದೆ. ಚಾಲಕ ಹಾಗೂ ಅದರ ಪ್ರಯಾಣಿಕರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆಟೊ ಯಾರಿಗೆ ಸೇರಿದ್ದು, ಅದರಲ್ಲಿ ಯಾರು ಪ್ರಯಾಣಿಸುತ್ತಿದ್ದರು, ಬೆಂಕಿ ಕಾಣಿಸಿಕೊಳ್ಳುವುದಕ್ಕೆ ಕಾರಣ ಏನು ಎಂಬುದು ತಿಳಿದುಬಂದಿಲ್ಲ. ಈ ಬಗ್ಗೆ ಇನ್ನಷ್ಟೇ ಮಾಹಿತಿ ಕಲೆ ಹಾಕಬೇಕಿದೆ ಎಂದು ಪೊಲೀಸರು ತಿಳಿಸಿದರು.

‘ಸಂಜೆ 5.30ರ ಸುಮಾರಿಗೆ ಸ್ಫೋಟದ ಸದ್ದು ಕೇಳಿಸಿತು. ರಿಕ್ಷಾದಲ್ಲಿ ಹೊಗೆಯಾಡುತ್ತಿರುವುದು ಕಂಡು ಬಂತು. ಕ್ಷಣಾರ್ಧದಲ್ಲಿ ರಸ್ತೆ ತುಂಬೆಲ್ಲ ದಟ್ಟ ಹೊಗೆ ಆವರಿಸಿಕೊಂಡಿತು. ಅದರಲ್ಲಿದ್ದ ಚಾಲಕ ಹಾಗೂ ಪ್ರಯಾಣಿಕ ಕೂಡಾ ಗಾಯಗೊಂಡಿದ್ದರು’ ಎಂದು ಪ್ರತ್ಯಕ್ಷದರ್ಶಿಗಳು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಈ ಕುರಿತು ಪ್ರತಿಕ್ರಿಯಿಸಿದ ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್, ‘ಪ್ರಯಾಣಿಕನ ಬ್ಯಾಗಿನಲ್ಲಿದ್ದ ವಸ್ತುವಿನಿಂದ ಬೆಂಕಿ ಕಾಣಿಸಿಕೊಂಡಿತ್ತು ಎಂದು ಚಾಲಕ ತಿಳಿಸಿದ್ದರು. ಆಟೊ ಚಾಲಕ ಹಾಗೂ ಪ್ರಯಾಣಿಕರಿಬ್ಬರೂ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳಿಬ್ಬರೂ ಚಿಕಿತ್ಸೆ ಪಡೆಯುತ್ತಿದ್ದು, ಅವರಿಂದ ಹೆಚ್ಚಿನ ಮಾಹಿತಿ ಪಡೆಯಲು ಸಾಧ್ಯವಾಗಿಲ್ಲ. ಹಾಗಾಗಿ ಬೆಂಕಿ ಕಾಣಿಸಿಕೊಂಡಿದ್ದು ಹೇಗೆ ಎಂಬ ಬಗ್ಗೆ ನಿಖರವಾದ ಮಾಹಿತಿ ಇನ್ನೂ ಲಭ್ಯವಾಗಿಲ್ಲ’ ಎಂದು ತಿಳಿಸಿದರು.

ಕೊಲೆ ಸಂಚಿನ ಪ್ರಕರಣ ದಾಖಲಿಸಲು ಆಗ್ರಹ

ರಸ್ತೆಗಳಲ್ಲಿ ಗುಂಡಿ: ಎಎಪಿ ಪ್ರತಿಭಟನೆ– ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳಪೆ ಕಾಮಗಾರಿ ನಡೆಸಿ ರಸ್ತೆ ಗುಂಡಿಗಳಿಗೆ ಕಾರಣರಾದ ಹಾಗೂ ಗುಂಡಿ ಮುಚ್ಚಲು ನಿರ್ಲಕ್ಷ್ಯ ತೋರಿದ ಗುತ್ತಿಗೆದಾರರು ಹಾಗೂ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ಶನಿವಾರ ನಗರದಲ್ಲಿ ಪ್ರತಿಭಟಿಸಿದರು. ಅವರ ವಿರುದ್ಧ ಕೊಲೆ ಸಂಚಿನ ಪ್ರಕರಣ ದಾಖಲಿಸಬೇಕು ಎಂದು ಕಾರ್ಯಕರ್ತರು ಆಗ್ರಹಿಸಿದರು.

ರಸ್ತೆ ಗುಂಡಿಗಳಿಂದ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ₹ 25 ಲಕ್ಷ ಪರಿಹಾರ ನೀಡಬೇಕು. ಆ ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಸಂಚರಿಸಿದ ಮಾರ್ಗದಲ್ಲಿ ಗುಂಡಿ ಮುಚ್ಚಲಾಗಿತ್ತು. ಅದೇ ರೀತಿ ಎಲ್ಲ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರಸ್ತೆಗಳಲ್ಲಿ ಬಿದ್ದಿರುವ ಗುಂಡಿ ಮುಚ್ಚದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು

ಪಕ್ಷದ ರಾಜ್ಯ ಅಧ್ಯಕ್ಷ ಪೃಥ್ವಿರೆಡ್ಡಿ ಮಾತನಾಡಿ, ‘ಗುಂಡಿಗಳಿಗೆ ಕಾರಣರಾದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ 71 ದೂರು ನೀಡಿದ್ದೆವು. ಆದರೂ ಸರ್ಕಾರ ಕ್ರಮ ಕೈಗೊಂಡಿಲ್ಲ. ಬೆಂಗಳೂರಿನ ಜನರಿಗೆ ಉತ್ತಮ ಗುಣಮಟ್ಟದ ರಸ್ತೆಗಳು ಸಿಗಬೇಕೆಂದು ಎಎಪಿ ಹಲವು ಚಳವಳಿ ನಡೆಸಿದೆ’ ಎಂದರು.

> ಬಿಬಿಎಂಪಿ ಚುನಾವಣೆ ನಡೆದರೆ ಲೂಟಿಗೆ ಅವಕಾಶ ಸಿಗುವುದಿಲ್ಲ ಎಂಬ ಕಾರಣಕ್ಕೆ ಬೆಂಗಳೂರಿನ ಶಾಸಕರು ಚುನಾವಣೆಯನ್ನೇ ನಡೆಯದಂತೆ ಮಾಡುತ್ತಿದ್ದಾರೆ.
> **ಭಾಸ್ಕರ್ ರಾವ್,** ಉಪಾಧ್ಯಕ್ಷ, ಎಎಪಿ

‘ರಸ್ತೆ ಗುಂಡಿ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ಆಮ್ ಆದ್ಮಿ ಪಕ್ಷ ಪರಿಗಣಿಸಿದೆ. ರಸ್ತೆ ಗುಂಡಿ ಮುಚ್ಚಲು ಸರ್ಕಾರಕ್ಕೆ ಹಣದ ಕೊರತೆ ಇಲ್ಲ. ಆದರೆ, ನಿಯತ್ತಿನ ಕೊರತೆ ಇದೆ’ ಎಂದು ಉಪಾಧ್ಯಕ್ಷ ಭಾಸ್ಕರ್ ರಾವ್ ಹೇಳಿದರು.

ನಗರ ಅಧ್ಯಕ್ಷ ಮೋಹನ್ ದಾಸರಿ ಮಾತನಾಡಿ, ‘ಬೆಂಗಳೂರಿನಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಶೇ 40ರಷ್ಟಿದ್ದ ಕಮಿಷನ್ ಈಗ ಏರಿಕೆಯಾಗುತ್ತಿದೆ. ಶಾಸಕರು ಲೂಟಿಗೆ ಇಳಿದಿದ್ದಾರೆ. ಇದರ ಪರಿಣಾಮವಾಗಿ ಕರ್ನಾಟಕದ ಇತಿಹಾಸವು ಹಿಂದೆಂದೂ ಕಾಣದಷ್ಟು ರಸ್ತೆಗುಂಡಿಗಳನ್ನು ಈಗ ಕಾಣುತ್ತಿದ್ದೇವೆ’ ಎಂದು ದೂರಿದರು.

ಮುಖಂಡರಾದ ಕೆ.ಮಥಾಯಿ, ಬ್ರಿಜೇಶ್ ಕಾಳಪ್ಪ, ಬಿ.ಟಿ.ನಾಗಣ್ಣ, ಜಗದೀಶ್ ವಿ. ಸದಂ, ಕುಶಲಸ್ವಾಮಿ, ಉಷಾ ಮೋಹನ್, ಸಂಚಿತ್ ಸವ್ವಾನಿ, ದರ್ಶನ್ ಜೈನ್, ಸುರೇಶ್ ರಾಥೋಡ್, ಜಗದೀಶ್ ಚಂದ್ರ, ರಾಜಶೇಖರ್ ದೊಡ್ಡಣ್ಣ ಮೊದಲಾದವರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಬುಡಕಟ್ಟು ಯುವಜನ ವಿನಿಮಯ ಕಾರ್ಯಕ್ರಮ ಇಂದು

ಬೆಂಗಳೂರು: ಕೇಂದ್ರ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ಸಹಯೋಗದಲ್ಲಿ 14ನೇ ರಾಷ್ಟ್ರೀಯ ಬುಡಕಟ್ಟು ಯುವಜನ ವಿನಿಮಯ ಕಾರ್ಯಕ್ರಮ ಇದೇ 20ರಿಂದ 26ರವರೆಗೆ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

ಈ ಸಮಾರಂಭವನ್ನು ನ.20ರಂದು (ಭಾನುವಾರ) ಸಂಜೆ 4 ಗಂಟೆಗೆ ಯವನಿಕಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಚಾಲನೆ ನೀಡಲಿದ್ದಾರೆ.

ಸಿರಿಯನ್ ಬ್ಯಾಂಕ್ ದರೋಡೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಚಿಕ್ಕನಹಳ್ಳಿ ಮುಖ್ಯರಸ್ತೆಯ ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್‌ನ ಬೇಗೂರು ಶಾಖೆಯಲ್ಲಿ ದರೋಡೆಗೆ ಯತ್ನಿಸಿದ್ದು, ದರೋಡೆಕೋರನನ್ನು ಸಾರ್ವಜನಿಕರು ಹಾಗೂ ಬ್ಯಾಂಕ್ ಸಿಬ್ಬಂದಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಸಿನಿಮೀಯ ಶೈಲಿಯಲ್ಲಿ ಈ ಘಟನೆ ನಡೆದಿದೆ.

ದೇವರಚಿಕ್ಕನಹಳ್ಳಿಯ ಇಕ್ಬಾಲ್ ಮಲ್ಲಿಕ್ ಎಂಬ ಆರೋಪಿಯನ್ನು ಸಾರ್ವಜನಿಕರ ನೆರವಿನಿಂದ ಹಿಡಿದು ಪೊಲೀಸರಿಗೆ ಒಪ್ಪಿಸಲಾಗಿದೆ.

ಪಶ್ಚಿಮ ಬಂಗಾಳದ ಇಕ್ಬಾಲ್ ಮಲ್ಲಿಕ್ ದೇವರಚಿಕ್ಕನಹಳ್ಳಿಯ ಬಾಡಿಗೆ ಮನೆಯಲ್ಲಿ ನೆಲೆಸಿದ್ದ. ಬ್ಯಾಂಕ್‌ನಲ್ಲಿ ಖಾತೆ ತೆರೆಯುವ ಸೋಗಿನಲ್ಲಿ ಬಂದಿದ್ದ ಆರೋಪಿ ಸಿಬ್ಬಂದಿಗೆ ಗನ್ ತೋರಿಸಿ ಬೆದರಿಸಿ ಹಣ ದೋಚಲು ಯತ್ನಿಸಿದ್ದ.

ಮಹಿಳಾ ಸಿಬ್ಬಂದಿಯೊಬ್ಬರು ಬ್ಯಾಂಕ್‌ನಲ್ಲಿದ್ದ ಅಲಾರ್ಮ್‌ನ ಬಟನ್ ಒತ್ತಲು ಪ್ರಯತ್ನಿಸಿದ್ದರೂ ಅದು ಸೈರನ್ ಆಗಿರಲಿಲ್ಲ.

‘ನ.16ರಂದು ಮಧ್ಯಾಹ್ನ 2ರ ವೇಳೆಯಲ್ಲಿ ಹೆಲ್ಮೆಟ್ ಹಾಗೂ ಮಾಸ್ಕ್ ಧರಿಸಿ ದರೋಡೆಕೋರ ಬ್ಯಾಂಕ್ ಪ್ರವೇಶಿಸಿದ್ದಾನೆ. ಬ್ಯಾಂಕ್ ವ್ಯವಸ್ಥಾಪಕಿ ಆರ್. ದಿವ್ಯಾ ಅವರ ಬಳಿ ಬಂದು ಬ್ಯಾಂಕ್ ಖಾತೆ ತೆರೆಯುವಂತೆ ಕೋರಿದ್ದ. ಅದಕ್ಕೆ ದಿವ್ಯಾ ದಾಖಲಾತಿ ನೀಡುವಂತೆ ಸೂಚಿಸಿದ್ದರು. ಪಾನ್ ಕಾರ್ಡ್ ತೆಗೆಯುವಂತೆ ನಟಿಸಿ ಬ್ಯಾಗ್‌ನಿಂದ ಪಿಸ್ತೂಲ್ ಹೊರತೆಗೆದು ಹಣಕ್ಕಾಗಿ ಬೆದರಿಕೆಯೊಡ್ಡಿದ್ದ. ಶಾಖಾ ವ್ಯವಸ್ಥಾಪಕ ಟಿ.ಎಸ್.ಉಮೇಶ್ ಅವರಿಗೆ ಕರೆ ಮಾಡಲು ಅವಕಾಶ ನೀಡಲಿಲ್ಲ. ಸಿಬ್ಬಂದಿ ಶಿಲ್ಪಾ ಹಾಗೂ ಅರುಣ್ ಅವರಿಗೂ ಬೆದರಿಕೆ ಹಾಕಿ ಪಿಸ್ತೂಲ್ ತೋರಿಸಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪಿಸ್ತೂಲ್‌ನ ಟ್ರಿಗರ್ ಒತ್ತುವುದಾಗಿ ಬ್ಯಾಂಕ್ ಸಿಬ್ಬಂದಿ ಹಾಗೂ ಗ್ರಾಹಕರಿಗೆ ಬೆದರಿಕೆ ಹಾಕಿದ್ದ. ಅದೇ ವೇಳೆ ಕೆಲಸ ನಿಮಿತ್ತ ಹೊರಗೆ ತೆರಳಿದ್ದ ಕ್ಯಾಶಿಯರ್ ದುಂಡಪ್ಪ ಅವರು ಬ್ಯಾಂಕ್‌ಗೆ ಧಾವಿಸಿ ಎಲ್ಲ ಸಿಬ್ಬಂದಿ ಕೈಗಳನ್ನು ಮೇಲಕ್ಕೆತ್ತುವಂತೆ ತಿಳಿಸಿದ್ದರು. ಅದೇ ವೇಳೆ ದಿವ್ಯಾ ಅವರು ಕ್ಯಾಶ್ ಕೌಂಟರ್‌ಗೆ ತೆರಳಿ ಅಲಾರ್ಮ್ ಬಟನ್ ಒತ್ತಿದರು. ಜೋರಾದ ಶಬ್ದ ಮೊಳಗಿತು. ದರೋಡೆಕೋರ ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದ. ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಲಾಯಿತು’ ಎಂದು ಬ್ಯಾಂಕ್ ಮೂಲಗಳು ತಿಳಿಸಿವೆ.

ಎಲೆಕ್ಟ್ರಾನಿಕ್ ಉಪಕರಣ ರಿಪೇರಿ ಹೆಸರಿನಲ್ಲಿ ವಂಚನೆ



ಅಬ್ದುಲ್ ಸಭಾನ

ಬೆಂಗಳೂರು: ಎ.ಸಿ, ಟಿ.ವಿ, ರೆಫ್ರಿಜರೇಟರ್ ಹಾಗೂ ವಾಟರ್ ಫಿಲ್ಟರ್ ರಿಪೇರಿ ಮಾಡುವುದಾಗಿ ಹೇಳಿ ಹಣ ಪಡೆದು ವಂಚಿಸುತ್ತಿದ್ದ ಹಳೆ ಗುರಪ್ಪನಪಾಳ್ಯದ ಎಂ.ಕೆ. ಹೌಸ್‌ನ ಅಬ್ದುಲ್ ಸಭಾನ (25) ಎಂಬುವವನನ್ನು ಈಶಾನ್ಯ ವಿಭಾಗದ ಸೈಬರ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ 2 ಮೊಬೈಲ್, 4 ಸಿಮ್ ವಶಕ್ಕೆ ಪಡೆಯಲಾಗಿದೆ. ಆರೋಪಿಗೆ ಸೇರಿದ ಬ್ಯಾಂಕ್ ಖಾತೆ ಸ್ಥಗಿತ ಮಾಡಲಾಗಿದೆ ಎಂದು ಈಶಾನ್ಯ ವಿಭಾಗದ ಡಿಸಿಪಿ ಡಾ.ಅನೂಪ್ ಎ. ಶೆಟ್ಟಿ ತಿಳಿಸಿದರು.

‘ಎಲೆಕ್ಟ್ರಾನಿಕ್ ಉಪಕರಣಗಳು ರಿಪೇರಿಗೆಂದು ಟೋಲ್ ಫ್ರೀ ಸಂಖ್ಯೆಗೆ ಸಾರ್ವಜನಿಕರು ಕರೆ ಮಾಡಿದಾಗ ಕರೆ ಸ್ವೀಕರಿಸಿದವರು ಸರ್ವೀಸ್ ಮಾಡಲು ಮನೆಗೇ ವ್ಯಕ್ತಿ ಕಳುಹಿಸುವುದಾಗಿ ಹೇಳುತ್ತಿದ್ದರು. ಆರೋಪಿ ಅಬ್ದುಲ್ ರಿಪೇರಿ ಮಾಡುವ ನೆಪದಲ್ಲಿ ಗ್ರಾಹಕರಿಗೆ ಕರೆ ಮಾಡಿ ಕೆಟ್ಟಿರುವ ಎಲೆಕ್ಟ್ರಾನಿಕ್ ಉಪಕರಣದ ಫೋಟೊ ಕಳುಹಿಸಲು ಹೇಳುತ್ತಿದ್ದ. ಫೋಟೊ ಕಳುಹಿಸದ ನಂತರ ಸಾರ್ವಜನಿಕರಿಗೆ ತಿಳಿಯದ ವೈಜ್ಞಾನಿಕ ಹೆಸರು ಹೇಳಿ, 'ಆ ಉಪಕರಣಕ್ಕೆ ₹ 8ರಿಂದ ₹ 9 ಸಾವಿರ ಬೆಲೆಯಿದೆ. ಅದನ್ನು ತರಲು ಫೋನ್ ಪೇ ಮಾಡಿ’ ಎಂದು ತಿಳಿಸುತ್ತಿದ್ದ. ಫೋನ್ ಪೇ ಮಾಡಿದ ಮೇಲೆ ಗ್ರಾಹಕರ ನಂಬರ್ ಅನ್ನು ಬ್ಲಾಕ್ ಮಾಡುತ್ತಿದ್ದ. ಹಣ ನೀಡದ ಗ್ರಾಹಕರ ಮನೆಗೆ ತೆರಳಿ ಉಪಕರಣ ಪರೀಕ್ಷಿಸಿ ಹಾಳಾದ ಉಪಕರಣ ತರುವ ನಾಟಕವಾಡಿ, ಹಣ ಪಡೆದು ಪರಾರಿಯಾಗುತ್ತಿದ್ದ’ ಎಂದು ಡಿಸಿಪಿ ತಿಳಿಸಿದರು.

ಅಪರಾಧ ಸುದ್ದಿ

ಚಿತ್ರಾವಳಿ

ವಿಶ್ವದಾದ್ಯಂತ ಅಂಧರ ಕ್ರಿಕೆಟ್ ಅನ್ನು ಬೆಂಬಲಿಸಲು ಮತ್ತು ಡಿ. 5ರಿಂದ ಭಾರತದಲ್ಲಿ ನಡೆಯಲಿರುವ ಟಿ–20 ವಿಶ್ವಕಪ್ ಅನ್ನು ಉತ್ತೇಜಿಸಲು ಸಮರ್ಥನಂ ಸಂಸ್ಥೆ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ವಾಕಥಾನ್ ಆಯೋಜಿಸಿತ್ತು. ನಗರದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಅಂಗವಿಕಲರು ಸೇರಿ ನೂರಾರು ಜನ ಪಾಲ್ಗೊಂಡಿದ್ದರು. ನಟಿ ಸಪ್ತಮಿ ಗೌಡ, ಸಂಸದ ಪಿ.ಸಿ. ಮೋಹನ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಭಾರತೀಯ ವಿದ್ಯಾಭವನ ಮತ್ತು ಇನ್ಫೊಸಿಸ್ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ ‘ಕನ್ನಡ ಕಾವ್ಯೋತ್ಸವ’ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ನಿಟಕಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ‘ನಾಡಿಯ ಮಿಡಿತದಿ ಕನ್ನಡವಿರಲಿ’ ಧ್ವನಿಸುರುಳಿ ಬಿಡುಗಡೆ ಮಾಡಿದರು. ಕವಿಗಳಾದ ಕಾ.ವೆಂ.ಶ್ರೀನಿವಾಸಮೂರ್ತಿ, ಸದಾಶಿವ ದೊಡ್ಡಮನಿ, ನಾ. ದಾಮೋದರ ಶೆಟ್ಟಿ, ಗಾಯಕ ಮೃತ್ಯುಂಜಯ ದೊಡ್ಡವಾಡ, ಕವಿಗಳಾದ ಶ್ರೀಶೈಲ ಮಾದಣ್ಣವರ, ಎಚ್. ಡುಂಡಿರಾಜ್, ಮಲ್ಲಿಕಾರ್ಜುನ ಛಬ್ಬಿ ಮತ್ತು ಶೈಲೇಶ್ ಪಟವರ್ಧನ್ ಇದ್ದಾರೆ

ಚೆಕ್ ಬೌನ್ಸ್ ಪ್ರಕರಣ: ಶಿಕ್ಷೆ ಕಾಯಂ

ಬೆಂಗಳೂರು: ‘ನಿರ್ಮಾಪಕ ಕೆ.ಮಂಜು ಅವರಿಂದ ಪಡೆದಿದ್ದ ₹ 20 ಲಕ್ಷ ಮೊತ್ತದ ಸಾಲಕ್ಕೆ ಪ್ರತಿಯಾಗಿ ನೀಡಿದ್ದ ಚೆಕ್‌ಗಳು ಬೌನ್ಸ್ ಆದ ಪ್ರಕರಣದಲ್ಲಿ, ತಕ್ಷಣ ಹಣ ಹಿಂದಿರುಗಿಸದೇ ಹೋದರೆ ಆರೋಪಿ ಕಿಶೋರ್ ಆರು ತಿಂಗಳ ಸಾದಾ ಜೈಲು ಶಿಕ್ಷೆಗೆ ಗುರಿಯಾಗಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೊಸಪೇಟೆಯ ಕಿಶೋರ್ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಬಿ.ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದ್ದು, ವಿಚಾರಣಾ ನ್ಯಾಯಾಲಯದ ಶಿಕ್ಷೆ ಕಾಯಂಗೊಳಿಸಿದೆ.

ಪ್ರಕರಣವೇನು?: ಕಿಶೋರ್ ಅವರು ‘ರುದ್ರಮದೇವಿ’ ತೆಲುಗು ಚಿತ್ರದ ಬಿಡುಗಡೆಗಾಗಿ ಕೆ.ಮಂಜು ಅವರಿಂದ 2015ರ ಜುಲೈನಲ್ಲಿ ₹ 20 ಲಕ್ಷ ಕೈಗಡ ಪಡೆದು ಮುಂದಿನ ಎರಡು ತಿಂಗಳಲ್ಲಿ ಹಿಂದಿರುಗಿಸುವುದಾಗಿ ತಿಳಿಸಿದ್ದರು. ಇದಕ್ಕೆ ಪ್ರತಿಯಾಗಿ ಎರಡು ಚೆಕ್‌ಗಳನ್ನು ನೀಡಿದ್ದರು.

ಅವಧಿ ಮೀರಿದರೂ ಕಿಶೋರ್ ಹಣ ಹಿಂದಿರುಗಿಸಿರಲಿಲ್ಲ. ಈ ಸಂಬಂಧ ಮಂಜು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು. ಎನ್.ಐ ಕಾಯ್ದೆ–1881ರ ಕಲಂ 138ರ ಅನುಸಾರ ಕಿಶೋರ್ ತಪ್ಪಿತಸ್ಥರು ಎಂದು ವಿಚಾರಣಾ ನ್ಯಾಯಾಲಯ ಘೋಷಿಸಿತ್ತು. ಇದನ್ನು ಪ್ರಶ್ನಿಸಿ ಕಿಶೋರ್ 69ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಸೆಷನ್ಸ್ ನ್ಯಾಯಾಲಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು. ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ಲಂಚ ಪ್ರಕರಣ: ಪಿಡಿಒಗೆ ಐದು ವರ್ಷ ಜೈಲು

ಬೆಂಗಳೂರು: ನಿವೇಶನ ಮಾಲೀಕರಿಗೆ 11–ನಕ್ಷೆ ಖಾತೆ ಮಾಡಿಕೊಡಲು ₹ 1 ಲಕ್ಷ ಲಂಚ ಪಡೆದಿದ್ದ ಪ್ರಕರಣದಲ್ಲಿ ಆನೇಕಲ್ ತಾಲ್ಲೂಕಿನ ಶಾಂತಿಪುರ ಗ್ರಾಮ ಪಂಚಾಯಿತಿಯ ಹಿಂದಿನ ಪಿಡಿಒ ಡಿ. ರಾಮಕೃಷ್ಣಪ್ಪ ಅಪರಾಧಿ ಎಂದು ತೀರ್ಮಾನಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾ ಒಂಬತ್ತನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಐದು ವರ್ಷಗಳ ಜೈಲು ಶಿಕ್ಷೆ ಮತ್ತು ₹ 50,000 ದಂಡ ವಿಧಿಸಿದೆ. ದಂಡ ಪಾವತಿಗೆ ತಪ್ಪಿದಲ್ಲಿ ಹೆಚ್ಚುವರಿಯಾಗಿ ಆರು ತಿಂಗಳ ಜೈಲು ಶಿಕ್ಷೆ ಅನುಭವಿಸುವಂತೆಯೂ ಸೂಚಿಸಿತು.

ಶಾಂತಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೂಡಸಂದ್ರ ಗ್ರಾಮದಲ್ಲಿನ ಎರಡು ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಿದ್ದ ಪಿ.ವಿ. ನಿರ್ಮಲ್ ಎಂಬುವವರು 11–ಇ ನಕ್ಷೆ ನೀಡುವಂತೆ ಕೋರಿ 2014ರಲ್ಲಿ ಗ್ರಾಮ ಅರ್ಜಿ ಸಲ್ಲಿಸಿದ್ದರು. ₹ 1.10 ಲಕ್ಷ ಲಂಚ ನೀಡುವಂತೆ ರಾಮಕೃಷ್ಣಪ್ಪ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು.

ನಿರ್ಮಲ್ ಅವರಿಂದ ₹ 1 ಲಕ್ಷ ಲಂಚ ಪಡೆಯುತ್ತಿದ್ದ ರಾಮಕೃಷ್ಣಪ್ಪ ಅವರನ್ನು 2014ರ ಡಿಸೆಂಬರ್ 1ರಂದು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಲೋಕಾಯುಕ್ತದ ಆಗಿನ ಪೊಲೀಸ್ ಇನ್‌ಸ್ಪೆಕ್ಟರ್ ಕೆ.ವಿ. ಕೃಷ್ಣಪ್ಪ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಾಧೀಶ ಶ್ರೀಧರ್ ಎಸ್. ಅವರು ಗುರುವಾರ ಅಂತಿಮ ಆದೇಶ ಪ್ರಕಟಿಸಿದರು. ಲೋಕಾಯುಕ್ತದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ. ಮಹಾಲಕ್ಷ್ಮಿ ಈ ಪ್ರಕರಣದಲ್ಲಿ ತನಿಖಾ ಸಂಸ್ಥೆಯ ಪರ ವಾದ ಮಂಡಿಸಿದ್ದರು.

ಮೋದಿ ಪ್ರಕರಣ ಉಲ್ಲೇಖಿಸಿದ ಅಮೆರಿಕ

ನವದೆಹಲಿ: ‘ವಾಷಿಂಗ್ಟನ್ ಪೋಸ್ಟ್’ ಪತ್ರಕರ್ತ ಜಮಾಲ್ ಖಶೋಗ್ಗಿ ಹತ್ಯೆಗೆ ಸಂಬಂಧಿಸಿದಂತೆ ಸೌದಿ ರಾಜಕುಮಾರ ಮೊಹಮದ್ ಬಿನ್ ಸಲ್ಮಾನ್‌ಗೆ ವಿನಾಯಿತಿ ನೀಡುವ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ಅಮೆರಿಕ ವಿದೇಶಾಂಗ ಇಲಾಖೆ, 2014 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾನೂನು ಕ್ರಮದಿಂದ ಇದೇ ರೀತಿಯ ರಕ್ಷಣೆ ನೀಡಿರುವುದಾಗಿ ಶುಕ್ರವಾರ ಹೇಳಿದೆ.

2018ರಲ್ಲಿ ನಡೆದ ಖಶೋಗ್ಗಿ ಕೊಲೆ ಪ್ರಕರಣದಲ್ಲಿ ಸೌದಿ ರಾಜಕುಮಾರ ಆರೋಪಿ.

ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅಮೆರಿಕ ವಿದೇಶಾಂಗ ಇಲಾಖೆಯ ಪ್ರಧಾನ ಉಪ ವಕ್ತಾರ ವೇದಾಂತ್ ಪಟೇಲ್, ‘ಪ್ರಧಾನಿ ಮೋದಿ ಮತ್ತು ಇತರ ಕೆಲವು ನಾಯಕರು ಹಲವಾರು ವರ್ಷಗಳಿಂದ ಇದೇ ರೀತಿಯ ರಕ್ಷಣೆಯನ್ನು ಪಡೆದಿದ್ದಾರೆ. ಅಮೆರಿಕ ಈ ರೀತಿ ಮಾಡಿರುವುದು ಇದೇ ಮೊದಲಲ್ಲ. ಇದನ್ನು ಈ ಹಿಂದೆ ಹಲವಾರು ರಾಷ್ಟ್ರಗಳ ಮುಖ್ಯಸ್ಥರಿಗೆ ಅನ್ವಯಿಸಲಾಗಿದೆ’ ಎಂದು ಹೇಳಿದರು. ಈ ಬಗ್ಗೆ ಭಾರತ ಇನ್ನೂ ಪ್ರತಿಕ್ರಿಯಿಸಿಲ್ಲ.

‘ಚಿಲುಮೆಗೆ ಆದೇಶ ನೀಡಿದ್ದು ಕಾಂಗ್ರೆಸ್ ಸರ್ಕಾರ’

ಒಂದನೇ ಪುಟದಿಂದ...

ಈಗ ಅವರ ಕಾಲದ ತಪ್ಪು ಮುಚ್ಚಿಟ್ಟು ಭೂತದ ಬಾಯಲ್ಲಿ ಭಗವದ್ಗೀತೆ ಹೇಳಿದಂತೆ ವರ್ತಿಸುತ್ತಿದ್ದಾರೆ’ ಎಂದು ದೂರಿದ್ದಾರೆ.

ಆರಂಭದಲ್ಲಿ ಕೆ.ಆರ್. ಪುರ ಕ್ಷೇತ್ರಕ್ಕೆ ಸೀಮಿತವಾಗಿ ಆದೇಶ ನೀಡಿದ್ದ ಕಾಂಗ್ರೆಸ್ ಸರ್ಕಾರ, ನಂತರ ಬಿಬಿಎಂಪಿ ವ್ಯಾಪ್ತಿಯ ಎಲ್ಲ 28 ಕ್ಷೇತ್ರಗಳಲ್ಲೂ ಮತದಾರರ ಪಟ್ಟಿ ಪರಿಷ್ಕರಣೆಗೆ ಅನುಮತಿ ನೀಡಿತ್ತು. ಚುನಾವಣಾ ಪೂರ್ವ ಪ್ರಕ್ರಿಯೆಯಲ್ಲಿ ಖಾಸಗಿ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆ ಅರಂಭವಾದಾಗ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿದ್ದರು ಎಂದು ಹೇಳಿದ್ದಾರೆ.

‘ಕಾಂಗ್ರೆಸ್ ಶಾಸಕರ ಕ್ಷೇತ್ರಗಳಲ್ಲಿ ಹೆಚ್ಚಿನ ಮತದಾರರ ಹೆಸರನ್ನು ಪಟ್ಟಿಯನ್ನು ಕೈಬಿಡಲಾಗಿದೆ ಎಂಬುದು ಸುಳ್ಳು. ಈ ಬಾರಿ ಬಿಜೆಪಿ ಶಾಸಕರಿರುವ ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದಲ್ಲಿ ಅತ್ಯಧಿಕ 45,985 ಮತದಾರರ ಹೆಸರು ಕೈಬಿಡಲಾಗಿದೆ. ಅತ್ಯಂತ ಕಡಿಮೆ ಹೆಸರು ಕೈಬಿಟ್ಟಿರುವ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರ ಮೂರು ಕ್ಷೇತ್ರಗಳಿವೆ’ ಎಂದಿದ್ದಾರೆ.

ಸರ್ಕಾರದಿಂದ ಯಾವ ಲೋಪವೂ ಆಗಿಲ್ಲ. ಚಿಲುಮೆ ಸಂಸ್ಥೆಯಿಂದ ಷರತ್ತು ಉಲ್ಲಂಘನೆ ಕಂಡುಬರುತ್ತಿದ್ದಂತೆಯೇ ಅವರಿಗೆ ನೀಡಿದ್ದ ಅನುಮತಿ ರದ್ದುಪಡಿಸಲಾಗಿದೆ. ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಲಾಗಿದೆ. ಬಿಬಿಎಂಪಿ ಮತ್ತು ಸರ್ಕಾರ ಸ್ವಯಂಪ್ರೇರಿತ ಕ್ರಮಗಳನ್ನು ಕೈಗೊಂಡಿರುವುದನ್ನು ನೋಡಿದ ಬಳಿಕ ಕಾಂಗ್ರೆಸ್ ಪಕ್ಷದ ನಾಯಕರು ಪತ್ರಿಕಾಗೋಷ್ಠಿ ನಡೆಸಿದ್ದಾರೆ ಎಂದು ಹೇಳಿದ್ದಾರೆ.

ಮುಂಬೈ ರೇಸ್

ಓನ್ ವಿಶ್ ಗೆಲ್ಲುವ ನಿರೀಕ್ಷೆ

ರಾಯಲ್ ಕೋಲ್ಕತ್ತ ಟರ್ಫ್ ಕ್ಲಬ್ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಓನ್ ವಿಶ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಇನಮೊರಾಟ 3, ಪೈರ್‌ಹರ್ಸ್ 1, ಮೈಟಿ ಥಂಡರ್ 7
2ನೇ ರೇಸ್: ಓನ್ ವಿಶ್ 3, ಸ್ಕೈಫಾಲ್ಸ್ 4
3ನೇ ರೇಸ್: ವಾಲ್ ಸ್ಟ್ರೀಟ್ 3, ಎಮ್ರೈಸ್ 2, ಡಿಜ್ಯಾಂಗೊ 1
4ನೇ ರೇಸ್: ಅರ್ಕಾನ 2, ರೊಡ್ರಿಗೊ 3, ಸೂಪ್ ಅಂಡ್ ಸ್ಯಾಂಡ್‌ವಿಚ್ 1
5ನೇ ರೇಸ್: ಎಂಪರರ್ ರೊಡೆರಿಕ್ 4, ಕೈಟ್ಲಾನ್ 8, ಮೆಜೆಸ್ಟಿಕ್ ವಾರಿಯರ್ 2
6ನೇ ರೇಸ್: ಸ್ಪೆಕ್ಟಾಕ್ಯುಲರ್ 1, ರೆಮಿ ರೆಡ್ 5, ಟ್ರೂತ್ ಆ್ಯಂಡ್ ಡೇರ್ 7
7ನೇ ರೇಸ್: ಕಮಾಂಡ್‌ಮೆಂಟ್ 3, ಆಲ್‌ಫೈನ್ ಸ್ಟಾರ್ 4, ಪಿಸಾ 2

ಉತ್ತಮ ಬೆಟ್: ಅರ್ಕಾನ

ಜಾಕ್‌ಪಾಟ್ 3,4,5,6,7 ಟ್ರಿಬಲ್ 4,5,6

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಶ್ಲಾಘನೆ

ಸಂಕಷ್ಟದಲ್ಲೂ ಜತೆಗೆ ನಿಲ್ಲುವ ಸಹಕಾರ ಕ್ಷೇತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ, ಅತಿವೃಷ್ಟಿಯಂತಹ ಸಂಕಷ್ಟದಲ್ಲೂ ಆಪ್ತ ಸ್ನೇಹಿತನಂತೆ ಬೆನ್ನಿಗೆ ನಿಂತ ಶ್ರೇಯ ಸಹಕಾರ ಸಂಸ್ಥೆಗಳಿಗೆ ಸಲ್ಲುತ್ತದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಶ್ಲಾಘಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಸಹಕಾರ ವಸತಿ ಮಹಾಮಂಡಳ ಹಾಗೂ ಇತರೆ ಸಹಕಾರ ಸಂಘಗಳ ಸಹಯೋಗದಲ್ಲಿ ಶನಿವಾರ ಕೆಂಗೇರಿ ಉಪ ನಗರದಲ್ಲಿ ಹಮ್ಮಿಕೊಂಡಿದ್ದ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟಿಸಿ ಅವರು ಮಾತನಾಡಿದರು.

ಸಂಕಷ್ಟದ ಸಮಯದಲ್ಲಿ ಸಹಕಾರ ಸಂಸ್ಥೆಗಳು ಜನರ ನೆರವಿಗೆ ಧಾವಿಸಿವೆ. ಹಲವರಿಗೆ ಬಡ್ಡಿರಹಿತ ಸಾಲ ನೀಡಿವೆ. ರಾಜ್ಯದ ಜನರಿಗೆ ನೀಡಿದ ಕೊಡುಗೆ ಎಲ್ಲರೂ ಸ್ಮರಿಸಬೇಕಿದೆ ಎಂದರು.

ಮನುಷ್ಯ ಸಮೂಹಜೀವಿ, ಒಂಟಿಯಾಗಿ ಇರುವವರು ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಪರಸ್ಪರ ಸಹಕಾರ, ಸಹಬಾಳ್ವೆ ಮನುಷ್ಯನ ಉನ್ನತಿಗೆ, ನೆಮ್ಮದಿಯ ಬದುಕಿಗೆ ಅವಶ್ಯಕ. ಸಹಕಾರ ಕ್ಷೇತ್ರ ರಾಜ್ಯದ ಜನರಿಗೆ ನೀಡಿದ ಕೊಡುಗೆ ಅನನ್ಯ.

ಕೆಂಗೇರಿ ಉಪನಗರದಲ್ಲಿ ಶನಿವಾರ ನಡೆದ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಸಾಧಕರಿಗೆ 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ವಿಧಾನಸಭಾ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಜಿ.ಟಿ. ದೇವೇಗೌಡ ಇದ್ದಾರೆ – ಪ್ರಜಾವಾಣಿ ಚಿತ್ರ

ಸ್ವಾತಂತ್ರ್ಯಪೂರ್ವದಲ್ಲೇ ಸಿದ್ದನಗೌಡ ಪಾಟೀಲರು ಸಹಕಾರ ತತ್ವಕ್ಕೆ ನಾಂದಿ ಹಾಡಿದರು. ಸಹಕಾರದ ಬೇರುಗಳು ಎಲ್ಲೆಡೆ ಪಸರಿಸಿವೆ ಎಂದು ಸ್ಮರಿಸಿದರು.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ‘ಕಾಂಗ್ರೆಸ್ ರದ್ದು ಮಾಡಿದ್ದ ಯಶಸ್ವಿನಿ ಆರೋಗ್ಯ ಯೋಜನೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮರಳಿ ಅನುಷ್ಠಾನಕ್ಕೆ ತಂದಿದ್ದಾರೆ’ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ, ‘ಚುನಾವಣೆಗೆ ಹಣ ಖರ್ಚುಮಾಡಿ ಗೆಲ್ಲುವ ಶಾಸಕರು ಕಡಿಮೆ. ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಹಣ ಇಲ್ಲದೇ ಪ್ರತಿ ಬಾರಿಯೂ ಗೆಲ್ಲುವ ಜನಪ್ರತಿನಿಧಿ ಎಂದರಲ್ಲದೇ, ದೇಶದ ಪ್ರಧಾನಿ ನೆಹರು ಅವರು ಪಂಚವಾರ್ಷಿಕ ಯೋಜನೆಗಳ ಮೂಲಕ ಪ್ರಗತಿಗೆ ಭದ್ರ ಬುನಾದಿ ಹಾಕಿದರು’ ಎಂದು ಸ್ಮರಿಸಿದರು.

ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳದ ಅಧ್ಯಕ್ಷ ಜಿ.ಪಿ. ಪಾಟೀಲ, ಮಹಿಳಾ ಮಂಡಳದ ಅಧ್ಯಕ್ಷೆ ಶಕುಂತಲಾ ಕೆ. ಬೆಲ್ದಾಳೆ, ತೋಟಗಾರಿಕಾ ಮಂಡಳದ ಅಧ್ಯಕ್ಷ ಬಿ.ಡಿ.ಭೂಕಾಂತ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹನುಮಂತಯ್ಯ, ನರಸಿಂಹಮೂರ್ತಿ ಉಪಸ್ಥಿತರಿದ್ದರು.

ಟೆಲಿ ಮನಸ್: 24 ಗಂಟೆ ಸೇವೆಗೆ ಸಿದ್ಧತೆ

ಮಾನಸಿಕ ಸಮಸ್ಯೆಗಳಿಗೆ ಪರಿಹಾರ • ರಾಜ್ಯದ ವಿವಿಧೆಡೆಯಿಂದ ನಿತ್ಯ ಸುಮಾರು 40 ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೋರೋಗಿಗಳ ಜತೆಗೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಲು ಪ್ರಾರಂಭಿಸಿರುವ 'ಟೆಲಿ ಮನಸ್' ಸಹಾಯವಾಣಿ ಸೇವೆಯನ್ನು 24X7ಗೆ ವಿಸ್ತರಿಸಲು ನಿಮ್ಹಾನ್ಸ್ ಸಂಸ್ಥೆ ಮುಂದಾಗಿದೆ.

ಸದ್ಯ ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಈ ಸೇವೆ ಒದಗಿಸಲಾಗುತ್ತಿದೆ. ಈ ಯೋಜನೆಗೆ ಕಳೆದ ಅ.10ರಂದು ಚಾಲನೆ ಸಿಕ್ಕಿತ್ತು. ಈ ಯೋಜನೆಯಡಿ ತಜ್ಞರು ಮನೋರೋಗಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುತ್ತಿದ್ದಾರೆ.

ರಾಜ್ಯದ ವಿವಿಧೆಡೆಯಿಂದ ಈ ಸಹಾಯವಾಣಿಗೆ ಕರೆ ಬರುತ್ತಿದ್ದು, ದಿನವೊಂದಕ್ಕೆ 40ರವರೆಗೂ ಕರೆ ಸ್ವೀಕರಿಸಲಾಗುತ್ತಿದೆ. ಸದ್ಯ ಸಹಾಯವಾಣಿಯು ಇಲ್ಲಿನ ನಿಮ್ಹಾನ್ಸ್ ಹಾಗೂ ಧಾರವಾಡದ ಡಿಮಾನ್ಸ್ ಆಸ್ಪತ್ರೆಯಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಈ ಸೇವೆಯನ್ನು ವಿಸ್ತರಿಸಲು ಸಿಬ್ಬಂದಿಯನ್ನೂ ನೇಮಕ ಮಾಡಿಕೊಳ್ಳಲಾಗುತ್ತಿದೆ.

ಮುಖ್ಯಾಂಶಗಳು

- ಸದ್ಯ ನಿಮ್ಹಾನ್ಸ್ ಹಾಗೂ ಧಾರವಾಡದ ಡಿಮಾನ್ಸ್ ಆಸ್ಪತ್ರೆಯಲ್ಲಿ ಕಾರ್ಯಾಚರಣೆ
- ಸಹಾಯವಾಣಿಗೆ 40 ಸಿಬ್ಬಂದಿ ನೇಮಕಾತಿಗೆ ಕ್ರಮ
- ಮಕ್ಕಳಲ್ಲೂ ಕಾಣಿಸಿ ಕೊಳ್ಳುತ್ತಿರುವ ಸಮಸ್ಯೆ

'ಎಲ್ಲ ರೀತಿಯ ಮಾನಸಿಕ ಸಮಸ್ಯೆಗಳಿಗೆ 'ಟೆಲಿ ಮನಸ್' ಸಹಾಯವಾಣಿ ಮೂಲಕ ಸೇವೆ ಒದಗಿಸಲಾಗುತ್ತದೆ. ರಾಜ್ಯದ ಎಲ್ಲೆಡೆಯಿಂದ ದೂರವಾಣಿ ಕರೆಗಳು ಬರುತ್ತಿವೆ. ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಾನಸಿಕ ಸಮಸ್ಯೆಗಳಿಗೆ ಸಂಬಂಧಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕರೆಗಳು ಬರುತ್ತಿವೆ. ಓದಿನಲ್ಲಿ ಹಿನ್ನಡೆ, ಅನಗತ್ಯವಾಗಿ ಭಯಕ್ಕೆ ಒಳಗಾಗುವುದು ಸೇರಿ ವಿವಿಧ ಸಮಸ್ಯೆಗಳ ಬಗ್ಗೆ ಹೆಚ್ಚಿನವರು ವಿಚಾರಿಸುತ್ತಿದ್ದಾರೆ' ಎಂದು ಸಂಸ್ಥೆಯ ಮನೋರೋಗ ತಜ್ಞೆ ಡಾ.ಪಿ. ರಜನಿ ತಿಳಿಸಿದರು.

'ಸಹಾಯವಾಣಿಗೆ 40 ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರು ಸಹಾಯವಾಣಿಗೆ ಸಂಪರ್ಕಿಸಿ, ತಜ್ಞರಿಂದ ಅಗತ್ಯ ಸಲಹೆಗಳನ್ನು ಪಡೆದುಕೊಳ್ಳಬೇಕು. ಕೋವಿಡ್ ಪೀಡಿತರಾದವರಿಗೆ ನಮ್ಮ ಸಿಬ್ಬಂದಿಯೇ ದೂರವಾಣಿ ಕರೆ ಮಾಡಿ, ಅಗತ್ಯ ಸಲಹೆ ಸೂಚನೆಯನ್ನು ನೀಡುತ್ತಿದ್ದಾರೆ' ಎಂದು ಹೇಳಿದರು.

ಟೆಲಿ ಮನಸ್ ಸಹಾಯವಾಣಿ ಸಂಖ್ಯೆ: 18008914416

ಉಜಿರೆಯಿಂದ ಧರ್ಮಸ್ಥಳದವರೆಗೆ ಭಕ್ತರು ಶನಿವಾರ ಪಾದಯಾತ್ರೆ ನಡೆಸಿದರು

ಧರ್ಮಸ್ಥಳ: ಲಕ್ಷದೀಪೋತ್ಸವ ಆರಂಭ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದಲ್ಲಿ ಕಾರ್ತಿಕ ಮಾಸದ ಲಕ್ಷದೀಪೋತ್ಸವ ಕಾರ್ಯಕ್ರಮಗಳಿಗೆ ಶನಿವಾರ ಚಾಲನೆ ನೀಡಲಾಯಿತು. ಸರ್ವಧರ್ಮೀಯರೂ ಪಾಲ್ಗೊಂಡಿದ್ದು, 25 ಸಾವಿರಕ್ಕೂ ಹೆಚ್ಚು ಮಂದಿ ಭೋಜನ ಸ್ವೀಕರಿಸಿದರು.

ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಹರೀಶ್ ಪೂಂಜ ವಸ್ತುಪ್ರದರ್ಶನ ಉದ್ಘಾಟಿಸಿದರು. ಕೃಷಿ, ಆರೋಗ್ಯ, ಶಿಕ್ಷಣ, ವಾಣಿಜ್ಯಸೇರಿ ಇನ್ನೂರಕ್ಕೂ ಹೆಚ್ಚು ಮಳಿಗೆಗಳಿವೆ.

ದೇವಸ್ಥಾನ, ಬಸದಿ, ಬಾಹುಬಲಿ ಬೆಟ್ಟ (ರತ್ನಗಿರಿ), ವಸತಿ ಛತ್ರಗಳನ್ನು ವಿದ್ಯುದ್ದೀಪಗಳಿಂದಅಲಂಕರಿಸಲಾಗಿದೆ.

ಪಾದಯಾತ್ರೆ: ಉಜಿರೆಯ ಜನಾರ್ದನ ಸ್ವಾಮಿ ದೇವಸ್ಥಾನದಿಂದ ಶನಿವಾರ ಮಧ್ಯಾಹ್ನ 25 ಸಾವಿರಕ್ಕೂ ಹೆಚ್ಚು ಭಕ್ತರು ಭಜನೆ, ಪ್ರಾರ್ಥನೆ ಹಾಗೂ ಶಿವ ಪಂಚಾಕ್ಷರಿ ಪಠಣದೊಂದಿಗೆ ಧರ್ಮಸ್ಥಳದವರೆಗೆ ಪಾದಯಾತ್ರೆ ಮಾಡಿದರು.

ಇದೇ 24ರ ವರೆಗೆ ನಿತ್ಯ ರಾತ್ರಿ 9ರಿಂದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ, 21ರಂದು ಅಲಿತಕಲಾಗೋಷ್ಠಿ ನಡೆಯಲಿದೆ. 22ರಂದು ಸಂಜೆ 5ಕ್ಕೆ ಸರ್ವಧರ್ಮ ಸಮ್ಮೇಳನವನ್ನು ಕೇಂದ್ರ ಸಚಿವೆ ಸ್ಮೃತಿ ಇರಾನಿ ಉದ್ಘಾಟಿಸುವರು. 23ರಂದು ಸಂಜೆ 5ಕ್ಕೆ ಸಾಹಿತ್ಯ ಸಮ್ಮೇಳನವನ್ನು ಚಿತ್ರನಿರ್ದೇಶಕ ಪಿ.ಶೇಷಾದ್ರಿ ಉದ್ಘಾಟಿಸುವರು. ವಿದ್ವಾಂಸ ಡಾ.ಎಚ್.ವಿ. ನಾಗರಾಜ ರಾವ್ ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಸುಶಿಕ್ಷಣ ಸೇವಾ ಪರ ಸಂಸ್ಥೆಯ ಸ್ಥಾಪಕ ಸತ್ಯೇಶ್ ಎನ್. ಬೆಳ್ಳೂರ್, ಪ್ರಜಾವಾಣಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಲೇಖಕಿ ಡಾ.ಗೀತಾ ವಸಂತ ಉಪನ್ಯಾಸ ನೀಡುವರು.

ಸರ್ಕಾರಿ ಜಮೀನಿನಲ್ಲಿ ಉಳುಮೆ: ಪ್ರಕರಣ ದಾಖಲಿಸದಂತೆ ಆದೇಶ

ಪ್ರಜಾವಾಣಿ ವಾರ್ತೆ

ಭೀಮನಕೊಲ್ಲಿ (ಮೈಸೂರು ಜಿಲ್ಲೆ): 'ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನು ಅಥವಾ ಅರಣ್ಯ ಇಲಾಖೆಯ ಜಾಗಗಳಲ್ಲಿ ಉಳುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸದಂತೆ ಈಚೆಗೆ ಆದೇಶಿಸಲಾಗಿದೆ. ವಿಚಾರಣೆಗೆಂದು ಇನ್ನು ರೈತರು ಬೆಂಗಳೂರಿಗೆ ಬರುವಂತಿಲ್ಲ' ಎಂದು ಕಂದಾಯ ಸಚಿವ ಆರ್.ಅಶೋಕ ಪ್ರಕಟಿಸಿದರು.

ಎಚ್.ಡಿ.ಕೋಟೆ ತಾಲ್ಲೂಕಿನ ಭೀಮನಕೊಲ್ಲಿ ಗ್ರಾಮದ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಶನಿವಾರ ಗ್ರಾಮ ವಾಸ್ತವ್ಯ ಹಾಗೂ 'ಜಿಲ್ಲಾಧಿಕಾರಿ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ನಗರ ಪ್ರದೇಶದಲ್ಲಿ ಉಳುಮೆ ಮಾಡಿದರೆ ಪ್ರಕರಣ ದಾಖಲಿಸಬಹುದು' ಎಂದು ಅವರು ಸ್ಪಷ್ಟಪಡಿಸಿದರು.

'2 ಅಥವಾ 3 ಗುಂಟೆ ಜಾಗದಲ್ಲಿ ಮನೆ ಕಟ್ಟುವ ಪರಿಶಿಷ್ಟರಿಗೆ ಜಿಲ್ಲಾಧಿಕಾರಿ ಮಟ್ಟದಲ್ಲೇ ಭೂಪರಿವರ್ತನೆಗೆ ಅವಕಾಶ ಕೊಡಲಾಗಿದೆ. 7 ದಿನದಲ್ಲಿ ಭೂ ಪರಿವರ್ತನೆಗೆ ನಿಯಮ ರೂಪಿಸಲಾಗುವುದು. ಶೀಘ್ರವೇ ಈ ಪ್ರಸ್ತಾವವನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುವುದು' ಎಂದರು.

'ಜಿಲ್ಲೆಯಲ್ಲಿ 52 ವರ್ಷದಿಂದ ಉಳುಮೆ ಮಾಡಿದವರಿಗೆ ಹಕ್ಕುಪತ್ರ ಕೊಟ್ಟಿಲ್ಲ. ಡೀಮ್ಡ್ ಫಾರೆಸ್ಟ್ ನಿಯಮದಲ್ಲಿ ಬದಲಾವಣೆ ಮಾಡಿದ್ದು, ಉಳುಮೆದಾರರಿಗೇ ಜಮೀನು ಕೊಡಲಾಗುವುದು' ಎಂದು ತಿಳಿಸಿದರು.

'ಬೆಂಗಳೂರಿನಲ್ಲಿ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿರುವ 10 ಸಾವಿರ ಪ್ರಕರಣಗಳಲ್ಲಿ ಅವರ ಹೆಸರಿಗೇ (94 ಸಿ) ಹಕ್ಕುಪತ್ರ ಕೊಡಲಾಗುವುದು. ಅದನ್ನು ರಾಜ್ಯದಾದ್ಯಂತ ಜಾರಿಗೊಳಿಸಲಾಗುವುದು' ಎಂದು ತಿಳಿಸಿದರು.

'ಕೋಳಿ ಸಾಕಣೆಯನ್ನೂ ಕೃಷಿ ವ್ಯಾಪ್ತಿಗೆ ತಂದಿರುವುದರಿಂದ ಕೋಳಿ ಫಾರಂ ನಿರ್ಮಿಸಲು ಭೂಪರಿವರ್ತನೆಗೆ ಅಲೆದಾಟದ ಅಗತ್ಯವಿಲ್ಲ. ಅರ್ಜಿದಾರರ ಹೆಸರಿಗೆ ಖಾತೆ ನೋಂದಣಿ ಪ್ರಕ್ರಿಯೆಯ ಅವಧಿಯನ್ನು 7 ದಿನಕ್ಕೆ ಇಳಿಸಲಾಗಿದೆ' ಎಂದರು.

ಎಚ್‌ಡಿಕೆ ಬಳಿ ಸಮಸ್ಯೆ ತೋಡಿಕೊಂಡ ಗ್ರಾಮಸ್ಥರು

ಗ್ರಾಮ ವಾಸ್ತವ್ಯಕ್ಕೆ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಕೋಲಾರ: ಜೆಡಿಎಸ್ ಪಂಚರತ್ನ ರಥಯಾತ್ರೆ ಅಂಗವಾಗಿ ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ರಾತ್ರಿ ಮುಳಬಾಗಿಲಿನ ಊರುಕುಂಟೆ ಮಿಟ್ಟೂರು ಹಾಗೂ ಶನಿವಾರ ರಾತ್ರಿ ಬಂಗಾರಪೇಟೆಯ ಮಾಗೇರಿಯಲ್ಲಿ ಗ್ರಾಮ ವಾಸ್ತವ್ಯ ಮಾಡಿದರು.

ಮಿಟ್ಟೂರು ಶಾಲೆಯಲ್ಲಿ ಬೆಳಿಗ್ಗೆ ಮಕ್ಕಳು ಹಾಗೂ ಶಿಕ್ಷಕರೊಂದಿಗೆ ಉಪಾಹಾರ ಸೇವಿಸಿದ ನಂತರ ಸಂವಾದ ನಡೆಸಿದರು. ತೆರೆದ ವಾಹನದಲ್ಲಿ ರೋಡ್ ಶೋ ಮೂಲಕ ಜನರೊಂದಿಗೆ ಸಂವಾದ ನಡೆಸಿದರು.

ಗ್ರಾಮಸ್ಥರು ಮುಗಿಬಿದ್ದು ಸಮಸ್ಯೆಗಳ ಸರಮಾಲೆ ಬಿಚ್ಚಿಟ್ಟರು. ವೃದ್ಧ ದಂಪತಿ ಸೇರಿ ಕೆಲವರು ಮನೆ ಇಲ್ಲ ಎಂದರೆ, ವಿದ್ಯಾರ್ಥಿಗಳು ಬಸ್ಸಿನ ವ್ಯವಸ್ಥೆ ಇಲ್ಲದೆ ಆಟೊದಲ್ಲಿ ಶಾಲೆಗೆ ತೆರಳುತ್ತಿರುವುದಾಗಿ ದೂರಿದರು.

ಸಮಸ್ಯೆಗೆ ಸ್ಪಂದಿಸಿದ ಕುಮಾರಸ್ವಾಮಿ ಅವರು ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಮಾಡುವಂತೆ ಮುಳಬಾಗಿಲು ಕ್ಷೇತ್ರದ ಜೆಡಿಎಸ್ ಸಂಭಾವ್ಯ ಅಭ್ಯರ್ಥಿ ಸಮೃದ್ಧಿ ಮಂಜುನಾಥ್ ಅವರಿಗೆ ಸೂಚಿಸಿದರು.

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ಶನಿವಾರ ಜೆಡಿಎಸ್‌ನ ಪಂಚರತ್ನ ಯಾತ್ರೆ ಸಾಗುವಾಗ ಎಚ್‌ಡಿ.ಕುಮಾರಸ್ವಾಮಿ ಅವರಿಗೆ ರೈತ ಮಹಿಳೆಯರು ರಾಗಿ ತೆನೆ ಹಾಗೂ ಹೂವು ನೀಡಿದರು

ಬಳಿಕ ಬಂಗಾರಪೇಟೆ ತಾಲ್ಲೂಕಿಗೆ ಯಾತ್ರೆ ಬಂದಿತು. ಮಾರ್ಗಮಧ್ಯದಲ್ಲಿ ಜನರ ಸಮಸ್ಯೆ ಆಲಿಸಿದರು. ರೈತ ಮಹಿಳೆಯರು ರಾಗಿ ತೆನೆ ಹಾಗೂ ಹೂವು ನೀಡಿದರು. 'ಬ್ಯಾಂಕ್‌ನಲ್ಲಿ ಸಾಲ ಮಾಡಿದ್ದು, ಮನ್ನಾ ಮಾಡಿ' ಎಂದು ಮನವಿ ಮಾಡಿದರು. ಕುಮಾರಸ್ವಾಮಿ ಭಾನುವಾರ ಮಾಲೂರು ತಾಲ್ಲೂಕಿನಲ್ಲಿ ಗ್ರಾಮ ವಾಸ್ತವ್ಯ ಮಾಡಲಿದ್ದಾರೆ.

ಬಬಿಯಾ ಸ್ಮರಣಾರ್ಥ ಅಂಚೆ ಲಕೋಟೆ

ಕಾಸರಗೋಡು: 'ದೇವರ ಮೊಸಳೆ' ಎಂದೇ ಹೆಸರಾಗಿದ್ದ ಇಲ್ಲಿನ ಅನಂತಪುರ ಪದ್ಮನಾಭಸ್ವಾಮಿ ದೇವಾಲಯದ ಸರೋವರದಲ್ಲಿದ್ದ ಮೊಸಳೆ ಬಬಿಯಾ ಸ್ಮರಣಾರ್ಥ ಅಂಚೆ ಇಲಾಖೆಯು ವಿಶೇಷ ಲಕೋಟೆ ಬಿಡುಗಡೆ ಮಾಡಿದೆ.

ಈ ಲಕೋಟೆಯಲ್ಲಿ ಅನಂತಪುರದ ಸರೋವರ ದೇವಾಲಯ ಮತ್ತು ಬಬಿಯಾ ಚಿತ್ರಗಳಿವೆ. ಹಿಂಬದಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ದೇವಾಲಯದ ವಿವರಗಳಿವೆ.

ಶೇ 40ರಷ್ಟು ಫಿಟ್‌ಮೆಂಟ್‌ಗೆ ಸರ್ಕಾರಿ ನೌಕರರ ಸಂಘ ಮನವಿ

ಶಿವಮೊಗ್ಗ: 'ವೇತನ ಪರಿಷ್ಕರಣೆ ವೇಳೆ ಶೇ 40ರಷ್ಟು ಫಿಟ್‌ಮೆಂಟ್ ನೀಡಲು ಏಳನೇ ವೇತನ ಆಯೋಗಕ್ಕೆ ಮನವಿ ಸಲ್ಲಿಸಲಿದ್ದೇವೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಶೇ 22ರಷ್ಟು ಹಾಗೂ ಸಿದ್ದರಾಮಯ್ಯ ಅವರು ಶೇ 30ರಷ್ಟು ಫಿಟ್‌ಮೆಂಟ್ ನೀಡಿದ್ದರು' ಎಂದರು.

'ಆಯೋಗದ ವರದಿ ಮೂರು ತಿಂಗಳಿಗೆ ಸಲ್ಲಿಕೆಯಾಗಿ ಚುನಾವಣೆಗೆ ಮುನ್ನವೇ ಅದರ ಶಿಫಾರಸು ಜಾರಿ ಆಗುವ ವಿಶ್ವಾಸವಿದೆ. ವೇತನ ಆಯೋಗ ಬೇಡಿಕೆ ಈಡೇರಿದೆ. ಹಳೆಯ ಪಿಂಚಣಿ ಯೋಜನೆ ಜಾರಿ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗುತ್ತೇವೆ' ಎಂದರು.

'ಸರ್ಕಾರದ ಪುಣ್ಯಕೋಟಿ ಯೋಜನೆಗೆ ವೇತನ ನೀಡಿಕೆಗೆ ನೌಕರ ಸಮೂಹದಿಂದ ಒಕ್ಕೊರಲ ಬೆಂಬಲ ದೊರೆತಿದೆ. 6 ಲಕ್ಷ ನೌಕರರಲ್ಲಿ ಯಾರೋ 100 ಮಂದಿ ವಿರೋಧಿಸಿದರು ಅಂದರೆ ಅದು ಲೆಕ್ಕಕ್ಕೆ ಇಲ್ಲ' ಎಂದರು.

'ನೌಕರರ ಸಾಮಾಜಿಕ ಕಳಕಳಿ ಮಾನವೀಯತೆ ಮೆರೆಯಲು ಈ ಯೋಜನೆ ವೇದಿಕೆಯಾಗಿದೆ. ಮುಂದೆ ಸಂಘದಿಂದ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳಲಾಗುವುದು ಎಂದರು.

ಬಾಲಕಿ ಮೇಲೆ ಅತ್ಯಾಚಾರ: ಅಪರಾಧಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯ ಅಪಹರಣ ಮಾಡಿ ಆಕೆಯ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ಸೆಷನ್ಸ್ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿದ್ದ ಅಪರಾಧಿಯನ್ನು ಹೈಕೋರ್ಟ್ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಕುರಿತಂತೆ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ಪ್ರಶ್ನಿಸಿ 29 ವರ್ಷದ ಯುವಕ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಅರ್ಜಿದಾರರ ಪರ ವಕೀಲ ಎಸ್.ಸುನಿಲ್ ಕುಮಾರ್, 'ಸಂತ್ರಸ್ತೆ ಲೈಂಗಿಕ ಕೃತ್ಯಕ್ಕೆ ಒಳಗಾಗಿದ್ದಾಳೆ ಎಂಬುದನ್ನು ಸಾಬೀತುಪಡಿಸುವಲ್ಲಿ ವೈದ್ಯಕೀಯ ಸಾಕ್ಷ್ಯಗಳು ವಿಫಲವಾಗಿವೆ. ಸಂತ್ರಸ್ತೆ ಮುಖ್ಯ ವಿಚಾರಣೆ ಮತ್ತು ಪಾಟಿ ಸವಾಲಿನ ವೇಳೆ ತದ್ವಿರುದ್ಧ ಸಾಕ್ಷ್ಯ ನೀಡಿದ್ದಾಳೆ. ಹಾಗಾಗಿ, ಅರ್ಜಿದಾರನ ಬಿಡುಗಡೆಗೆ ಆದೇಶಿಸಬೇಕು' ಎಂದು ವಾದ ಮಂಡಿಸಿದ್ದರು.

ಈ ವಾದಾಂಶಗಳನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ವಿಚಾರಣಾ ನ್ಯಾಯಾಲಯವು ಅಪರಾಧಿಗೆ ವಿಧಿಸಿರುವ ಎಲ್ಲ ಶಿಕ್ಷೆಗಳಿಂದ ಬಿಡುಗಡೆ ಮಾಡಬೇಕು' ಎಂದು ಆದೇಶಿಸಿದೆ.

ಪ್ರಕರಣವೇನು?: ಆರೋಪಿಯು 2012ರ ಸೆಪ್ಟೆಂಬರ್ 7ರಂದು ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಕೃತ್ಯ ಎಸಗಿದ ಆರೋಪದಡಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಿಂದ ಏಳು ವರ್ಷ ಶಿಕ್ಷೆಗೆ ಒಳಗಾಗಿದ್ದ. ಪೋಕ್ಸೊ ಕಾಯ್ದೆ ಜಾರಿಗೆ ಬರುವ ಒಂದು ತಿಂಗಳ ಮೊದಲು ಈ ಕೃತ್ಯ ದಾಖಲಾಗಿತ್ತು.

ಅಂದಿನ ಸಂದರ್ಭದಲ್ಲಿ ಬಾಲಕಿಯ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಕೇವಲ ಏಳು ವರ್ಷಗಳ ಗರಿಷ್ಠ ಶಿಕ್ಷೆ ವಿಧಿಸಲು ಮಾತ್ರವೇ ಕಾನೂನಿನಲ್ಲಿ ಅವಕಾಶವಿತ್ತು.

ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಸುಶೀಲಾ ಅವರು, ಭಾರತೀಯ ದಂಡ ಸಂಹಿತೆ–1860ರ ಕಲಂ 143 (ಕಾನೂನು ಬಾಹಿರ ಕೂಟ), 366 (ಅಪಹರಣ, ಒತ್ತೆಯಾಳಾಗಿ ಇರಿಸಿಕೊಳ್ಳುವುದು, ಮಹಿಳೆಯನ್ನು ಮದುವೆಗೆ ಒತ್ತಾಯಿಸುವುದು), 376 (ಅತ್ಯಾಚಾರ), 120 ಬಿ (ಅಪರಾಧಿಕ ಸಂಚು), 201ರ (ಸಾಕ್ಷ್ಯನಾಶ) ಅನುಸಾರ ಆರೋಪಿಗೆ 2018ರ ಅಕ್ಟೋಬರ್ 26ರಂದು ಪ್ರಮುಖ ಆರೋಪಿಗೆ ಏಳು ವರ್ಷಗಳ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದರು.

ಅಂತೆಯೇ, ಅಪಹರಣಕ್ಕೆ ಸಹಕರಿಸಿದ್ದಾರೆ ಎಂದು ಆರೋಪಿಸಲಾದ ಇನ್ನಿಬ್ಬರನ್ನು ಬಿಡುಗಡೆ ಮಾಡಿಲು ಆದೇಶಿಸಿದ್ದರು.

ಈ ಆದೇಶವನ್ನು ಪ್ರಶ್ನಿಸಿ ಪ್ರಮುಖ ಆರೋಪಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ಅಪರಾಧಿ ಈಗಾಗಲೇ ಐದು ವರ್ಷ ಜೈಲು ಶಿಕ್ಷೆ ಪೂರೈಸಿದ್ದಾನೆ.

ಏಡ್ಸ್‌ಗೆ ಸ್ವಮೂತ್ರಪಾನ: ಸ್ಪಷ್ಟನೆಗೆ ಲೇಖಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಬಿ.ಎ. ಆರ್ಟ್ಸ್ ಕೋರ್ಸ್‌ನ ಐದನೇ ಸೆಮಿಸ್ಟರ್‌ಗೆ 'ಏಡ್ಸ್, ಕ್ಯಾನ್ಸರ್‌ಗೆ ಮೂತ್ರ ಚಿಕಿತ್ಸೆ' ಎಂಬ ಅಧ್ಯಾಯ ಇರುವ ಪುಸ್ತಕವನ್ನು ಪರಾಮರ್ಶನ ಗ್ರಂಥವಾಗಿ ಆಯ್ಕೆ ಮಾಡಿರುವ ಕ್ರಮವನ್ನು ಲೇಖಕರು ಪ್ರಶ್ನಿಸಿದ್ದಾರೆ.

ಈ ಕುರಿತು, ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಎಸ್.ಜಿ.ಸಿದ್ದರಾಮಯ್ಯ, ವಿಜಯಾ, ರಾಜೇಂದ್ರ ಚೆನ್ನಿ, ಬಂಜಗೆರೆ ಜಯಪ್ರಕಾಶ್, ವಿಮಲಾ. ಕೆ.ಎಸ್., ಶ್ರೀಪಾದ ಭಟ್, ಟಿ.ಸುರೇಂದ್ರ ರಾವ್ ಮತ್ತಿತರರು ಸಮಾಜಶಾಸ್ತ್ರ ಪಠ್ಯ ಪುಸ್ತಕ ರಚನಾ ಮಂಡಳಿ ಅಧ್ಯಕ್ಷರಾದ ರಾಮೇಗೌಡರಿಗೆ ಪತ್ರ ಬರೆದಿದ್ದಾರೆ.

'ಅಧಿಕೃತವಲ್ಲದ, ಪರಿಶೀಲನೆ ಮಾಡದ, ಮೌಢ್ಯಾಚರಣೆಯ ವಿವರಣೆ ಇರುವ ಪುಸ್ತಕವನ್ನು ನಿಮ್ಮ ಸಮಿತಿ ಪರಿಶೀಲಿಸದೆ ಪರಾಮರ್ಶನ ಪುಸ್ತಕ ಎಂದು ಪರಿವಿಡಿಯಲ್ಲಿ ಉಲ್ಲೇಖಿಸಿದೆ. ಕೂಲಂಕಶವಾಗಿ ಪರಿಶೀಲಿಸದೇ ಹೀಗೆ ಉಲ್ಲೇಖಿಸಿರುವುದು ತಪ್ಪು ನಡೆಯಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

ಪರಾಮರ್ಶನ ಪುಸ್ತಕ ಬರೆದ ಕೆ. ಬೈರಪ್ಪನವರು ತಮ್ಮ ಪುಸ್ತಕದ ಮುಖಪುಟದಲ್ಲಿ ಐದನೇ ಸೆಮಿಸ್ಟರ್‌ನ ಎನ್‌ಇಪಿ ಪಠ್ಯ ಎಂದು ಅನಧಿಕೃತವಾಗಿ ಹಾಕಿಕೊಳ್ಳಲು ಅನುಮತಿ ಕೊಟ್ಟವರಾರು? ಹಾಗೆಯೇ, ಎನ್‌ಇಪಿ ಅಡಿಯಲ್ಲಿ ಕೇವಲ ಎರಡು ಸೆಮಿಸ್ಟರ್‌ಗಳು ಆಗಿವೆ. ಹೀಗಿರುವಾಗ ಐದನೇ ಸೆಮಿಸ್ಟರ್‌ನ ಪುಸ್ತಕವನ್ನು ಎನ್‌ಇಪಿ ಎಂದು ಪ್ರಚಾರ ಮಾಡುವುದು ಎಷ್ಟು ಸರಿ? ಪ್ರಾಧ್ಯಾಪಕರು, ವಿದ್ಯಾರ್ಥಿಗಳನ್ನು ಇದು ತಪ್ಪು ದಾರಿಗೆಳೆಯುವುದಿಲ್ಲವೇ ಎಂದೂ ಪತ್ರದಲ್ಲಿ ಕೇಳಿದ್ದಾರೆ.

'ಕೆ. ಬೈರಪ್ಪನವರು ವಿವರಿಸಿದ ಮೌಢ್ಯಾಚರಣೆಯ ವಿಚಾರಗಳಿಗೂ ಆರೆಸ್ಸೆಸ್, ಬಿಜೆಪಿ ಮುಖಂಡರ ಹೇಳಿಕೆಗಳಿಗೂ ಸಾಮ್ಯತೆಯಿದೆ. ಪರಾಮರ್ಶನ ಪುಸ್ತಕದ ನೆಪದಲ್ಲಿ ಶಿಕ್ಷಣದಲ್ಲಿಯೂ ಇದು ಸೇರಿಕೊಳ್ಳುವ ಅಪಾಯವಿದೆ' ಎಂದಿದ್ದಾರೆ.

'ಪರಾಮರ್ಶನ ಪುಸ್ತಕಕ್ಕೂ ಮತ್ತು ವಿ.ವಿ. ಗೂ ಸಂಬಂಧವಿಲ್ಲ' ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ ಆರ್. ಶಿವಪ್ಪನವರು ಹೇಳಿದ್ದಾರೆ. ಇದು ಪಕ್ಕಾ ಹೊಣೆಗೇಡಿತನ. ಪರಾಮರ್ಶನ ಪುಸ್ತಕವನ್ನು ಆಯ್ಕೆ ಮಾಡಿದ್ದು ಯಾರು? ಯಾಕೆ ಆಯ್ಕೆ ಮಾಡಲಾಗಿದೆ' ಎಂದು ಪ್ರಶ್ನಿಸಿರುವ ಅವರು, 'ವೈಜ್ಞಾನಿಕ ಜ್ಞಾನಾರ್ಜನೆ, ವ್ಯಕ್ತಿತ್ವ ವಿಕಸನ ಮುಖ್ಯ ಉದ್ದೇಶವಾಗಿರುವ ಶಿಕ್ಷಣದಲ್ಲಿ ಪರಾಮರ್ಶನ ಪುಸ್ತಕಗಳು ಸಹ ಮೌಲ್ಯಯುತವಾಗಿರಬೇಕು. ಕುಲಸಚಿವರ ಹೇಳಿಕೆ ಇದನ್ನು ಉಲ್ಲಂಘಿಸುವಂತಿದೆ' ಎಂದೂ ಆಕ್ಷೇಪಿಸಿದ್ದಾರೆ.

ಉಳ್ಳವರಿಗೆ ಆಸ್ತಿ; ದಲಿತರಿಗೆ ನಾಸ್ತಿ

ಸಾಂದರ್ಭಿಕ ಚಿತ್ರ

ಒಂದನೇ ಪುಟದಿಂದ...

‘ಕಾಯ್ದೆ ಉಲ್ಲಂಘಿಸಿ ಜಮೀನು ಮಾರಾಟವಾಗಿದ್ದರೂ, ವಾಪಸ್ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಎಕರೆಗೆ ಕನಿಷ್ಠ ₹10 ಕೋಟಿ ಬೆಲೆ ಬಾಳುವ ಆಸ್ತಿ ಈಗ ಬೇರೆಯವರ ಪಾಲಾಗಿದೆ. ನನ್ನ ಸಹೋದರ ಆಟೊರಿಕ್ಷಾ ಓಡಿಸುತ್ತಿದ್ದಾನೆ. ಜಮೀನು ಉಳಿದಿದ್ದರೆ ಜೀವನ ಮಟ್ಟ ಸುಧಾರಿಸುತ್ತಿತ್ತು’ ಎಂದು ಹೇಳಿದರು.

‘ಇದು ನನ್ನೊಬ್ಬನ ಸ್ಥಿತಿಯಲ್ಲ. ನಮ್ಮೂರಿನ ಹಲವರು ಭೂಮಿ ಕಳೆದುಕೊಂಡು ಇದೇ ರೀತಿ ದಯನೀಯವಾಗಿ ಜೀವನ ನಡೆಸುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ವೈಟ್‌ಫೀಲ್ಡ್‌ನಲ್ಲಿ ₹100 ಕೋಟಿ ಬೆಲೆ ಬಾಳುವ ಜಾಗ ಈಗ ರಿಯಲ್ ಎಸ್ಟೇಟ್ ಮಾಫಿಯಾದವರ ಪಾಲಾಗಿದೆ. ಪಿಟಿಸಿಎಲ್ ಕಾಯ್ದೆಯಡಿ ಅರ್ಜಿ ಸಲ್ಲಿಸಿ ನಡೆಸಿದ ಕಾನೂನು ಹೋರಾಟಕ್ಕೆ ಬೆಲೆ ಸಿಕ್ಕಿಲ್ಲ. ಅಲ್ಲಿ ತಲೆ ಎತ್ತಿರುವ ಐ.ಟಿ ಕಂಪನಿಗಳಲ್ಲಿ ಕಾವಲುಗಾರರ ಕೆಲಸ ಮಾಡುತ್ತಿದ್ದೇವೆ. ಅಕ್ಕ ಸ್ವೀಪರ್ ಕೆಲಸ ಮಾಡಿದರೆ, ಅಣ್ಣ ಗಾರ್ಡನ್ ನಿರ್ವಹಣೆ ಕೆಲಸ ಮಾಡುತ್ತಿದ್ದಾರೆ. ಭೂ ಮಾಲೀಕರಾಗಿದ್ದ ನಾವು, ಅದೇ ಜಾಗದಲ್ಲಿ ಕೂಲಿಗಳಾಗಿದ್ದೇವೆ’ ಎಂದು ವೈಟ್‌ಫೀಲ್ಡ್‌ನ ಚಂದ್ರಪ್ಪ ಗದ್ಗದಿತರಾದರು.

‘ಅನಕ್ಷರಸ್ಥನಾಗಿದ್ದ ಅಪ್ಪ ಅದ್ಯಾವ ಕಾರಣಕ್ಕೆ ಊರ ಗೌಡರಿಗೆ ಜಮೀನು ಬರೆದುಕೊಟ್ಟರೊ ಗೊತ್ತಿಲ್ಲ. ಈಗ ನಮ್ಮದು ಬರಿಗೈ. ನಾನು, ನನ್ನ ತಾಯಿ ಅದೇ ಜಮೀನಿನಲ್ಲಿ ಕೂಲಿಕಾರರಾಗಿದ್ದೇವೆ. ನಮ್ಮ ಜಮೀನಿನಲ್ಲಿ ನಾವೇ ಕೂಲಿಗಳಾಗಿದ್ದೇವೆ ಎಂಬುದು ದಿನವೂ ಕಾಡುತ್ತಿದೆ. ಜಮೀನು ವಾಪಸ್ ಪಡೆದುಕೊಳ್ಳಲು ಕಾನೂನಿನಲ್ಲಿ ಅವಕಾಶ ಇದೆ ಎಂಬುದೇ ನಮಗೆ ಗೊತ್ತಿಲ್ಲ. ಊರ ಗೌಡರ ವಿರುದ್ಧ ನಾವು ಹೋರಾಟ ಮಾಡಿ ಬದುಕುಳಿಯಲು ಸಾಧ್ಯವೇ’ ಎಂದು ಸಕಲೇಶಪುರ ತಾಲ್ಲೂಕಿನ ಉಮೇಶ್ ತಮ್ಮ ಪ್ರಶ್ನೆಗೆ ಬೇಸರವನ್ನೂ ಸವರಿದಂತೆ ಹೇಳಿದರು.

‘ಇಷ್ಟೇ ಅಲ್ಲ, ಅನಕ್ಷರಸ್ಥರಾಗಿದ್ದ ದಲಿತರನ್ನು ಹೆದರಿಸಿ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡ ಉದಾಹರಣೆಗಳಿವೆ. ಕೈಸಾಲಕ್ಕೆ ಹೆಬ್ಬೆಟ್ಟು ಒತ್ತಿಸಿಕೊಂಡು ಖಾತೆ ಬದಲಾವಣೆ ಮಾಡಿಕೊಂಡಿರುವ ಪ್ರಕರಣಗಳೂ ಇವೆ. ಇದನ್ನು ಪ್ರಶ್ನೆ ಮಾಡುವ ದನಿ ದಲಿತರಲ್ಲಿ ಇರಲಿಲ್ಲ. ಜಮೀನು ವಾಪಸ್ ಪಡೆದುಕೊಳ್ಳಲು ಕಾನೂನು ಇದೆ ಎಂಬ ಅರಿವೂ ಇರಲಿಲ್ಲ. ಇತ್ತೀಚೆಗೆ ಅದು ಅರಿವಿಗೆ ಬರುತ್ತಿದೆ. ಆದರೀಗ ಕಾಯ್ದೆಯೇ ದುರ್ಬಲವಾಗಿದೆ. ಜಮೀನು ವಾಪಸ್ ಪಡೆಯುವುದು ಹೇಗೆ’ ಎಂದು ಪ್ರಶ್ನಿಸುತ್ತಾರೆ ಪಿಟಿಸಿಎಲ್ ಕಾಯ್ದೆ ಸಮಗ್ರ ತಿದ್ದುಪಡಿಗೆ ಒತ್ತಾಯಿಸುತ್ತಿರುವ ಹೋರಾಟಗಾರರು.

ಕಾಯ್ದೆಯ ಉದ್ದೇಶ: 1924ರಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಭೂ ಒಡೆತನದ ಹಕ್ಕನ್ನು ಮೈಸೂರು ಅರಸರು ಕೊಟ್ಟರು. ಸ್ವಾತಂತ್ರ್ಯ ಬರುವ ಮೊದಲು, ಸ್ವಾತಂತ್ರ್ಯ ನಂತರ ಸರ್ಕಾರಗಳು ಮುಫತ್ತಾಗಿ ನೀಡಿದ ಭೂಮಿಯನ್ನು ನಿರ್ದಿಷ್ಟ ಕಾಲದವರೆಗೆ ಪರಭಾರೆ ಮಾಡಬಾರದು ಎಂಬ ಷರತ್ತುಗಳನ್ನು ವಿಧಿಸುತ್ತಿದ್ದರು.

ಮುಖ್ಯಮಂತ್ರಿ ಆಗಿದ್ದ ಡಿ.ದೇವರಾಜ ಅರಸು ಅವರು 1979ರ ಜನವರಿ 1ರಿಂದ ಜಾರಿಗೆ ಬರುವಂತೆ ಪಿಟಿಸಿಎಲ್ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿಗೆ ತಂದರು. ಇದು ಬರುವ ಮುನ್ನ ಮತ್ತು ನಂತರ ಪರಿಶಿಷ್ಟರಿಗೆ ಮಂಜೂರಾದ ಭೂಮಿಗಳ ಪರಭಾರೆ ಮಾಡಲು ಸರ್ಕಾರದ ಪೂರ್ವಾನುಮತಿ ಅತ್ಯವಶ್ಯ ಎಂಬ ಷರತ್ತು ಇತ್ತು.

ಒಂದು ವೇಳೆ ಪೂರ್ವಾನುಮತಿ ಪಡೆದು ಬದಲಿ ಜಮೀನು ಖರೀದಿಸಿದ್ದರೆ, ಮತ್ತೊಮ್ಮೆ ಈ ಕಾಯ್ದೆಯಡಿ ಅರ್ಜಿ ಸಲ್ಲಿಸಿ ಮರು ಮಂಜೂರಾತಿ ಕೋರಲು ಅವಕಾಶ ಇಲ್ಲ. ಕಾಯ್ದೆ ಉಲ್ಲಂಘಿಸಿ ಭೂಮಿ ಪರಭಾರೆ ಆಗಿದ್ದಲ್ಲಿ ಮರು ಮಂಜೂರಾತಿ ಕೋರಿ ಮೂಲ ಮಂಜೂರಾತಿದಾರರು ಅಥವಾ ಅವರ ವಾರಸುದಾರರು ಉಪವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಬಹುದು. ಜಿಲ್ಲಾಧಿಕಾರಿ ಸ್ವಯಂ ಪ್ರೇರಿತವಾಗಿ ಅರ್ಜಿ ದಾಖಲಿಸಿಕೊಂಡು ಜಮೀನು ಬಿಡಿಸಿಕೊಡಲು ಕಾಯ್ದೆಯಲ್ಲಿ ಅವಕಾಶ ಇದೆ. ಪರಭಾರೆಯಾದ ಇಂತಿಷ್ಟೇ ದಿನಗಳಲ್ಲಿ ಅರ್ಜಿ ಸಲ್ಲಿಸಬೇಕು ಎಂಬ ಕಾಲಮಿತಿ ಇರಲಿಲ್ಲ.

ಕಾಯ್ದೆ ಇಷ್ಟೊಂದು ಬಲಿಷ್ಠವಾಗಿದ್ದರೂ ದಲಿತರ ಭೂಮಿ ಪರಭಾರೆ ಆಗುವುದನ್ನು ತಪ್ಪಿಸಲು ಆಗಿಲ್ಲ. ದಲಿತರಿಗೆ ಸರ್ಕಾರ ಮಂಜೂರು ಮಾಡಿದ್ದ ಭೂಮಿ ಪರಭಾರೆ ಆಗದಂತೆ ಈ ಕಾಯ್ದೆಯಡಿ ನೋಡಿಕೊಳ್ಳಬೇಕಾದ ಜವಾಬ್ದಾರಿ ಕಂದಾಯ ಇಲಾಖೆಯದ್ದು. ಆದರೂ ಬದಲಿ ಜಮೀನು ಖರೀದಿಸದೆ ಮತ್ತು ಜಿಲ್ಲಾಧಿಕಾರಿಯಿಂದ ಅನುಮತಿ ಪಡೆಯದಿದ್ದರೂ ಖಾತೆ ಬದಲಾವಣೆ ಮಾಡಿಕೊಡುವುದು ಎಗ್ಗಿಲ್ಲದೆ ನಡೆದಿದೆ.

ಕಾಯ್ದೆ ಉಲ್ಲಂಘಿಸಿ ಜಮೀನು ಪರಭಾರೆಯಾಗುತ್ತಿದ್ದರೂ ಸ್ವಯಂ ಪ್ರೇರಿತವಾಗಿ ಜಿಲ್ಲಾಧಿಕಾರಿ ಪ್ರಕರಣ ದಾಖಲಿಸಿಕೊಂಡ ಒಂದೇ ಒಂದು ಉದಾಹರಣೆಯೂ ರಾಜ್ಯದಲ್ಲಿ ಇಲ್ಲ. ಇದರ ಪರಿಣಾಮ ಭೂಮಿ ಪರಭಾರೆ ಎಗ್ಗಿಲ್ಲದೆ ನಡೆದಿದೆ. ನಗರ ಪ್ರದೇಶದ ಅದರಲ್ಲೂ ಬೆಂಗಳೂರು ಸುತ್ತಮುತ್ತ ದಲಿತರ ಭೂಮಿಯಲ್ಲೇ ಬಡಾವಣೆಗಳನ್ನು ನಿರ್ಮಿಸಿರುವ ರಿಯಲ್ ಎಸ್ಟೇಟ್ ಉದ್ಯಮಿಗಳು, ನಿವೇಶನ ಕೊಳ್ಳುವ ಅಮಾಯಕರಿಗೆ ಮಾರಾಟ ಮಾಡಿ ಕೈತೊಳೆದುಕೊಂಡಿದ್ದಾರೆ. ಪರಿಶಿಷ್ಟರಿಗೆ ಸರ್ಕಾರ ಮಂಜೂರು ಮಾಡಿದ್ದ ಜಾಗ ಎಂಬ ಅರಿವಿಲ್ಲದೆ ನಿವೇಶನ ಖರೀದಿಸಿದವರೂ ಅಡಕತ್ತರಿಯಲ್ಲಿ ಸಿಲುಕಿಕೊಂಡಿದ್ದಾರೆ.

ಇದರ ನಡುವೆ 2017ರ ಅಕ್ಟೋಬರ್ 26ರಲ್ಲಿ ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘ಸಮುಚಿತ (ಕಾಲಮಿತಿ) ಸಮಯದೊಳಗೆ ಅರ್ಜಿ ಸಲ್ಲಿಸಬೇಕು’ ಎಂದು ತಿಳಿಸಿತು. ಇದು ಕಂದಾಯ ಇಲಾಖೆ ಪಾಲಿಗೆ ತೂಕಡಿಸುತ್ತಿದ್ದವರಿಗೆ ಹಾಸಿಗೆ ಹಾಸಿ ಕೊಟ್ಟಂತಾಯಿತು.

‘ಪಿಟಿಸಿಎಲ್ ಕಾಯ್ದೆ ಉಲ್ಲಂಘನೆಯಾಗಿದೆ ಎಂದು ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳಲ್ಲಿ ಸಲ್ಲಿಕೆಯಾಗುತ್ತಿರುವ ಅರ್ಜಿಗಳನ್ನು ತಿರಸ್ಕರಿಸಿ ಕೈತೊಳೆದುಕೊಳ್ಳಲಾಗುತ್ತಿದೆ. ನಿರ್ದಿಷ್ಟ ಸಮಯದೊಳಗೆ ಅರ್ಜಿ ಸಲ್ಲಿಸಿಲ್ಲ ಎಂಬ ಕಾರಣ ನೀಡಲಾಗುತ್ತಿದೆ. ನಿರ್ದಿಷ್ಟ ಸಮಯ ಎಂದರೆ ಎಷ್ಟು ಎಂಬುದನ್ನೂ ಸುಪ್ರೀಂ ಕೋರ್ಟ್ ಸಹ ಹೇಳಿಲ್ಲ. ದಲಿತರ ಭೂಮಿ ಖರೀದಿಸಿರುವ ರಿಯಲ್ ಎಸ್ಟೇಟ್ ಮಾಫಿಯಾಕ್ಕೆ ಅಧಿಕಾರಿಗಳು ಮಣಿಯುತ್ತಿದ್ದಾರೆ’ ಎಂಬುದು ಅರ್ಜಿದಾರರ ಅಳಲು.

ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ 6 ಸಾವಿರಕ್ಕೂ ಹೆಚ್ಚು ಅರ್ಜಿಗಳು ವಜಾಗೊಂಡಿವೆ. ಅದನ್ನು ಪ್ರಶ್ನಿಸಿ ಹೈಕೋರ್ಟ್, ಸುಪ್ರೀಂ ಕೋರ್ಟ್ ಮೊರೆಹೋದರೂ ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದ ತೀರ್ಪು ಉಲ್ಲೇಖಿಸಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ಇದರಿಂದ ಭೂಮಿ ಕಳೆದುಕೊಂಡ ದಲಿತರು ಮರು ಮಂಜೂರಾತಿ ಪಡೆಯಲು ಸಾಧ್ಯವೇ ಇಲ್ಲವಾಗಿದೆ. ಪಿಟಿಸಿಎಲ್ ಕಾಯ್ದೆ ಇದ್ದೂ ಇಲ್ಲದಂತಾಗಿದೆ’ ಎಂದು ಹೋರಾಟಗಾರರು ಹೇಳುತ್ತಾರೆ.

‘ಹೋರಾಟಗಾರರ ಕಣ್ಣೊರೆಸಲು ಸುತ್ತೋಲೆಯೊಂದನ್ನು ಹೊರಡಿಸಿ ಕಂದಾಯ ಇಲಾಖೆ ಕೈತೊಳೆದುಕೊಂಡಿದೆ. ಸಮಗ್ರ ತಿದ್ದುಪಡಿ ಪ್ರಸ್ತಾವನೆ ಕಂದಾಯ ಸಚಿವರ ಕಚೇರಿಯಲ್ಲಿ ಎರಡು ವರ್ಷಗಳಿಂದ ಧೂಳು ಹಿಡಿಯುತ್ತಿದೆ. ಇತ್ತ ಪಿಟಿಸಿಎಲ್ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳು ವಜಾಗೊಳ್ಳುತ್ತಿವೆ. ನಮ್ಮ ಹೋರಾಟದ ಕೂಗು ಸರ್ಕಾರದ ಮುಂದೆ ಅರಣ್ಯ ರೋದನವಾಗಿದೆ’ ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.

ಅಭಿಪ್ರಾಯಗಳು

ಮುಖ್ಯಮಂತ್ರಿ ಮಾತು ಉಳಿಸಿಕೊಳ್ಳಬೇಕು

ಮುಖ್ಯಮಂತ್ರಿ ಅವರು ಮಾತು ಕೊಟ್ಟಿರುವಂತೆ ಸುಗ್ರೀವಾಜ್ಞೆ ಮೂಲಕ ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಮಾಡಬೇಕು. ಈಗಾಗಲೇ ನ್ಯಾಯಾಲಯಗಳಲ್ಲಿ ವಜಾ ಆಗಿರುವ ಪ್ರಕರಣಗಳಿಗೂ ಮರು ಜೀವ ದೊರಕಬೇಕೆಂದರೆ ಪೂರ್ವಾನ್ವಯ ಆಗುವಂತೆ ತಿದ್ದುಪಡಿಯಾಗಬೇಕು. ಇಲ್ಲದಿದ್ದರೆ ದಲಿತರು ಭೂಮಿಯ ಹಕ್ಕು ಮರಳಿ ಪಡೆಯಲು ಸಾಧ್ಯವೇ ಆಗುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡದ ಶಾಸಕರೂ ಸರ್ಕಾರದ ಮೇಲೆ ಒತ್ತಡ ಹೇರಬೇಕು.

ಮಾವಳ್ಳಿ ಶಂಕರ್, ದಸಂಸ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ

ದಯಾಮರಣ ಕೋರಲು ನಿರ್ಧಾರ

ಪಿಟಿಸಿಎಲ್ ಕಾಯ್ದೆಯಡಿ ಸಲ್ಲಿಸಿರುವ ಅರ್ಜಿಗಳೆಲ್ಲವೂ ವಜಾಗೊಳ್ಳುತ್ತಿದ್ದು, ದಲಿತರು ಭೂಮಿ ಇಲ್ಲದೆ ನಿರ್ಗತಿಕರಾಗುತ್ತಿದ್ದಾರೆ. ನಿರಂತರವಾಗಿ ಹೋರಾಟ ನಡೆಸುತ್ತಿದ್ದರೂ, ತಿದ್ದುಪಡಿ ಮಾಡದೆ ಉದ್ದೇಶಪೂರ್ವಕವಾಗಿಯೇ ಸರ್ಕಾರ ಅನ್ಯಾಯ ಮಾಡುತ್ತಿದೆ. ಭೂಮಿ ಕಳೆದುಕೊಂಡಿರುವ ವಂಚಿತರಿಗೆ ದಯಾ ಮರಣ ನೀಡಬೇಕು ಎಂದು ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಲು ನಿರ್ಧರಿಸಿದ್ದೇವೆ.

ಎಂ.ಎಚ್.ಮಂಜುನಾಥ್, ಪಿಟಿಸಿಎಲ್ ಹೋರಾಟಗಾರ

ಡೋಂಗಿ ದಲಿತ ಪ್ರೀತಿ ಆಗಬಾರದು

ಶೇ 10ರಷ್ಟು ಮೀಸಲಾತಿಯನ್ನು ಯಾರೂ ಕೇಳಿರಲಿಲ್ಲ. ಸರ್ಕಾರವೇ ಇಚ್ಛಾಶಕ್ತಿ ತೋರಿಸಿ ತಂದಿದೆ. ಎಸ್‌ಸಿಎಸ್‌ಟಿ ಮೀಸಲಾತಿ ಹೆಚ್ಚಳ ಪ್ರಯತ್ನವೂ ಚುನಾವಣಾ ರಾಜಕಾರಣವೇ ಆಗಿದೆ. ದಲಿತರ ಮೇಲೆ ಪ್ರೀತಿ ಇದೆ ಎಂಬುದನ್ನು ತೋರ್ಪಡಿಸುವ ತಂತ್ರ. ಭೂಮಿ ಉಳಿಸಿಕೊಟ್ಟರೆ ಇಡೀ ಕುಟುಂಬ ಸ್ವಾಭಿಮಾನದಿಂದ ಬದುಕಲು ಸಾಧ್ಯವಿದೆ. ನಿಜವಾಗಲೂ ದಲಿತರ ಮೇಲೆ ಪ್ರೀತಿ ಇದ್ದರೆ ಸುಗ್ರೀವಾಜ್ಞೆ ಮೂಲಕ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಬೇಕು. ಇಲ್ಲದಿದ್ದರೆ ಡೋಂಗಿ ಪ್ರೀತಿ ಎಂಬುದು ಬಹಿರಂಗವಾಗುತ್ತದೆ.

ಎ.ಹರಿರಾಮ್, ವಕೀಲ, ರಾಜ್ಯ ಅಧ್ಯಕ್ಷ, ಭಾರತೀಯ ಪರಿವರ್ತನ ಸಂಘ

ಮಾಧುಸ್ವಾಮಿ, ಆರ್. ಅಶೋಕ ಅಡ್ಡಿ

ತಿದ್ದುಪಡಿಗೆ ವಿಧಾನ ಮಂಡಲ ಎಸ್‌ಸಿಎಸ್‌ಟಿ ಕಲ್ಯಾಣ ಸಮಿತಿ ಶಿಫಾರಸು ಮಾಡಿ ಒಂದು ವರ್ಷವಾಗಿದ್ದರೂ ಕಂದಾಯ ಸಚಿವ ಆರ್.ಅಶೋಕ ಅವರು ಸಚಿವ ಸಂಪುಟದ ಮುಂದೆ ತರುತ್ತಿಲ್ಲ. ಕಾನೂನು ಸಚಿವ ಮಾಧುಸ್ವಾಮಿ ಮತ್ತು ಆರ್.ಅಶೋಕ್ ಅವರೇ ಕಾಯ್ದೆ ತಿದ್ದುಪಡಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಸಾವಿರಾರು ಎಕರೆ ಭೂಮಿ ದಲಿತರ ಕೈತಪ್ಪಿ ಹೋಗುತ್ತಿದೆ. ಕೂಡಲೇ ಸರ್ಕಾರ ಕಾಯ್ದೆ ತಿದ್ದುಪಡಿಗೆ ಮುಂದಾಗಬೇಕು.

ಹೆಣ್ಣೂರು ಶ್ರೀನಿವಾಸ್, ರಾಜ್ಯ ಸಂಚಾಲಕ, ದಲಿತ ಸಂಘರ್ಷ ಸಮಿತಿ

ಗೋವಾ ಅಂತರರಾಷ್ಟ್ರೀಯ ಚಿತ್ರೋತ್ಸವ ಇಂದಿನಿಂದ

• ಪ್ರೇಮಕುಮಾರ್ ಹರಿಯಬ್ಬೆ

ಪಣಜಿ: ಕೋವಿಡ್, ಕೊರೊನಾ ನಿಯಂತ್ರಣ ಕ್ರಮಗಳಿಂದ ಉಂಟಾದ ಹಿಂಜರಿಕೆ, ನಿರುತ್ಸಾಹ ಮತ್ತು ಅವ್ಯವಸ್ಥೆಗಳಿಂದ ಸೊರಗಿದ್ದ ಗೋವಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಈ ವರ್ಷ ಚೇತರಿಸಿಕೊಳ್ಳಬಹುದೆಂಬ ಆಶಾವಾದದೊಡನೆ 53ನೇ ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಭಾನುವಾರ ಸಂಜೆ ಚಾಲನೆ ಸಿಗಲಿದೆ.

ಪಣಜಿ ಹೊರವಲಯದಲ್ಲಿರುವ ಗೋವಾ ವಿಶ್ವವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ಸಂಜೆ 4 ಗಂಟೆಗೆ ಕೇಂದ್ರ ಪ್ರಸಾರ ಖಾತೆ ಸಚಿವ ಅನುರಾಗ್‌ಸಿಂಗ್ ಠಾಕೂರ್ ಚಿತ್ರೋತ್ಸವವನ್ನು ಉದ್ಘಾಟಿಸುವರು. ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ, ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಅಜಯ್ ದೇವಗನ್, ಸಾರಾ ಅಲಿಖಾನ್ ಸೇರಿದಂತೆ ಹಲವು ನಟ,ನಟಿಯರು ಮತ್ತು ಪ್ರಸಾರ ಸಚಿವಾಲಯದ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿರುವರು. ಆಸ್ಟ್ರಿಯಾ ದೇಶದ ಡಯಟರ್ ಬರ್ನರ್ ನಿರ್ದೇಶನದ ಅಲ್ಮ ಅಂಡ್ ಆಸ್ಕರ್ ಉದ್ಘಾಟನಾ ಚಿತ್ರವಾಗಿ ಪ್ರದರ್ಶನವಾಗಲಿದೆ.

ಸೋಮವಾರದಿಂದ ಪಣಜಿಯ ಐನಾಕ್ಸ್ ಚಿತ್ರಮಂದಿರದ 6 ತೆರೆಗಳು ಮತ್ತು ಪೊರ್ವರಿಂನ ಐನಾಕ್ಸ್‌ನ ನಾಲ್ಕು ತೆರೆಗಳಲ್ಲಿ ಎಪ್ಪತ್ತೊಂಬತ್ತು ದೇಶಗಳ 280 ಸಿನಿಮಾಗಳು ಮುಂಜಾನೆ 9 ರಿಂದ ತಡರಾತ್ರಿವರೆಗೆ ನಿರಂತರವಾಗಿ ಪ್ರದರ್ಶನಗೊಳ್ಳಲಿವೆ. ಈ ಚಿತ್ರಗಳನ್ನು (ನೊಂದಾಯಿಸಿಕೊಂಡ ಪ್ರತಿನಿಧಿಗಳು) ಕೆಲ ಪ್ರಾಯೋಜಿತ ಒಟಿಟಿ ವೇದಿಕೆಗಳ ಮೂಲಕ ನೋಡುವ ಅವಕಾಶವಿದೆ. ಪಣಜಿ ಮತ್ತು ಮಡಗಾಂವ್‌ನ ಸಾರ್ವಜನಿಕರಿಗಾಗಿ ಐದಾರು ಸ್ಥಳಗಳಲ್ಲಿ ಸಂಜೆ ವೇಳೆ ಆಯ್ದ ಸಿನಿಮಾಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಭಾರತೀಯ ಪನೋರಮಾ ವಿಭಾಗದಲ್ಲಿ 25 ಕಥಾಚಿತ್ರಗಳು ಮತ್ತು 19 ನಾನ್ ಫೀಚರ್ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ. ಈ ವಿಭಾಗದ ಉದ್ಘಾಟನಾ ಚಿತ್ರವಾಗಿ ಕನ್ನಡದ ‘ಹದಿನೇಳೆಂಟು’ (ಸೆವೆಂಟೀನರ್ಸ್) ಸೋಮವಾರ ಪ್ರದರ್ಶನವಾಗಲಿದೆ. ಪೃಥ್ವಿ ಕೊಣನೂರು ಈ ಚಿತ್ರದ ನಿರ್ದೇಶಕರು. ಈ ವಿಭಾಗದಲ್ಲಿರುವ ಇನ್ನೊಂದು ಕನ್ನಡ ಚಿತ್ರ ಕೃಷ್ಣೇಗೌಡ ನಿರ್ದೇಶನದ ‘ನಾನು ಕುಸುಮ’. ನಾನ್ ಫೀಚರ್ ವಿಭಾಗದಲ್ಲಿ ‘ಮಧ್ಯಂತರ’ ಹೆಸರಿನ ಕಿರು ಚಿತ್ರವಿದೆ. ಚಿತ್ರೋತ್ಸವದ ಫೋಕಸ್ ರಾಷ್ಟ್ರ ಫ್ರಾನ್ಸ್ ಆಗಲಿದೆ. ಫ್ರೆಂಚ್ ಭಾಷೆಯ ಎಂಟು ಸಮಕಾಲೀನ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ. ಸ್ಪರ್ಧಾ ವಿಭಾಗದಲ್ಲಿ ಹದಿನೈದು ಅಂತರರಾಷ್ಟ್ರೀಯ ಸಿನಿಮಾಗಳಿವೆ. ಇವುಗಳಲ್ಲಿ ಮೂರು ಭಾರತೀಯ ಸಿನಿಮಾಗಳು.

ಹೆಸರಾಂತ ನಿರ್ದೇಶಕ ದಿ.ಸತ್ಯಜಿತ್ ರೇ ಹೆಸರಿನಲ್ಲಿ ನೀಡುವ ಜೀವಮಾನ ಸಾಧನೆ ಪ್ರಶಸ್ತಿಯನ್ನು ಸ್ಪ್ಯಾನಿಷ್ ಚಿತ್ರ ನಿರ್ದೇಶಕ ಕಾರ್ಲೋಸ್ ಸೌರಾ ಅವರಿಗೆ ಪ್ರದಾನ ಮಾಡಲಾಗುವುದು. ಕಾರ್ಲೋಸ್ ಪರವಾಗಿ ಅವರ ಮಗಳು ಅನ್ನಾ ಸೌರಾ ಪ್ರಶಸ್ತಿ ಸ್ವೀಕರಿಸುವರು.

ಕಳೆದ ಒಂದು ವರ್ಷದ ಅವಧಿಯಲ್ಲಿ ಅಗಲಿದ ಭಾರತೀಯ ಚಿತ್ರರಂಗದ ಶ್ರೇಷ್ಠ ಗಾಯಕಿ ಲತಾ ಮಂಗೇಶ್ಕರ್, ಕಥಕ್ ನೃತ್ಯ ಕಲಾವಿದ ಪಂಡಿತ್ ಬಿರ್ಜು ಮಹಾರಾಜ್, ತೆಲುಗು ನಟ ಕೃಷ್ಣಂರಾಜು, ಮಲಯಾಳಂ ನಟ ಪ್ರತಾಪ್ ಪೋತನ್, ಸಂಗೀತ ನಿರ್ದೇಶಕ ಬಪ್ಪಿ ಲಹರಿ, ಗಾಯಕ ಕೆ.ಕೆ. ಸೇರಿದಂತೆ ಹದಿನೇಳು ಸಿನಿಮಾ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅವರ ಚಿತ್ರಗಳನ್ನು ಪ್ರದರ್ಶನ ಮಾಡಲಾಗುವುದು.

ಸಮಕಾಲೀನ ಸಿನಿಮಾ ತಂತ್ರಜ್ಞಾನದ ಆವಿಷ್ಕಾರಗಳನ್ನು ಕುರಿತು ತಜ್ಞರ ಜೊತೆ ಸಂವಾದ ಮತ್ತು ಭಾರತೀಯ ಸಿನಿಮಾಗಳಿಗೆ ಮಾರುಕಟ್ಟೆ, ಪ್ರಾಯೋಜಕತ್ವ ಮತ್ತು ಮಾಹಿತಿ ವಿನಿಮಯಕ್ಕೆ ವೇದಿಕೆ ಕಲ್ಪಿಸುವ ಐದು ದಿನಗಳ ಫಿಲ್ಮ್ ಬಜಾರ್ ಇದೆ.

ಕೃಷಿ ವಿ.ವಿ. ವಿಜ್ಞಾನಿಗಳಿಂದ ಅಭಿವೃದ್ಧಿ

‘ಸಹ್ಯಾದ್ರಿ ಕೆಂಪು ಮುಕ್ತಿ’ ಭತ್ತದ ತಳಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬೆಂಕಿ ರೋಗನಿರೋಧಕ ‘ಸಹ್ಯಾದ್ರಿ ಕೆಂಪು ಮುಕ್ತಿ’ ಹೆಸರಿನ ಕೆಂಪಕ್ಕಿಯ ಭತ್ತದ ತಳಿಯನ್ನು ಇಲ್ಲಿನ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ ‘ಸಹ್ಯಾದ್ರಿ ಕೆಂಪು ಮುಕ್ತಿ’ ತಳಿಯ ಭತ್ತದ ಬೆಳೆ

ಸದ್ಯ ರಾಜ್ಯದ 1.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಾರರು, ಕೇರಳ ಮೂಲದ ‘ಜ್ಯೋತಿ’ ತಳಿಯ ಕೆಂಪಕ್ಕಿಯ ಭತ್ತ ಬೆಳೆಯುತ್ತಿದ್ದಾರೆ. ಅದಕ್ಕೆ ಬೆಂಕಿ ರೋಗ ಬಾಧಿಸಲಿದೆ. ಪರಿಹಾರ ಹುಡುಕಲು ವಿಶ್ವವಿದ್ಯಾಲಯ ಮುಂದಾಗಿದೆ. ಭತ್ತ ತಳಿ ಸಂಶೋಧನಾ ವಿಭಾಗದ ಡೀನ್ ಡಾ.ಬಿ.ಎಂ. ದುಷ್ಯಂತ್‌ಕುಮಾರ್ ನೇತೃತ್ವದ ತಂಡ ಹೊಸ ತಳಿ ಅಭಿವೃದ್ಧಿಪಡಿಸಿದೆ.

ನೂತನ ತಳಿ ಭತ್ತವನ್ನು ವಲಯ, ರಾಷ್ಟ್ರೀಯ ಮಟ್ಟದಲ್ಲಿ ಪ್ರಾಯೋಗಿಕ ಹಂತದಲ್ಲಿ ಪರೀಕ್ಷೆಗೆ ಒಳಪಡಿಸಿದ್ದು, ಹೆಕ್ಟೇರ್‌ಗೆ 60 ಕ್ವಿಂಟಲ್ ಇಳುವರಿ ಬಂದಿದೆ. ದೇಶದ ವಿವಿಧ ಭಾಗಗಳ 60 ಕಡೆ ಕ್ಷೇತ್ರ ಪ್ರಯೋಗ ನಡೆದಿದೆ. ಉಳಿದ ತಳಿಗಳಿಗಿಂತ ಶೇ 21.30ರಷ್ಟು ಹೆಚ್ಚು ಇಳುವರಿ ದೊರೆತಿದೆ ಎಂದು ಡಾ.ಬಿ.ಎಂ.ದುಷ್ಯಂತ್ ಕುಮಾರ್ ಹೇಳುತ್ತಾರೆ.

ಭಾರತೀಯ ಭತ್ತ ತಳಿ ಸಂಶೋಧನಾ ಸಂಸ್ಥೆ ನಡೆಸಿದ ಇಳುವರಿ ಪರೀಕ್ಷೆಯಲ್ಲಿ ‘ಸಹ್ಯಾದ್ರಿ ಕೆಂಪು ಮುಕ್ತಿ’ ತಳಿ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನ ಪಡೆದಿದೆ. 69 ವಿವಿಧ ತಳಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಕೇಂದ್ರೀಯ ತಳಿ ಬಿಡುಗಡೆ ಸಮಿತಿ (ಸಿವಿಆರ್‌ಸಿ) ಕೂಡ ರಾಜ್ಯದ ತಳಿಗೆ ಬೆಳೆಯಲು ಶಿಫಾರಸು ಮಾಡಿ ಅಧಿಸೂಚನೆ ಹೊರಡಿಸಿದೆ.

‘ಇದು ಜ್ಯೋತಿ ಭತ್ತಕ್ಕೆ ಪರ್ಯಾಯ. ಬೆಂಕಿ ರೋಗಕ್ಕೆ ಬಹಳಷ್ಟು ಪ್ರತಿರೋಧ ಗುಣಹೊಂದಿದೆ. 2021–22ರಲ್ಲಿ ರಾಜ್ಯದಲ್ಲಿ 5,000 ಎಕರೆಯಲ್ಲಿ ‘ಸಹ್ಯಾದ್ರಿ ಕೆಂಪು ಮುಕ್ತಿ’ ತಳಿಯ ಭತ್ತ ಬೆಳೆಯಲಾಗಿದೆ. ಹೆಕ್ಟೇರ್‌ಗೆ 7,000ದಿಂದ 7,500 ಕೆ.ಜಿ ಹೆಚ್ಚು ಇಳುವರಿ ನೀಡಿದೆ. ಈ ತಳಿಯ ಭತ್ತದ ಸಸಿ 10 ದಿನ ನೀರಿನಲ್ಲಿದ್ದರೂ ತಾಳಿಕೆಯ ಶಕ್ತಿ ಹೊಂದಿದೆ’ ಎಂದು ದುಷ್ಯಂತ್‌ಕುಮಾರ್ ತಿಳಿಸಿದರು.

‘ಮೊದಲು 25 ಎಕರೆಯಲ್ಲಿ ಜ್ಯೋತಿ ತಳಿ ಭತ್ತ ಬೆಳೆಯುತ್ತಿದ್ದೆ. ತಜ್ಞರ ಸಲಹೆ ಮೇರೆಗೆ ಎರಡು ವರ್ಷದಿಂದ ಸಹ್ಯಾದ್ರಿ ಕೆಂಪು ಮುಕ್ತಿ ತಳಿ ಭತ್ತ ಬೆಳೆಯುತ್ತಿದ್ದೇನೆ. ಮೊದಲು ಎಕರೆಗೆ 40 ಕ್ವಿಂಟಲ್ ಇದ್ದ ಇಳುವರಿ ಈಗ 45 ಕ್ವಿಂಟಲ್‌ಗೆ ಹೆಚ್ಚಿದೆ.’ ಎಂದು ಭದ್ರಾವತಿ ತಾಲ್ಲೂಕಿನ ಭತ್ತದ ಬೆಳೆಗಾರ ಹೇಮಂತಕುಮಾರ್ ಹೇಳುತ್ತಾರೆ.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 20-11-1997

● ಆಂಧ್ರದಲ್ಲಿ ಭೀಕರ ಬಾಂಬ್ ಸ್ಫೋಟ: 26 ಬಲಿ

ಹೈದರಾಬಾದ್, ನವೆಂಬರ್ 19– ನಗರದ ಹೊರ ವಲಯದ ಜ್ಯುಬಿಲಿ ಹಿಲ್ಸ್‌ನ ಸಿನಿಮಾ ಸ್ಟುಡಿಯೊ ಬಳಿ ಇಂದು ಮಧ್ಯಾಹ್ನ ಸಂಭವಿಸಿದ ಶಕ್ತಿಯುತ ಬಾಂಬ್ ಸ್ಫೋಟದಲ್ಲಿ 26 ಮಂದಿ ಮೃತಪಟ್ಟಿದ್ದಾರೆ.

ತೆಲುಗು ದೇಶಂ ಪಕ್ಷದ ನಾಯಕ ಹಾಗೂ ರಾಜ್ಯಸಭಾ ಸದಸ್ಯ ಮೋಹನ್ ಬಾಬು ಹಾಗೂ ಟಿಡಿಪಿ ಶಾಸಕ ಪೆರಿಟಾಲ ರವಿ ಸಹಿತ 35 ಮಂದಿ ಈ ಘಟನೆಯಲ್ಲಿ ಗಾಯಗೊಂಡಿದ್ದಾರೆ.

50 ವರ್ಷಗಳ ಹಿಂದೆ — ಸೋಮವಾರ, 20-11-1972

● ಇನ್ನೊಂದು ವಾರದಲ್ಲಿ ಕಲ್ಬುರ್ಗಿ ಜಿಲ್ಲೆಗೆ 1015 ಲಾರಿ ಮೇವು

ಬೆಂಗಳೂರು, ನವೆಂಬರ್ 19– ಇನ್ನೊಂದು ವಾರದಲ್ಲಿ 1015 ಲಾರಿ ಭರ್ತಿಯಷ್ಟು ಮೇವು ಕಲ್ಬುರ್ಗಿ ಜಿಲ್ಲೆಯನ್ನು ತಲುಪಲಿದೆ.

ಬಳ್ಳಾರಿಯಲ್ಲಿ 400, ರಾಯಚೂರಿನಲ್ಲಿ 400 ಹಾಗೂ ಚಿತ್ರದುರ್ಗದಲ್ಲಿ 215 ಲಾರಿ ಭರ್ತಿಯಷ್ಟು ಮೇವು ಸಂಗ್ರಹಿಸಲಾಗಿದೆಯೆಂದು ಲೋಕೋಪಯೋಗಿ ಸಚಿವ ಎಚ್.ಎಂ. ಚೆನ್ನಬಸಪ್ಪ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ನವೆಂಬರ್ 20, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಏಕಾದಶಿ ಗಂ. 10-42 ನಕ್ಷತ್ರ: ಹಸ್ತ ಗಂ. 24-36 ಯೋಗ: ಪ್ರೀತಿ ಗಂ. 23-06, ಕರಣ: ಬಾಲವ ಗಂ. 10-42, ವೃಶ್ಚಿಕ ಮಾಸದ 03 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-35 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 24 ರಬಿಯುಸ್ಸಾನಿ ದಿನ ವಿಶೇಷ : ಅಮೃತ ಸಿದ್ಧಿ ಯೋಗ, ಪ್ರೊ. ರಾಮ್ ಪಂಜ್ವಾನಿ ಜನ್ಮದಿನ (ಸಿಂಧಿ) ಅದೃಷ್ಟ ಸಂಖ್ಯೆ : 6, 8

ಮೇಷ: ನೀವು ನಿರೀಕ್ಷಿಸಿದ ಉದ್ಯಮದಲ್ಲಿ ಅಲ್ಲದೆ ಬೇರೆ ಕಡೆ ನಿಮಗೆ ಅವಕಾಶ ದೊರೆಯಲಿದೆ. ಈ ದಿನ ಯಾವುದೇ ತರದಲ್ಲಿ ಹಣದ ತೊಂದರೆ ನಿಮಗೆ ಕಾಣಿಸದು. ಮಕ್ಕಳ ಯೋಗಕ್ಷೇಮ ನೋಡುವುದನ್ನು ಮರೆಯಬೇಡಿ.

ವೃಷಭ: ನಿಮ್ಮ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಿರಿಯರ ಮತ್ತು ಮಡದಿಯಲ್ಲಿದ್ದ ನಕಾರಾತ್ಮಕ ಪ್ರತಿಕ್ರಿಯೆ ಬದಲಾಗಿ ನಿಮ್ಮ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಜೀವನದಲ್ಲಿ ಹೊಸ ಬೆಳವಣಿಗೆ ಕಂಡುಬರಲಿದೆ.

ಮಿಥುನ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಲಿದೆ. ನಿಮ್ಮ ಮೇಲಿದ್ದ ಸಾಲದ ಹೊರೆ ಕಡಿಮೆಯಾಗಲಿದೆ.

ಕರ್ಕಾಟಕ: ವಂಶ ಪಾರಂಪರ್ಯದಿಂದ ಬಂದ ನಿಮ್ಮ ವ್ಯಾಪಾರ ವ್ಯವಹಾರಗಳು ಈ ದಿನ ಮತ್ತಷ್ಟು ಏಳಿಗೆಯನ್ನು ಕಾಣಲಿದೆ. ನಿಮ್ಮ ವ್ಯಾವಹಾರಿಕ ಸಲಹೆಗಳಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ. ಪತ್ನಿಯ ಆರೋಗ್ಯ ಸುಧಾರಿಸುವುದು.

ಸಿಂಹ: ನಿಮ್ಮ ಒಡಹುಟ್ಟಿದವರ ಸಹಾಯ ಸಹಕಾರದಿಂದ ಮಾನಸಿಕ ನೆಮ್ಮದಿ ಹಾಗೂ ಸಂಸಾರದಲ್ಲಿ ಸಮತೋಲನ ಪಡೆಯುವಿರಿ. ಔದ್ಯೋಗಿಕ ವ್ಯವಹಾರದಲ್ಲಿ ನಿರೀಕ್ಷೆಗೆ ತಕ್ಕ ಫಲಗಳು ಪಡೆದುಕೊಳ್ಳುವುದು ಕಷ್ಟವಾಗಬಹುದು.

ಕನ್ಯಾ: ಈ ದಿನದ ಕೆಲಸ ಪ್ರಾರಂಭಕ್ಕೆ ಆತ್ಮಸ್ಥೈರ್ಯ ಬಹಳ ಮುಖ್ಯ. ಯಾವುದೇ ತರದ ಒತ್ತಡಕ್ಕೆ ಮಣಿಯದೆ ಮುನ್ನುಗ್ಗಿ. ಎಲ್ಲವೂ ಜಯ ತರಲಿದೆ. ಸಜ್ಜನರ ಒಡನಾಟದಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ.

ತುಲಾ: ಒಡಹುಟ್ಟಿದವರ ಸಹಾಯದಿಂದ ನಿಮ್ಮ ಹಿಂದಿನ ಹಣಕಾಸಿನ ತೊಂದರೆಗಳು ದೂರಾಗಿ ಹೊಸ ಯೋಜನೆಗೆ ಚಾಲನೆ ನೀಡಬಹುದು. ಮುಂದಿನ ದಿನಗಳಲ್ಲಿ ಯಾವುದೇ ತಪ್ಪುಗಳಾಗದಂತೆ ಜಾಗ್ರತೆವಹಿಸಿ.

ವೃಶ್ಚಿಕ: ವಿನಾಕಾರಣ ಅಲೆದಾಟದಿಂದ ಬೇಸರ ಪಡುವ ಅವಶ್ಯಕತೆ ಇಲ್ಲ, ಇಂದಿನ ನಿಮ್ಮ ಶ್ರಮ ಮುಂದಿನ ದಿನಕ್ಕೆ ಒಂದು ಅಡಿಪಾಯವಾಗಲಿದೆ. ಧಾರ್ಮಿಕ ನಾಯಕರಿಗೆ ಅನಿವಾರ್ಯದ ಕೆಲಸ ಕಾರ್ಯಗಳು ಎದುರಾಗಲಿದೆ.

ಧನು: ಹಿರಿಯ ಮಗನ ಸಹಾಯದಿಂದ ಗಣ್ಯರ ಪರಿಚಯ, ಸಹಾಯ ದೊರೆತು ನಿಮ್ಮ ಹೊಸ ಯೋಜನೆಗಳಿಗೆ ಅನುಕೂಲವಾಗಲಿದೆ. ತಂದೆ ತಾಯಿಯ ಆರೋಗ್ಯ ಸುಧಾರಿಸುವುದು. ಮನೆಯಲ್ಲಿ ನೆಮ್ಮದಿಯ ವಾತಾವರಣ.

ಮಕರ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಥವಾ ಅವರ ಆಸೆ ಆಕಾಂಕ್ಷೆಯನ್ನು ಈಡೇರಿಸುವ ಸಲುವಾಗಿ ಹೆಚ್ಚಿನ ಹಣ ವ್ಯಯವಾಗಲಿದೆ. ಬಹು ನಿರೀಕ್ಷಿತವಾದ ಫಲಿತಾಂಶ, ಯಶಸ್ಸು ಹಾಗೂ ಹೆಸರು ಈ ದಿನ ಒಲಿದು ಬರುತ್ತದೆ.

ಕುಂಭ: ಸಂತೋಷ ಕೂಟಗಳಲ್ಲಿ ಭಾಗವಹಿಸುವಾಗ ನಿಮ್ಮ ಗೌರವವನ್ನು ನೀವೇ ಕಾಪಾಡಿಕೊಳ್ಳುವ ಮತ್ತು ಹೆಚ್ಚಿಸಿಕೊಳ್ಳುವ ಬಗ್ಗೆ ಹೆಚ್ಚಿನ ಗಮನವಿರಲಿ. ನಿಮ್ಮ ಅನ್ವೇಷಣಾ ಸ್ವಭಾವವು ನಿಮ್ಮ ಬದುಕಿನಲ್ಲಿ ಕೆಟ್ಟ ತಿರುವನ್ನು ತರಲಿದೆ.

ಮೀನ: ಈ ದಿನ ಯಾವುದಕ್ಕೂ ಆತುರ ಪಡಬೇಡಿ. ನಿಮ್ಮ ಭಾವನೆಗಳ ಜೊತೆಗೆ ನಿಮ್ಮ ಅಭಿಪ್ರಾಯವು ಬದಲಾಗುವ ಕಾಲ. ಹಾಗಾಗಿ ಯಾವುದೇ ವಿಷಯದಲ್ಲಿ ಆತುರ ಸರಿಯಲ್ಲ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ.

ಪದಬಂಧ 5144 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಿಟ್ಟಾಗಿದ್ದಾಗ ಪ್ರತ್ಯಕ್ಷನಾದ ಋಷಿ! (2)
2.ಅತಿಯಾದ ಬಯಕೆ (3)
5.ಕಣದಲ್ಲಿ ಸಿಕ್ಕಿರುವ ಅಂಕೆ (4)
7.ಸುಡುಗಾಡು ಇಲ್ಲಿದೆ (4)
9.ವಿರಾಜಮಾನನಾದ ದೊರೆ (2)
10.ಇವನು ತಿಳಿದವನು (2)
11.ನಡುವೆ ಮಂಜನಿದ್ದರೆ ಸೂಕ್ತವಾದುದು! (4)
14.ಮರದೊಳಗಿರುವ ದುಂಬಿ (4)
16.ಸ್ನೇಹಿತೆ ಇಲ್ಲಿ ತಿರುಗಿದ್ದಾಳಲ್ಲ! (3)
17.ಮಾತಿನ ಅಧಿದೇವತೆ (2)

ಮೇಲಿಂದ ಕೆಳಕ್ಕೆ
1.ಮುದದಿಂದ ಕುಳಿತಿರುವ ಅಜ್ಜ (3)
2.ತಾರುಣ್ಯವನ್ನು ಹೊಂದಿದವನು (3)
3.ತಕರಾರು ಮಾಡಿದವನ ಷರತ್ತು (3)
4.ನಕ್ಷೆಯಿಲ್ಲಿ ಉಲ್ಟಾಪಲ್ಟಾ ಆಗಿದೆ (3)
6.ಉಲ್ಟಾ ಹಿಡಿದಿರುವ ವಂದರಿ (3)
8.ಬಂಗಾರವನ್ನು ಹೀಗೂ ಹೇಳುವರು (3)
9.ರಾಯರಿಂದ ಬಂದಿರುವ ನಿರೂಪ (3)
10.ನೆನಪು ಹೀಗೆ ಬಂದಿದೆ (3)
12.ಮಂಟಪದ ಹತ್ತಿರ ಆವರಿಸಿದ ತೂಕಡಿಕೆ (3)
13.ವಸತಿ ಹತ್ತಿರ ಉಪಪತ್ನಿ ಬಂದಿದ್ದಾಳೆ (3)
14.ಮೆಲ್ಲಗೆ ಕಿತ್ತು ಮುಡಿದ ಸುವಾಸಿತ ಹೂ (3)
15.ಮಣಿ ಧರಿಸಿದ ಚಲುವೆ (3)



5143ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 4.ಲವಾಜಮೆ
6.ವಿಚಾರ 7.ಕಪಸ್ಥಾ
8.ದಳ್ಳುರಿ 10.ನಗದು
12.ಯಾಚಕ 13.ಒಲುಮೆ
14.ನಹೀತಿಮ 16.ತ್ತುಸರಪು

ಮೇಲಿಂದ ಕೆಳಕ್ಕೆ:
1.ಚತುರ 2.ತಿಲ
3.ವಿಮೆ 5.ವಾಸಸ್ಥಾನ
6.ವಿಷಾದ 7.ಕನಕ
9.ರಿಯಾಯಿತಿ 11.ದುಡಿಮೆ
13.ಒನಪು 14.ನಗ್ನ
15.ಮತ್ತು

ಸುಡೊಕು 5530

2		4	1	5			8	
				8		5		9
8		3			9		1	
3		9	5		1			
	6			9				
5		1	6		8			
	7			3	5	2		4
4		5						
	8			6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5529 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿ.ಎಲ್. ಸಂತೋಷ್ ಬಂಧನಕ್ಕೆ ತೆಲಂಗಾಣ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಭಾರತ್ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಶಾಸಕರನ್ನು ಖರೀದಿಸಲು ಪ್ರಯತ್ನಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಅವರನ್ನು ಬಂಧಿಸಲು ಮುಂದಾಗಿದ್ದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಕ್ರಮಕ್ಕೆ ತೆಲಂಗಾಣ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಮುಂದಿನ ಆದೇಶದವರೆಗೂ ಸಂತೋಷ್ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಹೈಕೋರ್ಟ್ ಶನಿವಾರ ಹೇಳಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ, ಹೈದರಾಬಾದ್‌ನಲ್ಲಿ ಸೋಮವಾರ (ನ.21) ವಿಚಾರಣೆಗೆ ಹಾಜರಾಗುವಂತೆ ಸಂತೋಷ್ ಅವರ ಬೆಂಗಳೂರಿನ ಮಲ್ಲೇಶ್ವರ ನಿವಾಸಕ್ಕೆ ಇದೇ 16ರಂದು ನೋಟಿಸ್ ರವಾನಿಸಿತ್ತು.

'ಪ್ರಸ್ತುತ ತನಿಖೆಗೆ ಸಂಬಂಧಿಸಿದಂತೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಬೇಕಿದೆ. ನಿಮ್ಮಿಂದ ಕೆಲ ಮಾಹಿತಿಗಳನ್ನು ಪಡೆದುಕೊಳ್ಳಬೇಕಿದೆ. ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ಸಾಕ್ಷ್ಯ ನಾಶಕ್ಕೆ ಮುಂದಾಗಬಾರದು. ಒಂದೊಮ್ಮೆ ಎಸ್‌ಐಟಿ ಎದುರು ತನಿಖೆಗೆ ಹಾಜರಾಗಲು ವಿಫಲರಾದರೆ ನಿಮ್ಮನ್ನು ಬಂಧಿಸಲಾಗುತ್ತದೆ' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿತ್ತು.

ಎಸ್‌ಐಟಿಯ ಈ ಕ್ರಮವನ್ನು ಬಿಜೆಪಿ ತೆಲಂಗಾಣ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೇಮೇಂದರ್ ರೆಡ್ಡಿ ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅವರ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, ಸಂತೋಷ್ ಅವರ ಬಂಧನಕ್ಕೆ ಮಧ್ಯಂತರ ತಡೆ ನೀಡಿದೆ.

ಎಸ್‌ಐಟಿ ಮನವಿಯನ್ನು ಪುರಸ್ಕರಿಸಿದ ನ್ಯಾಯಾಲಯ, ಸಂತೋಷ್ ಅವರಿಗೆ ನೋಟಿಸ್ ನೀಡಿರುವ ವಿಚಾರದಲ್ಲಿ ಎಸ್‌ಐಟಿಗೆ ಎಲ್ಲಾ ರೀತಿಯ ಸಹಕಾರ ನೀಡುವಂತೆ ದೆಹಲಿ ಪೊಲೀಸರಿಗೆ ನಿರ್ದೇಶನ ನೀಡಿದೆ. ಅರ್ಜಿಯ ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿದೆ.

ಬಿಜೆಪಿ ಏಜೆಂಟರು ಎನ್ನಲಾಗಿರುವ ದೆಹಲಿಯ ಮೂವರು ವ್ಯಕ್ತಿಗಳು ಹಾಗೂ ಬಿಆರ್‌ಎಸ್ ಶಾಸಕರ ನಡುವಣ ವಿಡಿಯೊ ಸಂವಾದದಲ್ಲಿ ಸಂತೋಷ್ ಅವರ ಹೆಸರು ಹಲವು ಬಾರಿ ಉಲ್ಲೇಖವಾಗಿತ್ತು. ಈ ವಿಡಿಯೊವನ್ನು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರು ಇದೇ 3ರಂದು ಬಿಡುಗಡೆ ಮಾಡಿದ್ದರು.

ಗೃಹಬಂಧನದಲ್ಲಿ ನವಲಖಾ

ಮುಂಬೈ: ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರನ್ನು ನವಿ ಮುಂಬೈನ ತಲೋಜಾ ಜೈಲಿನಿಂದ ಶನಿವಾರ ಸಂಜೆ ಬಿಡುಗಡೆಗೊಳಿಸಿದ್ದು, ಅವರು ಒಂದು ತಿಂಗಳ ಕಾಲ ಗೃಹಬಂಧನದಲ್ಲಿ ಇರಲಿದ್ದಾರೆ.

ಜೈಲಿನಿಂದ ಬಿಡುಗಡೆಯಾದ ತಕ್ಷಣ ಅವರನ್ನು ಪೊಲೀಸರು ಬೆಲಾಪುರದಲ್ಲಿರುವ ಕಮ್ಯುನಿಸ್ಟ್ ಪಕ್ಷದ ಕಚೇರಿಗೆ ಕರೆದೊಯ್ದಿದ್ದಾರೆ. ಆ ಕಟ್ಟಡದ ಮೊದಲ ಮಹಡಿಯಲ್ಲಿರುವ ಗ್ರಂಥಾಲಯದಲ್ಲಿ ಅವರು ತಂಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನವಲಖಾ ಅವರ ಗೃಹಬಂಧನ ಪ್ರಶ್ನಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿತ್ತು. ಅವರನ್ನು 24 ಗಂಟೆಯೊಳಗೆ ಗೃಹಬಂಧನಕ್ಕೆ ಕಳುಹಿಸಬೇಕು ಎಂದೂ ಆದೇಶಿಸಿತ್ತು.

ನವಲಖಾ ಅವರು 2020ರ ಏಪ್ರಿಲ್‌ನಿಂದಲೂ ತಲೋಜಾ ಜೈಲಿನಲ್ಲಿದ್ದರು. ಅನಾರೋಗ್ಯದ ಕಾರಣ ತಮ್ಮನ್ನು ಗೃಹಬಂಧನಕ್ಕೆ ವರ್ಗಾಯಿಸಬೇಕು ಎಂದು ಕೋರಿ 70 ವರ್ಷದ ನವಲಖಾ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಗೌತಮ್ ನವಲಖಾ ಅವರನ್ನು ಒಂದು ತಿಂಗಳ ಗೃಹಬಂಧನಕ್ಕೆ ಕಳುಹಿಸಬೇಕೆಂದು ನವೆಂಬರ್ 10ರಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು.

KARNATAKA GOVERNMENT SECRETARIAT
Additional Chief Secretary to Government
Finance Department
Vidhana Soudha, Bengaluru-560001.

No.: FD/05/BMB/2022 Date: 17-11-2022

KARNATAKA GOVT. STOCK (SECURITIES)

1. **Aggregate Amount: Total Rs.8000 crore [(Rs.4000 crore (15 Year Tenure) and Rs.4000 crore (20 Year Tenure)]**
2. **Method of Issue : By Auction, through PDO, RBI, Mumbai (Fort)**
3. **Date of Auction : November 22, 2022**

Government of Karnataka invites subscription to the above securities. Copies of the Notification and Application forms may be obtained from PDO, RBI, Bangalore. Non-competitive bidding facility has been introduced by RBI to encourage participation of retail investors. The Government stock upto 10% of the notified amount of the sale will be allotted to eligible individuals and institutions. Sample Tender Forms and the revised scheme of Non-competitive bidding facility is available on the website **www.rbi.org.in**

Sd/- (Dr. Ekroop Caur), Secretary to Government, (Budget & Resources) Finance Department

DIPR/CP/RO3124/AAPL/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:ಸಇಂ–1:2022–23
ದಿನಾಂಕ:17/11/2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2022–23

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರಿಗಿಟ್ಟ ಮೊತ್ತ **ರೂ.55.00 ಲಕ್ಷದಿಂದ ರೂ.400.00 ಲಕ್ಷದವರೆಗಿನ 8 ಕಾಮಗಾರಿಗಳಿಗೆ** ದ್ವಿಲಕೋಟೆ ಪದ್ಧತಿ ಪ್ರಕಾರ ಹಾಗೂ **ರೂ. 30.00 ಲಕ್ಷದಿಂದ ರೂ. 50.00 ಲಕ್ಷದವರೆಗಿನ 6 ಕಾಮಗಾರಿಗಳಿಗೆ** ಏಕಲಕೋಟೆ ಪದ್ಧತಿ ಪ್ರಕಾರ ಒಟ್ಟು **14 ಕಾಮಗಾರಿಗಳಿಗೆ** ಐಟಂವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **eprocurement portal, https://eproc.karnataka.gov.in;** ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್ **(e-procurement portal: https://eproc.karnataka.gov.in),** ಪೋರ್ಟಲ್‌ನಲ್ಲಿ **ದಿನಾಂಕ:25.11.2022ರಿಂದ** ಪಡೆಯುಬಹುದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ **ದಿನಾಂಕ:05.12.2022ರ ಸಂಜೆ 4.00 ಗಂಟೆವರೆಗೆ.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಎಂಸಿಎ/471/2022–23

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ.–572132,
ದೂ ಸಂಖ್ಯೆ: 08137–282112 Email:eeyetmadhugiri4@gmail.com
ಕ್ರ.ಸಂ:ಕಾಇಂ:ವಿಜನಿನಿ/ಎಹೊಯೋ/ಮ/ವಿ.04/ಟೆ.ಅ–10/2022–23/
ದಿನಾಂಕ: 18.11.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಎತ್ತಿನಹೊಳೆ ಯೋಜನೆಯಡಿ 1) Survey, Investigation, Design, Supply, Installation Testing and Commissioning of MS Gravity pipe from Boundary of Doddaballapura and Devanahalli Taluk upto offtake point of Devanahalli Feeder in Devanahalli Taluk, Bengaluru Rural district and its appurtenances structures under Yettinahole Project on Turnkey basis(Kolar Package-III.)." ಮತ್ತು 2) Survey, Investigation, Design, Supply, Installation Testing and Commissioning of MS Gravity pipe from offtake point of Devanahalli Feeder to DC-6 near Bullenahalli village in Devanahalli Taluk, Bengaluru Rural district and its appurtenances structures under Yettinahole Project on Turnkey basis(Kolar Package-IV)", ರೂ: **394.55** ಕೋಟಿ (ಜಿ.ಎಸ್.ಟಿ ಹೊರತುಪಡಿಸಿ) ಮತ್ತು ರೂ: **161.71** ಕೋಟಿ (ಜಿ.ಎಸ್.ಟಿ ಹೊರತುಪಡಿಸಿ) ಕ್ರಮಾನುಸಾರ ಕೈಗೆತ್ತಿಕೊಂಡಿರುವ ಕಾಮಗಾರಿಯನ್ನು **ಎರಡು ಟೆಂಡರ್ ದಾಖಲೆಗಳ ವ್ಯವಸ್ಥೆಯಲ್ಲಿ** ಅರ್ಹ ಗುತ್ತಿಗೆದಾರರುಗಳಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ವೆಬ್ ಸೈಟ್ ಮೂಲಕ ದಿನಾಂಕ: **22.11.2022** ರಿಂದ ದಿನಾಂಕ: **07.12.2022 ರ ಸಂಜೆ 05.30** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಗುತ್ತಿಗೆದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಮತ್ತು ಪ್ರೀ–ಬಿಡ್ ಸಭೆಯನ್ನು ದಿನಾಂಕ **01.12.2022** ರಂದು ಬೆಳಗ್ಗೆ 11.00 ಗಂಟೆಗೆ ಮುಖ್ಯ ಇಂಜಿನಿಯರ್, ವಿ.ಜ.ನಿ.ನಿ ತುಮಕೂರು ಇವರ ಕಚೇರಿಯಲ್ಲಿ ಆಯೋಜಿಸಲಾಗಿರುತ್ತದೆ.ಹಾಗೂ ಸ್ವೀಕೃತ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ: **09.12.2022** ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ಮಧುಗಿರಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ
ನಂ. ಕಾ.ನಿ.ಅ/ಗ್ರಾ.ಕು.ನೀ.&ನೈ/ಬೆಳಗಾವಿ/ಪಿಬಿ–2–3/ಕು.ನೀ.ಸ.ಯೋ/ಟೆಂಡರ್–51/2022–23/2576 ದಿನಾಂಕ: 18–11–2022

ಹೊಸ ಹಾಗೂ ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 51/2022–23 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ : 1) ನಂ. ಕಾ.ನಿಅ./ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–2,4/ಕು.ನೀ.ಸಯೋ/ಕೆಡಬ್ಲ್ಯು–4/ಟೆಂಡರ್–34/2022–23/1518 ದಿ: 22–07–2022 2) ನಂ.ಕಾ.ನಿಅ./ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–2,3,4/ಕು.ನೀ.ಸ.ಯೋ/ಕೆಡಬ್ಲ್ಯು–2&3/ಟೆಂಡರ್–46/2022–23/2351

ಮೇಲಿನ ಉಲ್ಲೇಖ (1) & (2) ರಡಿ ಈ ಕಚೇರಿಯ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ್ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

I 1) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ **05–12–2022 ಸಾಯಂಕಾಲ 17:30 ಗಂಟೆವರೆಗೆ 2)** ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 07–12–2022 ಸಾಯಂಕಾಲ 11:00 ಗಂಟೆ ನಂತರ 3)** ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದಿಸಿದ ನಂತರ
ಇಂಡೆಂಟ್ ನಂ.

ಅನುಸೂಚಿತ ಜಾತಿಗೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು	:	36254
ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು	:	40191/Call-3

II 1) ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ ಬೆಳಗಾವಿ ಇವರ ಕಚೇರಿಯಲ್ಲಿ **ದಿನಾಂಕ: 25–11–2022 ರಂದು ಬೆಳಿಗ್ಗೆ 11:30 ಗಂಟೆಗೆ** ಇಂಡೆಂಟ್ ನಂ. 36645, 48040, 47801, 34896, 47637, 34821, 36510/Call-5, 36669/Call-4 1 ಕೋಟಿ ಮೇಲಿನ ಕಾಮಗಾರಿಗಳು ಮಾತ್ರ)

ಸೂಚನೆ : ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-procurement portal, www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ. ವಿಭಾಗ, ಬೆಳಗಾವಿ

DIPO/RO No. 1223/2022-23

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ
ನಂ.ಕಾಇಂ/ಪಂರಾಇಂ/ವಿಸಾ/ಸೊರಬ/ಶಿಕಾರಿಪುರ/ಸಾಗರ/ಹೊಸನಗರ/KW-1&2/ಎಇ/ಜೆಇ/2022–23/1488 ದಿನಾಂಕ:– 17–11–2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಈ ವಿಭಾಗದಿಂದ 2022–23 ನೇ ಸಾಲಿನ ರಾಜ್ಯವಲಯ ಮುಂದುವರೆದ ಯೋಜನೆ ಮತ್ತು 2403 ಪಶು ಸಂಗೋಪನೆ ಇಲಾಖೆ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಐಟಂ ವಾರು ದರಗಳನ್ನು ನಮೂದಿಸಲು ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್/ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Document for procurement of work K/W-1&2 ರ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿ.ಯನ್ನು 'ಇ' ಪೇಮೆಂಟ್‌ನಲ್ಲಿ Credit Card/ Direct Debit/NEFT & OTC) ಚಲನ್ ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ ಎರಡು ದಿನ ಮುಂಚಿತವಾಗಿ ಸಲ್ಲಿಸುವುದು. **1)** ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ:17–11–2022 ರಿಂದ 25–11–2022 ರವರೆಗೆ **2)** ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ:25–11–2022 ಸಮಯ 16:30:00 **3)** ಬಿಡ್ ತೆರೆಯುವ ದಿನಾಂಕ: 28–11–2022 ಸಮಯ 10:00:00

ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ (www.eproc.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183–226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ hphelpdesk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್ ಪಂ.ರಾ.ಇಂ.ವಿಭಾಗ, ಸಾಗರ.

ವಾ.ಸಾ.ಸಂ.ಇ/ಎಂಸಿಎ/ಶಿ/115/11/22–23/1284

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮಂಡ್ಯ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಟಿ.ಬಿ.ಸರ್ಕಲ್,
ಮಳವಳ್ಳಿ ರಸ್ತೆ, ಮದ್ದೂರು. ದೂ:08232–233814
ಟೆಂಡರ್ ಸಂಖ್ಯೆ:ಶಿಂಅಯೋ/ಮ/ಇ–ಟೆಂ/2022–23/419
ದಿನಾಂಕ: 17–11–2022
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಅಂಗನವಾಡಿ ಕೇಂದ್ರಗಳಿಗೆ ಕೋಳಿಮೊಟ್ಟೆ ಪೂರೈಕೆಗೆ ಟೆಂಡರ್ ದಸ್ತಾವೇಜು

ಟೆಂಡರ್ ವೇಳಾಪಟ್ಟಿ

(1) ಟೆಂಡರ್ ಉಲ್ಲೇಖ ಸಂಖ್ಯೆ : ಶಿಅಯೋ/ಮ/ಮೊಟ್ಟೆ.ಟೆಂಡರ್.R-1/2022 ದಿನಾಂಕ: **17-11-2022DWCD/2022-23/IND1840/CALL-2** (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://eproc.karnataka.gov.in** ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : ಪ್ರಾರಂಭ ದಿನಾಂಕ: **17–11–2022.** (3) ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ : **24.11.2022 ಬೆಳಗ್ಗೆ 11:00 ಗಂಟೆಗೆ** ಈ ಕೆಳಗಿನ ಸ್ಥಳದಲ್ಲಿ : **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ. ಮದ್ದೂರು ತಾಲ್ಲೂಕು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಟಿ.ಬಿ.ಸರ್ಕಲ್, ಮಳವಳ್ಳಿ ರಸ್ತೆ, ಮದ್ದೂರು ತಾಲ್ಲೂಕು–571428 ದೂರವಾಣಿ ಸಂಖ್ಯೆ: 08232 – 200814.** (4) ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **28.11.2022 ರಿಂದ 05:00 PM.** (5) ಇ–ಟೆಂಡರ್ ಅನ್ನು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ **: 02.12.2022 ರಿಂದ 5:00 PM ರವರೆಗೆ.** (6) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : 05.**12.2022, 11:00 AM ಅನಂತರ** (7) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** (8) ಟೆಂಡರ್‌ಗಳನ್ನು ತೆರೆಯುವ ಸ್ಥಳ : **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್** (9) ಸಂವಹನಕ್ಕಾಗಿ ವಿಳಾಸ : **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮದ್ದೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಟಿ.ಬಿ.ಸರ್ಕಲ್, ಮಳವಳ್ಳಿ ರಸ್ತೆ,ಮದ್ದೂರು ತಾಲ್ಲೂಕು–571428 ದೂರವಾಣಿ ಸಂಖ್ಯೆ: 08232 – 200814**
ಇಮೇಲ್: **cdpo_maddur@yahoo.com**

ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮದ್ದೂರು, ಮಂಡ್ಯ ಜಿಲ್ಲೆ.

ವಾಸಾಸಂಇ/ಸನಿ–ಮಂ/ಎಂಸಿ&ಎ/464/2022–23

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2ರವರ ಕಚೇರಿ, (ಬೆಂ.ಘ.ತ್ಯಾ.ನಿ.ನಿ)
2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ,
ಬೆಂಗಳೂರು – 560 052.
ಸಂಖ್ಯೆ:ಉಪ್ರವ್ಯ–2(ಬೆಂ.ಘ.ತ್ಯಾ.ನಿ.ನಿ)/ತಿದ್ದುಪಡಿ–08/2022–23 ದಿನಾಂಕ: 19.11.2022

ತಿದ್ದುಪಡಿ–2

ವಿಷಯ: ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯ ವಿಸ್ತರಣೆ
ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂ: ಕಾಪಾಅ/ಬೆಂ.ಘ.ತ್ಯಾ.ನಿ.ನಿ/ಟೆಂಡರ್/08/2022–23, ದಿನಾಂಕ: 02.11.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್ ಪ್ರಕಟಣೆಯ ಟೆಂಡರ್ ವೇಳಾಪಟ್ಟಿಯನ್ನು ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಾಂತರಗಳಿಂದ ವಿಸ್ತರಣೆ ಮಾಡಲಾಗಿದೆ. ಟೆಂಡರ್ ವೇಳಾಪಟ್ಟಿಯ ಬದಲಾವಣೆಗಳ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತಿಳಿಸಲಾಗುವುದು.
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂ.ಘ.ತ್ಯಾ.ನಿ.ನಿ

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ
ವಿಧಾನ ಸೌಧ, ಬೆಂಗಳೂರು 560 001.

ಸಂಖ್ಯೆ: ಆಇ 03 ಬಿಎಂಬಿ 2022 ದಿನಾಂಕ: 19.11.2022

ಪತ್ರಿಕಾ ಪ್ರಕಟಣೆ

1. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2012, ದಿನಾಂಕ: 14ನೇ ಡಿಸೆಂಬರ್, 2012 ನಿಬಂಧನೆಯ ಮೇರೆಗೆ ಹೊರಡಿಸಲಾದ 8.9% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2022, (Karnataka SDL 2022) ದಿನಾಂಕ: 18ನೇ ಡಿಸೆಂಬರ್ 2022 ದಿನಾಂಕವೂ ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 19ನೇ ಡಿಸೆಂಬರ್ 2022 ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೊಷಿಯೇಬಲ್ ಇನಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಚೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **19ನೇ ಡಿಸೆಂಬರ್ 2022ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007 ರ ಉಪ ನಿಬಂಧನೆ 24(2) ಮತ್ತು 24(3) ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 8.9% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2022, **(Karnataka SDL 2022)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ".

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/–
(ಡಾ.ಏಕ್‌ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ವಾ.ಸಾ.ಸಂ.ಇ/ವಾಪ್ರ/3166/ಆಕಾರ್/22–23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು–560 001
ಫೋನ್: 080–2558 6520/2558 9112 ಫ್ಯಾಕ್ಸ್: 080–2588 6321
e-mail: ho@kspcb.gov.in | Website: kspcb.karnataka.gov.in
ಸಂಖ್ಯೆ: ಮಾನಿಮಂ/181/ಹಿಪಅ/ಗಣಿ/ಪಸಾಸ/2022–23/5615 ದಿನಾಂಕ: 19.11.2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ. ವಿಕಾಸ ಎಂ. ಖಟವಟೆ ಇವರು ಸರ್ವೆ.ನಂ. 876/1, ಅಮ್ಮಿನಭಾವಿ ಗ್ರಾಮ, ಧಾರವಾಡ ತಾಲ್ಲೂಕು & ಜಿಲ್ಲೆಯಲ್ಲಿ ಒಟ್ಟು 02.05 ಎಕರೆ ಪ್ರದೇಶದಲ್ಲಿ ವಾರ್ಷಿಕ 1,00,000 ಟನ್‌ಗಳಷ್ಟು ಕಟ್ಟಡಕಲ್ಲು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ(ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ : SEIAA 111 MIN 2021 ದಿನಾಂಕ: 07.08.2021 ಮತ್ತು ಉದ್ದಿಮೆಯವರು ನೀಡಿದ ಮನವಿ ಪತ್ರದ ದಿನಾಂಕ 01.04.2022 ಪ್ರಕಾರ ಹಾಗೂ ಪ್ರಾದೇಶಿಕ ಅಧಿಕಾರಿ, ಧಾರವಾಡ, ಇವರ ಪತ್ರ ದಿನಾಂಕ: 28.10.2022 ದಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ

1	**ಮಾಲೀಕರ ಹೆಸರು ಮತ್ತು ವಿಳಾಸ:** ಶ್ರೀ. ವಿಕಾಸ ಎಂ. ಖಟವಟೆ, S/o ಮೋಹನ್, ಕೆನರಾ ಹೋಟಲ್ ಹಿಂದೆ, ಹೊಸೂರು, ವಿದ್ಯಾನಗರ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ– 580021.
2	**ಉದ್ದೇಶಿತ ಯೋಜನೆಯ ಸ್ಥಳ:** ಸರ್ವೆ.ನಂ. 876/1, ಅಮ್ಮಿನಭಾವಿ ಗ್ರಾಮ, ಧಾರವಾಡ ತಾಲ್ಲೂಕು & ಜಿಲ್ಲೆ, ಕರ್ನಾಟಕ.
3	**ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆ:** ವರ್ಷಕ್ಕೆ 1,00,000 ಟನ್‌ಗಳಷ್ಟು ಕಟ್ಟಡಕಲ್ಲು ಗಣಿಗಾರಿಕೆ.
4	**ಉದ್ದೇಶಿತ ಮಾಲಿನ್ಯ ನಿಯಂತ್ರಣ ಕ್ರಮಗಳು:** ಕಛೇರಿಯಿಂದ ಬರುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ಸೆಪ್ಟಿಕ್ ಟ್ಯಾಂಕ್ – ನೆನೆಸುವ ಹಳ್ಳದ ವ್ಯವಸ್ಥೆಗೆ ಬಿಡಲಾಗುತ್ತದೆ. ಮಳೆಗಾಲದಲ್ಲಿ ಗಣಿ ಹೊಂಡಗಳಲ್ಲಿ ಸಂಗ್ರಹವಾದ ಮಳೆನೀರನ್ನು ಧೂಳು ನಿಗ್ರಹಕ್ಕೆ ಮತ್ತು ತೋಟಗಾರಿಕೆಗೆ ಬಳಸಲಾಗುತ್ತದೆ. ಸಾಗಿಸುವ ಮತ್ತು ಪ್ರವೇಶ ರಸ್ತೆಗಳಲ್ಲಿ ನಿಯಮಿತವಾಗಿ ನೀರನ್ನು ಸಿಂಪಡಿಸಲಾಗುತ್ತದೆ. ಡೀಸಲ್ ಎಂಜಿನ್‌ಗಳಿಂದ ಹೊರಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ಗುತ್ತಿಗೆ ಪ್ರದೇಶದ ಗಡಿ ಉದ್ದಕ್ಕೂ ದಟ್ಟವಾದ ಹಸಿರು ಪಟ್ಟಿಯನ್ನು ಒದಗಿಸಲಾಗಿದೆ ಮತ್ತು ಇದು ಧೂಳಿನ ಕಣಗಳನ್ನು(Fugitive) ನಿರ್ಬಂಧಿಸಲು ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ.
5	**ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: 21.12.2022 (ಬುಧವಾರ) ರಂದು ಬೆಳಿಗ್ಗೆ 11:00 ಗಂಟೆ,** ಯೋಜನಾ ಸ್ಥಳ, ಸರ್ವೆ.ನಂ. 876/1, ಅಮ್ಮಿನಭಾವಿ ಗ್ರಾಮ, ಧಾರವಾಡ ತಾಲ್ಲೂಕು & ಜಿಲ್ಲೆ, ಕರ್ನಾಟಕ.
6	**ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಧಾರವಾಡಜಿಲ್ಲೆ, ಧಾರವಾಡ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಧಾರವಾಡ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ. (ಈ) ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಹುಬ್ಬಳ್ಳಿ (ಉ) ತಹಶೀಲ್ದಾರರ ಕಾರ್ಯಾಲಯ, ಹುಬ್ಬಳ್ಳಿ. (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಅಮ್ಮಿನಭಾವಿ. (ಋ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ. (ಎ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001. (ಏ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ಮತ್ತು ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ(ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **kspcb.karnataka.gov.in** ರಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ, ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ತುಮಕೂರು
Email: dhotumkur@gmail.com ph:22583897
ಸಂಖ್ಯೆ: ಜಿಸಕರು:ಎನ್‌ಸಿಡಿ/188/2022–23 ದಿನಾಂಕ: 16.11.2022

ತಿದ್ದುಪಡಿ ಪ್ರಕಟಣೆ

ವಿಷಯ: ಉಪ ಕೇಂದ್ರ–ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಅಧಿಕಾರಿಗಳ ನೇಮಕಾತಿಗಾಗಿ ಆಯ್ಕೆಗೆ ತಿದ್ದುಪಡಿ ಮಾರ್ಗಸೂಚಿಗಳು.
ಉಲ್ಲೇಖ: ಹೆಚ್‌ಎಫ್‌ಡಬ್ಲ್ಯೂ/ಎನ್‌ಹೆಚ್‌ಎಂ/ಸಿಪಿಎಚ್‌ಸಿ–ಯುಹೆಚ್‌ಸಿ/ಸಆಅ ನೇಮಕಾತಿ/20/2022–23 ದಿನಾಂಕ:15.11.2022

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ತುಮಕೂರು ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಮೂಲಕ 99 ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗಳಿಗೆ ಆನ್‌ಲೈನ್ ಮೂಲಕ ದಿನಾಂಕ **27.10.2022** ರಂದು ಅರ್ಜಿಗಳನ್ನು ಆಹ್ವಾನಿಸಿದ್ದು. ಅರ್ಜಿ ಸ್ವೀಕರಿಸಲು ನಿಗದಿಪಡಿಸಲಾಗಿದ್ದ ಕೊನೆಯ ದಿನಾಂಕ **08.11.2022** ಆಗಿರುತ್ತದೆ. ಸದರಿ ದಿನಾಂಕವನ್ನು **ಅಭ್ಯರ್ಥಿಗಳ ಕೋರಿಕೆ ಮೇರೆಗೆ ದಿನಾಂಕ 25.11.2022 ರವರಿಗೆ** ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ: **http://www.karnataka.gov.in/hfw** ಸಂಪರ್ಕಿಸಬಹುದು.
ಸೂಚನೆ: ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.

DIPR/TUM/697MCA/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
KARNATAKA NIRAVARI NIGAM LIMITED
(A Karnataka Government Enterprise)
Corporate Identity Number (CIN)-U85110KA1998SGCO24503
Fax & Phone No 08332-286223 Mail address:eeglbcknnldiv1@gmail.com
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ,ಘ.ಎ.ದಂ.ಕಾ. ವಿಭಾಗ–1, ಘಟಪ್ರಭಾ
ಫೋನ/ಫ್ಯಾಕ್ಸ ನಂ:08332–286223

ಇ–ಪ್ರೋಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ

1)ಸಂ: ಕನೀನಿನಿ/ಜಿಎಲ್‌ಬಿಸಿ–1/ಪಿಬಿ/2022–23/1524 ದಿನಾಂಕ : 18–11–2022 2)ಸಂ: ಕನೀನಿನಿ/ಜಿಎಲ್‌ಬಿಸಿ–1/ಪಿಬಿ/2022–23/1525 ದಿನಾಂಕ : 18–11–2022

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ 4ನೇ ದರ್ಜೆ ಕೆ.ಪಿ.ಡಬ್ಲ್ಯೂ.ಡಿ. ಮತ್ತು ಮೇಲ್ಪಟ್ಟು ಇಲಾಖೆಯ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರಗಳನ್ನು ಕರೆಯಲಾಗಿದೆ.

1. ಟೆಂಡರ ಕಾಮಗಾರಿಗಳಿಗೆ ಟೆಂಡರ ಶೆಡ್ಯೂಲ ಈ ಕೆಳಗಿನಂತೆ ಇರುತ್ತದೆ.

ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ಸಮಯ :29–11–2022 ರ ಸಾ:4.00 ಘಂಟೆಗೆವರೆಗೆ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಹಾಗೂ ಸಮಯ : 01–12–2022 ರ ಮು:11.00 ಘಂಟೆಗೆ. ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ : 01–12–2022 ರ 11.00 ಘಂಟೆಗೆ. ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ : ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ ಅನುಮೋದನೆ ಪಡೆದ ನಂತರ.

ಕಾರ್ಯನಿರ್ವಾಹಕ ಇಂಜಿನೀಯರು,ಕನೀನಿನಿ ಜಿಎಲ್‌ಬಿಸಿ ವಿಭಾಗ ನಂ.1 ಘಟಪ್ರಭಾ ಕಚೇರಿಯಲ್ಲಿ.

2) ಕಾಮಗಾರಿಗಳು : ಘಟಪ್ರಭಾ ಯೋಜನೆಯ ಘಟಪ್ರಭಾ ವಿಭಾಗ ನಂ: 1 ರಡಿಯಲ್ಲಿ ಬರುವ 03 ಕಾಮಗಾರಿಗಳು (ಲೆಕ್ಕ ಶೀರ್ಷಿಕೆ 4701)
3) ಅಂದಾಜು ಮೊತ್ತ : ರೂ. 39.99 ಲಕ್ಷಗಳಿಂದ 99.99 ಲಕ್ಷಗಳವರೆಗೆ
4) ಇ.ಎಂ.ಡಿ.ಮೊತ್ತ : ರೂ. 80.000.00 ರಿಂದ 2,00,000.00

ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು ಅಥವಾ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು,
ಕನೀನಿನಿ ಜಿಎಲ್‌ಬಿಸಿ ವಿಭಾಗ ನಂ.1 ಘಟಪ್ರಭಾ.

DIPR/BGM/RO-NO-1218/MCA/2022-23

ಭಾರತ ಸರ್ಕಾರ
ಮಿನಿಸ್ಟ್ರಿ ಆಫ್ ಫೈನಾನ್ಸ್
ಡಿಪಾರ್ಟ್ ಮೆಂಟ್ ಆಫ್ ಫೈನಾನ್‌ಶಿಯಲ್ ಸರ್ವೀಸಸ್' (ಬ್ಯಾಂಕಿಂಗ್ ವಿಭಾಗ)
ಸಾಲ ವಸೂಲಾತಿ ನ್ಯಾಯಾಧೀಕರಣ–2
ಜೀವನ್ ಮಂಗಳ ಬಿಲ್ಡಿಂಗ್, 2ನೇ ಮಹಡಿ, ನಂ. 4. ರೆಸಿಡೆನ್ಸಿ ರಸ್ತೆ,
ಬೆಂಗಳೂರು– 560025, 080–22244324: 080–22244325/326
सत्यमेव जयते

ಮಾರಾಟ ಘೋಷಣೆ
ಟಿಆರ್‌ಸಿ 01/2019, ಓಎ 996/1997

ನಿಯಮ 48 ರಿಂದ 52(2) ರ ಎರಡನೇ ಅನುಸೂಚಿಯ ಆದಾಯ ತೆರಿಗೆ ಕಾಯಿದೆ 1961ನ್ನು ಓದಿಕೊಂಡಂತೆ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ಸಾಲ ಹಾಗೂ ದಿವಾಳಿತನ ಕಾಯಿದ 1993ರ ಅನ್ವಯ ಮಾರಾಟ ಪ್ರಕಟಣೆ

ಐಡಿಬಿಐ ಬ್ಯಾಂಕ್ ಲಿಮಿಟೆಡ್, ನಂ. 54, ಮಿಷನ್ ರಸ್ತೆ, ಬೆಂಗಳೂರು–560027,
......ಪ್ರಮಾಣ ಪತ್ರದಾರರು

ಹಾಗೂ

ಸಿಆರ್ ಬಿ ಕಾರ್ಪೋರೇಶನ್ ಲಿಮಿಟೆಡ್ (ದಿವಾಳಿ ಆಡಿಯಲ್ಲಿ) ಮತ್ತು ಇತರರು
.....ಪ್ರಮಾಣ ಪತ್ರ ಸಾಲಗಾರರು

ಇವರಿಗೆ, (1) ಮೆ1 ಸಿ ಆರ್ ಬಿ ಕಾರ್ಪೊರೇರಣ್ ಲಿಮಿಟೆಡ್, ಪ್ರತಿನಿಧಿಸುವವರು ದೆಹಲಿಯ ಘನ ಉಚ್ಚ ನ್ಯಾಯಾಲಯಕ್ಕೆ ಹೊಂದಿಕೊಂಡಿರುವ ಅಧಿಕೃತ ಲಿಕ್ವಿ ಡೇಟರ್, 503, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು– 560052, **(2) ಶ್ರೀ ಪಿ ಸಿ ಬನ್ಸಾಲಿ ಬಿನ್ ಲಿಖಮ್ ಚಂದ್ ಬನ್ಸಾಲಿ,**8–ಬಿ, ಲಾಲ್ ಬಜಾರ್ ಸ್ಟ್ರೀಟ್, 3ನೇ ಮಹಡಿ ಕೊಲ್ಕತ್ತಾ – 700001, **(3) ಡಾ.ಸಿ ಆರ್ ಬನ್ಸಾಲಿ S/o ಶ್ರೀ.** ಪಿ.ಸಿ.ಬನ್ಸಾಲಿ, ಅಂಬೂಜ್ ಹೌಸ್ ಅನೆಕ್ಸ್, 9ಬಿ, ಆಲ್ಪಾ ಮೌಂಟ್ ರಸ್ತೆ, ಮುಂಬೈ 400026 **(4) ಕರ್ನಾಟಕ ರಾಜ್ಯ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ನಿಯಮಿತ (KSIIDC),** ಎಂಎಸ್‌ಐಎಲ್‌ಹೌಸ್ 36, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು– 560052
..... ಪ್ರತಿವಾದಿಗಳು

ಈ ಕೆಳಗೆ ನಮೂದಿಸಿರುವ ಅಸ್ತಿಯನ್ನು ಬ್ಯಾಂಕಿಗೆ ಬರಬೇಕಾಗಿರುದ ಬಾಕಿ ಮೊತ್ತ ರೂ. ರೂ. 4,58,74,354/– (ನಾಲ್ಕು ಕೋಟಿ ಐವತ್ತೆಂಟು ಲಕ್ಷದ ಎಪ್ಪತ್ನಾಲ್ಕು ಸಾವಿರದ ಮುನ್ನೂರ ಐವತ್ತ ನಾಲ್ಕು ರೂಪಾಯಿಗಳು ಮಾತ್ರ) ಶೇಕಡಾ 17.50 ರಷ್ಟು ಇದ್ದು ಬಡ್ಡಿ ಸೇರಿದಂತೆ ದಿನಾಂಕ. 23.12.2022 ರಂದು ಆನ್ ಲೈನ್ ಇ–ಹರಾಜು ವೆಬ್‌ಸೈಟ್ www.bankeauctionwizard.com ಮೂಲಕ ಮಾರಟ ಮಾಡಲಾಗುವುದು. ದಿನಾಂಕ 8.12.2000 ರಿಂದ ಟಿ.ಆರ್.ಸಿ.ನಂ.01/2019 ಹೊಂದಿರುವ ವಸೂಲಾತಿ ಪ್ರಮಾಣಪತ್ರದ ಪ್ರಕಾರ ಸಾಲವನ್ನು ವಸೂಲು ಮಾರುವವರೆಗೆ ಶೇಕಡಾ 17.50 ರಂತೆ ಮುಂದಿನ ಬಡ್ಡಿಯನ್ನು ವಿಧಿಸಲಾಗುತ್ತದೆ, ಮತ್ತು ನವೆಂಬರ್ 01, 2022 ರಂತೆ ಸಾಲದ ಮೊತ್ತ ಸಂಪೂರ್ಣ ಪಾವತಿಯಾಗುವವರೆಗೆ ಮುಂದಿನ ಬಡ್ಡಿಗಳು ಸೇರಿ ಒಟ್ಟು ರೂ. 248,67,59,853.15/– (ಇನ್ನೂರ ನಲವತ್ತೆಂಟು ಕೋಟಿ ಅರವತ್ತೇಳು ಲಕ್ಷದ ಐವತ್ತೊಂಬತ್ತು ಸಾವಿರದ ಎಂಟುನೂರಾ ಐವತ್ಮೂರು ಮತ್ತು ಪೈಸೆ ಹದಿನೈದು ರೂಪಾಯಿಗಳು ಮಾತ್ರ)ಬಾಕಿ ಇರುತ್ತದೆ.

ಮೀಸಲು ಮೊತ್ತ	ಮುಂಗಡ ಹಣ ಪಾವತಿ (ಇಎಂಡಿ)	ಬಿಡ್ ಹೆಚ್ಚಳ ಮೊತ್ತ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
ರೂ.14,94,00,000/– (ರೂಪಾಯಿ ಹದಿನಾಲ್ಕು ಕೋಟಿ ತೊಂಬತ್ನಾಲ್ಕು ಲಕ್ಷ ಮಾತ್ರ)	ರೂ.1,49,40,000/– (ರೂಪಾಯಿ ಒಂದು ಕೋಟಿ ನಲವತ್ತೊಂಬತ್ತು ಲಕ್ಷ ನಲವತ್ತು ಸಾವಿರ ಮಾತ್ರ)	ರೂ. 5,00,000/– ಅಥವಾ ಆಸ್ತಿಗಾಗಿ ಅದರ ಗುಣಕಗಳಲ್ಲಿ.	21–12–2022 ಮಧ್ಯಾಹ್ನ 3.00 ಗಂಟೆಗೆ

ಹರಾಜು ಸಮಯ ಮತ್ತು ದಿನಾಂಕ	23.12.2022ರ ಬೆಳಿಗ್ಗೆ 11.00 ಗಂಟೆಯಿಂದ 11.30 ಗಂಟೆಯವರೆಗೆ. 5 ನಿಮಿಷಗಳ ಆಟೋ ವಿಸ್ತರಣೆಯೊಂದಿಗೆ ಅಂದರೆ ಇ–ಹರಾಜಿನ ಅಂತಿಮ ಸಮಯವಾಗಿದ್ದು ಹರಾಜನ್ನು ಮುಗಿಸುವ ಮೊದಲು ಕೊನೆಯ 5 ನಿಮಿಷಗಳ ಒಳಗೆ ಬಿಡ್ ಮಾಡಿದರೆ ಪ್ರತಿ ಬಾರಿಯೂ 5 ನಿಮಿಷಗಳ ಕಾಲ ವಿಸ್ತರಿಸಲಾಗುತ್ತದೆ.

ಇಎಂಡಿ ಸಲ್ಲಿಸಲು ಅಗತ್ಯವಿರುವ ಖಾತೆ ಸಂಖ್ಯೆ 6735242318, ಇಂಡಿಯನ್ ಬ್ಯಾಂಕ್ ಹೆಸರಿಗೆ– ರಿಕವರಿ ಆಫೀಸರ್–1, ಡಿಆರ್ ಟಿ– 2 ,ಬೆಂಗಳೂರು. ಐಎಫ್‌ಎಸ್‌ಸಿ: IDIB000R018

ಸ್ಥಿರ ಆಸ್ತಿಯ ವಿವರ

ಎಲ್ಲಾ ಕೈಗಾರಿಕಾ ಭೂಮಿಯ ಮೇಲೆ ಸಂಪೂರ್ಣ ಗುತ್ತಿಗೆ ಹಕ್ಕುಗಳು ಹೊಂದಿರುವ ಆಸ್ತಿಯ ಪ್ಲಾಟ್ ನಂ. 12/ಬಿ ಮತ್ತು 12–ಎಫ್ (ಸಿ) ಯಿಂದ 12– ಎಚ್, ಸರ್ವೆ ನಂ.85, ಚೊಕ್ಕಹಳ್ಳಿ, ಕಸಬಾ ಹೋಬಳಿ, ಹೊಸಕೋಟೆ ತಾಲೂಕು, ಬೆಂಗಳೂರು ಜಿಲ್ಲೆಯ ಕೈಗಾರಿಕಾ ಪ್ರದೇಶದ ಪರಿಮಿತಿಯಲ್ಲಿವೆ, ವಿಸ್ತೀರ್ಣ – 16,187 ಚದರ ಮೀ, ಜೊತೆಗೆ ಅವರಲ್ಲಿ ನಿಂತಿರುವ ಎಲ್ಲಾ ಕಟ್ಟಡಗಳು ಮತ್ತು ನಿರ್ಮಾಣಗಳು ಮತ್ತು ಅದರಲ್ಲಿ ನಿರ್ಮಾಣಗಳು ಮತ್ತು ಅದರಲ್ಲಿ ನಿರ್ಮಾಣವಾಗಲಿರುವಂತಹವು, ಚಕ್ಕುಬಂದಿ : ಪೂರ್ವಕ್ಕೆ: ಪ್ಲಾಟ್ ನಂ.12–ಸಿ ಯಿಂದ 12– ಎಫ್ (ಪಿ) ಮತ್ತು ಕೆಐಎಡಿಬಿ ರಸ್ತೆ (40'), ಪಶ್ಚಿಮಕ್ಕೆ: ಪ್ಲಾಟ್ ನಂ: 12–ಎ,ಉತ್ತರಕ್ಕೆ : ಅರಣ್ಯ ಭೂಮಿ ಮತ್ತು ದಕ್ಷಿಣಕ್ಕೆ : 60 ರಸ್ತೆ (ಕೆಐಎಡಿಬಿ ಅಡ್ಡ ರಸ್ತೆ ನಂ.3), (ಆಸ್ತಿಯು ಮ॥ ಜೈಹಿಂದ್ ಗ್ರಾನೈಟ್ ಇಂಡಸ್ಟ್ರೀಸ್ ಲಿಮಿಟೆಡ್, ಈಗ ಸಿಆರ್ ಬಿ ಕಾರ್ಪೋರೇಷನ್ ನಿಯಮಿತ ಹೆಸರಿನಲ್ಲಿದೆ.)

ಮಾರಾಟದ ನಿಯಮ ಮತ್ತು ನಿಬಂಧನೆಗಳಿಗಾಗಿ ಅಂತೆರೆಸ್ ಸಿಸ್ಟಮ್ಸ್ ಲಿಮಿಟೆಡ್‌ನ ವೆಬ್‌ಸೈಟ್ www.bankeuctionwizard.com ಗೆ ನೀಡಿ. (ಇ–ಮೇಲ್: **sushmitha.b@antaressystems.com**) ಮತ್ತು ಸಂಪರ್ಕಿಸುವ ವ್ಯಕ್ತಿ ಕುಮಾರಿ ಬಿ ಎಂ ಸುಶ್ಮಿತಾ (ಸಂಪರ್ಕಿಸುವ ನಂ: 8951944383 ಮತ್ತು 080–40482100 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಜಿ ಬಸಂತ್ ಚಕ್ರವರ್ತಿ, ಉಪ ಮಹಾ ಪ್ರಬಂಧಕರು, ಐಡಿಬಿಐ ಬ್ಯಾಂಕ್ ಲಿಮಿಟಿ, ಎನ್ ಪಿಎ ಮ್ಯಾನೇಜ್‌ಮೆಂಟ್ ಗ್ರೂಪ್, 58, ಮಿಷನ್ ರಸ್ತೆ, ಬೆಂಗಳೂರು – 560027, ದೂರವಾಣಿ 080–61451232/237, ಮೊ: 9880794071

ನನ್ನ ಸ್ನೇಹಿ ಮತ್ತು ಟ್ರಿಬ್ಯೂನಲ್ ಮೊಹರಿನೊಂದಿಗೆ ದಿನಾಂಕ 16.11.2022 ರಂದು ಆದೇಶ ನೀಡಲಾಗಿದೆ.

ಸಹಿ/–
ರಿಕವರಿ ಅಧಿಕಾರಿ–1
ಡಿಆರ್ ಟಿ–2, ಬೆಂಗಳೂರು

‘ಚಿಲುಮೆ’ ಸಂಸ್ಥೆಗೆ ಆರ್ಥಿಕ ನೆರವು ನೀಡಿದವರ ಹೆಸರನ್ನು ಸಿ.ಎಂ ಏಕೆ ಬಹಿರಂಗಪಡಿಸುತ್ತಿಲ್ಲ: ಕಾಂಗ್ರೆಸ್

ಮತಪಟ್ಟಿಗೆ ಕನ್ನ: 11 ಪ್ರಶ್ನೆ ಕೇಳಿದ ಸುರ್ಜೇವಾಲಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿಲುಮೆ ಸಂಸ್ಥೆಯ ಮೂಲಕ ಮತದಾರರ ಮಾಹಿತಿ ಕಳವು ನಡೆದಿರುವ ಪ್ರಕರಣದಲ್ಲಿ ಸುಳ್ಳಿನ ಮೂಲಕ ಸತ್ಯಾಂಶ ಮರೆಮಾಚಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯತ್ನಿಸುತ್ತಿದ್ದಾರೆ’ ಎಂದು ಆರೋಪಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಈ ಸಂಬಂಧ ಬಿಜೆಪಿಗೆ 11 ಪ್ರಶ್ನೆಗಳನ್ನು ಕೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೊಮ್ಮಾಯಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರ ವಿರುದ್ಧ ಈವರೆಗೂ ಏಕೆ ಎಫ್ಐಆರ್ ದಾಖಲಿಸಿಲ್ಲ? ಕೇವಲ ಮತಗಟ್ಟೆ ಹಂತದ ಅಧಿಕಾರಿಗಳಾಗಿದ್ದ ಚಿಲುಮೆ ಸಿಬ್ಬಂದಿ ಮೇಲಷ್ಟೇ ಪ್ರಕರಣ ದಾಖಲಿಸಿರುವುದು ಏಕೆ? ರಾಜಕೀಯ ದುರುದ್ದೇಶದ ಆರೋಪದ ಎಂದು ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಈಗ ಏಕೆ ತನಿಖೆಗೆ ಆದೇಶಿಸಿದ್ದಾರೆ’ ಎಂದು ಕೇಳಿದರು.

‘ಚಿಲುಮೆ ಸಂಸ್ಥೆ, ಚಿಲುಮೆ ಎಂಟರ್‌ಪ್ರೈಸಸ್, ಡಿಎಪಿ ಹೊಂಬಾಳೆ ಪ್ರೈವೇಟ್ ಲಿಮಿಟೆಡ್‌ಗಳ ನಿರ್ದೇಶಕರಾದ ಕೃಷ್ಣಪ್ಪ, ರವಿಕುಮಾರ್, ಬೈರಪ್ಪ, ಶ್ರುತಿ, ನರಸಿಂಹಮೂರ್ತಿ ಮತ್ತು ಐಶ್ವರ್ಯಾ ವಿರುದ್ಧ ಏಕೆ ಪ್ರಕರಣ ದಾಖಲಿಸಿಲ್ಲ? ಮತದಾರರ ಮಾಹಿತಿ ಕದಿಯಲು ಬಳಸಿದ ಡಿಜಿಟಲ್ ಸಮೀಕ್ಷಾ ಆ್ಯಪ್ ವಿರುದ್ಧ ಕ್ರಮ ಏಕಿಲ್ಲ? ಚಿಲುಮೆ ಸಂಸ್ಥೆಗೆ 15 ಸಾವಿರ ಸಿಬ್ಬಂದಿ ನೇಮಿಸಿದ್ದು ನಿಜವೆ? ಈ ಸಂಸ್ಥೆಗೆ ಆರ್ಥಿಕ ನೆರವು ನೀಡಿದವರ ಹೆಸರನ್ನು ಮುಖ್ಯಮಂತ್ರಿ ಏಕೆ ಬಹಿರಂಗಪಡಿಸುತ್ತಿಲ್ಲ’ ಎಂದು 11 ಪ್ರಶ್ನೆಗಳನ್ನು ಬಿಜೆಪಿಗೆ ಕೇಳಿದರು.

‘ಈ ಪ್ರಕರಣದಲ್ಲಿ ಬಸವರಾಜ ಬೊಮ್ಮಾಯಿ ನೇರವಾಗಿ ಭಾಗಿಯಾಗಿದ್ದಾರೆ. ಅವರು ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿದರೆ ನಿಷ್ಪಕ್ಷಪಾತ ತನಿಖೆ ನಡೆಸಲು ಸಾಧ್ಯವಿಲ್ಲ. ತಕ್ಷಣವೇ ಅವರು ಹುದ್ದೆಯಿಂದ ಕೆಳಗಿಳಿಯಬೇಕು. ಎಫ್ಐಆರ್ ದಾಖಲಿಸಿ ಅವರನ್ನು ಬಂಧಿಸಬೇಕು’ ಎಂದು ಸುರ್ಜೇವಾಲ ಆಗ್ರಹಿಸಿದರು.

ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡಲು ಬಂದಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಚರ್ಚೆಯಲ್ಲಿ ತೊಡಗಿದ್ದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಶಾಸಕ ಕೃಷ್ಣ ಬೈರೇಗೌಡ ಇದ್ದರು

– ಪ್ರಜಾವಾಣಿ ಚಿತ್ರ

‘ಇದು ವೋಟರ್ ಗೇಟ್ ಹಗರಣ’

‘ಅಮೆರಿಕದಲ್ಲಿ ವಾಟರ್ ಗೇಟ್ ಹಗರಣ ನಡೆದಿತ್ತು. ಬೆಂಗಳೂರಿನಲ್ಲಿ ಚಿಲುಮೆ ಸಂಸ್ಥೆಯ ಮೂಲಕ ನಡೆದಿರುವ ಮತದಾರರ ಮಾಹಿತಿ ಕಳವು ಪ್ರಕರಣ ವೋಟರ್ ಗೇಟ್ ಹಗರಣ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಹಗರಣದ ಮೊದಲ ಆರೋಪಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

‘ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಬಂಧಿಸುವಂತೆ ಕೇಂದ್ರ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದೇವೆ. ನಮ್ಮ ಮನವಿ ಕುರಿತು ಕೇಂದ್ರ ಚುನಾವಣಾ ಆಯೋಗದ ಜತೆ ಚರ್ಚಿಸುವುದಾಗಿ ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ. ಅವರಿಂದ ಸೂಕ್ತ ಸ್ಪಂದನೆ ದೊರಕದಿದ್ದರೆ ನೇರವಾಗಿ ಕೇಂದ್ರ ಚುನಾವಣಾ ಆಯೋಗದ ಬಳಿ ಹೋಗುತ್ತೇವೆ’ ಎಂದರು.

ಇದೊಂದು ಗಂಭೀರವಾದ ಪ್ರಕರಣ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಬೇಕು. ಬಸವರಾಜ ಬೊಮ್ಮಾಯಿ ಅವರು ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ರಾಜೀನಾಮೆ ಕೊಡಲಿ: ರವಿಕುಮಾರ್

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ಸುಳ್ಳು ಹೇಳುತ್ತಿರುವ ಸಿದ್ದರಾಮಯ್ಯ ವಿಧಾನಸಭೆ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಮುಖ್ಯ ಚುನಾವಣಾಧಿಕಾರಿಯವರನ್ನು ಭೇಟಿಮಾಡಿ ದೂರು ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ‘2017ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಚಿಲುಮೆ ಸಂಸ್ಥೆಗೆ ಮತದಾರರ ಜಾಗೃತಿ ಕಾರ್ಯಕ್ರಮ ನಡೆಸಲು ಅನುಮತಿ ನೀಡಲಾಗಿತ್ತು. ಈಗ ಬಿಜೆಪಿ ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ’ ಎಂದರು.

‘ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೂ ಸತ್ಯಕ್ಕೂ ಬಹುದೂರ. ಅವರ ಮುಖಕ್ಕೆ ರಾಚುವಂತೆ ದಾಖಲೆ ನೀಡಿದ್ದೇವೆ. ಸಿದ್ದರಾಮಯ್ಯ ತಕ್ಷಣವೇ ರಾಜೀನಾಮೆ ನೀಡಬೇಕು. ಇಲ್ಲವಾದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸುತ್ತೇವೆ’ ಎಂದು ಹೇಳಿದರು.

ಪರಿಷ್ಕರಣೆಯಲ್ಲಿ 6.73 ಲಕ್ಷ ಮತದಾರರ ಹೆಸರನ್ನು ಮಾತ್ರ ಕೈಬಿಡಲಾಗಿದೆ. 24 ಲಕ್ಷ ಮತದಾರರನ್ನು ಕೈಬಿಡಲಾಗಿದೆ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ಬೆಂಗಳೂರಿನಲ್ಲಿ ಇರುವ ಮತದಾರರ ಸಂಖ್ಯೆಯೇ 90 ಲಕ್ಷ. ಹೀಗಿರುವಾಗ, ಅಷ್ಟು ಬೃಹತ್ ಪ್ರಮಾಣದಲ್ಲಿ ಮತದಾರರನ್ನು ಪಟ್ಟಿಯಿಂದ ಕೈಬಿಡಲು ಸಾಧ್ಯವೇ? ಇವರು ನೀಡುತ್ತಿರುವ ಅಂಕಿ–ಸಂಖ್ಯೆಗೆ ತಾಳಮೇಳವೇ ಇಲ್ಲ ಎಂದು ವ್ಯಂಗ್ಯವಾಡಿದರು.

ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೆಸರು ಕೇಳಿದರೆ ಕಾಂಗ್ರೆಸ್ ನಾಯಕರು ಕಂಗಾಲಾಗುತ್ತಾರೆ. ರಾಜಕೀಯವಾಗಿ ನೆಲೆ ಕಳೆದುಕೊಳ್ಳುವ ಭೀತಿಯಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ರಾಜಕೀಯ ನಿವೃತ್ತಿ ಪಡೆಯಬೇಕು’ ಎಂದು ಹೇಳಿದರು.

ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರಿಗೆ ದೂರು ನೀಡಿದ ಎನ್‌.ರವಿಕುಮಾರ್, ಎಲ್‌.ಎ.ರವಿಸುಬ್ರಹ್ಮಣ್ಯ ಹಾಗೂ ಛಲವಾದಿ ನಾರಾಯಣಸ್ವಾಮಿ ನೇತೃತ್ವದ ನಿಯೋಗ

‘ಟ್ರಸ್ಟ್ ಕಚೇರಿಯಲ್ಲಿ ನೋಟು ಎಣಿಕೆ ಯಂತ್ರವೇಕೆ’

‘ಟ್ರಸ್ಟ್‌ಗಳಲ್ಲಿ ₹ 2,000ಕ್ಕಿಂತ ಹೆಚ್ಚು ಮೊತ್ತದ ದೇಣಿಗೆಯನ್ನು ನಗದು ರೂಪದಲ್ಲಿ ಪಡೆಯುವಂತಿಲ್ಲ. ಅಂಥ ಚಿಲುಮೆ ಸಂಸ್ಥೆಯಲ್ಲಿ ನೋಟು ಎಣಿಕೆ ಯಂತ್ರಗಳನ್ನೇಕೆ ಇರಿಸಿಕೊಳ್ಳಲಾಗಿತ್ತು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

‘ಚಿಲುಮೆ ಸಂಸ್ಥೆಯಲ್ಲಿ ಪೊಲೀಸರು ಶೋಧ ನಡೆಸಿದಾಗ ನೋಟು ಎಣಿಕೆ ಯಂತ್ರ ಸೇರಿದಂತೆ ಹಲವು ಸ್ವತ್ತುಗಳು ಸಿಕ್ಕಿವೆ. ಅಲ್ಲಿ ಎಷ್ಟು ಹಣ ಎಣಿಸಲಾಗಿದೆ? ಯಾರಿಗೆ ಸಂಬಂಧಿಸಿದ ವಸ್ತುಗಳು ಪತ್ತೆಯಾಗಿವೆ ಎಂಬ ಮಾಹಿತಿ ಬಹಿರಂಗವಾಗಬೇಕು. ನ್ಯಾಯಾಧೀಶರ ಸಮ್ಮುಖದಲ್ಲಿ ಶೋಧ ಕಾರ್ಯಾಚರಣೆ ನಡೆಸಿ, ವಿಡಿಯೊ ಚಿತ್ರೀಕರಣ ಮಾಡಬೇಕು’ ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

ವನ್ಯಜೀವಿ ಮಂಡಳಿಗೆ ನಟ ದರ್ಶನ್ ಸದಸ್ಯ

ಬೆಂಗಳೂರು: ರಾಜ್ಯ ವನ್ಯಜೀವಿ ಮಂಡಳಿಯಲ್ಲಿ ಖಾಲಿ ಇದ್ದ ಸದಸ್ಯ ಸ್ಥಾನಕ್ಕೆ ಚಿತ್ರನಟ ದರ್ಶನ್ ತೂಗುದೀಪ್ ಅವರನ್ನು ನೇಮಕ ಮಾಡಲಾಗಿದೆ.

ದರ್ಶನ್ ಅವರು ವನ್ಯಜೀವಿ ಛಾ ಯಾ ಗ್ರಾ ಹ ಕ ಹಾಗೂ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದು, ಈ ಹಿನ್ನೆಲೆಯಲ್ಲಿ ಅವರನ್ನು ನೇಮಕ ಮಾಡಲಾಗಿದೆ ಎಂದು ಅರಣ್ಯ ಇಲಾಖೆ ನ.15ರಂದು ಹೊರಡಿಸಿದ ಆದೇಶದಲ್ಲಿ ಉಲ್ಲೇಖಿಸಿದೆ.

ಮಂಡಳಿಯ ಸದಸ್ಯರಾಗಿದ್ದ ವಿಧಾನಪರಿಷತ್ತಿನ ಬಿಜೆಪಿ ಸದಸ್ಯ ಶಾಂತಾರಾಮ ಸಿದ್ದಿ ಅವರ ಬದಲು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ. ಇಬ್ಬರ ಸದಸ್ಯತ್ವದ ಅವಧಿ 2023 ರ ಅಕ್ಟೋಬರ್ 15ರವರೆಗೆ ಅಥವಾ ಮುಂದಿನ ಆದೇಶದವರೆಗೆ ಇರಲಿದೆ.

‘ವ್ಯವಸ್ಥಾಪನಾ ಸಮಿತಿ ಅನೂರ್ಜಿತಗೊಳಿಸಿ’

ಚಿಕ್ಕಮಗಳೂರು: ‘ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ಧಾರ್ಮಿಕ ದತ್ತಿ ಆಯುಕ್ತರು ರಚಿಸಿರುವ ವ್ಯವಸ್ಥಾಪನಾ ಸಮಿತಿ ಎಂಟು ಸದಸ್ಯರಲ್ಲಿ ಏಳು ಮಂದಿ ಒಂದೇ ಧರ್ಮದವರಿದ್ದಾರೆ. ಈ ಸಮಿತಿಯನ್ನು ಅನೂರ್ಜಿತಗೊಳಿಸಬೇಕು’ ಎಂದು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ರಾಜ್ಯ ಕಾರ್ಯದರ್ಶಿ ಗೌಸ್ ಮೊಹಿದ್ದೀನ್ ಮನವಿ ಮಾಡಿದ್ದಾರೆ.

‘ಹೈಕೋರ್ಟ್ ಮತ್ತು ಸರ್ಕಾರ ಹಿಂದೂ ಮತ್ತು ಮುಸ್ಲಿಂ ಧರ್ಮದ ಎಂಟು ಸದಸ್ಯರ ಆಡಳಿತ ಸಮಿತಿ ರಚನೆಗೆ ಆದೇಶ ನೀಡಿದೆ. ಸಮಿತಿಯಲ್ಲಿ ಇಬ್ಬರು ಮಹಿಳೆಯರು ಇರಬೇಕು ಎಂದು ಇದೆ. ಸಮಿತಿ ರಚನೆಯಲ್ಲಿ ಆದೇಶ ಪಾಲಿಸಿಲ್ಲ’ ಎಂದು ದೂರಿದ್ದಾರೆ.

ಸಮಿತಿ ರಚನೆ 1989ರ ಧಾರ್ಮಿಕ ದತ್ತಿ ಆಯುಕ್ತರ ಆದೇಶಕ್ಕೆ ಪೂರಕವಾಗಿರಬೇಕು. ಇಲ್ಲದಿದ್ದರೆ, ವೇದಿಕೆ ವತಿಯಿಂದ ಜನಪರ ಮತ್ತು ಕಾನೂನು ಹೋರಾಟ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೊ.ಸೀತಾರಾಮ್ ಎಐಸಿಟಿಇ ಚೇರ್‌ಮನ್

ಚಳ್ಳಕೆರೆ (ಚಿತ್ರದುರ್ಗ ಜಿಲ್ಲೆ): ಗುವಾಹಟಿ ಐಐಟಿ ನಿರ್ದೇಶಕರಾಗಿದ್ದ ಚಳ್ಳಕೆರೆಯ ತ್ಯಾಗರಾಜನಗರದ ಪ್ರೊ.ಟಿ.ಜಿ. ಸೀತಾರಾಮ್ ಅವರನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಚೇರ್‌ಮನ್ ಆಗಿ ನೇಮಕ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಶನಿವಾರದ ಸಂಚಿಕೆಯಲ್ಲಿ ಪ್ರಕಟಗೊಂಡ ಸುದ್ದಿಯಲ್ಲಿ ಈ ಕುರಿತು ಮಾಹಿತಿ ತಪ್ಪಾಗಿತ್ತು.

₹ 18 ಲಕ್ಷ ನೀಡಿದ್ದ ನಂದೀಶ್ ರೆಡ್ಡಿ

ನಂದೀಶ್ ರೆಡ್ಡಿ

ಬೆಂಗಳೂರು: 2018ರ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ, ಈಗಿನ ಬಿಎಂಟಿಸಿ ಅಧ್ಯಕ್ಷ ಎನ್.ಎಸ್. ನಂದೀಶ್ ರೆಡ್ಡಿ, ಈಗ ಮತದಾರರ ಮಾಹಿತಿ ಕಳವಿನಲ್ಲಿ ಭಾಗಿಯಾದವರ ಆರೋಪ ಎದುರಿಸುತ್ತಿರುವ ಚಿಲುಮೆ ಸಂಸ್ಥೆಯಿಂದಲೇ ಚುನಾವಣಾ ಪೂರ್ವ ಸಮೀಕ್ಷೆ ಮಾಡಿಸಿದ್ದರು. ಇದಕ್ಕಾಗಿ ಸಂಸ್ಥೆಗೆ ₹ 18 ಲಕ್ಷ ಪಾವತಿಸಿದ್ದರು.

ಚುನಾವಣಾ ತಯಾರಿಗೂ ಮೊದಲು ಚಿಲುಮೆ ಸಂಸ್ಥೆಯ ಮೂಲಕ ನಂದೀಶ್ ರೆಡ್ಡಿ ಸಮೀಕ್ಷೆ ನಡೆಸಿದ್ದರು. ಇದಕ್ಕಾಗಿ ಸನ್‌ಡ್ರೈ ಕ್ರೆಡಿಟರ್ಸ್ ಮೂಲಕ ಚಿಲುಮೆಗೆ ₹ 17.50 ಲಕ್ಷ ಪಾವತಿಸಿದ್ದರು. ಪ್ರತ್ಯೇಕವಾಗಿ ₹ 50,000 ನಗದು ನೀಡಿದ್ದರು. 2018ರ ಚುನಾವಣಾ ನಾಮಪತ್ರದ ಜತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಈ ಮಾಹಿತಿ ನೀಡಿದ್ದರು.

ಈಗ ಆರೋಪಕ್ಕೆ ಸಿಲುಕಿರುವ ಚಿಲುಮೆ ಸಂಸ್ಥೆಗಿನ ನಂಟು ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ರೆಡ್ಡಿ, ‘2018ರ ಚುನಾವಣೆಗೂ ಮೊದಲು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ನಡೆದಿರುವ ಸಂಶಯ ವ್ಯಕ್ತವಾಗಿತ್ತು. ಈ ಕುರಿತು ಚುನಾವಣಾ ಆಯೋಗಕ್ಕೆ ದೂರನ್ನೂ ಸಲ್ಲಿಸಿದ್ದೆ. ಈ ಕುರಿತು ಸತ್ಯಾಂಶ ಅರಿಯಲು ಚಿಲುಮೆ ಸಂಸ್ಥೆಯ ಮೂಲಕ ಸಮೀಕ್ಷೆ ನಡೆಸಿದ್ದೆ’ ಎಂದರು.

‘ಚುನಾವಣಾ ತಯಾರಿಯ ಕಾರಣಕ್ಕೆ ಮಾತ್ರ ನಾನು ಆ ಸಂಸ್ಥೆಯ ಸೇವೆ ಪಡೆದಿದ್ದೆ. ಸಮೀಕ್ಷೆ ನಡೆಸಿದ್ದಕ್ಕಾಗಿ ಶುಲ್ಕ ಪಾವತಿಸಿದ್ದೆ. ಅದರ ಹೊರತಾಗಿ ಚಿಲುಮೆ ಟ್ರಸ್ಟ್ ಅಥವಾ ಅದರ ಸದಸ್ಯರ ಜತೆಗೆ ಯಾವ ಸಂಬಂಧವೂ ಇಲ್ಲ. ಆ ಸಂಸ್ಥೆಯಲ್ಲಿ ನನ್ನ ಪಾಲುದಾರಿಕೆ ಅಥವಾ ಹೂಡಿಕೆಯೂ ಇಲ್ಲ’ ಎಂದು ಹೇಳಿದರು.

‘ಚಿಲುಮೆ ಸಂಸ್ಥೆ ದುರ್ಬಳಕೆ ಮಾಡಿಕೊಂಡಿಲ್ಲ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಚಿಲುಮೆ ಸಂಸ್ಥೆ ಪರಿಚಯ ನನಗಿಲ್ಲ ಎನ್ನುವುದಿಲ್ಲ. ಅವರು ಗೊತ್ತಿರುವವರೇ. ಆದರೆ, ನಾನು ಅವರನ್ನು ಯಾವುದಕ್ಕೂ ಬಳಸಿಕೊಂಡಿಲ್ಲ. ಅಂತಹ ಉದ್ದೇಶವೂ ಇಲ್ಲ' ಎಂದು ಸಚಿವ ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚಿಲುಮೆ ಸಂಸ್ಥೆಯಿಂದ ಬಿಬಿಎಂಪಿ ಏನೆಲ್ಲ ಚಟುವಟಿಕೆ ಬಯಸಿತ್ತು, ಯಾವೆಲ್ಲ ಕೆಲಸಗಳಿಗೆ ಅವಶ್ಯಕತೆ ಇತ್ತು, ಏನು ಷರತ್ತು ಹಾಕಿತ್ತು ಎಂದು ನನಗೆ ಗೊತ್ತಿಲ್ಲ’ ಎಂದರು.

‘ಈಗ ನಡೆದಿರುವುದು ಆಧಾರ್ ಸಂಖ್ಯೆಯನ್ನು ಮತದಾರರ ಗುರುತಿನ ಚೀಟಿಗೆ ಜೋಡಿಸುವ ಪ್ರಕ್ರಿಯೆ. ಪಟ್ಟಿಗೆ ಹೆಸರು ಸೇರಿಸಲು ಅಥವಾ ತೆಗೆದುಹಾಕಲು ಇಂತಹದ್ದೆಲ್ಲ ಮಾಡಬೇಕಾದ ಅಗತ್ಯ ಇಲ್ಲ. ಇಂತಹ ಅಕ್ರಮ ನಡೆಸುವುದೇನಿದ್ದರೂ ಕಾರ್ಯಕರ್ತರೇ ಇಲ್ಲದ, ಸಿದ್ಧಾಂತವೇ ಇಲ್ಲದ, ಅವಕಾಶಗಳೂ ಇಲ್ಲದ ಕಾಂಗ್ರೆಸ್ ಪಕ್ಷ' ಎಂದು ಟೀಕಿಸಿದರು.

‘2018ರಲ್ಲಿ ಅಧಿಕಾರದಲ್ಲಿ ಇದ್ದದ್ದು ಯಾರು? ಸುಮ್ಮನೆ ಏನೇನೋ ಹೇಳುತ್ತಿದ್ದಾರೆ. ಪೊಲೀಸರು ತನಿಖೆ ಮಾಡುತ್ತಿದ್ದು, ನಿಜಾಂಶ ಏನೆಂಬುದು ತಿಳಿಯಲಿದೆ. ಆರೋಪ ಮಾಡುವವರ ಹಿನ್ನೆಲೆ ಏನು, ಯಾವ ವಿಷಯಕ್ಕಾಗಿ ಬಂದಿದ್ದಾರೆ ಎಂಬುದು ಎಲ್ಲಾ ಗೊತ್ತು. ನಾನೇನು ಹೇಳಬೇಕಾಗಿಲ್ಲ' ಎಂದು ಹೇಳಿದರು.

‘ನಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದವರು ಮತದಾರರ ಮಾಹಿತಿ ಸಂಗ್ರಹಿಸಿದ ಬಗ್ಗೆ ನಾಲ್ಕೈದು ಸಲ ದೂರು ನೀಡಲಾಗಿದೆ. ಈ ಬಗ್ಗೆಯೂ ತನಿಖೆ ಆಗಲಿ' ಎಂದೂ ಒತ್ತಾಯಿಸಿದರು.

ಚಿಲುಮೆ ಕಚೇರಿಯಲ್ಲಿ ಸಚಿವರ ಖಾಲಿ ಚೆಕ್ ಏಕಿತ್ತು: ಎಚ್‌ಡಿಕೆ

ಕೋಲಾರ: ‘ಮತದಾರರ ಪಟ್ಟಿಗೆ ಕನ್ನ ಪ್ರಕರಣದಲ್ಲಿ ಚಿಲುಮೆ ಕಚೇರಿ ಮೇಲೆ ನಡೆದ ಶೋಧದಲ್ಲಿ ಸಚಿವರೊಬ್ಬರ ಖಾಲಿ ಚೆಕ್, ಲೆಟರ್ ಹೆಡ್, ದುಡ್ಡು, ಗುರುತಿನ ಚೀಟಿ ಸಿಕ್ಕಿವೆ. ಅವು ಅಲ್ಲಿ ಏಕಿದ್ದವು? ಮೊದಲು ಆ ಮಂತ್ರಿಯನ್ನು ವಜಾಗೊಳಿಸಲಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಶನಿವಾರ ಬಂಗಾರಪೇಟೆ ತಾಲ್ಲೂಕು ನಾಯಕರಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಲು ಪಕ್ಷದ ರಾಜ್ಯ ಅಧ್ಯಕ್ಷರಿಗೆ ಹೇಳಿದ್ದೇನೆ’ ಎಂದು ತಿಳಿಸಿದರು.

‘ಜೆಡಿಎಸ್, ಕಾಂಗ್ರೆಸ್ ಪ್ರಾಬಲ್ಯ ಹೊಂದಿರುವ ಬೂತ್‌ಗಳಲ್ಲಿ 40 ಸಾವಿರದವರೆಗೆ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲು ಮಾಡಲು ಹೊರಟಿರುವ ದುಷ್ಟಶಕ್ತಿಗಳ ವಿರುದ್ಧ ಚುನಾವಣಾ ಆಯೋಗ ಕಠಿಣ ಕ್ರಮ ತೆಗೆದುಕೊಳ್ಳಬೇಕು’ ಎಂದು ಕುಮಾರಸ್ವಾಮಿ ಆಗ್ರಹಿಸಿದರು.

‘ಈ ಪ್ರಕರಣದಲ್ಲಿ ಎಲ್ಲಾ ರೀತಿಯ ಹುನ್ನಾರಗಳಿವೆ. ಬಿಬಿಎಂಪಿ ಚುನಾವಣೆ ನಡೆಸುತ್ತದೆ ಎಂಬ ನಂಬಿಕೆಯೇ ನನಗಿಲ್ಲ. ವಿಧಾನಸಭೆ ಚುನಾವಣೆವರೆಗೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯೂ ನಡೆಯಲ್ಲ’ ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE

www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಅಂತರ್ಮುಖಿಯ ಅನಾವರಣ

ಅವಿನಾಶ್ ಚಿತ್ರನಟ

ಬೆಳಿಗ್ಗೆ 10ರಿಂದ

ಸೆಲೆಬ್ರಿಟಿ

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8, ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30

ನಾಳೆ

ಪಿಟಿಸಿಎಲ್: ಭೂಮಿ ವಂಚಿತರಾಗುತ್ತಿರುವ ದಲಿತರು

ಸಂವಾದ

ಮಧ್ಯಾಹ್ನ 12 ರಿಂದ 1

ಭಾಗವಹಿಸುವವರು:

ಜ್ಞಾನಪ್ರಕಾಶ ಸ್ವಾಮೀಜಿ, ಉರಿಲಿಂಗ ಪೆದ್ದಿಮಠ, ಮೈಸೂರು

ಎನ್.ಮಹೇಶ್, ಶಾಸಕ, ಕೊಳ್ಳೇಗಾಲ ಕ್ಷೇತ್ರ

ಬಿ. ಗೋಪಾಲ್, ಸಾಮಾಜಿಕ ಕಾರ್ಯಕರ್ತ, ಬೆಂಗಳೂರು

ಹರಿರಾಮ್, ವಕೀಲ, ಅಧ್ಯಕ್ಷ, ಭಾರತೀಯ ಪರಿವರ್ತನಾ ಸಂಘ, ಬೆಂಗಳೂರು

ದತ್ತಾಂಶ ಮಾರಾಟದ ‘ಚಿಲುಮೆ’

ಒಂದನೇ ಪುಟದಿಂದ...

ಆ ವೇಳೆ ಗಲಾಟೆ ಸಹ ನಡೆದಿತ್ತು. ಆ ದೃಶ್ಯ ತನಿಖಾಧಿಕಾರಿಗಳ ಕೈಸೇರಿದೆ ಎಂದಿವೆ.

‘ಸಂಸ್ಥೆಯ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಆಗಿರುವುದು, ಹಣ ಪಡೆದು ಮತದಾರರ ವಿವರ ನೀಡಿರುವುದು, ಇ-ಮೇಲ್ ಮೂಲಕ ಜನಪ್ರತಿನಿಧಿಗಳ ಸಂಪರ್ಕಕ್ಕೆ ಪ್ರಯತ್ನಿಸಿರುವುದು ತನಿಖೆಯಿಂದ ಪತ್ತೆಯಾಗಿದೆ. ಎಸ್‌ಬಿಐ, ಆ್ಯಕ್ಸಿಸ್ ಬ್ಯಾಂಕ್‌ನಲ್ಲಿ ಸಂಸ್ಥೆಗೆ ಸೇರಿದ ಖಾತೆಗಳಿದ್ದವು. ಎಸಿಪಿ ನಾರಾಯಣಸ್ವಾಮಿ ನೇತೃತ್ವದ ತನಿಖಾ ತಂಡವು ಬ್ಯಾಂಕ್ ವ್ಯವಹಾರದ ಪರಿಶೀಲನೆ ನಡೆಸಿದೆ. ರಾಜಕಾರಣಿಗಳೂ ಸೇರಿ ಹಲವರು ಈ ಖಾತೆಗಳಿಗೆ ಹಣ ಹಾಕಿರುವುದು ಪತ್ತೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ಶುಕ್ರವಾರ ಬಂಧಿಸಲಾಗಿದ್ದ ರೇಣುಕಾ ಪ್ರಸಾದ್ ಹಾಗೂ ಧರ್ಮೇಶ್ ಅವರನ್ನು 37ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರ ಎದುರು ಶನಿವಾರ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗೆ 10 ದಿನಗಳ ಕಾಲ ತನಿಖಾ ತಂಡದ ವಶಕ್ಕೆ ನೀಡಲಾಗಿದೆ.

ತನಿಖೆಗೆ ಸಹಕಾರ ನೀಡದಿದ್ದರೆ ಬಂಧನ: ‘ತನಿಖೆಗೆ ಐಶ್ವರ್ಯಾ ಸಹಕರಿಸುತ್ತಿದ್ದಾರೆ. ಸಹಕಾರ ನೀಡದಿದ್ದರೆ ಅವರನ್ನೂ ಬಂಧಿಸುತ್ತೇವೆ. ರವಿ ಕುಮಾರ್ ಬಂಧನಕ್ಕೆ ತಂಡ ರಚಿಸಲಾಗಿದೆ’ ಎಂದು ಡಿಸಿಪಿ ಶ್ರೀನಿವಾಸಗೌಡ ತಿಳಿಸಿದರು.

ನ್ಯಾಯಾಂಗ ತನಿಖೆಗೆ ಕಾಂಗ್ರೆಸ್ ಪಟ್ಟು

ಚಿಲುಮೆ ಜತೆಗೂಡಿ ಮತದಾರರ ಮಾಹಿತಿ ಕಳವು ಮಾಡಿರುವ ಆರೋಪದ ಮೇಲೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿರುದ್ಧವೂ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಕಾಂಗ್ರೆಸ್ ಪಕ್ಷವು ಕೇಂದ್ರ ಚುನಾವಣಾ ಆಯೋಗವನ್ನು ಆಗ್ರಹಿಸಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಮುಖಂಡರ ನಿಯೋಗ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರ ಮೂಲಕ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿತು. ಮತದಾರರ ಮಾಹಿತಿ ಕಳವು ಮತ್ತು ದುರ್ಬಳಕೆಯಲ್ಲಿ ಭಾಗಿಯಾದವರ ವಿರುದ್ಧ ಭಾರತೀಯ ದಂಡಸಂಹಿತೆ, ಪ್ರಜಾಪ್ರತಿನಿಧಿ ಕಾಯ್ದೆ ಸೇರಿದಂತೆ ಸೂಕ್ತ ಕಾನೂನುಗಳ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದರು.

‘ಚುನಾವಣಾ ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆ ಆರಂಭಿಸುವ ಮೊದಲೇ ಈ ಕೆಲಸ ಮಾಡಲು ಚಿಲುಮೆ ಸಂಸ್ಥೆಗೆ ಅನುಮತಿ ನೀಡಲಾಗಿತ್ತು. ಖಾಸಗಿ ಸಂಸ್ಥೆ ಮನವಿ ಸಲ್ಲಿಸಿದ ಮರುದಿನವೇ ಬಿಬಿಎಂಪಿ ಮುಖ್ಯ ಆಯುಕ್ತರು ಅನುಮತಿ ನೀಡಿದ್ದಾರೆ. ಮುಖ್ಯಮಂತ್ರಿ, ಅಶ್ವತ್ಥನಾರಾಯಣ ಹಾಗೂ ತುಷಾರ್ ಗಿರಿನಾಥ್ ಸೇರಿ ನಡೆಸಿರುವ ಸಂಚಿನಂತೆ ಎಲ್ಲವೂ ನಡೆದಿದೆ. ಈ ಮೂವರ ಜತೆಗೆ ಮತದಾರರ ನೋಂದಣಿ ಅಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳೂ ಅಕ್ರಮದಲ್ಲಿ ಭಾಗಿಯಾಗಿದ್ದಾರೆ’ ಎಂದು ಕಾಂಗ್ರೆಸ್ ಆರೋಪಿಸಿದೆ.

ಕಾಂಗ್ರೆಸ್ ವಿರುದ್ಧವೂ ತನಿಖೆಗೆ ಬಿಜೆಪಿ ಆಗ್ರಹ

‘ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಭಾಗವಹಿಸಲು ಚಿಲುಮೆ ಸಂಸ್ಥೆಗೆ ಅವಕಾಶ ನೀಡಿದ್ದೇ ಕಾಂಗ್ರೆಸ್ ಪಕ್ಷದ ಸರ್ಕಾರ. 2013ರಿಂದ ಈವರೆಗೆ ನಡೆದಿರುವ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ತನಿಖೆ ನಡೆಸಬೇಕು’ ಎಂದು ಕೇಂದ್ರ ಚುನಾವಣಾ ಆಯೋಗವನ್ನು ಬಿಜೆಪಿ ಒತ್ತಾಯಿಸಿದೆ.

ಶಾಸಕರಾದ ಎನ್. ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ, ಎಲ್.ಎ. ರವಿಸುಬ್ರಹ್ಮಣ್ಯ ನೇತೃತ್ವದ ಬಿಜೆಪಿ ಮುಖಂಡರ ನಿಯೋಗ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರನ್ನು ಶನಿವಾರ ಭೇಟಿ ಮಾಡಿ ಮನವಿ ಸಲ್ಲಿಸಿತು.

‘2017ರಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಚಿಲುಮೆ ಸಂಸ್ಥೆಗೆ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿತ್ತು. ಈಗ ಕಾಂಗ್ರೆಸ್ ಮುಖಂಡರು ರಾಜಕೀಯ ಲಾಭಕ್ಕಾಗಿ ಬಿಜೆಪಿ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ’ ಎಂದು ಬಿಜೆಪಿ ಆರೋಪಿಸಿದೆ.

ಒಬ್ಬ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಕಡೆ ಇರುವುದು ಸರಿಯಲ್ಲ. ಅಂತಹ ಹೆಸರುಗಳನ್ನು ಕೈಬಿಟ್ಟಿರುವುದನ್ನೇ ಕಾಂಗ್ರೆಸ್ ಪಕ್ಷ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ. ದುರುದ್ದೇಶದಿಂದ ಆರೋಪ ಮಾಡುತ್ತಿರುವ ಕುರಿತೂ ತನಿಖೆ ನಡೆಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ರೂಪದರ್ಶಿ ಮೇಲೆ ಸಾಮೂಹಿಕ ಅತ್ಯಾಚಾರ

ಕಾಸರಗೋಡು: 19 ವರ್ಷದ ರೂಪದರ್ಶಿ ಮೇಲೆ ಕೊಚ್ಚಿಯಲ್ಲಿ ಚಲಿಸುತ್ತಿದ್ದ ಕಾರಿನಲ್ಲಿ ಸಾಮೂಹಿಕ ಅತ್ಯಾಚಾರ ನಡೆದಿದ್ದು, ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಕೊಚ್ಚಿಯ ಕೊಡಂಗಲ್ಲೂರು ನಿತಿನ್, ವಿವೇಕ್, ಸುದೀಪ್ ಹಾಗೂ ರಾಜಸ್ಥಾನದ ಡಿಂಪಲ್ ಲಾಂಬಾ ಬಂಧಿತರು.

ರೂಪದರ್ಶಿ ಕೊಚ್ಚಿಯ ಕಕ್ಕನಾಡಿನಲ್ಲಿ ವಾಸ್ತವ್ಯವಿದ್ದು, ಅಲ್ಲಿಂದ ಆಕೆಯ ಗೆಳತಿಯ ಜೊತೆಗೆ ಗುರುವಾರ ರಾತ್ರಿ ಆರೋಪಿಗಳು ಕಾರಿನಲ್ಲಿ ಕರೆದೊಯ್ದಿದ್ದರು. ಅವರೆಲ್ಲರೂ ಕೊಚ್ಚಿಯ ಡ್ಯಾನ್ಸ್ ಬಾರ್‌ವೊಂದರಲ್ಲಿ ಮದ್ಯ ಸೇವಿಸಿದ್ದು, ರೂಪದರ್ಶಿ ಕುಸಿದು ಬಿದ್ದಿದ್ದಳು. ಅಲ್ಲಿಂದ ಆಕೆಯನ್ನು ಕಾರಿನಲ್ಲಿ ಹಾಕಿ, ಕರೆದೊಯ್ದ ಆರೋಪಿಗಳು, ಗೆಳತಿಯನ್ನು ಬಿಟ್ಟು ಹೋಗಿದ್ದರು.

ಕಾರು ಚಲಿಸುತ್ತಿದ್ದ ವೇಳೆಯಲ್ಲಿ ಸುಮಾರು 45 ನಿಮಿಷ ಸಾಮೂಹಿಕ ಅತ್ಯಾಚರ ನಡೆಸಿದ್ದು, ಬಳಿಕ ಕಕ್ಕಿನಾಡಿನ ವಸತಿಯಲ್ಲಿ ಬಿಟ್ಟು ಪರಾರಿಯಾಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಕೆಯನ್ನು ಕಳಮಶ್ಶೇರಿಯ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾರ್‌ನಲ್ಲಿ ತನಗೆ ಪಾನೀಯದಲ್ಲಿ ಅಮಲುಪದಾರ್ಥ ಬೆರೆಸಿ ಕೊಡಲಾಗಿತ್ತು ಎಂದು ರೂಪದರ್ಶಿ ದೂರಿದ್ದಾಳೆ. ಬಾರ್‌ಗೆ ತೆರಳಿದ್ದ ಗೆಳತಿ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಅತ್ಯಾಚಾರ: ಬಿಎಸ್‌ಎಫ್ ಸಿಬ್ಬಂದಿ ಬಂಧನ

ಜೈಪುರ (ಪಿಟಿಐ): ರಾಜಸ್ಥಾನದ ಶ್ರೀ ಗಂಗಾನಗರ ಜಿಲ್ಲೆಯಲ್ಲಿ 35 ವರ್ಷದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಆರೋಪದ ಮೇಲೆ ಬಿಎಸ್‌ಎಫ್‌ನ ಮೂವರು ಸಿಬ್ಬಂದಿ ಸೇರಿ ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಶನಿವಾರ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ಶುಕ್ರವಾರ ರಾತ್ರಿ ನಡೆದಿದ್ದು, ಸಂತ್ರಸ್ತೆ ರೈಸಿಂಗ್ ನಗರ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರು ನೀಡಿದ್ದು, ಎಫ್ಐಆರ್ ದಾಖಲಾಗಿದೆ. ಆಕೆಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದು, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿದೆ.

ಮಹಿಳೆಯು ನ್ಯಾಯಾಧೀಶರ ಮುಂದೆ ತನ್ನ ಹೇಳಿಕೆ ನೀಡಿದ ನಂತರ ಐದು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳ ಪೈಕಿ ಬಿಎಸ್‌ಎಫ್‌ನ ಒಬ್ಬ ಹೆಡ್ ಕಾನ್‌ಸ್ಟೆಬಲ್, ಇಬ್ಬರು ಕಾನ್‌ಸ್ಟೆಬಲ್‌ಗಳು ಸೇರಿದ್ದಾರೆ ಎಂದು ಶ್ರೀ ಗಂಗಾನಗರದ ಪೊಲೀಸ್ ವರಿಷ್ಠಾಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ಪರಿಚಿತ ವ್ಯಕ್ತಿಗಳು ತುಪ್ಪ ಮತ್ತು ಇತರ ವಸ್ತುಗಳನ್ನು ಖರೀದಿಸುವ ನೆಪದಲ್ಲಿ ತನ್ನನ್ನು ಬಿಎಸ್‌ಎಫ್ ಸಿಬ್ಬಂದಿ ಹಾಜರಿದ್ದ ಏಕಾಂತ ಸ್ಥಳಕ್ಕೆ ಕರೆದೊಯ್ದರು. ನಂತರ ಅಲ್ಲಿ ನನ್ನ ಮೇಲೆ ಅತ್ಯಾಚಾರ ವೆಸಗಿದರು ಎಂದು 35 ವರ್ಷದ ಮಹಿಳೆ ಹೇಳಿದ್ದಾಳೆ’ ಎಂದು ಅವರು ತಿಳಿಸಿದರು.

ಸ್ಥಿತಿವಂತರನ್ನೂ ಆಕರ್ಷಿಸುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ

ಒಂದನೇ ಪುಟದಿಂದ

1995ರಲ್ಲಿ ಆರಂಭವಾಗಿದ್ದ ಶಾಲೆಯನ್ನು ಅಂದಿನ ಶಿಕ್ಷಣ ಸಚಿವ ಎಚ್.ಜಿ. ಗೋವಿಂದೇಗೌಡರು ಉದ್ಘಾಟಿಸಿದ್ದರು. ಈಚೆಗೆ ಶಾಲಾ ಕಟ್ಟಡ ಹಳೆಯದಾಗಿ ನಿರ್ವಹಣೆ ಇಲ್ಲದೇ ಸೊರಗಿತ್ತು. ಕ್ರಮೇಣ ಮಕ್ಕಳ ಸಂಖ್ಯೆ ಕ್ಷೀಣಿಸಿತ್ತು. 1ರಿಂದ 7ನೇ ತರಗತಿಯವರೆಗಿನ ಮಕ್ಕಳ ಸಂಖ್ಯೆ 100ರ ಒಳಗೆ ಕುಸಿದಿತ್ತು. ಇಂತಹ ಸಮಯದಲ್ಲಿ ವಿಪ್ರೊ ಫೌಂಡೇಷನ್ ಶಾಲೆಯ ಜೀರ್ಣೋದ್ಧಾರಕ್ಕೆ ಯೋಜನೆ ರೂಪಿಸಿತ್ತು.

2019ರಲ್ಲಿ ಯೋಜನೆ ಕೈಗೆತ್ತಿಕೊಂಡ ವಿಪ್ರೊ 10 ಕೊಠಡಿಗಳ ನೂತನ ಶಾಲಾ ಕಟ್ಟಡ ನಿರ್ಮಿಸಿದೆ. 5 ಹಳೆಯ ಕೊಠಡಿಗಳಿಗೆ ಕಾಯಕಲ್ಪ ನೀಡಲಾಗಿದೆ. ಇಡೀ ಮೈದಾನವನ್ನು ಮೂರು ಭಾಗಗಳಲ್ಲಿ ಸಮತಟ್ಟುಗೊಳಿಸಲಾಗಿದೆ. ಬ್ಯಾಸ್ಕೆಟ್ ಬಾಲ್, ಥ್ರೋಬಾಲ್, ಬ್ಯಾಡ್ಮಿಂಟನ್ ಆಟಗಳಿಗೆ ಸಜ್ಜುಗೊಳಿಸಲಾಗಿದೆ. ವಿವಿಧ ಬಣ್ಣಗಳಿಂದ ಕೂಡಿದ ಪೈಪ್‌ಗಳ ಮೂಲಕ ಶಾಲಾ ಸೌಂದರ್ಯಕ್ಕೆ ಕಾರ್ಪೊರೇಟ್ ಸ್ಪರ್ಶ ನೀಡಲಾಗಿದೆ. ಮಕ್ಕಳಿಗೆ ಆಧುನಿಕ ಸೌಲಭ್ಯಗಳ ಡೆಸ್ಕ್, ಬೆಂಚ್, ಕಲಿಕಾ ಸಾಮಗ್ರಿಗಳ ವ್ಯವಸ್ಥೆ ಮಾಡಲಾಗಿದೆ.

ಶಾಲೆಯಲ್ಲಿ ಕೂಲಿ ಕಾರ್ಮಿಕರ ಮಕ್ಕಳು, ಕಟ್ಟಡ ನಿರ್ಮಾಣ ಸೇರಿದಂತೆ ಇತರೆ ಕೆಲಸಗಳಿಗಾಗಿ ವಲಸೆ ಬಂದ ಉತ್ತರ ಕರ್ನಾಟಕ, ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶದ ಕಾರ್ಮಿಕರ ಮಕ್ಕಳು ಇದ್ದಾರೆ. ಈಗ ಮಕ್ಕಳ ಸಂಖ್ಯೆ 200ರ ಗಡಿ ಮುಟ್ಟುತ್ತಿದೆ. ಮುಖ್ಯ ಶಿಕ್ಷಕಿ ಸೇರಿದಂತೆ ಆರು ಶಿಕ್ಷಕರು ಇದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕ, ಪ್ರತ್ಯೇಕ ಆಧುನಿಕ ಶೌಚಾಲಯಗಳು ಅಲ್ಲಿವೆ. ಎರಡು ಕೈತೋಟಗಳನ್ನು ನಿರ್ಮಿಸಲಾಗಿದ್ದು, ಮಧ್ಯಾಹ್ನದ ಬಿಸಿಯೂಟಕ್ಕೆ ಅಗತ್ಯವಾದ ತರಕಾರಿಗಳನ್ನು ಮಕ್ಕಳೇ ಬೆಳೆಸುತ್ತಿದ್ದಾರೆ. ಅಷ್ಟರ ಮಟ್ಟಿಗೆ ಶಾಲೆ ಸ್ವಾವಲಂಬಿಯಾಗಿದೆ.

ವಿಪ್ರೊ ಫೌಂಡೇಷನ್ ಮೂಲಸೌಕರ್ಯ ಕಲ್ಪಿಸಿದೆ. ಶಾಲೆಯ ಶಿಕ್ಷಕರು ಸಮಯದ ಮಿತಿ ಇಲ್ಲದೆ ಕಲಿಸುತ್ತಿದ್ದಾರೆ. ಈ ಬದಲಾವಣೆ ಹಿಂದೆ ತಪಸ್ಸಿನಂತಹ ಶ್ರಮವಿದೆ.

ವರುಣ್ ನಲ್ಲೂರು, ಮುಖ್ಯಸ್ಥರು, ಜಿಲ್ಲಾ ಸಂಸ್ಥೆ, ಅಜೀಂ ಪ್ರೇಮ್‌ಜೀ ಫೌಂಡೇಷನ್

ವಿಪ್ರೊ ಆರ್ಥಿಕ ನೆರವು, ಅಜೀಂ ಪ್ರೇಮ್‌ಜೀ ಅವರ ಶೈಕ್ಷಣಿಕ ಸಹಕಾರ ಇದಕ್ಕೆ ಕಾರಣ. ಒಂದು ಸರ್ಕಾರಿ ಶಾಲೆಯನ್ನು ಮಾದರಿಯಾಗಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ.

ಎಚ್.ಎಸ್.ಇಂದುಮತಿ

ಮುಖ್ಯ ಶಿಕ್ಷಕಿ

ಗಮನ ಸೆಳೆವ ಗ್ರಂಥಾಲಯ

ಈ ಶಾಲೆಯ ಜೀವಾಳವೇ ಅಲ್ಲಿನ ಗ್ರಂಥಾಲಯ. ಪಠ್ಯ ಚಟುವಟಿಕೆಗಳು, ಸಾಹಿತ್ಯ, ಕಲೆ, ವಿಜ್ಞಾನ, ಸೇರಿದಂತೆ 6 ಸಾವಿರಕ್ಕೂ ಹೆಚ್ಚು ಪುಸ್ತಕಗಳು ಅಲ್ಲಿವೆ. ಕನ್ನಡ, ಇಂಗ್ಲಿಷ್, ಹಿಂದಿಯಲ್ಲೂ ಇರುವ ಪುಸ್ತಕಗಳನ್ನು ಮಕ್ಕಳ ನಿರ್ವಹಣೆ ಮಾಡುತ್ತಾರೆ. ಕಡತದಲ್ಲಿ ದಾಖಲಿಸಿ, ಮನೆಗಳಿಗೂ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗಿದೆ. ಗ್ರಂಥಾಲಯದಲ್ಲೇ ಕಂಪ್ಯೂಟರ್ ಕಲಿಕೆಗೂ ವ್ಯವಸ್ಥೆ ಮಾಡಲಾಗಿದೆ.

ರಾತ್ರಿವರೆಗೂ ಶಾಲೆಯಲ್ಲೇ ಓದು

ಅಜೀಂ ಪ್ರೇಮ್‌ಜೀ ಫೌಂಡೇಷನ್ ಶೈಕ್ಷಣಿಕ ಚಟುವಟಿಕೆಗಳಿಗೆ ಸಹಕಾರ ನೀಡುತ್ತಿದೆ. ಅದಕ್ಕಾಗಿ ಇಬ್ಬರು ಸಂಪನ್ಮೂಲ ವ್ಯಕ್ತಿಗಳನ್ನು ನೇಮಿಸಿದೆ. ಮಕ್ಕಳ ನಿರಂತರ ಕಲಿಕೆಗೆ ಒತ್ತು ನೀಡಿದೆ. ಪ್ರತಿ ತಿಂಗಳು ಅವಲೋಕನ, ಮೌಲ್ಯಮಾಪನ ಮಾಡುತ್ತಿದ್ದಾರೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸಂಜೆ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಶಾಲೆಗೆ ಸೇರಿದ ಅನ್ಯಭಾಷಿಕರ ಮಕ್ಕಳಿಗೆ ಕನ್ನಡ ಭಾಷೆ ಕಲಿಸಲಾಗಿದೆ. ಟೆಂಟ್‌ಗಳಲ್ಲಿ ವಾಸಿಸುವ ಕುಟುಂಬಗಳ ಮಕ್ಕಳು ರಾತ್ರಿಯವರೆಗೂ ಶಾಲೆಯಲ್ಲೇ ಓದಿಕೊಳ್ಳಲು ಅವಕಾಶ ನೀಡಲಾಗಿದೆ.

ಕ್ರಿಯಾಶೀಲ ಕಲಿಕೆಗೆ ಎಲ್ಲ ಅವಕಾಶ ದೊರಕಿದೆ. ವಿಶೇಷ ತರಗತಿಗಳು ಉಪಯುಕ್ತವಾಗಿವೆ. ಮನೆಯಲ್ಲಿ ವಿದ್ಯುತ್ ಸೌಲಭ್ಯವಿಲ್ಲದೆ ಕಾರಣ ಶಾಲೆ ಮುಗಿದ ನಂತರವೂ ಇಲ್ಲೇ ಓದುತ್ತೇವೆ.

ಪೂರ್ಣಿಮಾ, ಕಲ್ಪನಾ, ಕೆಂಪಾ, ವಿದ್ಯಾರ್ಥಿಗಳು

ಸತತ ಮೂರನೇ ದಿನ ಐಟಿ ಶೋಧ

ಚಿಕ್ಕಮಗಳೂರು: ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಗಾಯತ್ರಿ ಶಾಂತೇಗೌಡ ಅವರ ಮನೆ, ಕಚೇರಿಯಲ್ಲಿ ಆದಾಯ ತೆರಿಗೆ (ಐಟಿ) ತಂಡದವರು ಸತತ ಮೂರನೇ ದಿನವೂ (ಶನಿವಾರ) ಶೋಧ ನಡೆಸಿದರು.

ಗಾಯತ್ರಿ ಅವರ ಸಂಬಂಧಿ ಪರಮೇಶ್, ಗುತ್ತಿಗೆದಾರ ನಾಸೀರ್ ಅವರ ಮನೆಗಳಲ್ಲಿ ಶೋಧ ನಡೆಸಿದ್ದಾರೆ. ವಾಹನ ಚಾಲಕರಿಂದಲೂ ಮಾಹಿತಿ ಸಂಗ್ರಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಿಎಫ್‌ಐ ವಿರುದ್ಧ ಆರೋಪಪಟ್ಟಿ

ನವದೆಹಲಿ(ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ ಹಾಗೂ ಅದರ ಮೂವರು ಪದಾಧಿಕಾರಿಗಳ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಶನಿವಾರ ಇಲ್ಲಿನ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ನವೆಂಬರ್ 21ರಂದು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಶೈಲೇಂದರ್ ಮಲಿಕ್ ಅವರು ಈ ಕುರಿತು ವಿಚಾರಣೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಪಿಎಫ್‌ಐ ದೆಹಲಿ ಘಟಕದ ಅಧ್ಯಕ್ಷ ಪರ್ವೇಜ್ ಅಹಮ್ಮದ್, ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಇಲಿಯಾಸ್ ಮತ್ತು ಕಚೇರಿ ಕಾರ್ಯದರ್ಶಿ ಅಬ್ದುಲ್ ಮುಖೀತ್ ಎಂಬುವವರ ಹೆಸರುಗಳು ಆರೋಪಪಟ್ಟಿಯಲ್ಲಿವೆ ಎಂದು ಜಾರಿ ನಿರ್ದೇಶನಾಲಯದ ಮೂಲಗಳು ತಿಳಿಸಿವೆ.

₹120 ಕೋಟಿ ಹಣ ಅಕ್ರಮ ವರ್ಗಾವಣೆ ನಡೆಸಿದ ಆರೋಪದಲ್ಲಿ ಈ ಮೂವರು ಆರೋಪಿಗಳನ್ನು ಸೆಪ್ಟೆಂಬರ್ 22ರಂದು ಬಂಧಿಸಲಾಗಿತ್ತು.

ಇವರ ವಿರುದ್ಧ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ದಾಖಲಿಸಿಕೊಂಡಿದ್ದ ಎಫ್‌ಐಆರ್ ಆಧರಿಸಿ ಇ.ಡಿ. ಕೂಡ ಪ್ರಕರಣ ದಾಖಲಿಸಿಕೊಂಡಿತ್ತು.

‘ಆರೋಪಿಗಳು ಹವಾಲ, ಬ್ಯಾಂಕ್ ಮೂಲಕ ವರ್ಗಾವಣೆ ಹಾಗೂ ದೇಣಿಗೆಯ ಮೂಲಕ ಹಣ ಸಂಗ್ರಹಿಸಿ ಅದನ್ನು ಕಾನೂನುಬಾಹಿರ ಚಟುವಟಿಕೆಗಳಿಗೆ ವಿನಿಯೋಗಿಸಿರುವುದು ತನಿಖೆಯಿಂದ ತಿಳಿದುಬಂದಿದೆ’ ಎಂದು ಇ.ಡಿ. ಆರೋಪಪಟ್ಟಿಯಲ್ಲಿ ಹೇಳಿದೆ.

‘ಹಲವಾರು ವರ್ಷಗಳಿಂದಲೂ ಈ ಸಂಘಟನೆಗೆ ವಿದೇಶದಿಂದ ದೇಣಿಗೆ ಹರಿದು ಬಂದಿದೆ’ ಎಂದೂ ಉಲ್ಲೇಖಿಸಲಾಗಿದೆ.

ಮೂವರು ಆರೋಪಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ನಡೆಸಿದ ಕಾರ್ಯಾಚರಣೆಯ ವೇಳೆ ಐದು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು ಎಂದೂ ಜಾರಿ ನಿರ್ದೇಶನಾಲಯ ಹೇಳಿದೆ.

ಭಯೋತ್ಪಾದಕ ಚಟುವಟಿಕೆಗಳೊಂದಿಗೆ ನಂಟು ಹೊಂದಿರುವ ಆರೋಪದಲ್ಲಿ ಪಿಎಫ್‌ಐ ಸಂಘಟನೆಯನ್ನು ಕೇಂದ್ರ ಸರ್ಕಾರವು ಈಚೆಗೆ ನಿಷೇಧಿಸಿತ್ತು.

ಚುನಾವಣಾ ಆಯುಕ್ತರಾಗಿ ಅರುಣ್ ಗೋಯಲ್ ನೇಮಕ

ನವದೆಹಲಿ (ಪಿಟಿಐ): ನಿವೃತ್ತ ಐಎಎಸ್ ಅಧಿಕಾರಿ ಅರುಣ್ ಗೋಯಲ್ ಅವರನ್ನು ಕೇಂದ್ರ ಚುನಾವಣಾ ಆಯುಕ್ತರನ್ನಾಗಿ ಶನಿವಾರ ನೇಮಕ ಮಾಡಲಾಗಿದೆ.

1985ರ ಬ್ಯಾಚ್‌ನ ಪಂಜಾಬ್ ಕೇಡರ್ ಅಧಿಕಾರಿಯಾಗಿದ್ದ ಅರುಣ್, ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಮತ್ತು ಚುನಾವಣಾ ಆಯುಕ್ತ ಅನೂಪ್ ಚಂದ್ರ ಪಾಂಡೆ ಅವರ ಜತೆಗೂಡಿ ಕಾರ್ಯನಿರ್ವಹಿಸಲಿದ್ದಾರೆ.

ಕಳೆದ ಮೇ ತಿಂಗಳಲ್ಲಿ ಮುಖ್ಯ ಚುನಾವಣಾ ಆಯುಕ್ತರಾಗಿ ರಾಜೀವ್ ಕುಮಾರ್ ಅಧಿಕಾರ ವಹಿಸಿಕೊಂಡ ನಂತರ ಆಯುಕ್ತರ ಹುದ್ದೆ ಖಾಲಿ ಇತ್ತು.

ಧರ್ಮಶಾಲಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಟಿಬೆಟ್ ಧರ್ಮಗುರು ದಲೈಲಾಮಾ ಅವರಿಗೆ ಹಿಮಾಚಲ ಪ್ರದೇಶದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಆರ್ಲೇಕರ್ ‘ಗಾಂಧಿ ಮಂಡೇಲಾ’ ಪ್ರಶಸ್ತಿ ಪ್ರದಾನ ಮಾಡಿದರು.

ದಲೈಲಾಮಾಗೆ ‘ಗಾಂಧಿ ಮಂಡೇಲಾ’ ಪ್ರಶಸ್ತಿ ಪ್ರದಾನ

ಧರ್ಮಶಾಲಾ, ಹಿಮಾಚಲ ಪ್ರದೇಶ (ಪಿಟಿಐ): ಟಿಬೆಟ್‌ನ ಧರ್ಮಗುರು ದಲೈಲಾಮಾ ಅವರಿಗೆ ಶನಿವಾರ ಇಲ್ಲಿ ನಡೆದ ಸಮಾರಂದಲ್ಲಿ ‘ಗಾಂಧಿ ಮಂಡೇಲಾ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗಾಂಧಿ ಮಂಡೇಲಾ ಫೌಂಡೇಷನ್ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಪ್ರಶಸ್ತಿ ಪ್ರದಾನ ಮಾಡಿದರು. ‘ವಿಶ್ವದಲ್ಲಿಯೇ ಈ ಪ್ರಶಸ್ತಿಗೆ ದಲೈಲಾಮಾ ಸೂಕ್ತ ವ್ಯಕ್ತಿ’ ಎಂದು ಅವರು ಶ್ಲಾಘಿಸಿದರು.

ದಲೈಲಾಮಾ ಶಾಂತಿಯ ರಾಯಭಾರಿಯಾಗಿದ್ದಾರೆ. ಅಹಿಂಸೆ ಕುರಿತ ಅವರ ಸಿದ್ಧಾಂತ ಪ್ರಸ್ತುತ ಜಗತ್ತಿಗೆ ಅಗತ್ಯವಾಗಿದ್ದು, ಇದು ಸೇನೆಗಿಂತಲೂ ಹೆಚ್ಚು ಪರಿಣಾಮಕಾರಿಯಾದುದು ಎಂದು ರಾಜ್ಯಪಾಲರು ಹೇಳಿದರು.

ದಲೈಲಾಮಾ ಅವರಿಗೆ ಗಡಿಯ ಮಿತಿ ಇಲ್ಲ. ಮಹಾತ್ಮ ಗಾಂಧಿ, ನೆಲ್ಸನ್ ಮಂಡೇಲಾ ಬಳಿಕ ವಿಶ್ವನಾಯಕರಾಗುವ ಅರ್ಹತೆ ಹೊಂದಿದ್ದಾರೆ ಎಂದರು.

ಪ್ರಶಸ್ತಿ ಸ್ವೀಕರಿಸಿದ ದಲೈಲಾಮಾ ಅವರು, ಅಹಿಂಸೆ ಮತ್ತು ಸಹಾನುಭೂತಿ ಪ್ರಸ್ತುತ ವಿಶ್ವಶಾಂತಿಗೆ ಅಗತ್ಯವಾಗಿ ಬೇಕಾಗಿದೆ. ಶಾಂತಿ ಮತ್ತು ಚರ್ಚೆಯಿಂದ ಯಾವುದೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂದು ಹೇಳಿದರು.

ತಮಿಳು ಪರಂಪರೆ ಕಾಪಾಡುವುದು ಎಲ್ಲರ ಜವಾಬ್ದಾರಿ: ಮೋದಿ

ವಾರಾಣಸಿ, ಉತ್ತರಪ್ರದೇಶ (ಪಿಟಿಐ): ‘ತಮಿಳಿನ ಪರಂಪರೆಯನ್ನು ಉಳಿಸಿ ಬೆಳೆಸುವುದು 130 ಕೋಟಿ ಭಾರತೀಯರ ಜವಾಬ್ದಾರಿಯಾಗಿದೆ. ಇದನ್ನು ನಿರ್ಲಕ್ಷ್ಯಿಸಿದರೆ ಅದು ರಾಷ್ಟ್ರಕ್ಕೆ ಮಾಡುವ ದೊಡ್ಡ ಅಪಚಾರವಾಗುತ್ತದೆ’ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ವಾರಾಣಸಿಯಲ್ಲಿ ಹಮ್ಮಿಕೊಂಡಿರುವ ‘ಕಾಶಿ–ತಮಿಳು ಸಂಗಮ’ ಕಾರ್ಯಕ್ರಮ ಉದ್ಘಾಟಿಸಿ ಶನಿವಾರ ಮಾತನಾಡಿದ ಅವರು, ‘ಜಗತ್ತಿನ ಅತ್ಯಂತ ಹಳೆಯ ಭಾಷೆಗಳಲ್ಲಿ ತಮಿಳು ಕೂಡ ಒಂದು. ಅದಕ್ಕೆ ಸೂಕ್ತ ಗೌರವ ನೀಡುವ ಕೆಲಸ ಆಗಿಲ್ಲ’ ಎಂದಿದ್ದಾರೆ.

‘ಕವಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಸುಬ್ರಮಣ್ಯ ಭಾರತಿ ಅವರು ಕಾಶಿಯೊಂದಿಗೆ ಉತ್ತಮ ನಂಟು ಹೊಂದಿದ್ದರು. ಕಾಶಿಯಲ್ಲೇ ವ್ಯಾಸಂಗ ಮಾಡಿದ್ದ ಅವರು ಹಲವು ವರ್ಷಗಳ ಕಾಲ ಇಲ್ಲೇ ನೆಲೆಸಿದ್ದರು. ಅವರ ಸ್ಮರಣಾರ್ಥವಾಗಿ ಬನಾರಸ್ ಹಿಂದೂ ವಿಶ್ವವಿದ್ಯಾಲಯವು ಪೀಠ ಸ್ಥಾಪಿಸುತ್ತಿರುವುದು ಪ್ರಶಂಶನೀಯ’ ಎಂದರು.

‘ನಾವು ತಮಿಳು ಭಾಷೆಯನ್ನು ನಿರ್ಬಂಧಗಳಲ್ಲಿ ಇರಿಸಿದರೆ ಅದಕ್ಕೆ ದೊಡ್ಡ ಹಾನಿ ಮಾಡಿದಂತಾಗುತ್ತದೆ. ಭಾಷಾ ತಾರತಮ್ಯ ತೊಡೆದುಹಾಕಬೇಕು. ಭಾವನಾತ್ಮಕ ಏಕತೆ ಸ್ಥಾಪಿಸುವುದಕ್ಕೆ ಒತ್ತು ನೀಡಬೇಕು’ ಎಂದಿದ್ದಾರೆ.

ಪ್ರಧಾನಿ ಮೋದಿ

‘ಕಾಶಿ ಮತ್ತು ತಮಿಳುನಾಡು, ಸಂಸ್ಕೃತಿ ಮತ್ತು ಸಭ್ಯತೆಯ ನೆಲೆಗಳಾಗಿವೆ. ಜಗತ್ತಿನ ಅತ್ಯಂತ ಹಳೆಯ ಭಾಷೆಗಳಾದ ಸಂಸ್ಕೃತ ಹಾಗೂ ತಮಿಳಿನ ನೆಲೆವೀಡಾಗಿವೆ. ನಮ್ಮ ದೇಶದಲ್ಲಿ ‘ಸಂಗಮ’ಕ್ಕೆ ಪವಿತ್ರ ಸ್ಥಾನವಿದೆ. ಅದು ನದಿಗಳ ಸಂಗಮವಾಗಿರಬಹುದು, ಜ್ಞಾನ–ವಿಜ್ಞಾನ, ಸಮಾಜ–ಸಂಸ್ಕೃತಿಯ ಸಂಗಮವಿರಬಹುದು. ಎಲ್ಲವನ್ನೂ ನಾವು ಸಂಭ್ರಮಿಸಬೇಕು. ಕಾಶಿ–ತಮಿಳು ಸಂಗಮವು ದೇಶದ ವೈವಿಧ್ಯತೆ ಮತ್ತು ಅನನ್ಯತೆಯ ಪ್ರತೀಕ. ಇದು ಗಂಗಾ ಮತ್ತು ಯಮುನಾ ನದಿಗಳ ಸಂಗಮದಷ್ಟೇ ಪವಿತ್ರವಾದುದು’ ಎಂದು ಹೇಳಿದ್ದಾರೆ.

‘ಸಾವಿರಾರು ವರ್ಷಗಳಷ್ಟು ಹಳೆಯದಾದ ನಮ್ಮ ಸಂಪ್ರದಾಯ ಹಾಗೂ ಪರಂಪರೆಯನ್ನು ಸಶಕ್ತಗೊಳಿಸುವ ಹಾಗೂ ದೇಶ ಒಗ್ಗೂಡಿಸುವ ಕೆಲಸ ಆಗಬೇಕಿದೆ. ದುರದೃಷ್ಟವಶಾತ್ ಈ ದಿಸೆಯಲ್ಲಿ ಹೆಚ್ಚಿನ ಪ್ರಯತ್ನಗಳು ನಡೆದಿಲ್ಲ. ಆದರೆ ಕಾಶಿ–ತಮಿಳು ಸಂಗಮವು ಈ ಕಾರ್ಯಕ್ಕೆ ವೇದಿಕೆ ಕಲ್ಪಿಸುವ ಭರವಸೆ ಇದೆ’ ಎಂದಿದ್ದಾರೆ.

ಕಾಶಿ, ತಮಿಳುನಾಡಿನ ಸಾಂಸ್ಕೃತಿಕ ಬಾಂಧವ್ಯ ಗಟ್ಟಿಗೊಳಿಸುವ ಗುರಿಯೊಂದಿಗೆ ಐಐಟಿ ಮದ್ರಾಸ್, ಬಿಎಚ್‌ಯು ಆಯೋಜಿಸಿರುವ ಈ ಕಾರ್ಯಕ್ರಮ 1 ತಿಂಗಳು ನಡೆಯಲಿದೆ.

ಸಾವರ್ಕರ್ ₹ 60 ಪಿಂಚಣಿ ಪಡೆದಿದ್ದು ಏಕೆ?: ಪಟೋಲೆ

ಬುಲ್ಡಾನಾ (ಪಿಟಿಐ): ‘ಬ್ರಿಟಿಷರಿಂದ ಸಾವರ್ಕರ್ ಅವರು ₹ 60 ಪಿಂಚಣಿ ಪಡೆದಿದ್ದು ಏಕೆ? ಎಂಬ ಪ್ರಶ್ನೆಗೆ ರಾಹುಲ್ ಗಾಂಧಿ ಟೀಕಾಕಾರರು ಮೊದಲು ಉತ್ತರಿಸಲಿ’ ಎಂದು ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ವರು ಹೇಳಿದ್ದಾರೆ.

ಬ್ರಿಟಿಷರಿಗೆ ಹೆದರಿ ಸಾವರ್ಕರ್ ಕ್ಷಮಾದಾನ ಪತ್ರ ಬರೆದಿದ್ದರು ಎಂಬ ರಾಹುಲ್ ಗಾಂಧಿ ಹೇಳಿಕೆ ಚರ್ಚೆಗೆ ಆಸ್ಪದವಾಗಿತ್ತು. ಇದು, ರಾಜ್ಯದಲ್ಲಿ ಮಹಾವಿಕಾಸ ಆಘಾಡಿ ಮೈತ್ರಿಕೂಟಕ್ಕೆ ಧಕ್ಕೆ ತರಬಹುದು ಎಂಬ ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಹೇಳಿಕೆ ಕುರಿತ ಪ್ರಶ್ನೆಗೆ ಹೀಗೆ ಪ್ರತಿಕ್ರಿಯಿಸಿದ್ದಾರೆ.

‘ರಾಹುಲ್ ಗಾಂಧಿ ಅವರ ನೇತೃತ್ವದ ಭಾರತ್ ಜೋಡೊ ಯಾತ್ರೆಗೆ ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕಾಂಗ್ರೆಸ್ ಪಕ್ಷ ಸಂಘಟಿತವಾಗಿದೆ. ಹೊಸ ಉತ್ಸಾಹದಲ್ಲಿದೆ. ಪಕ್ಷ ಎಂದಿಗೂ ಅಹಿಂಸೆಯನ್ನೇ ಪ್ರತಿಪಾದಿಸಲಿದೆ’ ಎಂದು ಹೇಳಿದರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ.,
ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಟೆಂಡರ್ ಪ್ರಕಟಣೆಯನ್ನು ಮುಂದೂಡಿರುವ
ದಿನಾಂಕ: 18.11.2022

ಈ ಕಛೇರಿಯ ಮೂಲ ಟೆಂಡರ್ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 23/2022–23 Date:14.11.2022 ರ ಕಾಮಗಾರಿಯ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು ತಾಂತ್ರಿಕ ಕಾರಣಗಳಿಂದ ದಿ:24.11.2022 ರಿಂದ 09.12.2022 ರವರೆಗೆ ವಿಸ್ತರಿಸಲಾಗಿದೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 10.12.2022 ರಂದು 5.00 ಗಂಟೆಗೆ. (ಸಾಧ್ಯವಾದಲ್ಲಿ), ಉಳಿದಂತೆ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ,
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/742/2022–23 ಕಾನೀನಿನಿ, ಗೊರೂರು

ಅಂತರರಾಷ್ಟ್ರೀಯ ಸಮುದಾಯ ಹೆಗಲು ಕೊಡಬೇಕು: ಶಾ

ನವದೆಹಲಿ (ಪಿಟಿಐ): ಯಾವುದೇ ದೇಶವು ಏಕಾಂಗಿಯಾಗಿ ಭಯೋತ್ಪಾದನೆ ತಡೆಯಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಂತರರಾಷ್ಟ್ರೀಯ ಸಮುದಾಯವು ಹೆಗಲಿಗೆ ಹೆಗಲು ಕೊಟ್ಟು ಭಯೋತ್ಪಾದನೆ ವಿರುದ್ಧ ಹೋರಾಡಬೇಕು ಎಂದು ಕರೆ ನೀಡಿದರು.

‘ಭಯೋತ್ಪಾದನೆಗೆ ಹಣ ಇಲ್ಲ’ (ಎನ್‌ಎಂಎಫ್‌ಟಿ) ಸಮಾವೇಶದಲ್ಲಿ ಭಯೋತ್ಪಾದನೆಗೆ ಹಣಕಾಸು ನೆರವು ವಿಷಯದ ಕುರಿತು ಅವರು ಶನಿವಾರ ಮಾತನಾಡಿದರು. ‘ಭಯೋತ್ಪಾದಕರಿಗೆ ಸ್ವರ್ಗ ಎನಿಸಿರುವ ದೇಶಗಳಲ್ಲಿ ಅವರ ಅನಿಯಂತ್ರಿತ ಆರ್ಥಿಕ ಚಟುವಟಿಕೆಗಳಿಗೆ ಕಡಿವಾಣ ಹೇರಬೇಕಿದೆ. ಎಲ್ಲ ದೇಶಗಳು ತಮ್ಮ ಭೌಗೋಳಿಕ–ರಾಜಕೀಯ ಹಿತಾಸಕ್ತಿಗಳನ್ನು ಬದಿಗಿರಿಸಿ, ಈ ಯತ್ನದಲ್ಲಿ ತೊಡಗಿಸಿಕೊಳ್ಳಬೇಕಿದೆ’ ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮೈಸೂರು–ನಂಜನಗೂಡು ರಸ್ತೆ, ಬಂಡೀಪಾಳ್ಯ, ಮೈಸೂರು-570 025.
E-Mail:apmcmysore@rediffmail.com,
apmcmys@gmail.com, ದೂರವಾಣಿ:0821-2482389
ಸಂ:ಕೃಉಮಾಸ(ಮೈ)/1739/2022–23 ದಿನಾಂಕ : 17.11.2022

ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು ಇವರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಾರ್ವಜನಿಕ/ ಖಾಸಗಿ ಸಹಭಾಗಿತ್ವದಲ್ಲಿ ಶೀತಲಗೃಹ ನಿರ್ಮಿಸುವ ಸಂಬಂಧ ಆಸಕ್ತಿಯುಳ್ಳವರಿಂದ ಟೆಂಡರ್ ಆಹ್ವಾನಿಸಲಾಗಿದೆ. (Expression of Interest (EoI) of Private Developer for Establishment of 2 Nos Modern Cold storages in an extent of 1.0 Acres each in Main Market Yard of APMC MYSORE at Bandipalya on PPP basis).

ಟೆಂಡರ್ ವೇಳಾಪಟ್ಟಿ: ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ: **05–12–2022** ರಂದು ಸಂಜೆ 4.30 ಗಂಟೆ, ಪ್ರೀ–ಬಿಡ್ ಮೀಟಿಂಗ್ ದಿನಾಂಕ: **24– 11 –2022** ರಂದು ಬೆಳಿಗ್ಗೆ **11.30** ಗಂಟೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ: **07–12–2022** ರಂದು ಸಂಜೆ 5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ : https://eproc.karnataka.gov.in/eportal/index.seam

ಸಹಿ/–ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು
ಸಹಿ/–ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು

ಕರ್ನಾಟಕ ಸರಕಾರ
ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ
(ದೂರವಾಣಿ ಸಂಖ್ಯೆ: 08482–228366, ಫ್ಯಾಕ್ಸ್: 08482–240322)
(ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕರ್ನಾಟಕ, ಬೆಂಗಳೂರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ, ನವದೆಹಲಿಯಿಂದ ಅಂಗೀಕೃತಗೊಂಡಿದೆ)
Website :www.brims-bidar.in & E-mail–directorbrimsbidar2007@gmail.com
ಸಂಖ್ಯೆ: ಃRIMS/Tender/SC-ST/Books/18/2022-23/5125 Date: 17-11-2022

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರಿಗೆ 2022–23ನೇ ಸಾಲಿಗಾಗಿ ಎಸ್.ಸಿ.ಪಿ/ಟಿಎಸ್‌ಪಿ ಅನುದಾನದಡಿಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಬೇಕಾಗಿರುವ ವೈದ್ಯಕೀಯ ಪುಸ್ತಕಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಅವ್ಹಾನಿಸಲಾಗಿದೆ.

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರಿಗೆ 2022–23ನೇ ಸಾಲಿಗಾಗಿ ಎಸ್.ಸಿ.ಪಿ/ಟಿಎಸ್‌ಪಿ ಅನುದಾನದಡಿಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಬೇಕಾಗಿರುವ ವೈದ್ಯಕೀಯ ಪುಸ್ತಕಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಕರೆಯಯಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷಿಸಬಹುದು/ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಇ–ಪ್ರೋಕ್ಯೂರಮೇಂಟ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷಿಸಬಹುದು/ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಇ–ಪ್ರೋಕ್ಯೂರಮೇಂಟ್ ಸಲ್ಲಿಸಬಹುದು http://eproc.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಅಂತರ್ಜಾಲತಾಣವಾದ www.brimsbidar.in & http://bimsbidar.karnataka.gov.in ನಲ್ಲಿ ವಿಕ್ಷಿಸಬಹುದು.

1) ಟೆಂಡರ್ ಸಂಖ್ಯೆ : BRIMS/Tender/SC-ST/Books/18/2022-23. 2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : ದಿನಾಂಕ: 01–12–2022 ಸಂಜೆ: 4:00 ಗಂಟೆಯ ಒಳಗಾಗಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : ದಿನಾಂಕ: 02–12–2022 ಮು: 1100 ಗಂಟೆಗೆ. 4) ಇ.ಎಂ.ಡಿ : ರೂ. 1,87,500/– 5) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ: ನಿರ್ದೇಶಕರು ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್

ಗಮನಿಸಿ: ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ (e-procurement) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು
ವಾ.ಸಾ.ಸಂ.ಇ/ಬೀದರ/326/ಎಂಸಿ&ಎ/2022–23 ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ ಸರ್ಕಾರಿ ಕೇಂದ್ರ ಮುದ್ರಣಾಲಯ,
8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560 059.
ಸಂಖ್ಯೆ: ಡಿಪಿಎಸ್35ಸಿಎಸ್‌ಟಿ(ಜಿ) 2022-23 ದಿನಾಂಕ : 19-11-2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್ಮೆಂಟ್ ಮುಖಾಂತರ)

2023ನೇ ಸಾಲಿನ ಕರ್ನಾಟಕ ಸರ್ಕಾರದ ಕ್ಯಾಲೆಂಡರ್‌ಗಳ ನಾಲ್ಕು ವರ್ಣ ಮುದ್ರಣ ಹಾಗೂ 2023ನೇ ಸಾಲಿನ ಎಂಗೇಜ್‌ಮೆಂಟ್ ಡೈರಿಗಳ ಕೇಸ್ ಬೈಂಡಿಂಗ್ ಕಾರ್ಯ ನಿರ್ವಹಿಸಲು ಬೆಂಗಳೂರುನಲ್ಲಿನ (ಬಿಬಿಎಂಪಿ ವಲಯ) ಅರ್ಹ ಮುದ್ರಣ ಹಾಗೂ ಬೈಂಡಿಂಗ್ ಸಂಸ್ಥೆಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು **ಮೊತ್ತ ರೂ.15.16 ಲಕ್ಷಗಳಾಗಿದ್ದು**, ಇದರ ಒಟ್ಟು ಇ.ಎಂ.ಡಿ. ಮೊತ್ತ: **ರೂ.76,000/– ಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **06–12–2022**, ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: **25–11–2022** ರಂದು ಬೆಳಗ್ಗೆ **11.30** ಗಂಟೆಗೆ ಮೇಲ್ಕಂಡ ವಿಳಾಸದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿರುತ್ತದೆ. ವಿವರವಾದ ಟೆಂಡರ್ ದಸ್ತಾವೇಜನ್ನು **www.https://eproc.karnataka.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು.
DIPR/CP/RO3173/AAPL/2022-23

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಟರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ,
ಬೆಂಗಳೂರು – 560 023. ದೂರವಾಣಿ : 080–2955 7023
ಇಮೇಲ್ : cekhsdrp@gmail.com, cekhsdrp-hfws@karnataka.gov.in
ಸಂಖ್ಯೆ : ಆಕುಕಇ/ಇಂಘ/ಮುಇಂ/ತಾಸ–1,2&3/ಸಇಂ–1–9/ಟಿಎನ್‌ಡಿ/ಇಸಿಆರ್‌ಪಿ–II/2022–23/2071, 2072, 2073, 2074 ದಿನಾಂಕ : 18–11–2022

ಟೆಂಡರ್ ಪ್ರಕಟಣೆ (2ನೇ ಕರೆ)

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ **3ನೇ ದರ್ಜೆ ಮತ್ತು ಮೇಲ್ಪಟ್ಟ** ಗುತ್ತಿಗೆದಾರರಿಂದ **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ತಾಲ್ಲೂಕು ಮಟ್ಟದ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 12 ಮತ್ತು 06 ಹಾಸಿಗೆ ಸಾಮರ್ಥ್ಯದ ಐಸೋಲೇಷನ್ ವಾರ್ಡ್‌ಗಳನ್ನು ನಿರ್ಮಿಸುವ ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದ 05 ಪ್ಯಾಕೇಜ್ ಕಾಮಗಾರಿಗಳು, ಮೈಸೂರು ವಿಭಾಗಕ್ಕೆ ಸಂಬಂಧಿಸಿದ 03 ಪ್ಯಾಕೇಜ್ ಕಾಮಗಾರಿಗಳು, ಧಾರವಾಡ ವಿಭಾಗಕ್ಕೆ ಸಂಬಂಧಿಸಿದ 04 ಪ್ಯಾಕೇಜ್ ಕಾಮಗಾರಿಗಳು ಮತ್ತು ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದ 02 ಪ್ಯಾಕೇಜ್ ಕಾಮಗಾರಿಗಳಿಗಾಗಿ** ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (ಇ–ಪೋರ್ಟಲ್) ಮೂಲಕ ದ್ವಿಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಟೆಂಡರ್ ಕಾಲಾವಧಿ 03 ತಿಂಗಳುಗಳು ಮಳೆಗಾಲ ಸೇರಿದಂತೆ.** ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಅನ್ನು ಪರಿಶೀಲಿಸುವುದು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು :
1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **28–11–2022 ರಂದು 16.00 ಗಂಟೆಯವರೆಗೆ.**
2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : **29–11–2022 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–
ಮುಖ್ಯ ಇಂಜಿನಿಯರ್,
ಆ&ಕು.ಕ.ಇ., ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಕೋವಿಡ್‌–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಪುರಸಭೆ ಕಾರ್ಯಾಲಯ ಅಥಣಿ
ಡಾ॥ ಬಿ.ಆರ್. ಅಂಬೇಡ್ಕರ್ ವೃತ್ತದ ಹತ್ತಿರ,
ಅಥಣಿ–591304 ಜಿ. ಬೆಳಗಾವಿ
ದೂರವಾಣಿ : 08289–251137
ವೆಬ್‌ಸೈಟ್: www.athanitown.mrc.gov.in
ಸ್ವಾತಂತ್ರ್ಯದ ಅಮೃತ ಮಹೋತ್ಸವ
TOWN MUNICIPAL COUNCIL ATHANI
Near, Dr. B.R. Ambedkar Circle
Athani-591304 Dist: Belagavi
Landline: 08289-251137
website: www.athanitown.mrc.gov.in
ಕ್ರ.ಮ.ಸಂಖ್ಯೆ: ಪುಸಅ/ಕಾಮಗಾರಿ/ಟೆಂಡರ್/15ನೇ ಹ:ಎಸ್‌ಎಫ್‌ಸಿ/2022–23 ದಿನಾಂಕ: 14–11–2022

ಮರುಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಅಥಣಿ ಪುರಸಭೆ ವ್ಯಾಪ್ತಿಯಲ್ಲಿ ಸನ್ 2021–22ನೇ ಸಾಲಿನ 15ನೇ ಹಣಕಾಸು ಆಯೋಗದ ನಿರ್ಬಂಧಿತ ಅನುದಾನ (Tied Grant) & ಮುಕ್ತ ಅನುದಾನ (Untied Grant) ಮತ್ತು ಸನ್ 2021–22 & 2022–23ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಮತ್ತು ಸನ್ 2021–22ನೇ ಸಾಲಿನ ಅಮೃತ ನಿರ್ಮಲ ನಗರ ಯೋಜನೆಯ ಉಳಿತಾಯ ಮೊತ್ತದ ಅನುದಾನದಡಿಯಲ್ಲಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಲೋಕೋಪಯೋಗಿ/ಪಂಚಾಯತ ರಾಜ/ಕರ್ನಾಟಕ ಇಂಧನ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರು / ಜಿಎಸ್‌ಟಿ ನೋಂದಾಯಿತ ಪೂರೈಕೆದಾರರು ಕೆಡಬ್ಲ್ಯೂ–1, 2, 3 ರ ಪ್ರಕಾರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು/ಜಿಎಸ್‌ಟಿ, ನೋಂದಾಯಿತ ಪೂರೈಕೆದಾರರು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ್ ಮಾತ್ರ ಬಿಡ್ ಸಲ್ಲಿಸಬಹುದು. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಅ. ನಂ.	ಕಾಮಗಾರಿ ಇಂಡೆಂಟ್ ನಂ.	ಅಚಿದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಮೀಸಲಾತಿ
ಸನ್ 2022–23ನೇ ಸಾಲಿನ 15ನೇ ಹಣಕಾಸು ಆಯೋಗದ ನಿರ್ಬಂಧಿತ ಅನುದಾನ (Tied Grant) & ಮುಕ್ತ ಅನುದಾನ (Untied Grant) ಅನುದಾನ				
1	DMA/2022-23/OW/WORK_INDENT140835/Call-2	70.50	141000	ಸಾಮಾನ್ಯ
2	DMA/2022-23/RD/WORK_INDENT139589/Call-2	50.00	100000	ಸಾಮಾನ್ಯ
3	DMA/2022-23/EL/WORK_INDENT139591/Call-2	9.00	22500	ಸಾಮಾನ್ಯ
4	DMA/2022-23/OW/WORK_INDENT139592/Call-2	10.00	25000	ಸಾಮಾನ್ಯ
5	DMA/2022-23/WS/WORK_INDENT139594/Call-2	28.00	28000	ಎಸ್.ಸಿ
6	DMA/2022-23/OW/WORK_INDENT139595/Call-2	10.00	25000	ಸಾಮಾನ್ಯ
7	DMA/2022-23/OW/WORK_INDENT140836	10.00	25000	ಸಾಮಾನ್ಯ
ಸನ್ 2022–23ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಅನುದಾನ				
8	DMA/2022-23/RD/WORK_INDENT139585/Call-2	14.92	37300	ಸಾಮಾನ್ಯ
9	DMA/2022-23/OW/WORK_INDENT139581/Call-2	2.54	6350	ಸಾಮಾನ್ಯ
10	DMA/2022-23/OW/WORK_INDENT139586/Call-2	5.58	6975	ಎಸ್.ಸಿ
11	DMA/2022-23/OW/WORK_INDENT139587/Call-2	6.60	3750	ಎಸ್.ಟಿ
ಸನ್ 2021–22ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಯೋಜನೆಯ ಉಳಿತಾಯ ಮೊತ್ತದ ಅನುದಾನ				
12	DMA/2022-23/OW/WORK_INDENT139588/Call-2	5.12	12800	ಸಾಮಾನ್ಯ
ಸನ್ 2021–22ನೇ ಸಾಲಿನ ಅಮೃತ ನಿರ್ಮಲ ನಗರ ಯೋಜನೆಯ ಉಳಿತಾಯ ಮೊತ್ತದ ಅನುದಾನ				
13	DMA/2022-23/OW/WORK_INDENT140834/Call-2	10.90	27250	ಸಾಮಾನ್ಯ

ಪ್ಯಾಕೇಜ್ ನಂ. 01 ರಿಂದ 13ರ ವರೆಗೆ ಬಿಡ್‌ಗಳನ್ನು ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: 14–11–2022
ಪ್ಯಾಕೇಜ್ ನಂ. 02 ರಿಂದ 13ರ ವರೆಗಿನ ಬಿಡ್‌ಗಳ ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪ್‌ಲೋಡ್ (Upload) ಮಾಡುವ ಕೊನೆಯ ದಿನಾಂಕ: 29–11–2022 ಸಾಯಂಕಾಲ 4:00 ಗಂಟೆವರೆಗೆ
ಪ್ಯಾಕೇಜ್ ನಂ. 01ರ ಬಿಡ್‌ಗಳನ್ನು ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪ್‌ಲೋಡ್ (Upload) ಮಾಡುವ ಕೊನೆಯ ದಿನಾಂಕ: 28–11–2022 ಸಾಯಂಕಾಲ 4:00 ಗಂಟೆವರೆಗೆ
ಪ್ಯಾಕೇಜ್ ನಂ. 02 ರಿಂದ 13ರ ವರೆಗಿನ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 30–11–2022 ಸಾಯಂಕಾಲ 5:00 ಗಂಟೆಯ ನಂತರ ತೆರೆಯಲಾಗುವುದು.
ಪ್ಯಾಕೇಜ್ ನಂ. 01ರ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 29–11–2022 ಸಾಯಂಕಾಲ 5:00 ಗಂಟೆಯ ನಂತರ ತೆರೆಯಲಾಗುವುದು.
ಪ್ಯಾಕೇಜ್ ನಂ. 01ರ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 30–11–2022 ಸಾಯಂಕಾಲ 5:00 ಗಂಟೆಯ ನಂತರ ತೆರೆಯಲಾಗುವುದು.
ಹೆಚ್ಚಿನ ಮಾಹಿತಿಗಾಗಿ website: www.athanitown.mrc.gov.in & www.eproc.karnataka.gov.in ವೆಬ್‌ಸೈಟಿನಲ್ಲಿ ನೋಡಬಹುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಅಥಣಿ
DIPO/RO No. 1183/2021-22
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ಅಥಣಿ ಹಾಗೂ ಉಪವಿಭಾಗಾಧಿಕಾರಿಗಳು, ಚಿಕ್ಕೋಡಿ

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 20 ನವೆಂಬರ್ 2022

ಆಹಾ... ಕಾಲ್ಚೆಂಡಿನ ಮಾಯೆ

ಫುಟ್‌ಬಾಲ್ ಪ್ರೇಮಿಗಳ ಮನಸ್ಸು ಇನ್ನೊಂದು ತಿಂಗಳು ಚೆಂಡಿನ ಸುತ್ತಲೇ ಗಿರಕಿ ಹೊಡೆಯಲಿದೆ. ಕತಾರ್‌ನ ರಾಜಧಾನಿ ದೋಹಾದ ಎಂಟು ಕ್ರೀಡಾಂಗಣಗಳ ಹಸಿರು ಹಾಸಿನಲ್ಲಿ ಮೂಡಿ ಬರಲಿರುವ ಕಾಲ್ಚೆಂಡಿನಾಟದ ಸೊಬಗು ಸವಿಯಲು ಇಡೀ ಜಗತ್ತು ಕಾತರವಾಗಿದೆ.

ಮಹಮ್ಮದ್ ನೂಮಾನ್

ಜಗತ್ತಿನ ಜನಪ್ರಿಯ ಕ್ರೀಡೆಯ ಅತಿದೊಡ್ಡ ಹಬ್ಬದ ಆತಿಥ್ಯಕ್ಕೆ ಅರಬ್ ನಾಡಿನ ಪುಟ್ಟ ರಾಷ್ಟ್ರ ಕತಾರ್ ಸಜ್ಜಾಗಿದೆ. ಪ್ರತೀ ನಾಲ್ಕು ವರ್ಷಗಳಿಗೊಮ್ಮೆ ಬರುವ ಫಿಫಾ ವಿಶ್ವಕಪ್ ಟೂರ್ನಿ, ಫುಟ್‌ಬಾಲ್ ಪ್ರೇಮಿಗಳನ್ನು ತುದಿಗಾಲಲ್ಲಿ ನಿಲ್ಲುವಂತೆ ಮಾಡುತ್ತದೆ. ವಿವಿಧ ದೇಶಗಳ ಖ್ಯಾತ ತಾರೆಯರು ಕ್ಲಬ್ ಫುಟ್‌ಬಾಲ್‌ಗೆ ಅಲ್ಪ ವಿರಾಮವನ್ನಿತ್ತು ಕತಾರ್‌ನ ದೋಹಾಕ್ಕೆ ಬಂದಿದ್ದಾರೆ. ನ.20 ರಿಂದ ಡಿ.18ರ ವರೆಗೆ ನಡೆಯಲಿರುವ ಟೂರ್ನಿಯು ಫಿಫಾ ವಿಶ್ವಕಪ್‌ನ 22ನೇ ಟೂರ್ನಿ ಆಗಿದೆ.

ಚೊಚ್ಚಲ ವಿಶ್ವಕಪ್ 1930ರಲ್ಲಿ ನಡೆದಿತ್ತು. ಎರಡನೇ ವಿಶ್ವಯುದ್ಧದ ಕಾರಣ 1942 ಮತ್ತು 1946ರ ಟೂರ್ನಿಗಳನ್ನು ಹೊರತುಪಡಿಸಿ, ಪ್ರತೀ ನಾಲ್ಕು ವರ್ಷಗಳಿಗೊಮ್ಮೆ ಕಾಲ್ಚೆಂಡಿನಾಟದ ಉತ್ಸವ ನಡೆಯುತ್ತಾ ಬಂದಿದೆ. ಪ್ರತಿಷ್ಠಿತ ಟೂರ್ನಿ ಆಯೋಜಿಸುತ್ತಿರುವ ಏಷ್ಯಾದ ಮೂರನೇ ರಾಷ್ಟ್ರ ಕತಾರ್. 2002ರ ಟೂರ್ನಿ ಜಪಾನ್ ಮತ್ತು ದಕ್ಷಿಣ ಕೊರಿಯಾದ ಜಂಟಿ ಆತಿಥ್ಯದಲ್ಲಿ ನಡೆದಿತ್ತು.

ಒಲಿಂಪಿಕ್ಸ್‌ನಂತೆ ಫಿಫಾ ಟೂರ್ನಿ ಕೂಡಾ ಒಂದು ಜಾಗತಿಕ ಉತ್ಸವ. ಅಲ್ಲಿ 32 ತಂಡಗಳು ಪೈಪೋಟಿ ನಡೆಸುತ್ತವೆಯಾದರೂ, ಅರ್ಹತಾ ಹಂತದಲ್ಲಿ ಫಿಫಾದ ಸದಸ್ಯತ್ವ ಹೊಂದಿರುವ ಎಲ್ಲ ರಾಷ್ಟ್ರಗಳಿಗೂ ಪಾಲ್ಗೊಳ್ಳುವ ಅವಕಾಶವಿರುತ್ತದೆ. ಇದೇ ಕಾರಣದಿಂದ ಫಿಫಾ ವಿಶ್ವಕಪ್, ಅತ್ಯಧಿಕ ಮಂದಿ ವೀಕ್ಷಿಸುವ ಟೂರ್ನಿ ಎನಿಸಿಕೊಂಡಿದೆ.

ಒಂಬತ್ತು ದಶಕಗಳ ಇತಿಹಾಸ ಹೊಂದಿರುವ ಟೂರ್ನಿ, ಫುಟ್‌ಬಾಲ್ ಪ್ರೇಮಿಗಳು ಮತ್ತೆ ಮತ್ತೆ ನೆನಪಿಸಿ ಸಂಭ್ರಮಪಡುವ ಹಲವು ಘಟನೆಗಳನ್ನು ಒಡಲಲ್ಲಿ ತುಂಬಿಕೊಂಡಿದೆ. ದಿಗ್ಗಜ ಆಟಗಾರ ಅರ್ಜೆಂಟೀನಾದ ಡೀಗೊ ಮರಡೋನಾ 1986ರ ವಿಶ್ವಕಪ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಗಳಿಸಿದ ಗೋಲನ್ನು ನೆನೆದು ಪುಳಕಗೊಳ್ಳುವವರು ಈಗಲೂ ಇದ್ದಾರೆ. ಸಾಕಷ್ಟು ದೂರದಿಂದ ಚೆಂಡನ್ನು ಡ್ರಿಬಲ್ ಮಾಡುತ್ತಾ ಎದುರಾಳಿ ತಂಡದ ಐವರು ಆಟಗಾರರನ್ನು ತಪ್ಪಿಸಿ ಅವರು ಗಳಿಸಿದ ಗೋಲು 'ಶತಮಾನದ ಗೋಲು' ಎಂದೇ ಪ್ರಸಿದ್ಧಿ ಹೊಂದಿದೆ. ಬ್ರೆಜಿಲ್‌ನ ಪೆಲೆಯ 'ಮಾಂತ್ರಿಕ' ಕಾಲುಗಳಿಂದ ಬಂದ ಗೋಲುಗಳನ್ನು ಮರೆಯಲು ಸಾಧ್ಯವೇ?

ಪ್ರತೀ ಟೂರ್ನಿಯೂ ಹೊಸ ತಾರೆಯರನ್ನು ಜಗತ್ತಿಗೆ ಪರಿಚಯಿಸಿದೆ. ಭಾರಿ ನಿರೀಕ್ಷೆ ಮೂಡಿಸಿದ್ದ ಸ್ಟಾರ್ ಆಟಗಾರರು ಮುಗ್ಗರಿಸಿದ ಉದಾಹರಣೆಗಳೂ ಇವೆ. ದುರ್ಬಲ ತಂಡಗಳು, ಬಲಿಷ್ಠ ತಂಡಗಳನ್ನು ಮಣಿಸಿವೆ. 1990ರ ವಿಶ್ವಕಪ್‌ನಲ್ಲಿ ಕ್ಯಾಮರೂನ್ ತಂಡ ಅರ್ಜೆಂಟೀನಾ ವಿರುದ್ಧ ಗೆದ್ದದ್ದು, 2002ರ ಟೂರ್ನಿಯಲ್ಲಿ ಸೆನೆಗಲ್, ಫ್ರಾನ್ಸ್‌ಗೆ ಆಘಾತ ನೀಡಿದ್ದು ಅಚ್ಚರಿಯ ಫಲಿತಾಂಶಗಳ ಕೆಲವು ಸ್ಯಾಂಪಲ್ ಮಾತ್ರ. ಈ ಬಾರಿಯೂ ಅಂತಹ ಅಚ್ಚರಿಗಳನ್ನು ನಿರೀಕ್ಷಿಸಬಹುದು.

ದೇಶ, ಜನಾಂಗಗಳ ಗಡಿಯನ್ನು ಮೀರಿ ಇಡೀ ಜಗತ್ತು ಒಂದು ಎಂಬ ಭಾವನೆ ಮೂಡಿಸುವ ಶಕ್ತಿ ಫಿಫಾ ವಿಶ್ವಕಪ್‌ಗೆ ಇದೆ. ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ, ಬ್ರೆಜಿಲ್‌ನ ನೇಮರ್, ಫ್ರಾನ್ಸ್‌ನ ಕರೀಂ ಬೆಂಜೆಮಾ ಅವರ ಅಪ್ಪಟ ಅಭಿಮಾನಿಗಳು ಎಲ್ಲ ದೇಶಗಳಲ್ಲೂ ಇದ್ದಾರೆ. ಗೋಲು ಗಳಿಸುವ ಅವಕಾಶ ಕಳೆದುಕೊಂಡು ಮೆಸ್ಸಿ, ತಲೆ ಮೇಲೆ ಕೈಯಿಟ್ಟಾಗ ಕೇರಳ, ಪಶ್ಚಿಮ ಬಂಗಾಳದಲ್ಲಿ ಟಿ.ವಿ ಮುಂದೆ ಕುಳಿತು ಪಂದ್ಯ ವೀಕ್ಷಿಸುವ ಸಾವಿರಾರು ಮಂದಿ ತಮಗರಿವಿಲ್ಲದೆಯೇ ತಲೆ ಮೇಲೆ ಕೈಯಿಡುತ್ತಾರೆ. ನೇಮರ್ ಗೋಲು ಗಳಿಸಿ ಸಂಭ್ರಮಿಸುವಾಗ ಕೇರಳದ ಹಲವು ಮನೆಗಳಲ್ಲಿ ಸಂಭ್ರಮ ನೆಲೆಸುತ್ತದೆ. ಅದು ಫುಟ್‌ಬಾಲ್ ಕ್ರೀಡೆಯ ವಿಶೇಷ, ಮಾಂತ್ರಿಕ ಶಕ್ತಿ.

'ಫೇವರಿಟ್'ಗಳ ದೊಡ್ಡ ಪಟ್ಟಿ: ಪ್ರತಿ ವಿಶ್ವಕಪ್ ಬರುವಾಗಲೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳ ಪಟ್ಟಿ ಸಿದ್ಧವಾಗುತ್ತದೆ. ಬ್ರೆಜಿಲ್, ಅರ್ಜೆಂಟೀನಾ, ಜರ್ಮನಿ, ಫ್ರಾನ್ಸ್, ಇಟಲಿ... ಹೀಗೆ ಅಭಿಮಾನಿಗಳು ಒಂದೊಂದು ತಂಡದ ಮೇಲೆ ಬೆಟ್ ಕಟ್ಟಿದ್ದಾರೆ.

ದಾಖಲೆಯ ಆರನೇ ಪ್ರಶಸ್ತಿ ಮೇಲೆ ಕಣ್ಣಿಟ್ಟು ಬ್ರೆಜಿಲ್ ತಂಡ ದೋಹಾಕ್ಕೆ ಬಂದಿದೆ. ಸ್ಟಾರ್ ಸ್ಟ್ರೈಕರ್ ನೇಮರ್ ಮತ್ತು ಯುವ ಪ್ರತಿಭೆ ವಿನೀಸಿಯಸ್ ಜೂನಿಯರ್ ಮೇಲೆ ಭರವಸೆ ಇಡಲಾಗಿದೆ. 20 ವರ್ಷಗಳ ಪ್ರಶಸ್ತಿಯ ಬರ ನೀಗಿಸುವುದು ಬ್ರೆಜಿಲ್ ತಂಡದ ಗುರಿ. ದಕ್ಷಿಣ ಅಮೆರಿಕದ ಈ ತಂಡ 2002ರಲ್ಲಿ ಕೊನೆಯದಾಗಿ ಚಾಂಪಿಯನ್ ಆಗಿತ್ತು. 2014 ಮತ್ತು 2018ರಲ್ಲಿ ನೇಮರ್ ಅವರಿಗೆ ತಂಡವನ್ನು ಟ್ರೋಫಿಯತ್ತ ಮುನ್ನಡೆಸಲು ಆಗಿರಲಿಲ್ಲ. ಈ ಬಾರಿ ಅವರ ವಿಶ್ವಕಪ್ ಕನಸು ಕೈಗೂಡಲಿದೆಯೇ ಎಂಬುದನ್ನು ನೋಡಬೇಕು.

ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ಮತ್ತು ಇಟಲಿ ತಂಡಗಳೂ ಬಲಿಷ್ಠವಾಗಿವೆ. ಹಾಲಿ ಚಾಂಪಿಯನ್ ಫ್ರಾನ್ಸ್ ತಂಡದ ನೊಗವನ್ನು ಕೈಲಿಯಾನ್ ಎಂಬಾಪೆ ಮತ್ತು ಕರೀಂ ಬೆಂಜೆಮಾ ಹೊರಲಿದ್ದಾರೆ. ವಿಶ್ವದ ಶ್ರೇಷ್ಠ ಫುಟ್‌ಬಾಲ್ ಆಟಗಾರನಿಗೆ ನೀಡುವ ಪ್ರತಿಷ್ಠಿತ 'ಬ್ಯಾಲನ್ ಡಿಓರ್' ಪ್ರಶಸ್ತಿಯನ್ನು ಗೆದ್ದಿರುವ ಬೆಂಜೆಮಾ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. 11ನೇ ಪುಟಕ್ಕೆ...

ನವತಾರೆಗಳು

ಕ್ರಿಸ್ಟಿಯಾನೊ ರೊನಾಲ್ಡೊ

ಗಿರೀಶ ದೊಡ್ಡಮನಿ

ಫಿಫಾ ವಿಶ್ವಕಪ್ ಟೂರ್ನಿಯೆಂದರೆ ಕನಸುಗಳ ಕಾರ್ಖಾನೆ ಇದ್ದಂತೆ. ಫುಟ್‌ಬಾಲ್ ಆಗಸದಲ್ಲಿ ನವತಾರೆಗಳು ಉದಯಿಸುವ ವೇದಿಕೆಯೂ ಹೌದು.

ಈ ಸಲ ಕತಾರ್‌ನಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿ ಕೂಡ ಇಂತಹದ್ದೇ ವೈಶಿಷ್ಟ್ಯಗಳನ್ನು ಹೊಂದಿದೆ. ಫುಟ್‌ಬಾಲ್ ಅಂಗಳದಲ್ಲಿ ದಶಕಗಳಿಂದ ಮೆರೆದ ದಿಗ್ಗಜರಿಗೆ ಇದು ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿಯಾಗಲಿದೆ. ಅವರ ಸ್ಥಾನವನ್ನು ತುಂಬಲು ಯುವತಾರೆಗಳ ದೊಡ್ಡ ದಂಡು ಪೈಪೋಟಿಗೆ ಇಳಿದಿದೆ. ಫುಟ್‌ಬಾಲ್ ಶಕ್ತಿಕೇಂದ್ರಗಳೆನಿಸಿಕೊಂಡು ದೇಶಗಳು ಮತ್ತು ವಿಶ್ವ ಭೂಪಟದಲ್ಲಿ ಪುಟ್ಟದಾಗಿ ಗೋಚರಿಸುವ ರಾಷ್ಟ್ರಗಳ ಪ್ರತಿಭಾನ್ವಿತರು ಜಿದ್ದಾಜಿದ್ದಿ ನಡೆಸಲು ಸಿದ್ಧರಾಗಿದ್ದಾರೆ.

ಕಳೆದ ಸಲ ರಷ್ಯಾದಲ್ಲಿ ವಿಶ್ವಕಪ್ ಟೂರ್ನಿ ನಡೆದಾಗ ಹಲವಾರು ನವತಾರೆಗಳನ್ನು ಕ್ರೀಡಾಜಗತ್ತು ಕಂಡಿದೆ. ಫ್ರಾನ್ಸ್‌ನ ಕೈಲಿಯನ್ ಎಂಬಾಪೆ, ಕ್ರೊವೇಷ್ಯಾದ ಲುಕಾ ಮ್ಯಾಡ್ರಿಚ್ ಅವರು ಪ್ರಮುಖರು. ಈ ಬಾರಿಯೂ ಇವರಿಬ್ಬರೂ ಕಣದಲ್ಲಿದ್ದಾರೆ. ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ, ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಹಾಗೂ ಬ್ರೆಜಿಲ್‌ನ ನೇಮರ್ ಅವರಿಗೆ ಇದು ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿಯಾಗಲಿದೆ. ವಿಜಯಮಾಲೆಯೊಂದಿಗೆ ನಿರ್ಗಮಿಸುವ ಛಲ ಅವರದ್ದು. ಅವರ ಸ್ಥಾನ ತುಂಬುವ ಎಂಟೆದೆ ಭಂಟರು ಯಾರು ಎಂಬ ಕುತೂಹಲ ಗರಿಗೆದರಿದೆ. ಕೆಲವು ಭರವಸೆಯ ಪ್ರತಿಭೆಗಳ ಪರಿಚಯ ಇಲ್ಲಿದೆ;

ಆ್ಯಂಡ್ರೆ ಒನಾನಾ

ಕ್ಯಾಮರಾನ್ ತಂಡದ 26 ವರ್ಷದ ಗೋಲ್‌ಕೀಪರ್. ಬರೋಬ್ಬರಿ ಒಂದು ವರ್ಷದ ಹಿಂದಿನ ಪರಿಸ್ಥಿತಿ ನೋಡಿದರೆ ಆ್ಯಂಡ್ರೆ ಫುಟ್‌ಬಾಲ್ ಕ್ರೀಡೆಯಿಂದಲೇ ವಿಮುಖರಾಗಬೇಕಿತ್ತು. ತಮ್ಮ ಅನಾರೋಗ್ಯಕ್ಕೆ ಪತ್ನಿಯು ನೀಡಿದ್ದ ಔಷಧಿ ಸೇವಿಸಿದ್ದು ಮುಳುವಾಗಿತ್ತು. ಆ ಔಷಧಿಯಲ್ಲಿ ನಿಷೇಧಿತ ಮದ್ದಿನ ಅಂಶಗಳಿದ್ದ ಕಾರಣಕ್ಕೆ ಒಂದು ವರ್ಷ ಅಮಾನತು ಶಿಕ್ಷೆಗೊಳಗಾದರು. ಕಳೆದ ಮಾರ್ಚ್‌ನಲ್ಲಿ ಕಾರು ಅಪಘಾತವಾದಾಗ ಗಾಯಗೊಂಡಿದ್ದರು. ಆದೆಲ್ಲವನ್ನೂ ದಾಟಿ ಈಗ ಕಣಕ್ಕಿಳಿಯುತ್ತಿದ್ದಾರೆ. ಸದ್ಯ ಇಂಟರ್ ಮಿಲಾನ್ ತಂಡವನ್ನು ಫ್ರ್ಯಾಂಚೈಸಿ ಲೀಗ್ ಟೂರ್ನಿಯಲ್ಲಿ ಪ್ರತಿನಿಧಿಸುತ್ತಾರೆ. ಈ ಹಿಂದೆ ಜಾಂಗ್ ಅಜಾಕ್ಸ್ ಮತ್ತು ಜಾಕ್ಸ್ ತಂಡಗಳನ್ನು ಪ್ರತಿನಿಧಿಸಿದ್ದರು.

ಗ್ಯಾಬ್ರಿಯಲ್ ಜೀಸಸ್

ಫುಟ್‌ಬಾಲ್ ತಾರೆಯರ ಕಣಜವೇ ಆಗಿರುವ ಬ್ರೆಜಿಲ್ ದೇಶದ ನವತಾರೆ ಗ್ಯಾಬ್ರಿಯಲ್ ಫರ್ನಾಂಡೊ ಡೆ ಜೀಸಸ್. ಸಾವೊ ಪೌಲೋದ ಗಲ್ಲಿಗಳಲ್ಲಿ ಫುಟ್‌ಬಾಲ್ ಆಡುತ್ತ ಬೆಳೆದ ಹುಡುಗ. ಇವತ್ತು ನೇಮರ್ ಜೂನಿಯರ್ ಅವರೊಂದಿಗೆ ತಂಡದಲ್ಲಿ ಆಡುತ್ತಿರುವ ಫಾರ್ವರ್ಡ್. 25ನೇ ವಯಸ್ಸಿಗೇ ಮ್ಯಾಂಚೆಸ್ಟರ್ ಸಿಟಿ, ಅರ್ಸೆನಲ್‌ನಂತಹ ವೃತ್ತಿಪರ ಕ್ಲಬ್‌ಗಳಲ್ಲಿ ಮಿಂಚಿದ್ದಾರೆ. ಬ್ರೆಜಿಲ್ ಪರವಾಗಿ 2016ರಿಂದ ಇಲ್ಲಿಯವರೆಗೆ 56 ಪಂದ್ಯಗಳಲ್ಲಿ ಆಡಿ 19 ಗೋಲು ಗಳಿಸಿದ್ದಾರೆ.

ಜಮಾಲ್ ಮುಸಿಯಾಲಾ

ಜರ್ಮನಿಯ 19 ವರ್ಷದ ಹುಡುಗ ಸದ್ಯ ವಿಶ್ವದ ಫುಟ್‌ಬಾಲ್‌ನಲ್ಲಿ ಅತ್ಯಂತ ಆಕ್ರಮಣಶೀಲ ಮಿಡ್‌ಫೀಲ್ಡರ್ ಎಂದು ಗುರುತಿಸಿಕೊಂಡಿದ್ದಾರೆ. ಬೇರನ್ ಮ್ಯೂನಿಕ್ ಕ್ಲಬ್‌ನ ಕೋಚ್‌ಗಳ ಮೆಚ್ಚುಗೆ ಗಳಿಸಿರುವ ಆಟಗಾರ. ಸ್ಟಟ್‌ಗರ್ಟ್‌ನಲ್ಲಿ ಜನಿಸಿದ ಜಮಾಲ್ ಅವರ ತಾಯಿ ಪೋಲೆಂಡ್ ಮೂಲದವರು. 16ನೇ ವಯಸ್ಸಿನಲ್ಲಿಯೇ ಚೆಲ್ಸಿ ಕ್ಲಬ್ ಗಮನಸೆಳೆದರು. ಇಂಗ್ಲೆಂಡ್‌ನಲ್ಲಿ 15 ವರ್ಷದೊಳಗಿನವರ ತಂಡದಲ್ಲಿ ಆಡಿದರು. ನಂತರ ಜರ್ಮನಿಯಲ್ಲಿ 16 ವರ್ಷದೊಳಗಿನವರ ತಂಡಕ್ಕೆ ತೆರಳಿದರು. 7 ವರ್ಷದೊಳಗಿನ ಹಾಗೂ 21 ವರ್ಷದೊಳಗಿನ ಟೂರ್ನಿಗಳಲ್ಲಿ ಇಂಗ್ಲೆಂಡ್ ತಂಡಕ್ಕೆ ಮರಳಿದ್ದರು. 2021ರಿಂದ ತಮ್ಮ ತವರು ಜರ್ಮನಿ ತಂಡಕ್ಕೆ ಆಡುತ್ತಿದ್ದಾರೆ. 20 ಅಂತರರಾಷ್ಟ್ರೀಯ ಗೋಲುಗಳು ಅವರ ಖಾತೆಯಲ್ಲಿವೆ.

ಅಲ್ಮೊಜ್ ಅಲಿ

ಬಡತನ, ಕ್ರೌರ್ಯಗಳು ತುಂಬಿ ತುಳುಕುತ್ತಿದ್ದ ಸುಡಾನ್ ದೇಶದಲ್ಲಿ ಜನಿಸಿದ ಅಲ್ಮೊಜ್ ಅಲಿ ಜೈನಾಲಬೆದೀನ್ ಮೊಹಮ್ಮದ್ ಅಬ್ದುಲ್ಲಾ ಬಾಲ್ಯದಲ್ಲಿಯೇ ತಮ್ಮ ತಾಯಿಯೊಂದಿಗೆ ಕತಾರ್‌ಗೆ ವಲಸೆ ಬಂದರು. ಏಳನೇ ವಯಸ್ಸಿನಲ್ಲಿ ಅಂಟಿದ ಕಾಲ್ಚೆಂಡಿನ ಪ್ರೀತಿ ಈಗ ಹೆಮ್ಮರವಾಗಿದೆ. ಸ್ಟ್ರೈಕರ್ ಆಗಿರುವ 26 ವರ್ಷದ ಅಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕತಾರ್ ತಂಡವನ್ನು 85 ಪಂದ್ಯಗಳಲ್ಲಿ ಪ್ರತಿನಿಧಿಸಿ 42 ಗೋಲುಗಳನ್ನು ಹೊಡೆದಿದ್ದಾರೆ.



ಇಸ್ಮಾಯಲಾ ಸರ್

ಸೆನೆಗಲ್ ದೇಶದ ಪ್ರತಿಭೆ ಇಸ್ಮಾಯಲಾ ಸರ್ ಅವರು ವಿಂಗರ್ ಸ್ಥಾನದಲ್ಲಿ ಆಡುತ್ತಾರೆ. ಸೆನೆಗಲೀಸ್ ಫುಟ್‌ಬಾಲ್ ಕ್ಲಬ್‌ಗೆ ಬಾಲ್ಯದಲ್ಲಿ ಸೇರಿದ ಇಸ್ಮಾಯಲಾ ಚುರುಕು ಆಟದಿಂದ ಬಹುಬೇಗನೆ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದರು. ಜನರೇಷನ್ ಫೂಟ್, ಮೆಟ್ಜ್, ರೆನೆಸ್ ಹಾಗೂ ವಾಟ್‌ಫೋರ್ಡ್ ತಂಡಗಳ ಗಮನ ಸೆಳೆದರು. ಸೆನೆಗಲ್ ತಂಡಕ್ಕೆ 48 ಪಂದ್ಯಗಳಲ್ಲಿ ಆಡಿ 10 ಗೋಲು ಗಳಿಸಿದ್ದಾರೆ.

ಲಾಟರೊ ಮಾರ್ಟಿನೇಜ್

ಲಯೊನೆಲ್ ಮೆಸ್ಸಿಯ ವಾರಸುದಾರ ಎಂದೇ ಬಿಂಬಿತರಾಗಿರುವ ಅರ್ಜೆಂಟೀನಾದ ಸ್ಟ್ರೈಕರ್. ದೇಶದ ತಂಡಕ್ಕೆ 40 ಪಂದ್ಯಗಳಲ್ಲಿ ಆಡಿರುವ ಅವರು 21 ಗೋಲುಗಳನ್ನು ಗಳಿಸಿದ್ದಾರೆ. ಇಂಟರ್ ಮಿಲಾನ್ ತಂಡಕ್ಕೆ 150 ಪಂದ್ಯಗಳಲ್ಲಿ ಕಣಕ್ಕಿಳಿದ ಅನುಭವ ಅವರದ್ದು. 25 ವರ್ಷದ ಮಾರ್ಟಿನೇಜ್ ಬಾಲ್ಯದಲ್ಲಿ ತಮ್ಮದೇ ದೇಶದ ಡಿಯಾಗೊ ಮರಡೋನಾ ಅವರಿಂದ ಪ್ರೇರಿತರಾಗಿ ಫುಟ್‌ಬಾಲ್ ಅಂಗಳಕ್ಕೆ ಧುಮುಕಿದವರು. ವೃತ್ತಿಪರ ಫುಟ್‌ಬಾಲ್‌ನಲ್ಲಿ ಈಗ ಅವರದ್ದು ದೊಡ್ಡ ಹೆಸರು.

ಪೆಡ್ರಿ ಗೋನ್ಸಾಲ್ವೆಜ್

19 ವರ್ಷದ ಚಿಗುರುಮೀಸೆಯ, ತುಂಟತನ ಚೆಲ್ಲುವ ಕಂಗಳ ಹುಡುಗ. ಸ್ಪೇನ್ ತಂಡದ 'ನವತಾರೆ'. ಸದ್ಯ ಇನ್ಸ್ಟಾಗ್ರಾಮ್‌ನಲ್ಲಿ ಯುವತಿಯರ ಕಣ್ಮಣಿಯಾಗಿರುವ ಆಟಗಾರ. ಸೆಂಟ್ರಲ್ ಮಿಡ್‌ಫೀಲ್ಡರ್ ಆಗಿರುವ ಪೆಡ್ರಿ ಚುರುಕಾದ ಪಾಸ್ ನೀಡುತ್ತಾರೆ. ಫಾರ್ವರ್ಡ್ ಆಟಗಾರರೊಂದಿಗೆ ಉತ್ತಮ ಹೊಂದಾಣಿಕೆ ಸಾಧಿಸುವ ಮತ್ತು ಒತ್ತಡವನ್ನು ನಿಭಾಯಿಸುವ ಚುರುಕುತನ ಅವರದ್ದು. ಬಾರ್ಸಿಲೋನಾ ತಂಡವನ್ನು 73 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ.

ಬಂಡೀಪುರ ಮತ್ತು ನಾವು

ಚಿತ್ರ: ಮಧು ಆರ್.ಕೆ.

ಬಂಡೀಪುರ ಹುಲಿ ರಕ್ಷಿತಾರಣ್ಯ ಎಂದು ಘೋಷಿತವಾಗಿ ಇದೀಗ ಭರ್ತಿ ಐವತ್ತು ವರ್ಷ. ದಶಕಗಳಿಂದ ಈ ಅರಣ್ಯದ ಬೆಳವಣಿಗೆಗಳನ್ನು ಬಲು ಸೂಕ್ಷ್ಮವಾಗಿ ಗಮನಿಸುತ್ತಾ ಬಂದಿರುವ ನಾಡಿನ ಅನನ್ಯ ವನ್ಯಜೀವಿ ತಜ್ಞರು ಹುಲಿ ರಕ್ಷಣೆಯ ಹೆಜ್ಜೆಗಳ ಕುರಿತು ದಾಖಲಿಸಿದ ಪುಟ್ಟ ಚರಿತ್ರೆಯೊಂದು ಇಲ್ಲಿದೆ

ಕೃಪಾಕರ ಸೇನಾನಿ

ಶಿಕಾರಿ ದಿಗ್ಗಜರು ಬರೆದಿರುವ ಪುಸ್ತಕಗಳ ಬಗ್ಗೆ ಒಮ್ಮೆ ಪೂರ್ಣಚಂದ್ರ ತೇಜಸ್ವಿ ಅವರೊಂದಿಗೆ ಚರ್ಚಿಸುತ್ತಿದ್ದೆವು. ಅಲ್ಲಿ ನಿರೂಪಿಸಿರುವ ಘಟನೆಗಳು ಹೆಚ್ಚು ಉತ್ಪ್ರೇಕ್ಷಿತವಾಗಿ ಕಾಣುತ್ತವೆ ಎಂಬ ನಮ್ಮ ಮಾತಿಗೆ, ಮುಂದೆ ನೀವು ಹೇಳುವ ಸಂಗತಿಗಳನ್ನು ಜನ ಹಾಗೇ ಭಾವಿಸಿದರೆ ಆಶ್ಚರ್ಯಪಡಬೇಡಿ ಎಂದು ಹೇಳಿದ್ದರು. ಬಂಡೀಪುರ ಅಭಯಾರಣ್ಯದ ನೆನಪುಗಳನ್ನು ದಾಖಲಿಸಲು ಹೊರಟಾಗ ತೇಜಸ್ವಿ ನೆನಪಾದರು.

ಅದು ಎಂಬತ್ತರ ದಶಕ, ಕಾಲೇಜು ಓದು ಮುಗಿದಿದ್ದ ದಿನಗಳು. ಕಾಡಿನ ಬಗ್ಗೆ ಅಪರಿಮಿತ ಕುತೂಹಲವಿದ್ದ ನಮಗೆ ಅಡವಿಯಲ್ಲಿ ಅಲೆದಾಡುವ ಬಯಕೆ ತೀವ್ರವಾಗಿತ್ತು. ಬಿಡುವು ಸಿಕ್ಕಾಗ ಬಂಡೀಪುರ ಕಾಡಿಗೆ ಹೋಗುತ್ತಿದ್ದೆವು. ಆಗ ಬಂಡೀಪುರದಲ್ಲಿ ದನಗಳದ್ದೇ ಸಾಮ್ರಾಜ್ಯ. ಸಾವಿರಾರು ಜಾನುವಾರುಗಳು ಕಾಡಿನಂಗಳದಲ್ಲಿ ನುಸುಳಿ ಹೋಗಿರುತ್ತಿದ್ದವು. ವ್ಯವಸಾಯಕ್ಕಿಂತ ಸಗಣಿ ಗೊಬ್ಬರ ಮಾಡುವುದೇ ಲೇಸೆಂದು ರೈತರು ಭಾವಿಸಿದ್ದಿರಬಹುದು. ಜೊತೆಗೆ ಸೌದೆ ಸಂಗ್ರಹಿಸಲು ನೂರಾರು ತಂಡಗಳು ಪ್ರತಿನಿತ್ಯ ಕಾಡಿನೊಳಗೆ ಪ್ರವೇಶಿಸುತ್ತಿದ್ದವು. ಮಳೆಯ ಸೂಚನೆಯನ್ನು ಗ್ರಹಿಸಿ ಗೂಡಿನಲ್ಲಿದ್ದ ಮೊಟ್ಟೆಗಳನ್ನೆಲ್ಲ ಹೊತ್ತು ಅವಸರದಿಂದ ಬೇರೊಂದು ಸ್ಥಳಕ್ಕೆ ದೌಡಾಯಿಸುವ ಇರುವೆಗಳಂತೆ ಸೌದೆಯ ಹೊರೆಗಳನ್ನು ತಲೆಯ ಮೇಲಿಟ್ಟುಕೊಂಡು ನೂರಾರು ಮಂದಿ ಊರುಗಳತ್ತ ತೆರಳುತ್ತಿರುವ ದೃಶ್ಯ ಸಾಮಾನ್ಯವಾಗಿತ್ತು. ಹಲವರು ಸೈಕಲ್‌ಗಳಲ್ಲಿ, ಇನ್ನು ಕೆಲವರು ಎತ್ತಿನಗಾಡಿಗಳಲ್ಲಿ ಸೌದೆಯನ್ನು ಕೊಂಡೊಯ್ಯುತ್ತಿದ್ದರು. ಇವರನ್ನು ತಡೆಯಲು ಬೆರಳೆಣಿಕೆಯ ಸಿಬ್ಬಂದಿ ಹರಸಾಹಸ ಮಾಡುತ್ತಿದ್ದರು. ಕೆಲವೊಮ್ಮೆ ಪರಿಸ್ಥಿತಿ ಕೈಮೀರಿ, ಸಂಘರ್ಷಕ್ಕೆ ತಿರುಗಿ, ಹಳ್ಳಿಯತ್ತ ಬಂದ ಅರಣ್ಯ ಇಲಾಖೆಯ ವಾಹನಗಳು ಜಖಂಗೊಂಡು ನಿಂತಿದ್ದ ಉದಾಹರಣೆಗಳೂ ಇದ್ದವು.

ಇದೆಲ್ಲದರ ನಡುವೆ ಬಂಡೀಪುರದ ಸುತ್ತಮುತ್ತಲಿನ ಪರಿಸರದ ಸೌಂದರ್ಯಕ್ಕೇನೂ ಕೊರತೆ ಇರಲಿಲ್ಲ. ಮುಂಗಾರಿನಲ್ಲಿ ಕೃಷಿ ಭೂಮಿಗಳಲ್ಲಿ ಸೂರ್ಯಕಾಂತಿ ಹೂವುಗಳು ಅರಳಿ ಕಂಗೊಳಿಸುತ್ತಿದ್ದವು. ಗೋಪಾಲಸ್ವಾಮಿ ಬೆಟ್ಟದ ನೆತ್ತಿಯೇರಿ ನೋಡಿದಾಗ ಇಡೀ ಭೂಮಂಡಲವೇ ಹಳದಿಯಾದಂತಹ ಅನುಭವ. ಕಲಾವಿದ ವ್ಯಾನ್‌ಗಾಂಗ್‌ನ ಕ್ಯಾನ್‌ವಾಸ್‌ಗಳನ್ನು ನೆನಪಿಸುವಂತಹ ನೋಟ.

ಸೂರ್ಯಕಾಂತಿ ಹೂವುಗಳಲ್ಲಿ ಬೀಜ ಮೂಡಿದಾಗ ಮೋಡಗಳಂತೆ ಅಲೆ ಅಲೆಯಾಗಿ ಇಳಿದು ಬೆಳೆಗೆ ಲಗ್ಗೆಹಾಕುವ ಗಿಳಿಗಳು. ತಗಡಿನ ಡಬ್ಬಿಗಳನ್ನು ಬಡಿದು ಅವುಗಳನ್ನು ಬೆದರಿಸಿ ಓಡಿಸುತ್ತಿದ್ದ ರೈತರು. ಆ ಸದ್ದಿಗೆ ತಲೆ ಕೆಡಿಸಿಕೊಳ್ಳದೆ ಪಕ್ಕದ ಹೊಲಕ್ಕೆ ಹಾರಿ ಮತ್ತೆ ತಮ್ಮ ಕೆಲಸವನ್ನು ಮುಂದುವರಿಸುತ್ತಿದ್ದ ಗಿಳಿಗಳು. ಅಲ್ಲೊಂದು ಇಲ್ಲೊಂದು ಯಾವುದೋ ಹೊಲದಲ್ಲಿ ಬಿತ್ತಿದ ಬಿಳಿಜೋಳ ಕಾಳುಗಟ್ಟುವ ಹೊತ್ತಿಗೆ ಮಹಾರಾಷ್ಟ್ರದಿಂದ ಸಕುಟುಂಬ ಪರಿವಾರ ಸಮೇತ ಬರುತ್ತಿದ್ದ ರೋಸಿ ಪ್ಯಾಸ್ಟರ್ ಹಕ್ಕಿಗಳ ಗುಂಪು. ಮರಿಗಳಿಗೆ ಕಾಳು ಉಣಿಸಿ ಬೆಳೆಸಿ ಹಾರಿ ಹೋಗುತ್ತಿದ್ದವು. ಆ ದಿನಗಳಲ್ಲಿ ಕಾಡು ಪ್ರವಾಸಿಗರ ತಾಣವಾಗಿರಲಿಲ್ಲ. ಕೇವಲ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ ಹಿಂದಿರುಗುವುದು ಸಮಾಜದ ಪಾಲಿಗೆ ಪ್ರವಾಸವಾಗಿರುತ್ತಿತ್ತು. ಕಾಡು, ವಿಷಜಂತುಗಳು, ಕ್ರೂರ ಪ್ರಾಣಿಗಳು ಜೀವಿಸುವ ಅಪಾಯಕಾರಿ ಪ್ರಪಂಚವೆಂದೇ ಆಗಿನ ಸಮಾಜ ತೀರ್ಮಾನಿಸಿದ್ದಿರಬಹುದು. ಇದರಿಂದ ಕಾಡುಗಳಿಗೆ ಪ್ರವಾಸಿಗರ ಪ್ರವಾಸೋದ್ಯಮದ ಒತ್ತಡ ಇರಲಿಲ್ಲ.

ಇಂತಹ ಪ್ರಶಾಂತ ವಾತಾವರಣದಲ್ಲಿ ನಾವು ಪದೇ ಪದೇ ಬಂಡೀಪುರಕ್ಕೆ ಭೇಟಿ ನೀಡುತ್ತಿದ್ದೆವು. ನಮ್ಮ ಆಸಕ್ತಿಯನ್ನು ಗಮನಿಸಿದ ಅಧಿಕಾರಿಗಳು ಪ್ರೀತಿಯಿಂದ ಪ್ರೋತ್ಸಾಹಿಸುತ್ತಿದ್ದರು. ಮುಂಜಾನೆಯಿಂದ ಸಂಜೆಯವರೆಗೆ ನಮ್ಮ ಅಂಬಾಸೆಡರ್ ಕಾರಿನಲ್ಲಿ ಕಾಡಿನೆಲ್ಲೆಡೆ ಓಡಾಡುವ ಸವಲತ್ತನ್ನು ನೀಡಿದ್ದರು. ಈ ಎಲ್ಲ ಅನುಕೂಲಗಳ ನಡುವೆ ಹಲವಾರು ವರ್ಷಗಳ ಕಾಲ ಅಲೆದಾಡಿದರೂ ಹುಲಿಗಳು ಮಾತ್ರ ಕಾಣಲೇ ಇಲ್ಲ. ಕಾಡಿನಲ್ಲಿ ಮುಕ್ತವಾಗಿ ಬದುಕುವ ಹುಲಿಯನ್ನು ನೋಡಬೇಕೆಂಬ ಬಯಕೆ ಮರೀಚಿಕೆಯಾಗಿಯೇ ಉಳಿಯಿತು.

ಆಗ ಇಲಾಖೆಯ ಲೆಕ್ಕದಲ್ಲಿ ಬಂಡೀಪುರ ಅರಣ್ಯದಲ್ಲಿ ನಲ್ವತ್ತು ಹುಲಿಗಳಿದ್ದವು. ಹಾಗಿದ್ದರೆ ಇಷ್ಟು ದಿನಗಳಲ್ಲಿ ಒಂದಾದರೂ ನಮಗೆ ಕಾಣಬೇಕಿತ್ತಲ್ಲ ಎಂಬ ಪ್ರಶ್ನೆ ಎದುರಾಗುತ್ತಿತ್ತು. ಇದರ ಜೊತೆಗೆ ಬಂಡೀಪುರದಲ್ಲಿ ಹುಲಿಗಳೇ ಇಲ್ಲ, 'ಹುಲಿ ಯೋಜನೆ' ಎಂಬ ಫಲಕದ ಮೇಲೆ ಚಿತ್ರ ಬರೆದಿದ್ದಾರೆ ಅಷ್ಟೆ ಎಂದು ಸಾರ್ವಜನಿಕ ವಲಯದಲ್ಲಿ ಮಾತನಾಡಿಕೊಳ್ಳುವ ಧ್ವನಿಯಲ್ಲಿ ನಿಜವಿರಬೇಕು ಎನಿಸುತ್ತಿತ್ತು. ಆದರೆ, ಕಾಡಿನ ರಸ್ತೆಗಳಲ್ಲಿ ಆಗಾಗ್ಗೆ ಮೂಡುತ್ತಿದ್ದ ಹುಲಿಯ ಹೆಜ್ಜೆ ಗುರುತುಗಳು ಆ ಗುಮಾನಿಯಲ್ಲಿ ಸತ್ಯಾಂಶವಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡುತ್ತಿದ್ದವು. ಹುಲಿಗಳು ನಿಶಾಚರಿಗಳು. ಅವು ಬೆಳಗಿನ ಹೊತ್ತು ಹೊರ ಬರುವುದಿಲ್ಲವೆಂದು, ಸೂರ್ಯ ಕಣ್ಮರೆಯಾದ ನಂತರವಷ್ಟೇ ಕಾರ್ಯಪ್ರವೃತ್ತವಾಗುತ್ತವೆಂದು ಹಲವರು ತಿಳಿಸಿದರು. 12ನೇ ಪುಟಕ್ಕೆ...

ಯಾವ ತಂಡ, ಯಾವ ಗುಂಪು?

ಗುಂಪು	ತಂಡ
ಎ	ಕತಾರ್, ಈಕ್ವೆಡಾರ್, ಸೆನೆಗಲ್, ನೆದರ್ಲೆಂಡ್ಸ್
ಬಿ	ಇಂಗ್ಲೆಂಡ್, ಇರಾನ್, ಅಮೆರಿಕ, ವೇಲ್ಸ್
ಸಿ	ಅರ್ಜೆಂಟೀನಾ, ಸೌದಿ ಅರೇಬಿಯಾ, ಮೆಕ್ಸಿಕೊ, ಪೋಲೆಂಡ್
ಡಿ	ಫ್ರಾನ್ಸ್, ಆಸ್ಟ್ರೇಲಿಯಾ, ಡೆನ್ಮಾರ್ಕ್, ಟ್ಯೂನಿಷಿಯಾ
ಇ	ಸ್ಪೇನ್, ಕೋಸ್ಟರಿಕಾ, ಜರ್ಮನಿ, ಜಪಾನ್
ಎಫ್	ಬೆಲ್ಜಿಯಂ, ಕೆನಡಾ, ಮೊರಕ್ಕೊ, ಕ್ರೊವೇಷ್ಯಾ
ಜಿ	ಬ್ರೆಜಿಲ್, ಸರ್ಬಿಯಾ, ಸ್ವಿಟ್ಜರ್ಲೆಂಡ್, ಕ್ಯಾಮರೂನ್
ಎಚ್	ಪೋರ್ಚುಗಲ್, ಘಾನಾ, ಉರುಗ್ವೆ, ದಕ್ಷಿಣ ಕೊರಿಯಾ

ವೇಳಾಪಟ್ಟಿ (ಗುಂಪು ಹಂತ)

ದಿನಾಂಕ	ಪಂದ್ಯ	ಆರಂಭ (ಭಾರತೀಯ ಕಾಲಮಾನ)
ನ.20	ಕತಾರ್–ಈಕ್ವೆಡಾರ್	ರಾತ್ರಿ 9.30
ನ.21	ಇಂಗ್ಲೆಂಡ್–ಇರಾನ್	ಸಂಜೆ 6.30
ನ.21	ಸೆನೆಗಲ್–ನೆದರ್ಲೆಂಡ್ಸ್	ರಾತ್ರಿ 9.30
ನ.21	ಅಮೆರಿಕ–ವೇಲ್ಸ್	ತಡರಾತ್ರಿ 12.30
ನ.22	ಅರ್ಜೆಂಟೀನಾ–ಸೌದಿ ಅರೇಬಿಯಾ	ಮಧ್ಯಾಹ್ನ 3.30
ನ.22	ಡೆನ್ಮಾರ್ಕ್–ಟ್ಯೂನಿಷಿಯಾ	ಸಂಜೆ 6.30
ನ.22	ಮೆಕ್ಸಿಕೊ–ಪೋಲೆಂಡ್	ರಾತ್ರಿ 9.30
ನ.22	ಫ್ರಾನ್ಸ್–ಆಸ್ಟ್ರೇಲಿಯಾ	ತಡರಾತ್ರಿ 12.30
ನ.23	ಮೊರಕ್ಕೊ–ಕ್ರೊವೇಷ್ಯಾ	ಮಧ್ಯಾಹ್ನ 3.30
ನ.23	ಜರ್ಮನಿ–ಜಪಾನ್	ಸಂಜೆ 6.30
ನ.23	ಸ್ಪೇನ್–ಕೋಸ್ಟರಿಕಾ	ರಾತ್ರಿ 9.30
ನ.23	ಬೆಲ್ಜಿಯಂ–ಕೆನಡಾ	ತಡರಾತ್ರಿ 12.30
ನ.24	ಸ್ವಿಟ್ಜರ್ಲೆಂಡ್–ಕ್ಯಾಮರೂನ್	ಮಧ್ಯಾಹ್ನ 3.30
ನ.24	ಉರುಗ್ವೆ–ದ.ಕೊರಿಯಾ	ಸಂಜೆ 6.30
ನ.24	ಪೋರ್ಚುಗಲ್–ಘಾನಾ	ರಾತ್ರಿ 9.30
ನ.24	ಬ್ರೆಜಿಲ್ ಸರ್ಬಿಯಾ	ತಡರಾತ್ರಿ 12.30
ನ.25	ವೇಲ್ಸ್–ಇರಾನ್	ಮಧ್ಯಾಹ್ನ 3.30
ನ.25	ಕತಾರ್–ಸೆನೆಗಲ್	ಸಂಜೆ 6.30
ನ.25	ನೆದರ್ಲೆಂಡ್ಸ್–ಈಕ್ವೆಡಾರ್	ರಾತ್ರಿ 9.30
ನ.25	ಇಂಗ್ಲೆಂಡ್–ಅಮೆರಿಕ	ತಡರಾತ್ರಿ 12.30
ನ.26	ಟ್ಯೂನಿಷಿಯಾ–ಆಸ್ಟ್ರೇಲಿಯಾ	ಮಧ್ಯಾಹ್ನ 3.30
ನ.26	ಪೋಲೆಂಡ್–ಸೌದಿ ಅರೇಬಿಯಾ	ಸಂಜೆ 6.30
ನ.26	ಫ್ರಾನ್ಸ್–ಡೆನ್ಮಾರ್ಕ್	ರಾತ್ರಿ 9.30
ನ.26	ಅರ್ಜೆಂಟೀನಾ–ಮೆಕ್ಸಿಕೊ	ತಡರಾತ್ರಿ 12.30
ನ.27	ಜಪಾನ್–ಕೋಸ್ಟರಿಕಾ	ಮಧ್ಯಾಹ್ನ 3.30
ನ.27	ಬೆಲ್ಜಿಯಂ–ಮೊರಕ್ಕೊ	ಸಂಜೆ 6.30
ನ.27	ಕ್ರೊವೇಷ್ಯಾ–ಕೆನಡಾ	ರಾತ್ರಿ 9.30
ನ.27	ಸ್ಪೇನ್–ಜರ್ಮನಿ	ತಡರಾತ್ರಿ 12.30
ನ.28	ಕ್ಯಾಮರೂನ್–ಸರ್ಬಿಯಾ	ಮಧ್ಯಾಹ್ನ 3.30
ನ.28	ದ.ಕೊರಿಯಾ ಘಾನಾ	ಸಂಜೆ 6.30
ನ.28	ಬ್ರೆಜಿಲ್–ಸ್ವಿಟ್ಜರ್ಲೆಂಡ್	ರಾತ್ರಿ 9.30
ನ.28	ಪೋರ್ಚುಗಲ್–ಉರುಗ್ವೆ	ತಡರಾತ್ರಿ 12.30
ನ.29	ನೆದರ್ಲೆಂಡ್ಸ್–ಕತಾರ್	ರಾತ್ರಿ 8.30
ನ.29	ಈಕ್ವೆಡಾರ್–ಸೆನೆಗಲ್	ರಾತ್ರಿ 8.30
ನ.29	ವೇಲ್ಸ್–ಇಂಗ್ಲೆಂಡ್	ತಡರಾತ್ರಿ 12.30
ನ.29	ಇರಾನ್– ಅಮೆರಿಕ	ತಡರಾತ್ರಿ 12.30
ನ.30	ಆಸ್ಟ್ರೇಲಿಯಾ–ಡೆನ್ಮಾರ್ಕ್	ರಾತ್ರಿ 8.30
ನ.30	ಟ್ಯೂನಿಷಿಯಾ–ಫ್ರಾನ್ಸ್	ರಾತ್ರಿ 8.30
ನ.30	ಪೋಲೆಂಡ್–ಅರ್ಜೆಂಟೀನಾ	ತಡರಾತ್ರಿ 12.30
ನ.30	ಸೌದಿ ಅರೇಬಿಯಾ–ಮೆಕ್ಸಿಕೊ	ತಡರಾತ್ರಿ 12.30
ಡಿ.1	ಕ್ರೊವೇಷ್ಯಾ–ಬೆಲ್ಜಿಯಂ	ರಾತ್ರಿ 8.30
ಡಿ.1	ಕೆನಡಾ–ಮೊರಕ್ಕೊ	ರಾತ್ರಿ 8.30
ಡಿ.1	ಜಪಾನ್–ಸ್ಪೇನ್	ತಡರಾತ್ರಿ 12.30
ಡಿ.1	ಕೋಸ್ಟರಿಕಾ–ಜರ್ಮನಿ	ತಡರಾತ್ರಿ 12.30
ಡಿ.2	ಘಾನಾ–ಉರುಗ್ವೆ	ರಾತ್ರಿ 8.30
ಡಿ.2	ದಕ್ಷಿಣ ಕೊರಿಯಾ–ಪೋರ್ಚುಗಲ್	ರಾತ್ರಿ 8.30
ಡಿ.2	ಸರ್ಬಿಯಾ–ಸ್ವಿಟ್ಜರ್ಲೆಂಡ್	ತಡರಾತ್ರಿ 12.30
ಡಿ.2	ಕ್ಯಾಮರಾನ್–ಬ್ರೆಜಿಲ್	ತಡರಾತ್ರಿ 12.30
16ರ ಘಟ್ಟ	ಡಿ.3–ಡಿ.6	
ಕ್ವಾರ್ಟರ್‌ಫೈನಲ್	ಡಿ.9–ಡಿ.10	
ಸೆಮಿಫೈನಲ್ಸ್	ಡಿ.14–ಡಿ.15	
ಫೈನಲ್	ಡಿ.18	

ಪ್ರಶಸ್ತಿ ಮೊತ್ತದ ಹೆಚ್ಚಳ

ವರ್ಷ	ಬಹುಮಾನ ಮೊತ್ತ (₹ ಕೋಟಿಗಳಲ್ಲಿ)
2002	65.3
2006	163.37
2010	245
2014	285.50
2018	310
2022	344 (ರನ್ನರ್ಸ್ ಅಪ್ ₹ 245 ಕೋಟಿ)

ಕತಾರ್ ದಾಖಲೆ ವೆಚ್ಚ

ಫಿಫಾ ವಿಶ್ವಕಪ್ ಆಯೋಜನೆಯ ಇತಿಹಾಸದಲ್ಲಿಯೇ ಅತ್ಯಧಿಕ ವೆಚ್ಚ ಮಾಡುತ್ತಿರುವ ದಾಖಲೆಯನ್ನು ಕತಾರ್ ದೇಶ ಮಾಡಿದೆ. ಮೂಲಸೌಲಭ್ಯಗಳ ಅಭಿವೃದ್ಧಿಯೂ ಸೇರಿದಂತೆ ಅತ್ಯಾಧುನಿಕ ವ್ಯವಸ್ಥೆಗಳನ್ನು ಮಾಡಿದೆ.

ವರ್ಷ	ಆತಿಥ್ಯ	ಮೊತ್ತ(₹)
2022	ಕತಾರ್	17.93 ಲಕ್ಷ ಕೋಟಿ
2018	ರಷ್ಯಾ	95120 ಕೋಟಿ
2014	ಬ್ರೆಜಿಲ್	1.23 ಲಕ್ಷ ಕೋಟಿ
2010	ದ.ಆಫ್ರಿಕಾ	29,520 ಕೋಟಿ
2006	ಜರ್ಮನಿ	35,260 ಕೋಟಿ
2002	ಜಪಾನ್	57,400 ಕೋಟಿ

ದಿಗ್ಗಜರಿಗೆ ಕೊನೆಯ ಅವಕಾಶ

ಪ್ರಸ್ತುತ ಫುಟ್‌ಬಾಲ್ ಜಗತ್ತಿನ ಎರಡು ಕಣ್ಣುಗಳಂತಿರುವ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಹಾಗೂ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಅವರ ವೃತ್ತಿಜೀವನದ ಕೊನೆಯ ಫಿಫಾ ವಿಶ್ವಕಪ್ ಟೂರ್ನಿ ಇದು. ಸಾರ್ವಕಾಲಿಕ ಶ್ರೇಷ್ಠ ಆಟಗಾರರು ಎಂಬ ಹೆಗ್ಗಳಿಕೆಯಿರುವ ಈ ಇಬ್ಬರೂ ಆಟಗಾರರು ಒಂದೇ ಕಾಲಘಟ್ಟದಲ್ಲಿ ಆಡುತ್ತಿದ್ದಾರೆ. ಇದು ಫುಟ್‌ಬಾಲ್ ಇತಿಹಾಸದಲ್ಲಿ ಅಪರೂಪದ ಸಂದರ್ಭ. ಆಟದ ಕೌಶಲ, ಶೈಲಿ ಮತ್ತು ಹಣಗಳಿಕೆಯಲ್ಲಿ ಇಬ್ಬರದ್ದೂ ಸತತ ಪೈಪೋಟಿ. ವಿಶ್ವದ ಎಲ್ಲ ದೇಶಗಳಲ್ಲಿಯೂ ರೊನಾಲ್ಡೊ ಮತ್ತು ಮೆಸ್ಸಿ ಅವರನ್ನು ಆರಾಧಿಸುವ ಅಭಿಮಾನಿಗಳ ದೊಡ್ಡ ದಂಡು ಇದೆ. ಅಂತಹ ಮಾಂತ್ರಿಕತೆ ಅವರಿಬ್ಬರ ಕಾಲ್ಚಳಕದಲ್ಲಿದೆ. ಆದರೆ ಇವರಿಬ್ಬರೂ ಇನ್ನೂ ವಿಶ್ವಕಪ್ ಜಯಿಸುವ ಸಾಧನೆ ಮಾಡಿಲ್ಲ. ಅದಕ್ಕಾಗಿ ಈಗ ಕೊನೆಯ ಅವಕಾಶ. ಇವರಿಬ್ಬರ ಬಲಾಬಲ ಇಲ್ಲಿದೆ...

ಕ್ರಿಸ್ಟಿಯಾನೊ ರೊನಾಲ್ಡೊ

ವಯಸ್ಸು	37
ಎತ್ತರ	6.2 ಅಡಿ
ಆಡುವ ಸ್ಥಾನ	ಫಾರ್ವರ್ಡ್
ಪೋಷಾಕು ಸಂಖ್ಯೆ	7
ದೇಶ	ಪೋರ್ಚುಗಲ್
ಅಂತರರಾಷ್ಟ್ರೀಯ ಪಂದ್ಯಗಳು	191
ಗೋಲುಗಳು	117
ಪ್ರಮುಖ ಜಯಗಳು	
ಯುರೋಪಿಯನ್ ಚಾಂಪಿಯನ್‌ಷಿಪ್	
ವಿಜೇತ	2016
ರನ್ನರ್ ಅಪ್	2004
ಫಿಫಾ ಕಾನ್ಫೆಡರೇಷನ್ ಕಪ್	
ಕಂಚು	2017

ವೃತ್ತಿಪರ ಕ್ಲಬ್‌ಗಳು: ಸ್ಪೋರ್ಟಿಂಗ್ ಸಿಪಿ ಬಿ, ಸ್ಪೋರ್ಟಿಂಗ್ ಸಿ.ಪಿ., ಮ್ಯಾಂಚೆಸ್ಟರ್ ಯುನೈಟೆಡ್, ರಿಯಲ್ ಮ್ಯಾಡ್ರಿಡ್, ಯುವೆಂಟಸ್, ಮ್ಯಾಂಚೆಸ್ಟರ್ ಯುನೈಟೆಡ್

ಲಯೊನೆಲ್ ಮೆಸ್ಸಿ

ವಯಸ್ಸು	35
ಎತ್ತರ	5.7 ಅಡಿ
ಆಡುವ ಸ್ಥಾನ	ಫಾರ್ವರ್ಡ್
ಪೋಷಾಕು ಸಂಖ್ಯೆ	10
ದೇಶ	ಅರ್ಜೆಂಟೀನಾ
ಅಂತರರಾಷ್ಟ್ರೀಯ ಪಂದ್ಯಗಳು	165
ಗೋಲುಗಳು	91
ಪ್ರಮುಖ ಜಯಗಳು	
ಫಿಫಾ ವಿಶ್ವಕಪ್	2014 ರನ್ನರ್ ಅಪ್
ಕೊಪಾ ಅಮೆರಿಕ	2021 ವಿಜೇತ, 2007, 2015, 2016 ರನ್ನರ್ ಅಪ್, 2019 ಕಂಚು.
ಒಲಿಂಪಿಕ್ಸ್	2008 ಚಿನ್ನ
ಫಿಫಾ ವಿಶ್ವ ಯೂತ್ ಚಾಂಪಿಯನ್‌ಷಿಪ್	2005 ವಿಜೇತ

ವೃತ್ತಿಪರ ಕ್ಲಬ್‌ಗಳು: ಬಾರ್ಸಿಲೋನಾ ಸಿ, ಬಾರ್ಸಿಲೋನಾ ಬಿ, ಬಾರ್ಸಿಲೋನಾ, ಪ್ಯಾರಿಸ್ ಸೇಂಟ್ ಜರ್ಮೈನ್

ವಿಶ್ವಕಪ್ ಟ್ರೋಫಿ ವಿಶೇಷವೇನು?

18 ಕ್ಯಾರಟ್ ಚಿನ್ನದಿಂದ ತಯಾರಾಗಿರುವ ವಿಶ್ವಕಪ್ ಟ್ರೋಫಿಯು 36.8 ಸೆಂಟಿ ಮೀಟರ್ ಎತ್ತರವಿದೆ. 6.14 ಕೆಜಿ ತೂಕವಿದೆ. ಈ ಬಾರಿಯ ಟ್ರೋಫಿಗಾಗಿ ಏಳು ದೇಶಗಳ ಪರಿಣತರು 53 ಮಾದರಿಗಳನ್ನು ಸಿದ್ಧಪಡಿಸಿದ್ದರು. ಅಂತಿಮವಾಗಿ ಇಟಲಿಯ ಸಿಲ್ವಿಯೊ ಗ್ಯಾಜನಿಗಾ ಅವರು ಸಿದ್ಧಪಡಿಸಿದ ವಿನ್ಯಾಸವನ್ನು ಆಯ್ಕೆ ಮಾಡಲಾಯಿತು. ಫಿಫಾ ವಿಶ್ವಕಪ್ ಸಂಸ್ಥಾಪಕ ಜೂಲ್ಸ್ ರಿಮೆಟ್ ಗೌರವಾರ್ಥ, 1930ರಲ್ಲಿ ವಿನ್ಯಾಸಗೊಳಿಸಲಾದ ಮೊದಲ ಟ್ರೋಫಿಗೆ ಅವರ ಹೆಸರನ್ನೇ ಇಡಲಾಗಿತ್ತು. ಫ್ರೆಂಚ್ ಶಿಲ್ಪಿ ಅಬೆಲ್ ಲಾಫ್ಲೂರ್ ಈ ಟ್ರೋಫಿಯನ್ನು ವಿನ್ಯಾಸಗೊಳಿಸಿದ್ದರು. 1974ರಿಂದ ಫಿಫಾ ವಿಶ್ವಕಪ್ ಟ್ರೋಫಿ ಎಂದು ಬದಲಾಯಿಸಲಾಯಿತು. ಇಬ್ಬರು ವ್ಯಕ್ತಿಗಳು ಭೂಮಿಯ ಮಾದರಿಯನ್ನು ಹೊತ್ತುಕೊಂಡಿರುವ ಚಿತ್ರ ಟ್ರೋಫಿಯ ಮೇಲಿದೆ. ವಿಶ್ವಕಪ್‌ನ ಮೂಲ ಟ್ರೋಫಿಯನ್ನು ವಿಜೇತರಿಗೆ ನೀಡುವುದಿಲ್ಲ. ಹೊಸ ನಿಯಮಗಳ ಅನ್ವಯ ಅದು ಫಿಫಾದ ಬಳಿಯೇ ಉಳಿಯುತ್ತದೆ. ಬದಲಾಗಿ ಟೂರ್ನಿ ವಿಜೇತರಿಗೆ ಟ್ರೋಫಿಯ ಚಿನ್ನಲೇಪಿತ ಪ್ರತಿಕೃತಿಯನ್ನು ನೀಡಲಾಗುತ್ತದೆ.

ಆಹಾ... ಕಾಲ್ಚೆಂಡಿನ ಮಾಯೆ

10ನೇ ಪುಟದಿಂದ...

ಈ ಋತುವಿನಲ್ಲಿ ರಿಯಲ್ ಮ್ಯಾಡ್ರಿಡ್‌ಗೆ ಹಲವಾರು ಗೆಲುವು ತಂದುಕೊಟ್ಟಿದ್ದಾರೆ.

ಅರ್ಜೆಂಟೀನಾ ತಂಡದ ಎಲ್ಲ ನಿರೀಕ್ಷೆಯ ಭಾರ ಲಯೊನೆಲ್ ಮೆಸ್ಸಿ ಎಂಬ ತಾರೆಯ ಕಾಲುಗಳಲ್ಲಿ ಅಡಗಿದೆ. ಫುಟ್‌ಬಾಲ್ ದಂತಕತೆ ಡೀಗೊ ಮರಡೋನಾ ಅವರ ಅದ್ಭುತ ಆಟದ ಬಲದಿಂದ ಅರ್ಜೆಂಟೀನಾ 1986 ರಲ್ಲಿ ಕೊನೆಯದಾಗಿ ಚಾಂಪಿಯನ್ ಆಗಿತ್ತು. ಮರಡೋನಾ ಅಂದು ಮಾಡಿದ್ದ ಚಮತ್ಕಾರವನ್ನು ದೋಹಾದಲ್ಲಿ ಮೆಸ್ಸಿ ಮಾಡುವರೇ ಎಂಬ ಪ್ರಶ್ನೆಗೆ ಮುಂದಿನ ದಿನಗಳಲ್ಲಿ ಉತ್ತರ ಲಭಿಸಲಿದೆ.

ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಕ್ಲಬ್ ಫುಟ್‌ಬಾಲ್‌ನಲ್ಲಿ ಬಹುತೇಕ ಎಲ್ಲ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಆದರೆ ತಮ್ಮ ದೇಶಕ್ಕೆ ವಿಶ್ವಕಪ್ ಗೆದ್ದುಕೊಡಲು ಆಗಿಲ್ಲ. 37 ವರ್ಷದ ಅವರಿಗೆ ಇದು ಬಹುತೇಕ ಕೊನೆಯ ಟೂರ್ನಿ. ಅಂತಿಮ ಅವಕಾಶದಲ್ಲಿ ಅವರು ಶಕ್ತಿಮೀರಿ ಪ್ರಯತ್ನಿಸಲಿದ್ದಾರೆ. ‘ಫ್ರಾನ್ಸ್, ಸ್ಪೇನ್, ಅರ್ಜೆಂಟೀನಾ, ಜರ್ಮನಿ ಮತ್ತು ಬ್ರೆಜಿಲ್‌ನಂತಹ ತಂಡಗಳ ಜತೆ ಸೆಣಸಾಡಿ ವಿಶ್ವಕಪ್ ಗೆಲ್ಲುವುದು ಸುಲಭವಲ್ಲ. ಆದರೆ ನಾವು ಭರವಸೆ ಕೈಬಿಟ್ಟಿಲ್ಲ’ ಎಂದು ರೊನಾಲ್ಡೊ ಹೇಳಿದ್ದಾರೆ.

ಆಫ್ರಿಕಾ ಖಂಡದ ಘಾನಾ, ಸೆನೆಗಲ್, ಕ್ಯಾಮರೂನ್ ತಂಡಗಳು ಪ್ರಶಸ್ತಿ ಗೆಲ್ಲುವ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿಲ್ಲ. ಆದರೂ ಅಚ್ಚರಿಯ ಫಲಿತಾಂಶ ನೀಡಬಲ್ಲ ಸಾಮರ್ಥ್ಯವನ್ನಂತೂ ಹೊಂದಿವೆ.

21 ಟೂರ್ನಿಗಳು 8 ಚಾಂಪಿಯನ್ನರು

ಇದುವರೆಗೆ 21 ವಿಶ್ವಕಪ್ ಟೂರ್ನಿಗಳು ನಡೆದಿವೆ. ಒಟ್ಟು 79 ರಾಷ್ಟ್ರಗಳಿಗೆ ಈ ಪ್ರತಿಷ್ಠಿತ ಟೂರ್ನಿಯಲ್ಲಿ ಆಡುವ ಅವಕಾಶ ದೊರೆತಿದ್ದು, ಎಂಟು ತಂಡಗಳು ವಿಶ್ವಕಪ್ ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿವೆ.

ಐದು ಪ್ರಶಸ್ತಿ ಜಯಿಸಿರುವ ಬ್ರೆಜಿಲ್, ವಿಶ್ವಕಪ್ ಟೂರ್ನಿಯ ಅತ್ಯಂತ ಯಶಸ್ವಿ ತಂಡ ಎಂಬ ಹೆಗ್ಗಳಿಕೆ ಹೊಂದಿದೆ. ಇದುವರೆಗೆ ನಡೆದಿರುವ ಎಲ್ಲ 21 ವಿಶ್ವಕಪ್‌ಗಳಲ್ಲಿ ಆಡಿದ ಏಕೈಕ ತಂಡ ಬ್ರೆಜಿಲ್. ಜರ್ಮನಿ ಮತ್ತು ಇಟಲಿ ತಲಾ ನಾಲ್ಕು ಬಾರಿ ಟ್ರೋಫಿಗೆ ಮುತ್ತಿಕ್ಕಿವೆ.

ಇಟಲಿ (1934 ಮತ್ತು 1938) ಹಾಗೂ ಬ್ರೆಜಿಲ್ (1958 ಮತ್ತು 1962) ಮಾತ್ರ ಸತತ ಎರಡು ವಿಶ್ವಕಪ್ ಗೆದ್ದ ಸಾಧನೆ ಮಾಡಿವೆ. ಜರ್ಮನಿ ತಂಡ ಅತಿಹೆಚ್ಚು ಫೈನಲ್‌ಗಳಲ್ಲಿ (8) ಆಡಿದೆ. ಬ್ರೆಜಿಲ್ ಒಟ್ಟು ಏಳು ಸಲ ಫೈನಲ್ ಪ್ರವೇಶಿಸಿದೆ.

ವಿಶ್ವಕಪ್ ವಿಜೇತರು

ತಂಡ	ಗೆದ್ದ ವರ್ಷ
ಬ್ರೆಜಿಲ್	1958, 1962, 1970, 1994, 2002
ಪಶ್ಚಿಮ ಜರ್ಮನಿ/ ಜರ್ಮನಿ	1954, 1974, 1990, 2014
ಇಟಲಿ	1934, 1938, 1982, 2006
ಉರುಗ್ವೆ	1930, 1950
ಅರ್ಜೆಂಟೀನಾ	1978, 1986
ಫ್ರಾನ್ಸ್	1998, 2018
ಇಂಗ್ಲೆಂಡ್	1966
ಸ್ಪೇನ್	2010



ವಿವಾದಗಳ ಸದ್ದು

ಅರಬರ ನಾಡಿನಲ್ಲಿ ಮೊದಲ ಬಾರಿ ನಡೆಯುತ್ತಿರುವ ವಿಶ್ವಕಪ್, ವಿವಾದಗಳಿಂದ ಹೊರತಾಗಿಲ್ಲ. ಮಾನವ ಹಕ್ಕುಗಳ ಉಲ್ಲಂಘನೆ, ವಿದೇಶಿ ಕಾರ್ಮಿಕರನ್ನು ನಡೆಸಿಕೊಂಡ ರೀತಿ, ಸಲಿಂಗಿಗಳಿಗೆ ನಿಷೇಧ ಮತ್ತು ಎಲ್‌ಜಿಬಿಟಿ ಸಮುದಾಯವನ್ನು ಅಂಗೀಕರಿಸದೇ ಇರುವುದು ವಿವಾದದ ಮುಖ್ಯ ವಿಷಯಗಳು. ಟೂರ್ನಿಯಲ್ಲಿ ಆಡುವ ಯೂರೋಪ್‌ನ ಕೆಲವು ತಂಡಗಳ ಆಟಗಾರರು ಹಾಗೂ ಆ ದೇಶಗಳ ಅಧ್ಯಕ್ಷರು ಬಹಿರಂಗವಾಗಿ ಕತಾರ್‌ಅನ್ನು ಟೀಕಿಸಿದ್ದಾರೆ. ವಿಶ್ವಕಪ್‌ನ ಆತಿಥ್ಯ ಕತಾರ್‌ಗೆ ನೀಡಿದ್ದು ‘ದುರಂತ’ ಎಂದು ಕರೆದಿದ್ದಾರೆ.

ವಿದೇಶಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವಂತೆ ಕತಾರ್ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಇಂಗ್ಲೆಂಡ್, ಜರ್ಮನಿ ಒಳಗೊಂಡಂತೆ ಯೂರೋಪ್‌ನ ಹತ್ತು ದೇಶಗಳ ಒಕ್ಕೂಟ ಫಿಫಾಗೆ ಮನವಿಯನ್ನೂ ಮಾಡಿತ್ತು.

ಎಲ್‌ಜಿಬಿಟಿ ಸಮುದಾಯಕ್ಕೆ ಬೆಂಬಲ ವ್ಯಕ್ತಪಡಿಸಲು ಅಮೆರಿಕ ತಂಡ, ದೋಹಾದಲ್ಲಿ ತಮ್ಮ ಅಭ್ಯಾಸಕ್ಕೆ ಮೀಸಲಿಟ್ಟಿರುವ ಮೈದಾನದಲ್ಲಿ ‘ರೇನ್‌ಬೋ’ ಲೋಗೊ ಪ್ರದರ್ಶಿಸಿದೆ. ವಲಸೆ ಕಾರ್ಮಿಕರಿಗೆ ಬೆಂಬಲ ಸೂಚಿಸಿ ನೆದರ್ಲೆಂಡ್ಸ್ ತಂಡದ ಸದಸ್ಯರು ತಮ್ಮ ಜೆರ್ಸಿಗಳನ್ನು ಹರಾಜು ಹಾಕಿದ್ದಾರೆ.

ಇದರ ನಡುವೆಯೂ ಕೆಲವು ದೇಶಗಳು ಕತಾರ್‌ಗೆ ಬೆಂಬಲ ಸೂಚಿಸಿವೆ. ‘ಟೂರ್ನಿ ಯಶಸ್ವಿಯಾಗಲಿದೆ’ ಎಂಬುದು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ವಿಶ್ವಾಸದ ನುಡಿ. ‘ಕ್ರೀಡೆಯಲ್ಲಿ ರಾಜಕೀಯ ಬೆರೆಸಬೇಡಿ’ ಎಂದಿರುವ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್, ‘ಕತಾರ್‌ಅನ್ನು ಟೀಕಿಸುವವರು 2010 ರಲ್ಲಿ ಆ ದೇಶಕ್ಕೆ ವಿಶ್ವಕಪ್‌ನ ಆತಿಥ್ಯ ನೀಡಿದಾಗಲೇ ಮಾತನಾಡಬೇಕಿತ್ತು’ ಎಂದು ತಿರುಗೇಟು ಕೊಟ್ಟಿದ್ದಾರೆ.

ಯೂರೋಪ್ ತಂಡಗಳ ನಾಯಕರು ‘ತಾರತಮ್ಯ ವಿರೋಧಿ’ ಆರ್ಮ್‌ಬ್ಯಾಂಡ್ ಧರಿಸಿ ಅಂಗಳಕ್ಕಿಳಿಯಲಿದ್ದರೆ, ಫ್ರಾನ್ಸ್ ತಂಡದ ನಾಯಕ ಹ್ಯೂಗೊ ಲಾರಿಸ್, ಆರ್ಮ್‌ಬ್ಯಾಂಡ್ ಧರಿಸುವುದಿಲ್ಲ ಎಂದಿದ್ದಾರೆ. ‘ವಿದೇಶಿ ಪ್ರವಾಸಿಗರನ್ನು ಫ್ರಾನ್ಸ್‌ಗೆ ಆಹ್ವಾನಿಸುವಾಗ ಅವರು ನಮ್ಮ ದೇಶದ ಕಾನೂನು ಮತ್ತು ಸಂಸ್ಕೃತಿಯನ್ನು ಗೌರವಿಸಬೇಕು ಎಂದು ಬಯಸುತ್ತೇವೆ. ಕತಾರ್‌ಗೆ ಹೋದಾಗ ನಾನು ಅದನ್ನೇ ಮಾಡುತ್ತೇನೆ’ ಎಂಬುದು ಅವರ ಸ್ಪಷ್ಟ ನುಡಿ. ಕತಾರ್‌ನ ಆಡಳಿತ ಟೀಕೆಗಳಿಗೆ ಬಹಳ ಎಚ್ಚರಿಕೆಯಿಂದಲೇ ಪ್ರತಿಕ್ರಿಯಿಸುತ್ತಾ ಬಂದಿದೆ.

ಏನೇ ಇರಲಿ, ಭಾರತೀಯ ಕಾಲಮಾನ ಭಾನುವಾರ (ನ.20) ರಾತ್ರಿ 9.30ಕ್ಕೆ ಸರಿಯಾಗಿ ಅಲ್ ಬೈತ್ ಕ್ರೀಡಾಂಗಣದಲ್ಲಿ ಕತಾರ್– ಈಕ್ವೆಡಾರ್ ನಡುವಣ ಉದ್ಘಾಟನಾ ಪಂದ್ಯದ ಆರಂಭದೊಂದಿಗೆ ಎಲ್ಲ ವಿವಾದಗಳ ಸದ್ದು ದೋಹಾದ ಸುತ್ತ ಆವರಿಸಿರುವ ಮರಳ ರಾಶಿಯಲ್ಲಿ ಅಡಗಬಹುದು ಎಂಬುದು ಈ ತೈಲ ಸಂಪನ್ನ ರಾಷ್ಟ್ರದ ದೃಢ ವಿಶ್ವಾಸ.

ಮುನ್ನೋಟ 20-11-2022 ರಿಂದ 26-11-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಔಷಧ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರವಿರುತ್ತದೆ. ಹತ್ತಿ ಬಟ್ಟೆಯನ್ನು ತಯಾರಿಸುವವರಿಗೆ ಮಾರುಕಟ್ಟೆ ವಿಸ್ತಾರಗೊಳ್ಳುತ್ತದೆ. ಮಕ್ಕಳ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಅಗತ್ಯ. ಜಂಟಿ ವ್ಯವಹಾರಗಳಿಗೆ ಕೈ ಹಾಕದೆ ಇರುವುದು ಬಹಳ ಉತ್ತಮ. ಹಣದ ಒಳಹರಿವು ಮಂದಗತಿಯಲ್ಲಿದ್ದು, ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ಕೃಷಿ ಉತ್ಪನ್ನಗಳಿಂದ ಆಹಾರ ವಸ್ತುಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ತೆರಿಗೆ ತಜ್ಞರಿಗೆ ಸೂಕ್ತ ಪದೋನ್ನತಿ ದೊರೆಯುತ್ತದೆ. ನೂತನ ವಾಹನದ ಖರೀದಿ ಬಗ್ಗೆ ಸಾಕಷ್ಟು ಚಿಂತನೆ ಮಾಡುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ವ್ಯಾಪಾರದಲ್ಲಿನ ನಿಮ್ಮ ಮುಂದಾಲೋಚನೆ ಒಳಿತನ್ನು ಮಾಡುತ್ತದೆ. ಪೆಟ್ರೋಲಿಯಂ ವಸ್ತುಗಳ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಲಾಭ ಹೆಚ್ಚುತ್ತದೆ. ಉದ್ದಿಮೆದಾರರು ತಮ್ಮ ತೆರಿಗೆ ಪತ್ರಗಳನ್ನು ಪುನಃ ಪರಿಶೀಲನೆಗಾಗಿ ಕಳಿಸಬೇಕಾಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆಸ್ತಿ ವಿಚಾರದಲ್ಲಿ ರಾಜಿ ಸಂಧಾನಗಳು ನಡೆದು ವಿಚಾರ ಸುಖಾಂತ್ಯವಾಗುತ್ತದೆ. ವ್ಯವಹಾರದಲ್ಲಿ ಹೊಸ ವ್ಯಕ್ತಿಗಳಿಂದ ಸಹಾಯ ಸಹಕಾರ ದೊರೆಯುತ್ತದೆ. ಹಣದ ಒಳಹರಿವು ಸಾಮಾನ್ಯ ಸ್ಥಿತಿಯಲ್ಲಿರುತ್ತದೆ. ಸಂಗೀತ ವಿದ್ವಾಂಸರುಗಳಿಗೆ ಪುರಸ್ಕಾರ ದೊರೆಯುವ ಸಾಧ್ಯತೆಯಿದೆ. ನಿರೀಕ್ಷಿತ ಮೂಲದಿಂದ ಧನಸಹಾಯ ದೊರೆಯುತ್ತದೆ. ಸಂಗಾತಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನೌಕರಿಯಲ್ಲಿರುವವರಿಗೆ ಸಹೋದ್ಯೋಗಿಗಳಿಂದ ಕಿರಿಕಿರಿ ಉಂಟಾಗುವ ಸಾಧ್ಯತೆಯಿದೆ. ಸಂಗಾತಿಯ ಆದಾಯ ಕಡಿಮೆಯಾಗಬಹುದು. ಮೊದಲೇ ಎಚ್ಚರಿಕೆ ತೆಗೆದುಕೊಂಡು ಮಾಡಿದ ಕೆಲಸಗಳಲ್ಲಿ ಈಗ ಉತ್ತಮ ಫಲಿತಾಂಶವನ್ನು ಕಾಣಬಹುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸರಿಯಾಗಿ ಗಮನಹರಿಸಿರಿ. ಹೊಸ ವಿಚಾರ ಬರಹಗಳಿಂದಾಗಿ ಪತ್ರಿಕಾ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಹಿರಿಯರು ಮಕ್ಕಳೊಂದಿಗೆ ವಾದವಿವಾದಗಳನ್ನು ಮಾಡದಿರುವುದು ಉತ್ತಮ. ಸ್ತ್ರೀಯರೊಂದಿಗೆ ಹಣಕಾಸಿನ ವ್ಯವಹಾರವನ್ನು ಮಾಡುವಾಗ ಅತಿಯಾದ ಎಚ್ಚರಿಕೆ ಇರಲಿ. ಬಂಧುಗಳೊಂದಿಗೆ ಇದ್ದ ಭಿನ್ನಾಭಿಪ್ರಾಯಗಳು ದೂರವಾಗುತ್ತವೆ. ಉದ್ದಿಮೆಯೊಂದರ ಸ್ಥಾಪನೆಗಾಗಿ ಬೇಕಾದ ಆದೇಶದ ಪ್ರತಿಯನ್ನು ಈಗ ಪ್ರಯತ್ನಪಟ್ಟು ಪಡೆಯಬಹುದು. ಆರ್ಥಿಕ ಸಂಪನ್ಮೂಲಗಳು ಹೆಚ್ಚು ಒದಗಿ ಸ್ಥಿರತೆ ಕಾಣಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಉನ್ನತ ಶಿಕ್ಷಣ ಮಾಡಬೇಕೆನ್ನುವವರ ಆಸೆಗೆ ಸ್ವಲ್ಪ ಹಿನ್ನಡೆಯಾಗಬಹುದು. ವಾದ-ವಿವಾದಗಳಲ್ಲಿ ನಿಮಗೆ ಯಶಸ್ಸು ದೊರೆಯುತ್ತದೆ. ಯಂತ್ರೋಪಕರಣಗಳ ವ್ಯಾಪಾರ ಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ. ಬಂಧುಗಳೊಡನೆ ಉತ್ತಮ ಸಂಬಂಧ ಹೊಂದುವುದು ನಿಮಗೆ ಅನುಕೂಲ. ಆಧ್ಯಾತ್ಮಿಕ ಚಿಂತನೆಗಳಿಂದ ಮನಸ್ಸಿನ ದುಗುಡವನ್ನು ದೂರಮಾಡಿಕೊಳ್ಳುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಕುಟುಂಬದಲ್ಲಿ ವಾದ ವಿವಾದಗಳಿಂದಾಗಿ ಸಾಕಷ್ಟು ಬೇಸರ ಮೂಡಬಹುದು. ಹಿತಶತ್ರುಗಳ ಬಾಧೆ ನಿಮ್ಮನ್ನು ಹೆಚ್ಚಾಗಿ ಬಾಧಿಸುತ್ತದೆ. ನಿಮ್ಮ ಸಂಗಾತಿಯ ವ್ಯತಿರಿಕ್ತ ನಡವಳಿಕೆಗಳಿಂದ ಮುಜುಗರ ಆಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಲ್ಪ ಯಶಸ್ಸು ಇರುತ್ತದೆ. ಸಂಪೂರ್ಣವಾಗಿ ತಾವೇ ಕುಟುಂಬವನ್ನು ನಡೆಸುತ್ತಿರುವ ಮಹಿಳೆಯರಿಗೆ ಉತ್ತಮ ಗೌರವ ಸಿಗುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಮಹಿಳೆಯರಿಗೆ ಉದ್ಯೋಗದಲ್ಲಿ ಉತ್ತಮ ಅವಕಾಶ ತೆರೆದುಕೊಳ್ಳುವ ಸಾಧ್ಯತೆಯಿದೆ. ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಬೇಕಾದ ಸಲಕರಣೆಗಳು ಒದಗಿಬರುತ್ತವೆ. ಸಂಗಾತಿಗೆ ನೆರೆಹೊರೆಯವರಿಂದ ವಿರೋಧ ಎದುರಾಗಬಹುದು. ಅಂದುಕೊಂಡ ಕೆಲಸಗಳಲ್ಲಿ ಮಿತ್ರರ ಸಹಕಾರದಿಂದ ಕೆಲವು ಕೆಲಸಗಳು ಯಶಸ್ವಿಯಾಗಿ ಪೂರ್ಣಗೊಳ್ಳುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವ್ಯವಸಾಯದಲ್ಲಿ ತೊಡಗಿಸಿಕೊಂಡಿರುವವರಿಗೆ ಸಹಾಯಧನ ಹರಿದು ಬರುತ್ತದೆ. ಬಂಧುಗಳ ಮಧ್ಯಪ್ರವೇಶದಿಂದಾಗಿ ಪ್ರೇಮ ಪ್ರಕರಣ ಹೆಚ್ಚು ಯಶಸ್ಸನ್ನು ಕಾಣುತ್ತದೆ. ಸರ್ಕಾರಿ ಹುದ್ದೆಯಲ್ಲಿರುವವರು ಭ್ರಷ್ಟಾಚಾರದ ಆರೋಪವನ್ನು ಎದುರಿಸುವ ಸಾಧ್ಯತೆ ಇದೆ, ಎಚ್ಚರವಾಗಿರಿ. ಮನೆಯನ್ನು ಆಧುನಿಕ ರೀತಿಯಲ್ಲಿ ನವೀಕರಣ ಮಾಡಲು ಪ್ರಯತ್ನ ಪಡುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವ್ಯವಹಾರಗಳಿಂದ ನಿಮ್ಮ ಸಂಪರ್ಕವನ್ನು ವೃದ್ಧಿ ಮಾಡಿಕೊಳ್ಳುವಿರಿ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ತನ್ಮೂಲಕ ಅವರ ಆದಾಯವೂ ಹೆಚ್ಚುತ್ತದೆ. ಒಬ್ಬರ ಋಣ ಪರಿಹಾರ ಮಾಡಿ ತೃಪ್ತಿಯನ್ನು ಕಾಣುವಿರಿ. ವೈಯಕ್ತಿಕ ವಿವರಗಳನ್ನು ಹೆಚ್ಚು ಬಹಿರಂಗಪಡಿಸುವುದು ಬೇಡವೇ ಬೇಡ. ಸಾಂಪ್ರದಾಯಕ ಕೃಷಿ ಬೆಳೆಗಾರರು ಬೆಳೆದ ಬೆಳೆಗೆ ಬೇಡಿಕೆ ಹೆಚ್ಚಾಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆತ್ಮೀಯರ ಸಲಹೆಯಿಂದ ವೃತ್ತಿಯಲ್ಲಿ ಎದುರಾದ ಆಪತ್ತಿನಿಂದ ಪಾರಾಗುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಯುವಕರು ಉಡಾಫೆ ಮಾತಿನಿಂದ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬಹುದು. ಇದರಿಂದ ಪಾರಾಗಲು ಮಿತ್ರರಿಂದ ಸೂಕ್ತ ಸಹಾಯ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಪ್ರವಾಸೋದ್ಯಮ ವ್ಯವಹಾರವನ್ನು ಮಾಡುವವರ ವ್ಯವಹಾರ ಸುಧಾರಿಸುತ್ತದೆ. ನಿಮ್ಮ ಹಣಕಾಸಿನ ವಿಷಯದಲ್ಲಿ ಜಾಗರೂಕತೆ ಅತಿ ಮುಖ್ಯ. ಮಕ್ಕಳ ಆರೋಗ್ಯದಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಕಾಣಬಹುದು. ತರಕಾರಿ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ಆಹಾರ ಪದಾರ್ಥಗಳನ್ನು ಸಂಸ್ಕರಿಸಿ ಮಾರುವವರಿಗೆ ವ್ಯವಹಾರದ ವಿಸ್ತರಣೆ ಇದೆ.

ಪದಬಂಧ 2764



ಮೇಲಿನಿಂದ ಕೆಳಕ್ಕೆ

1. ಅವ ಭೂಮಿಯಲ್ಲಿ ಮತ್ತೆ ಮತ್ತೆ ಧರಿಸುವ ವೇಷ 4
2. ಮನದ ನಾಶ 3
3. ಮುಖ ಮುಚ್ಚುವ ಪರದೆ 3
4. ಕೃಷ್ಣವಂಶದ ಕುವರ 4
7. ಮೆಣಸಿನಪುಡಿಗೆ ಅಗತ್ಯವಾದ ಕೊತ್ತಂಬರಿಬೀಜ 3
9. ವಿರಳವಾಗಿ ಬರುವ ನಮ್ಮ ಕನ್ನಡದ ಲಕ್ಷ್ಮಿ 3
10. ಏನೂ ಇಲ್ಲದ ಈಶ್ವರ 3
11. ಆಗಾಗ್ಗೆ ಬಾಯಾಡಿಸಲು ಬೇಕಾಗುವ ಕುರುಕು 3
12. ಇದೇ ಒಳ್ಳೆಯ ದಿನ 3
13. ಸುಸಂಸ್ಕೃತ ಕಳ್ಳ 3
18. ಎಷ್ಟು ಕುಡಿದರೂ ಇವನ ದಾಹ ಇಂಗದು 3
20. ಉತ್ತರ ಭಾರತದಿಂದ ಬಂದ ಹಳ್ಳಿಯವ 3
21. ಮಹಾಭಾರತದ ಭೀಷ್ಮ 4
22. ಕಣ್ಣಿಗೆ ಕಾಣಿಸದೇ ಎಲ್ಲರನ್ನೂ ವಿಸ್ಮಯಗೊಳಿಸುವ ಮಾಂತ್ರಿಕ 4
24. ಕಾಲು ಶತಮಾನಕ್ಕೆ ರಾರಾಜಿಸುವ ಬೆಳ್ಳಿ 3
25. ಎಲ್ಲವೂ ಸಮಯಕ್ಕೆ ಸರಿಯಾಗಿ ಆಗಿಸುವ ಸರ್ಕಾರಿ ವ್ಯವಸ್ಥೆ 3

ಎಡದಿಂದ ಬಲಕ್ಕೆ

1. ಉಪ್ತವಾಗಿರುವ ಮಂತ್ರ ತಂತ್ರದ ಮೂಲ ಶಾಸ್ತ್ರ ಗ್ರಂಥ 5
3. ಕುಂದದ ಮುರಾರಿಗೆ ಪ್ರೀತಿ ಪಾತ್ರ 5
5. ಮರ್ಕಟದಂತಾಡುವ ಆಂತರ್ಯ 3
6. ಸಂಗೀತ ಕಚೇರಿಗೆ ಕಾಲನಿರೂಪಕ ತನಿ 5
8. ನಮ್ಮ ವಂಶದ ನೆಂಟ 5
10. ನಿರ್ಬಂಧಗೊಳಿಸುವ ನೇಮ 3
12. ಒಳ್ಳೆಯ ಸ್ನೇಹಿ ಲಕ್ಷ್ಮಣನ ತಾಯಿ 3
14. ವರವನ್ನು ಕೊಡುವ ಶಂಕರೀ 3
15. ವೇಳೆ ವೇತನಗಳನ್ನು ಗೊತ್ತು ಪಡಿಸುವ ಮೊತ್ತ 3
16. ಕ್ರಿಕೆಟ್ ಆಟಕ್ಕೆ ಸಲ್ಲುವ ಮಾಲಿಕೆ 3
17. ಕೋಪಬಂದು ಕೆಡಕನ್ನು ಆಗ್ರಹಿಸು 3
19. ನಾಗರೀಕರ ಪಟ್ಟಣ 3
23. ಕಾರ್ತಿಕೇಯನಿಂದ ಹತನಾಗಿ ಪಾರುಮಾಡಿದ ದೈತ್ಯ 5
25. ವಿನೋದ ಸಂತೋಷಗಳಲ್ಲಿ ಎಲ್ಲವೂ ರಸದಿಂದ ಕೂಡಿರುತ್ತೆ 5
26. ಕುದುರೆಗಳೆಳೆಯುವ ಬದುಕಿನ ಬಂಡಿ 3
27. ವಿಷ್ಣುವಿನಿಂದ ಹುಟ್ಟಿ ಬಂದವ 5
28. ನೂರು ಸಾವಿರಗಳ ಒಡೆಯ 5

ಪದಬಂಧ ಉತ್ತರ -2763

ಮೇಲಿಂದ ಕೆಳಕ್ಕೆ

1.ಅಂಕುರ 2.ರಮಣ 3.ಅಂಗಾರಕ 4.ಲಕ್ಷ್ಮೀಪುತ್ರ 7.ಸಮಭಾವ 8. ತರುಕಾನನ 9.ವಾರಾಹಿ 12.ಡಮರುನಾದ 15.ಪ್ರತಿರೂಪ 16.ಪತಂಗ 18.ಅಲಂಕಾರ 19.ಪರಮಾನ್ನ 20.ನಾಗರ 21.ದವನ

ಎಡದಿಂದ ಬಲಕ್ಕೆ

1.ಅಂಕಣಕಾರ 3.ಅಂತರ್ಜಾಲ 5.ಮರುಗಾ 6.ರಸದೌತಣ 10.ಕರಪತ್ರ 11.ಕಾನಡ 13.ಹಿತವಚನ 14.ಮಹಾಪ್ರತಾಪ 17.ನಜರು 18.ಅಪರೂಪ 20.ನಾದಸಂಪದ 22.ಮಾತಂಗ 23.ರನ್ನಪೊನ್ನ 24.ರಕ್ತಚಂದನ

ಬಹುಮುಖಿ ವ್ಯಕ್ತಿತ್ವದ ಸಂಶೋಧಕ

ಡಿ.ವಿ.ಪರಮಶಿವಮೂರ್ತಿ

ವೃತ್ತಿ, ಪ್ರವೃತ್ತಿಗಳ ನಡುವೆ ಸಮನ್ವಯವನ್ನು ಸಾಧಿಸಿಕೊಂಡು ಸಾಂಸ್ಕೃತಿಕ ಕೊಡುಗೆ ನೀಡಿದ ಗಣ್ಯರ ಸಾಲಿನಲ್ಲಿ ನಿಲ್ಲಬಲ್ಲ ವಿದ್ವಾಂಸರಲ್ಲಿ ಡಾ. ಎಚ್.ಎಸ್.ಗೋಪಾಲರಾವ್ ಸಹ ಒಬ್ಬರಾಗಿದ್ದಾರೆ. ಗೋಪಾಲರಾವ್ ಹುಟ್ಟಿದ್ದು 1946ರ ನವೆಂಬರ್ 18ರಂದು. ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇರಿದ ಹುಲ್ಲೇಗೌಡನಹಳ್ಳಿಯ ಶಾನುಭೋಗ ಕುಟುಂಬಕ್ಕೆ ಸೇರಿದವರು. ತಂದೆ ಎಚ್.ಎನ್. ಸೂರ್ಯನಾರಾಯಣ ರಾವ್ ಸರ್ಕಾರಿ ಶಾಲೆಯ ಮೇಷ್ಟ್ರಾಗಿದ್ದವರು; ಕುಮಾರವ್ಯಾಸನ ಗದುಗಿನ ಭಾರತವನ್ನು ಸೊಗಸಾಗಿ ವಾಚಿಸುತ್ತಿದ್ದರು. ತಾಯಿ ಮಹಾಲಕ್ಷ್ಮಮ್ಮ ಗೃಹಿಣಿಯಾಗಿ ತುಂಬು ಕುಟುಂಬದ ಅಮ್ಮನಾಗಿದ್ದವರು.

ತಾಯಿಯ ಕಡೆಯ ಸಂಬಂಧಿಕರಾಗಿದ್ದ ಗೋಪಾಲರಾವ್ ಅವರ ತಾತ ಎನ್.ಲಕ್ಷ್ಮೀನಾರಾಯಣರಾಯರು ಕರ್ನಾಟಕದ ಇತಿಹಾಸ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದವರು. ಮಹಾರಾಷ್ಟ್ರದಲ್ಲಿ ಪತ್ತೆಯಾದ, ಕನ್ನಡದ ಹಿರಿಮೆಯನ್ನು ಸಾರುವ ಜುರ ಶಾಸನ ಹಾಗೂ ನೂರಾರು ಶಾಸನಗಳನ್ನು ಓದಿ, ಪ್ರಕಟಿಸಿದ ಕೀರ್ತಿ ಅವರದು. ಇಂತಹ ಪ್ರಾಜ್ಞರ ಕುಟುಂಬಕ್ಕೆ ಸೇರಿದ ರಾಯರಿಗೆ ಸಾಹಿತ್ಯದ ಆಸಕ್ತಿ ಪ್ರಾಥಮಿಕ ಶಿಕ್ಷಣದಲ್ಲಿಯೇ ಮೂಡಿತ್ತು. ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಕೋರ್ಸ್ ಓದುವಾಗಲೇ 'ಜೇನು ನಂಜು', 'ಗತಿ', 'ಬಿನ್ನ' ಹಾಗೂ 'ಪರಿಗ್ರಹಣ' ಕಾದಂಬರಿಗಳನ್ನು ಬರೆದರು. ಅವರು ರಚಿಸಿದ 'ಗುಲ್ಬುಟ್ಟಿ ಮುನ್ಪುಟ್ಟಿ' ಮಕ್ಕಳ ನಾಟಕವು ಅಂತರಶಾಲಾ ಮಟ್ಟದ ಉತ್ತಮ ನಾಟಕವೆಂಬ ಪ್ರಶಸ್ತಿಗೆ ಪಾತ್ರವಾಗಿ ರಂಗಭೂಮಿಯಲ್ಲಿಯೂ ಗೋಪಾಲರಾವ್ ಅವರ ಹೆಸರು ಸ್ಥಾಪಿತಗೊಳ್ಳುವಂತಾಗಿತು.

ಗೋಪಾಲರಾವ್ ಅವರು, ಅಣ್ಣ ಎಚ್.ಎಸ್.ನಾಗೇಶರಾವ್, ರಂಗಕರ್ಮಿ ಎನ್.ಎ.ಸೂರಿ ಮೊದಲಾದ ಆಸಕ್ತರೊಡನೆ ಸೇರಿ ನಡೆಸಿದ ರಂಗಭೂಮಿಯ ಕೆಲಸಗಳು ಆ ಸಮಯದಲ್ಲಿ ಇವರ ಬೆಳವಣಿಗೆಗೆ ನೆರವಾದವು. ಟಿ.ಎಸ್.ನಾಗಾಭರಣರಿಗೆ 'ಗ್ರಹಣ', 'ಬರ', 'ಬಂಗಾರದ ಜಿಂಕೆ' ಚಿತ್ರ ನಿರ್ಮಾಣದಲ್ಲಿ ಅವರು ಸಾಂದರ್ಭಿಕವಾಗಿ ನೆರವಾದರು. ಗೋಪಾಲರಾವ್ ಬರೆದಿದ್ದ 'ಮೃಚ್ಛಕಟಿಕಾ' ನಾಟಕದ 'ಶುಂದರಿ, ಶೂರ್ಪನಖಿ' ಹಾಡನ್ನು ನಾಗಾಭರಣ ಅವರು ಇಂದಿಗೂ ನೆನಪಿಸಿಕೊಳ್ಳುವರು.

1970ರ ದಶಕದಲ್ಲಿ ಒಂದೇ ಬಾರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಾಸಾಗುತ್ತಿದ್ದವರು ಕಡಿಮೆ. ಅಂತಹ ಕಾಲದಲ್ಲಿ ನೆಲಮಂಗಲದಲ್ಲಿ 'ಸರಸ್ವತಿ ವಿದ್ಯಾಮಂದಿರ' ಟ್ಯುಟೋರಿಯಲ್ಸ್ ಆರಂಭಿಸಿ, ಅಣ್ಣ ನಾಗೇಶರಾವ್, ಭಾವಮೈದುನ ಎಂ.ಎನ್. ದೇವರಾಜ ಶರ್ಮ ಅವರೊಂದಿಗೆ ಉತ್ತಮಮಟ್ಟದ ವಿದ್ಯಾಭ್ಯಾಸ ನೀಡಿ 'ಗೋಪಾಲ ಮೇಷ್ಟ್ರು' ಎಂದು ಖ್ಯಾತರಾಗಿದ್ದರು. ಅದೇ ಸುಮಾರಿನಲ್ಲಿ 'ವಿದ್ಯಾ ಪ್ರಿಂಟಿಂಗ್ ಪ್ರೆಸ್' ಆರಂಭಿಸಿ ಕೆಲವು ವರ್ಷ ಮುದ್ರಣ ವ್ಯಾಪಾರವನ್ನು ಮಾಡಿದರು.

ಸೋದರಮಾವನ ಮಗಳು ಸೀತಾಲಕ್ಷ್ಮಿ ಅವರೊಂದಿಗೆ ವಿವಾಹವಾದ ಅವರು ಅದೇ ಸುಮಾರಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕೆಲಸಕ್ಕೆ ಸೇರಿದರು. ಕೇಂದ್ರ ಕಚೇರಿಯ ಅಂಕಿ-ಅಂಶ ವಿಭಾಗದಲ್ಲಿ ಕೆಲಸ ಮಾಡಿ, ಮುಂದೆ ಅಲ್ಲಿನ ಕನ್ನಡ ಘಟಕದ ಸಮನ್ವಯಾಧಿಕಾರಿಯಾಗಿ ನಿವೃತ್ತರಾದರು.

ಗೋಪಾಲರಾವ್ ಅವರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಲೇ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಇತಿಹಾಸ ಅಕಾಡೆಮಿ, ಬಿ.ಎಂ.ಶ್ರೀ ಪ್ರತಿಷ್ಠಾನ, ಗೋಖಲೆ ಸಾರ್ವಜನಿಕ ಸಂಸ್ಥೆ, ಕನ್ನಡ ಗೆಳೆಯರ ಬಳಗ ಮೊದಲಾದ ಅನೇಕ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಕನ್ನಡ ಸಾಹಿತ್ಯ ಪರಿಷತ್ತಿನ ಶಾಸನಶಾಸ್ತ್ರ ತರಗತಿಗಳ ಮೊದಲ ವಿದ್ಯಾರ್ಥಿಯಾಗಿ, ಆನಂತರ ಈ ತರಗತಿಗಳ ಬೋಧಕರಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ಇತಿಹಾಸ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿಯಾಗಿ 25 ವರ್ಷಗಳಿಗಿಂತ ಹೆಚ್ಚು ಕಾಲ ಸಾರ್ಥಕ ಸೇವೆ ಸಲ್ಲಿಸಿ ನಾಡಿನಲ್ಲಿ ಇತಿಹಾಸದ ಅರಿವು ಹೆಚ್ಚಲು ಕಾರಣರಾದರು. ಜಿ.ಎಸ್. ದೀಕ್ಷಿತ್, ಸೂರ್ಯನಾಥ ಕಾಮತ್, ಶ್ರೀನಿವಾಸ ರಿತ್ತಿ, ಶ್ರೀನಿವಾಸ ಹಾವನೂರ, ನಿಟ್ಟೂರು ಶ್ರೀನಿವಾಸರಾವ್, ಕೋ.ಚೆನ್ನಬಸಪ್ಪ ಮೊದಲಾದ ಅನೇಕ ದಿಗ್ಗಜರ ಒಡನಾಟದ ಸವಿ ಅನುಭವಿಸಿದರು. ಎಂ.ಚಿದಾನಂದಮೂರ್ತಿ, ಎ.ಎಂ.ಅಣ್ಣಿಗೇರಿ, ಆರ್.ಶೇಷಶಾಸ್ತ್ರಿ ಮೊದಲಾದವರ ಒಡನಾಡಿಯೂ ಹೌದು.

> ಕನ್ನಡದ ಹಿರಿಯ ವಿದ್ವಾಂಸ, ಶಾಸನತಜ್ಞ ಡಾ. ಎಚ್.ಎಸ್. ಗೋಪಾಲರಾವ್ ಅವರಿಗೆ ಕನ್ನಡದ ಸಾಂಸ್ಕೃತಿಕ ಲೋಕವು ಬೆಂಗಳೂರಿನ ದಿ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ಇಂದು ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದೆ. 'ಬಹುಮುಖಿ' ಅಭಿನಂದನಾ ಗ್ರಂಥವೂ ಬಿಡುಗಡೆ ಆಗುತ್ತಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಶಾಸನಶಾಸ್ತ್ರ ತರಗತಿಗಳ ವಿದ್ಯಾರ್ಥಿಯಾಗಿದ್ದ ಕಾಲಕ್ಕೆ ಗೋಪಾಲರಾವ್ ಪತ್ತೆ ಮಾಡಿ ಪ್ರಕಟಿಸಿದ 'ಜಲಗಾರ ದಿಬ್ಬದ ಶಾಸನ'ದ ವಿವರಗಳು ಕರ್ನಾಟಕದ ಶಾಸನಕ್ಷೇತ್ರದಲ್ಲಿ ಸಂಚಲನವನ್ನು ಉಂಟುಮಾಡಿದ್ದನ್ನು ಹಲವರು ಇಂದಿಗೂ ನೆನಪಿಸಿಕೊಳ್ಳುವರು. ಹಲ್ಮಿಡಿ ಶಾಸನಕ್ಕಿಂತಲೂ ಹಿಂದಿನ ಶಾಸನ ಎಂಬ ಪ್ರಮೇಯವನ್ನು ಮುಂದಿಟ್ಟು ಪ್ರಕಟಿಸಿದ್ದ ಶಾಸನವನ್ನು ಅಂದಿನ ಹಲವು ತಜ್ಞರು ಪರಿಶೀಲಿಸಿ ಉತ್ತಮ ಚರ್ಚೆಗಳಾದುದು ಇಂದಿಗೆ ಇತಿಹಾಸ.

ಗೋಪಾಲರಾವ್ ಅವರು 1984ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಎಂ.ಎ. ಪರೀಕ್ಷೆಯನ್ನು 2 ಚಿನ್ನದ ಪದಕಗಳೊಂದಿಗೆ ಪಡೆದು, ಆನಂತರ 1941ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಡಾ. ಬಾ.ರಾ.ಗೋಪಾಲ್ ಅವರ ಮಾರ್ಗದರ್ಶನದಲ್ಲಿ ಬರೆದ 'ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು - ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯ ಮಹಾಪ್ರಬಂಧಕ್ಕೆ ಪಿಎಚ್.ಡಿ ದೊರೆಯಿತು.

ಗೋಪಾಲರಾವ್ ಅವರ 'ನಮ್ಮ ನಾಡು ಕರ್ನಾಟಕ', 'ಇತಿಹಾಸದ ಅಧ್ಯಯನ ಅಂದು-ಇಂದು' ಹಾಗೂ 'ಕರ್ನಾಟಕ ಏಕೀಕರಣ ಇತಿಹಾಸ' ಕೃತಿಗಳು ಈ ಕಾಲದ ಪ್ರಮುಖ ಆಕರಗಳಾಗಿವೆ. 'ಚಂಗಾಳ್ವರು', 'ಶಾಸನ ಸಂಕಲನ', 'ಇತಿಹಾಸದ ಇಣುಕು ನೋಟ', 'ನಮ್ಮದಿದು ಇತಿಹಾಸ', 'ಕರ್ನಾಟಕ ಏಕೀಕರಣ', 'ಸಂಯುಕ್ತ ಬೆಂಗಳೂರು ಜಿಲ್ಲೆ: ಪ್ರಾಗಿತಿಹಾಸ ಮತ್ತು ಇತಿಹಾಸ: ಕೆಲವು ಪುಟಗಳು', 'ಶಾಸನಾಧ್ಯಯನ: ಕೆಲ ಹೆಜ್ಜೆಗುರುತುಗಳು' ಹಾಗೂ 'ರಾ.ಶಿ' ಇವರ ಲೇಖನಿಯಿಂದ ಬಂದಿರುವ ಕೃತಿಗಳು.

ಬಿ.ಎಸ್.ಉಪಾಧ್ಯಾಯರ 'ಫೀಡರ್ಸ್ ಆಫ್ ಇಂಡಿಯನ್ ಕಲ್ಚರ್' ಕೃತಿಯನ್ನು 'ಭಾರತೀಯ ಬಹುಮುಖೀ ಸಂಸ್ಕೃತಿ' ಎಂಬ ಹೆಸರಿನಲ್ಲಿ ಹಾಗೂ ಬಿಪಿನ್ ಚಂದ್ರ ಅವರ 'ಹಿಸ್ಟರಿ ಆಫ್ ಮಾಡರ್ನ್ ಇಂಡಿಯಾ' ಕೃತಿಯನ್ನು 'ಆಧುನಿಕ ಭಾರತದ ಚರಿತ್ರೆ' ಎಂದು ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಡಾ. ಎಸ್.ಶ್ರೀಕಂಠಶಾಸ್ತ್ರಿಗಳ 'ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ ಸಂ.1'ರ ಲಿಪ್ಯಂತರ ಹಾಗೂ ಅನುವಾದವನ್ನು 'ಕರ್ನಾಟಕ ಇತಿಹಾಸ ಆಕರಗಳು ಸಂ.1' ಎಂಬುದಾಗಿ ಮಾಡಿಕೊಟ್ಟಿದ್ದಾರೆ. 'ಮಣ್ಣೆ-ಒಂದು ವಿವರಣಾತ್ಮಕ ಅಧ್ಯಯನ' ಅವರ ಇತ್ತೀಚಿನ ಪ್ರಕಟಣೆಯಾಗಿದ್ದು, ಐತಿಹಾಸಿಕ ಪ್ರದೇಶವೊಂದರ ಚರಿತ್ರೆಯನ್ನು ಇವರು ಕಟ್ಟಿಕೊಟ್ಟಿರುವ ರೀತಿ ಅನನ್ಯವಾಗಿದೆ. ಇವರ ಬಹುತೇಕ ಕೃತಿಗಳೆಲ್ಲವೂ ಮುಂದಿನ ತಲೆಮಾರಿನವರಿಗೆ ಮಾದರಿಯಾಗಿವೆ.

ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ನಾಗಾಭರಣರ ನಿರ್ದೇಶನದಲ್ಲಿ ದೂರದರ್ಶನಕ್ಕಾಗಿ ಮಾಡಿದ್ದ 'ಕರ್ನಾಟಕದ ದೇವಾಲಯಗಳು' ಹಾಗೂ ಶ್ರವಣಬೆಳಗೊಳದ 'ಮಹಾಮಸ್ತಕಾಭಿಷೇಕ'ದ ಸಂದರ್ಭದಲ್ಲಿ ಮಾಡಿದ್ದ ಸಾಕ್ಷ್ಯಚಿತ್ರಕ್ಕೆ ವಿಷಯತಜ್ಞರಾಗಿ ನೆರವಾಗಿರುವ ಗೋಪಾಲರಾವ್ ಅವರು 'ರಾತ್ರಿಯಲ್ಲಿ ಹಂಪೆ' ಬೆಳಕು-ಧ್ವನಿ ಕಾರ್ಯಕ್ರಮಕ್ಕೆ ರೂಪಕ ರಚನೆ ಮಾಡಿಕೊಟ್ಟಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ನೆರವಾಗಿರುವ ಗೋಪಾಲರಾವ್ ನೇರ, ನಿಷ್ಠುರ ಮಾತಿನ, ನಿರಂತರ ಪರಿಶ್ರಮದ ಬದುಕಿನಲ್ಲಿ ಮಾಡಿರುವ ಸಾಧನೆ ಹಲವರಿಗೆ ಪ್ರೇರಣೆಯಾಗಿದೆ.

ಏರುಹಾದಿಯಲ್ಲಿನ ಅನನ್ಯ ಪಯಣಿಗ

ವಾದಿರಾಜ್

ಸ್ಮರಣೆ

ಮಂಗಳೂರು ಸಮೀಪದ ತೆಂಕಎಕ್ಕಾರು ಗ್ರಾಮದ ಕೆ.ಭಾಸ್ಕರದಾಸ್ ಜನ ಸಂಘಟನೆಗಾಗಿ ನಿರಂತರ ಓಡಾಡುತ್ತಲೇ ಇದ್ದ ಅಪ್ಪಟ ಅಲೆಮಾರಿ. ಚೆನ್ನದಾಸರ ಎಂಬ ಪರಿಶಿಷ್ಟ ಜಾತಿಯ ಸಣ್ಣ ಅಲೆಮಾರಿ ಸಮುದಾಯದಲ್ಲಿ ಹುಟ್ಟಿ ತಮ್ಮ ಕಾಳಜಿ, ಪರಿಶ್ರಮ, ನಿರಂತರ ಓಡಾಟದಿಂದ ಸಾವಿರಾರು ಜನರ ನಿಷ್ಕಳಂಕ ಪ್ರೀತಿ ಸಂಪಾದಿಸಿದವರು.

ಐದು ಪೀಳಿಗೆಗಳ ಹಿಂದೆ ಉತ್ತರ ಕರ್ನಾಟಕದ ಯಾವುದೋ ಮೂಲೆಯಿಂದ ಚೆನ್ನದಾಸರ ಸಮುದಾಯದ ಒಂದಿಷ್ಟು ಕುಟುಂಬಗಳು ಭಿಕ್ಷಾಟನೆಯನ್ನೇ ಕಾಯಕವಾಗಿಸಿಕೊಂಡು ಗುಳೆ ಹೊರಟವು. ತಿರುಗಿ, ತಿರುಗಿ ಮಂಗಳೂರು ಸಮೀಪದ ತೆಂಕಎಕ್ಕಾರು ಗ್ರಾಮದಲ್ಲಿನ ಹೊಳೆಯೊಂದರ ಸಮೀಪ ನೆಲೆನಿಂತವು. ಅದೇ ಕುಟುಂಬಗಳ ಕುಡಿ ಸಂಜೀವದಾಸ್, ಅವರ ಹೆಂಡತಿ ಯಮುನಾದಾಸ್. ಈ ದಂಪತಿಗೆ ಐವರು ಗಂಡು ಮಕ್ಕಳು, ಒಬ್ಬ ಹೆಣ್ಣುಮಗಳು. ಈ ಕುಟುಂಬದ ಎರಡನೆಯ ಕುಡಿಯೇ ಭಾಸ್ಕರದಾಸ್. ಕಿತ್ತು ತಿನ್ನುವ ಬಡತನದ ದಿನಗಳು. ಅಜ್ಜಿ ಕೊಟ್ಟ ಪುಡಿಗಾಸು ಹಿಡಿದು ಭಾಸ್ಕರದಾಸ್ ಮುಂಬೈ ಸೇರಿದರು. ಮಂಗಳೂರು ಮೂಲದ ಎಲ್ಲಪ್ಪ ಸುವರ್ಣರ ಪರಿಚಯವಾಗಿ ಕ್ಯಾಂಟೀನ್‌ನಲ್ಲಿ ನೌಕರಿ. ಅಲ್ಲಿಂದ ಕೇಟರಿಂಗ್ ಸಂಸ್ಥೆಯಲ್ಲಿ ಕೆಲಸ. ಹೇಗೋ ಮಾಡಿ ಸ್ವಂತದ್ದೇ ಒಂದು ಚಿಕ್ಕ ಹೋಟೆಲ್ ಆರಂಭ. ಅಷ್ಟರಲ್ಲಾಗಲೇ ಮುಂಬೈನಲ್ಲಿ ಆರ್‌ಎಸ್‌ಎಸ್ ಸಂಪರ್ಕ. ತುರ್ತುಪರಿಸ್ಥಿತಿ ಮುಗಿದು ಚುನಾವಣೆ ಸಮಯ. ರಾಮ್ ಜೇಠ್ಮಲಾನಿ ಪರ ಪ್ರಚಾರ. ಪೋಸ್ಟರ್ ಅಂಟಿಸಿ, ಬ್ಯಾನರ್ ಕಟ್ಟಿ ಗಲ್ಲಿ ಗಲ್ಲಿ ತಿರುಗಿ ಚುನಾವಣಾ ಪ್ರಚಾರ. ಅಷ್ಟು ಇಷ್ಟು ಕಲಿತ ಹಿಂದಿ, ಮರಾಠಿ ಪ್ರಯೋಜನಕ್ಕೆ ಬಂದವು.

ಇರಾಕ್‌ನಲ್ಲಿ ವ್ಯಾಪಾರ ಮಾಡಿಕೊಂಡಿದ್ದು, ಮುಂಬೈಗೆ ವಾಪಸ್ ಬಂದಿದ್ದ ನಿಖಿಲ್ ಮೋರೆ ಪರಿಚಯ. ಮೋರೆ ಮಾಡಿಸಿಕೊಟ್ಟ ವೀಸಾ-ಪಾಸ್‌ಪೋರ್ಟ್ ಹಿಡಿದು ದುಬೈನ ಕತಾರ್‌ಗೆ ಪ್ರಯಾಣ. ಏಳೆಂಟು ವರ್ಷ ಭರಪೂರ ದುಡಿಮೆ. ಕೈಯಲ್ಲೊಂದಿಷ್ಟು ಕಾಸು. ಪರದೇಶ ಸಾಕೆನಿಸಿ ಮತ್ತೆ ಭಾರತಕ್ಕೆ. ನ್ಯಾಷನಲ್ ಪರ್ಮಿಟ್ ಇದ್ದ ಲಾರಿ ಖರೀದಿ. ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ-ಸ್ವಂತ ಲಾರಿ ಚಲಾಯಿಸುತ್ತ ತಿರುಗಾಟ. ಮತ್ತೊಂದು ಲಾರಿ ಖರೀದಿ, ವಹಿವಾಟು ವೃದ್ಧಿ. 1987ರಲ್ಲಿ ಬೆಂಗಳೂರಿನಲ್ಲಿದ್ದ ಸುಧಾದಾಸ್ ಜೊತೆ ಮದುವೆ. ಸುಧಾ ಕರಾವಳಿಯಿಂದ ಹೋಟೆಲ್ ಉದ್ಯಮಕ್ಕಾಗಿ ಬೆಂಗಳೂರಿಗೆ ವಲಸೆ ಬಂದಿದ್ದ ಕುಟುಂಬದ ಮಗಳು. ಮದುವೆಯ ನಂತರ ಹೆಂಡತಿ ಎಂಎಸ್ಸಿ- ಬಯಾಲಜಿ ಮುಗಿಸಲು ಹೆಗಲೆಣೆಯಾಗಿ ನಿಂತವರು ಈ ಭಾಸ್ಕರದಾಸ್.

ಈ ನಡುವೆ ಗುಜರಾತ್‌ನಲ್ಲಿ ಭೀಕರ ಲಾರಿ ಅಪಘಾತ. ಲಾರಿ ನಜ್ಜುಗುಜ್ಜಾಗಿದ್ದರೂ ಡ್ರೈವರ್ ಭಾಸ್ಕರದಾಸ್ ಏನೂ ಆಗದೆ ಪಾರು. ಸುಧಾರ ತಂದೆಯಿಂದ ಅಳಿಯನಿಗೆ ಟ್ರಕ್ ಡ್ರೈವರ್ ಕೆಲಸ ಬಿಟ್ಟು ಅವರದೇ ಹೋಟೆಲ್ ನೋಡಿಕೊಳ್ಳುವಂತೆ ಒತ್ತಾಯ. ಈ ನಡುವೆ ಸಿಂಡಿಕೇಟ್ ಬ್ಯಾಂಕಿನಲ್ಲಿದ್ದ ಚೆನ್ನದಾಸರ ಸಮುದಾಯದ ಯುವಕನಿಗೆ ಜಾತಿ ಪ್ರಮಾಣಪತ್ರದ ವಿಷಯದಲ್ಲಿ ಕಿರುಕುಳ. ಆ ಯುವಕನ ಪರವಾಗಿ ಹೋರಾಟಕ್ಕೆ ಇಳಿದ ಭಾಸ್ಕರದಾಸ್. ಹೋರಾಟದ ಅಲ್ಪ ಯಶಸ್ಸಿನಿಂದ ಭಾಸ್ಕರದಾಸ್‌ಗೆ ಚೆನ್ನದಾಸರ ಜಾತಿ ಸಂಘದ ಅಧ್ಯಕ್ಷ ಹುದ್ದೆ. ಮಾವನ ಒತ್ತಾಯಕ್ಕೆ ಮಣಿದು, ಹೋಟೆಲ್ ಉದ್ಯಮಕ್ಕೆ ಹೊರಳಿದ ಭಾಸ್ಕರದಾಸ್. ಬೆಂಗಳೂರಿನ ಆನಂದರಾವ್ ವೃತ್ತದ ಸಮೀಪದ ರಾಜಪ್ರಕಾಶ್ ಹೋಟೆಲ್‌ನ ಗಲ್ಲಾದಲ್ಲಿ ಕುಳಿತ ಭಾಸ್ಕರದಾಸ್.

ಮಂಗಳೂರಿನ ಕಟೀಲು ದುರ್ಗಾ ಪರಮೇಶ್ವರಿ ದೇವಾಲಯದ ಪರಿಸರದಲ್ಲಿ ಚೆನ್ನದಾಸರ ಸಮುದಾಯದ ರಾಜ್ಯ ಸಮಾವೇಶ ಮಾಡಲು ನಿರ್ಧಾರ. ಅದಕ್ಕಾಗಿ ರಾಜ್ಯ ಪ್ರವಾಸ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಡಾ. ಜೋಗನ್ ಶಂಕರ್, ಡಾ. ಗುರುಲಿಂಗಯ್ಯ ಜೊತೆ ಸಮಾಲೋಚನೆ. ಆ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿದ್ದ ಡಾ. ಕೆ.ಎಮ್. ಮೇತ್ರಿ ಪರಿಚಯ. ಚೆನ್ನದಾಸರ ಸಮುದಾಯದ ಸಮಾವೇಶ ಮಾಡುವ ಬದಲು ಎಲ್ಲ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ರಾಜ್ಯ ಸಮಾವೇಶ ಮಾಡಲು ನಿರ್ಧಾರ. ಮೊದಲ ಬಾರಿಗೆ ಅಲೆಮಾರಿ ಸಮುದಾಯದವರೆಲ್ಲ ಒಟ್ಟಾಗಿ ಸೇರುವ ಸಂಭ್ರಮ. ಕಟೀಲು ದೇಗುಲದ ಸನ್ನಿಧಿಯಲ್ಲಿ ಭರ್ಜರಿ ಸಮಾವೇಶ. ಭಾಸ್ಕರದಾಸ್ ಅಲೆಮಾರಿ, ಅರೆ ಅಲೆಮಾರಿ ವಿಮುಕ್ತ ಬುಡಕಟ್ಟುಗಳ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆ.

ಆರ್‌ಎಸ್‌ಎಸ್‌ನಲ್ಲಿ ಒಂದಿಷ್ಟು ಪಳಗಿದ್ದು ಭಾಸ್ಕರದಾಸ್ ಒಳ್ಳೆಯ ಸಂಘಟಕರಾಗಲು ಸಹಾಯ ಮಾಡಿತು. ಹಂಪಿಯಲ್ಲಿ ಅಲೆಮಾರಿ ಸಮುದಾಯಗಳ ಮತ್ತೊಂದು ರಾಜ್ಯ ಸಮಾವೇಶವನ್ನು ಸಂಘಟಿಸಿದರು. 2008-09ರಲ್ಲಿ ಸರ್ಕಾರದಿಂದ ಅನುದಾನ ತಂದು ಪ್ರತಿಯೊಂದು ಅಲೆಮಾರಿ ಸಮುದಾಯದ ಬಗ್ಗೆ ಡಾ. ಕೆ.ಎಂ.ಮೇತ್ರಿ ಅವರ ಸಂಪಾದಕತ್ವದಲ್ಲಿ ಅಧ್ಯಯನಪೂರ್ಣ ಕೃತಿಗಳು ಬರಲು ಕಾರಣರಾದರು. ಇಂತಹದ್ದೊಂದು ವಿಶಿಷ್ಟ ಪ್ರಯತ್ನ ಇಡೀ ದೇಶದಲ್ಲಿ ಕನ್ನಡದಲ್ಲಿ ಬಿಟ್ಟರೆ ಮತ್ತೆಲ್ಲೂ ಆಗಿಲ್ಲ ಎಂದು ಅನೇಕ ಹೊರರಾಜ್ಯಗಳ ವಿದ್ವಾಂಸರು ಪ್ರಶಂಸಿಸಿದ್ದಾರೆ.

ಮೂರು ವರ್ಷಗಳ ಹಿಂದೆ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ, ಸಬಲೀಕರಣ ಸಚಿವಾಲಯದ ಡಿಎನ್‌ಟಿ, ಎಸ್ಎನ್‌ಟಿ, ಎನ್‌ಟಿ ಅಭಿವೃದ್ಧಿ ನಿಗಮದ ಸದಸ್ಯರಾಗಿ ಭಾಸ್ಕರದಾಸ್ ನಿಯುಕ್ತರಾದರು. ಈ ಮೂಲಕ ಹೊರ ರಾಜ್ಯಗಳಿಗೂ ತಮ್ಮ ಓಡಾಟ ವಿಸ್ತರಿಸಿದ್ದರು. ಅಲೆಮಾರಿ ಸಮುದಾಯಗಳಿಂದ ಮತಾಂತರಗೊಂಡವರನ್ನು ವಾಪಸ್ ಕರೆತರುವ ಯೋಜನೆಯಲ್ಲಿಯೂ ಭಾಸ್ಕರದಾಸ್ ಸಕ್ರಿಯರಾಗಿದ್ದರು.

ಎಷ್ಟೋ ವರ್ಷಗಳ ಕಾಲ ಅವರ ರಾಜಪ್ರಕಾಶ್ ಹೋಟೆಲ್ ಅಲೆಮಾರಿಗಳೆಲ್ಲರ ನೆಚ್ಚಿನ ತಾಣ. ಅಲ್ಲಿ ಹೋದರಾಯಿತು. 'ಸ್ಪೆಷಲ್ ದೋಸೆ'ಯ ರಸದೌತಣ ಸವಿಯಲೇಬೇಕಿತ್ತು. ಕಾರ್ಯಭಾರದಿಂದ ಭಾಸ್ಕರದಾಸ್ ಕೆಲ ವರ್ಷಗಳ ಹಿಂದೆ ಹೋಟೆಲ್ ವ್ಯವಹಾರ ನಿಲ್ಲಿಸಿದ್ದರು.

ನ. 3, 4ರಂದು ಭಾಸ್ಕರದಾಸ್ ಬೆಂಗಳೂರಿನಲ್ಲಿಯೇ ಇದ್ದರು. ಬೆಂಗಳೂರಿಗೆ ಬಂದರೆಂದರೆ ಭೇಟಿಯಾಗದೇ ಹೋದವರಲ್ಲ. ಸಚಿವ ಶ್ರೀನಿವಾಸ ಪೂಜಾರಿ ಅವರನ್ನು ಭೇಟಿಯಾಗಿ ಒಂದು ತಾಸು ಚರ್ಚೆ. ವಸತಿ ಯೋಜನೆ, ನಿಗಮ ರಚನೆ, ಮೂಲ ಸೌಕರ್ಯಗಳು, ಜಾತಿ ಪ್ರಮಾಣಪತ್ರ ವಿತರಣೆ ಹೀಗೆ ಎಷ್ಟೋ ವಿಷಯಗಳು. ಮಂಗಳೂರಿಗೆ ವಾಪಸ್ ಹೊರಟ ಭಾಸ್ಕರದಾಸ್ ಕುಣಿಗಲ್‌ನ ಬಿಂಡಿಗನವಿಲೆ ಹತ್ತಿರ ಅಪಘಾತದಲ್ಲಿ ಅಸ್ವಸ್ಥರಾದರು. 6ರಂದು ಕೊನೆಯುಸಿರು ಎಳೆದರು. ಪುಟ್ಟ ಸಮುದಾಯದ 'ಭಾಸ್ಕರ' ಅಸ್ತಂಗತನಾದಾಗ ಅಂತ್ಯಕ್ರಿಯೆಗೆ ದೂರ ದೂರದಿಂದ ಬಂದಿದ್ದ ನೂರಾರು ಅಲೆಮಾರಿಗಳು. ಯಾವುದೋ ಜಾತಿ, ಯಾವುದೋ ಊರು. ಆದರೂ ತೀರದ ಬಂಧುತ್ವ.

ಇಂಗ್ಲಿಷ್‌ನಲ್ಲಿ ಕನ್ನಡ ಅಭಿಜಾತ ಸಾಹಿತ್ಯ

ಪುರುಷೋತ್ತಮ ಬಿಳಿಮಲೆ

ನಾಡಿನ ಹಿರಿಯ ಚಿಂತಕರಾದ ಡಾ. ಹಂಪ ನಾಗರಾಜಯ್ಯ ಅವರು ಅಪಾರ ಶ್ರಮವಹಿಸಿ ತಮ್ಮ ಇಳಿವಯಸ್ಸಿನಲ್ಲಿ ಸಿದ್ಧಪಡಿಸಿದ Spectrum of Classical Literature in Karnatakaದ ಐದು ಸಂಪುಟಗಳು ಕನ್ನಡ ಅಭಿಜಾತ ಸಾಹಿತ್ಯದ ಹಿರಿಮೆಯನ್ನು ಕನ್ನಡೇತರರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿವೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಕನ್ನಡವನ್ನು ನಾವು ಹೀಗೆ ಪರಿಚಯಿಸದೇ ಹೋದರೆ ಕನ್ನಡಕ್ಕೆ ಉಳಿಗಾಲವಿಲ್ಲ.

ಇವತ್ತು ಉನ್ನತ ಶಿಕ್ಷಣದ ಅಂತರರಾಷ್ಟ್ರೀಕರಣವೂ (Internationalisation of higher education) ಜೋರಾಗಿ ನಡೆಯುತ್ತಿದೆ. ಪಠ್ಯಕ್ರಮಗಳನ್ನು ಎರಡೂ ದೇಶಗಳ ಶಿಕ್ಷಣ ಸಂಸ್ಥೆಗಳು ಜಂಟಿಯಾಗಿ ರೂಪಿಸುತ್ತಿವೆ. ಬಂಗಾಳಿ, ಮಲೆಯಾಳಿ ಮತ್ತು ತಮಿಳು ಭಾಷೆಗಳು ಅನುವಾದಗಳ ಮೂಲಕ ಈಗಾಗಲೇ ಹೊಸ ಸವಾಲುಗಳನ್ನು ಸ್ವೀಕರಿಸಿ, ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಲಗ್ಗೆ ಹಾಕಿವೆ. ಆದರೆ ಕನ್ನಡಕ್ಕೆ ಮಾತ್ರ ಅಂತ ಭಾಗ್ಯ ಇನ್ನೂ ಬಂದಿಲ್ಲ. ಅಂಥ ಸಂದರ್ಭದಲ್ಲಿ ಹಂಪನಾ ಅವರ ಅಭಿಜಾತ ಸಾಹಿತ್ಯ ಅನುವಾದದ Spectrum of Classical Literature in Karnatakaದ ಐದು ಸಂಪುಟಗಳಿಗೆ ಐತಿಹಾಸಿಕ ಮಹತ್ವವೂ ಇದೆ.

ಈ ಸಂಪುಟಗಳು ಕನ್ನಡ ಅಭಿಜಾತ ಸಾಹಿತ್ಯ ಪರಂಪರೆಗೆ ಸೇರಿದ ಮುಖ್ಯ ಕೃತಿಗಳನ್ನು ಮತ್ತು ಕವಿಗಳನ್ನು ಕನ್ನಡೇತರರಿಗೆ ಸೊಗಸಾಗಿ ಪರಿಚಯಿಸುವ ಉದ್ದೇಶವನ್ನು ಹೊಂದಿವೆ. ಹೀಗಾಗಿ ಈ ಸಂಪುಟಗಳು ಅಭಿಜಾತ ಸಾಹಿತ್ಯವನ್ನು ಬಹಳ ವಿಮರ್ಶಾತ್ಮಕವಾಗಿಯೇನೂ ನೋಡುವುದಿಲ್ಲ. ಬದಲಾಗಿ ಅವುಗಳನ್ನು ಓದಿದವರು ಕನ್ನಡದ ಕಡೆಗೆ ಆಕರ್ಷಿತರಾಗಿ ಮತ್ತಷ್ಟು ಕನ್ನಡವನ್ನು ಓದುವಂತೆ ಪ್ರೇರೇಪಿಸುತ್ತವೆ. ಹೀಗೆ ಮಾಡಬೇಕಾದ್ದು ಇಂದಿನ ಅಗತ್ಯವೂ ಹೌದು. ಈ ಧೋರಣೆಯಲ್ಲಿಯೇ ಐದೂ ಸಂಪುಟಗಳು ಸಿದ್ಧಗೊಂಡಿವೆ.

ಇದರ ಮೊದಲನೆಯ ಸಂಪುಟವು ಒಂಬತ್ತು ಮತ್ತು ಹತ್ತನೇ ಶತಮಾನದಲ್ಲಿದ್ದ ಪಂಪಪೂರ್ವ ಮತ್ತು ಪಂಪಯುಗದ ಕವಿಗಳನ್ನು ಪರಿಚಯಿಸುತ್ತದೆ. ಎರಡನೇ ಸಂಪುಟದಲ್ಲಿ ಪಂಪೋತ್ತರ ಯುಗದ ಒಟ್ಟು 14 ಕವಿಗಳನ್ನು ಪರಿಚಯಿಸಲಾಗಿದೆ. ಈ ಅವಧಿಯನ್ನು 'ಪಂಪೋತ್ತರ ಯುಗ' ಎಂದು ಕರೆಯಲಾಗಿದೆಯಾದರೂ ಪಂಪ ಯುಗದ ಅನೇಕ ಗುಣಗಳು ಈ ಕಾಲದಲ್ಲಿಯೂ ಮುಂದುವರೆದಿವೆ. ಮಾರ್ಗ ಸಂಪ್ರದಾಯಗಳಿಗೆ ನಿಷ್ಠೆ, ಚಂಪೂವಿನ ಬಳಕೆ, ಲೌಕಿಕ -ಆಗಮಿಕ ಕಾವ್ಯರಚನೆ, ವೀರರಸ ಪ್ರಾಧಾನ್ಯ, ಆಶ್ರಯದಾತನನ್ನು ಕಾವ್ಯ ನಾಯಕನೊಡನೆ ಸಮೀಕರಿಸುವ ಪ್ರಕ್ರಿಯೆ ಇತ್ಯಾದಿ ಇಲ್ಲಿಯೂ ಮುಂದುವರೆದಿವೆ.

ಮೂರನೇ ಸಂಪುಟವು 11 ಮತ್ತು 12ನೇ ಶತಮಾನದ 13 ಕವಿಗಳನ್ನು ಪರಿಚಯಿಸುತ್ತದೆ. ಮೊದಲೆರಡು ಸಂಪುಟಗಳಲ್ಲಿ ಜೈನ ಕವಿಗಳೇ ಹೆಚ್ಚಿಗೆ ಇದ್ದರೆ ಈ ಸಂಪುಟದಲ್ಲಿ ಜೈನೇತರ ಕವಿಗಳೂ ಸೇರ್ಪಡೆಗೊಂಡು ಕನ್ನಡ ಕಾವ್ಯ ವಿಸ್ತರಿಸಿಕೊಂಡ ಒಂದು ಚಿತ್ರವೂ ದೊರೆಯುತ್ತದೆ. ನಾಲ್ಕನೇ ಸಂಪುಟದಲ್ಲಿ ಕರ್ನಾಟಕದವರಾಗಿ ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶಗಳಲ್ಲಿ ಬರೆದ ಪೂಜ್ಯಪಾದ, ದುರ್ವಿನೀತ, ರವಿಕೀರ್ತಿ, ಭಟ್ಟಾಕಳಂಕ, ಜಿನಸೇನ ಮೊದಲಾದ 31 ಕವಿಗಳ ಪರಿಚಯವಿದೆ. ತಮ್ಮ ಪ್ರಖರ ಚಿಂತನೆಗಳಿಂದ ಭಾರತದಾದ್ಯಂತ ಜನಪ್ರಿಯರಾಗಿರುವ ಈ ಕವಿಗಳ ಬಗ್ಗೆ ಕನ್ನಡಿಗರಿಗೆ ತಿಳಿದಿರುವುದು ಬಹಳ ಕಡಿಮೆ. ಕಾರಣ ಈ ಸಂಪುಟವು ಕನ್ನಡದಲ್ಲಿ ಬಂದರೂ ಒಳ್ಳೆಯದೇ. ಕೊನೆಯದಾದ ಐದನೇ ಸಂಪುಟವು ಮುಖ್ಯವಾದ ಕೆಲವು ಶಾಸನ ಕವಿಗಳನ್ನೂ ಶಾಸನಗಳನ್ನೂ ಒಳಗೊಂಡಿದೆ.

ಪು:1496 ₹3,000

Spectrum of Classical Literature in Karnataka (5 ಸಂಪುಟಗಳು)
ಲೇ: ಹಂಪ ನಾಗರಾಜಯ್ಯ
ಪ್ರ: ಸಪ್ನಾ
ಸಂ:

ಪ್ರಸ್ತುತ ಸಂಪುಟಗಳಲ್ಲಿ ಕವಿ ಮತ್ತು ಕೃತಿಗಳನ್ನು ಪರಿಚಯಿಸುವಾಗ ಹಂಪನಾ ಅವರು ಸಾಹಿತ್ಯ ಚರಿತ್ರೆಯ ಮಾದರಿಗಳನ್ನೇ ಬಹುಮಟ್ಟಿಗೆ ಅನುಸರಿಸಿದ್ದಾರೆ. ಇದು ಕನ್ನಡೇತರ ಓದುಗರಿಗೆ ಬಹಳ ಉಪಯುಕ್ತ. ಈ ಮಾದರಿಯು ಒಳಗೊಳ್ಳುವ ಮುಖ್ಯ ಅಂಶಗಳೆಂದರೆ, ಕವಿಯ ಹೆಸರು, ಕಾಲ, ಬಿರುದುಗಳು, ಆಶ್ರಯದಾತ/ರು, ಮುಖ್ಯ ಕೃತಿಗಳು ಮತ್ತು ಕೃತಿಗಳ ಸಂಕ್ಷಿಪ್ತ ಪರಿಚಯ ಮಾಡುವುದು ಹಾಗೂ ಅವುಗಳ ಮಹತ್ವವನ್ನು ವಿವರಿಸಿ, ಕಾವ್ಯಗಳ ಕೆಲವು ಆಕರ್ಷಕ ಭಾಗಗಳ ಇಂಗ್ಲಿಷ್ ಅನುವಾದವನ್ನು ನೀಡುವುದು. ಇದರ ಜೊತೆಗೆ ಅಭಿಜಾತ ಪರಂಪರೆಯ ಬಗೆಗೆ ಆಳವಾದ ತಿಳಿವಳಿಕೆಯುಳ್ಳ ಹಂಪನಾ ಅವರು ಈ ವಿಷಯವಾಗಿ ಉಳಿದಿರುವ ಕೆಲವು ಅನುಮಾನಗಳನ್ನು ಪರಿಹರಿಸಿದ್ದಾರೆ, ತಪ್ಪು ಮಾಹಿತಿಗಳನ್ನು ಸರಿಮಾಡಿದ್ದಾರೆ ಮತ್ತು ಹೊಸ ಅಂಶಗಳನ್ನು ಸೇರಿಸಿದ್ದಾರೆ.

ಉದಾಹರಣೆಗೆ, ಕನ್ನಡ ಸಾಹಿತ್ಯ ಚರಿತ್ರಕಾರರು ಉಪೇಕ್ಷಿಸಿದ್ದ ಪಂಪನ ತಮ್ಮ ಜಿನವಲ್ಲಭನಿಗೆ ಹಂಪನಾ ವಿಶೇಷ ಸ್ಥಾನ ಕಲ್ಪಿಸಿಕೊಡುವುದನ್ನು ಗಮನಿಸಬೇಕು. ಹಾಗೆ ಸೇರಿಸಲು ಅವರು ಕೊಡುವ ಕಾರಣವೆಂದರೆ ಜಿನವಲ್ಲಭನು ಭಾಷಾ ಬಳಕೆಯಲ್ಲಿ ತೋರಿದ ಹೊಸತನ. ಸಾಮಾನ್ಯವಾಗಿ ಶಾಸನಗಳನ್ನು ಮೂರು ಭಾಷೆಗಳಲ್ಲಿ (ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶ) ಬರೆಯುತ್ತಿದ್ದ ಕಾಲಘಟ್ಟದಲ್ಲಿ ಜಿನವಲ್ಲಭನು ಮೂರು ಭಾಷೆಗಳ ಸೂತ್ರವನ್ನು ಇರಿಸಿಕೊಂಡು ಕೂಡಾ ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಶಾಸನ ಬರೆದ. ಶಾಸನ ಬರೆಯುವಾಗ, ಸ್ಥಳೀಯ ಭಾಷೆಗಳ ಬಳಕೆಯಲ್ಲಿ ಆಗಿರುವ ಈ ಬದಲಾವಣೆಯನ್ನು ಹಂಪನಾ ಗುರುತಿಸಿದ ಬಗೆ ವಿಶಿಷ್ಟವಾದುದು ಮತ್ತು ಮುಂದಿನ ಸಂಶೋಧನೆಗಳಿಗೆ ಪ್ರೇರಣೆ ನೀಡುವಂಥದ್ದು.

ಉಳಿದಂತೆ, ಹಿಂದೂ ಪುರಾಣಗಳನ್ನು ಮತ್ತು ಅಲ್ಲಿಯ ಕೆಲವು ಪಾತ್ರಗಳನ್ನು ಜೈನ ಕವಿಗಳು ಮಾರ್ಪಡಿಸಿಕೊಂಡ ರೀತಿಯನ್ನು ಹೊಸದಾಗಿ ನೋಡಲು ಈ ಸಂಪುಟಗಳು ನಮಗೆ ಪ್ರೇರಣೆ ನೀಡುತ್ತವೆ. ಸಂಸ್ಕೃತ ಮತ್ತು ಕನ್ನಡ ಪಠ್ಯಗಳ ನಡುವಣ ಸಂಬಂಧ, ಪ್ರಾಕೃತ ಮತ್ತು ಕನ್ನಡ ಪಠ್ಯಗಳ ಸಂಬಂಧ ಹಾಗೂ ಕನ್ನಡ ಪಠ್ಯಗಳ ಆಂತರಿಕ ಸಂಬಂಧಗಳ ಬಗ್ಗೆ ಮೇಲಿನ ಐದೂ ಸಂಪುಟಗಳು ವಿಶೇಷ ಒಳನೋಟಗಳನ್ನು ಕೊಡುತ್ತವೆ.

ಈ ಸಂಪುಟಗಳ ಮುಖ್ಯ ಉದ್ದೇಶವು ಅಭಿಜಾತ ಯುಗದ ಕವಿಕೃತಿಗಳನ್ನು ಇಂಗ್ಲಿಷಿಗೆ ಅನುವಾದ ಮಾಡುವುದರ ಜೊತೆಗೆ, 'ನೋಡಿ, ಇವನೆಷ್ಟು ಸೊಗಸಾಗಿ ಬರೆದಿದ್ದಾನೆ!' ಎಂದು ಹೇಳುತ್ತಾ ಸಹೃದಯರನ್ನು ಕನ್ನಡದ ಕೃತಿಗಳ ಕಡೆಗೆ ಸೆಳೆಯುವುದು. ಅದಕ್ಕಾಗಿ ಅವರು ಮೂಲ ಪಠ್ಯದ ಕೆಲವು ಅತ್ಯುತ್ತಮ ಪದ್ಯಗಳನ್ನೇ ಅನುವಾದಕ್ಕೆ ಆಯ್ದುಕೊಂಡಿದ್ದಾರೆ. ಇವು ಓದುಗರಿಗೆ ಕಾವ್ಯದ ಸೊಗಸನ್ನು ಬಿಡಿಸಿ ತೋರಿಸುವಲ್ಲಿ ಯಶಸ್ವಿಯಾಗಿವೆ.

ಬಂಡೀಪುರ ಮತ್ತು ನಾವು

10ನೇ ಪುಟದಿಂದ...

ಆನಂತರ ಅದೆಷ್ಟೋ ಬೆಳಂದಿಗಳ ರಾತ್ರಿಗಳನ್ನು ಮರದ ಮೇಲಿನ ಅಟ್ಟಣಿಗೆಯಲ್ಲಿ ಕಳೆದೆವು. ಅದೊಂದು ಅದ್ಭುತ ಅನುಭವವಾದರೂ ಹುಲಿಯನ್ನು ಮಾತ್ರ ನೋಡಲಾಗಲಿಲ್ಲ.

ಹಾಗಾದರೆ ಇದ್ದೂ ಕಾಣದ ಹುಲಿಗಳನ್ನು ಪತ್ತೆ ಹಚ್ಚುವುದಾದರೂ ಹೇಗೆ ಎಂಬ ತಿಳಿವಳಿಕೆಯನ್ನು ಪಡೆಯಲು ಸ್ಥಳೀಯ ಬುಡಕಟ್ಟು ಜನರೊಂದಿಗೆ, ಇಲಾಖೆಯ ಸಿಬ್ಬಂದಿಯೊಂದಿಗೆ ಸಂವಾದಿಸಿದೆವು. ಅಯ್ಯೋ, ಮೂರು ಮೂರು ವರ್ಷ ಹುಲಿ ಯೋಜನೆಯ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದವರಿಗೂ ಕಂಡಿಲ್ಲ ಎಂದಾಗ ನಿರಾಸೆಯಾಯಿತು. ನಂತರ 1995ರಲ್ಲಿ ಕಾಡುನಾಯಿಗಳ ಅಧ್ಯಯನಕ್ಕೆಂದು ಬಂಡೀಪುರದಲ್ಲಿ ನೆಲೆಗೊಂಡೆವು. ಕಾಲ್ನಡಿಗೆಯಲ್ಲಿ ಕಾಡನ್ನು ಅನ್ವೇಷಿಸಲು ಆರಂಭಿಸಿದೆವು. ಆಗ ಕಾಡು ವಿಭಿನ್ನವಾಗಿ ಕಾಣತೊಡಗಿತು. ಬೇರೆ ಬೇರೆ ಕಥೆಗಳನ್ನು ಹೇಳಲು ಆರಂಭಿಸಿತು.

ಒಮ್ಮೆ ಪ್ರಾಣಿಗಳು ಬಳಸುವ ಜಾಡಿನಲ್ಲಿ ನಡೆದಿದ್ದಾಗ ಹುಲಿಯ ಹೆಜ್ಜೆಗಳು ಮೂಡಿದ್ದವು. ಹೊಸದಾಗಿ ಮೂಡಿದ್ದ ಆ ಹೆಜ್ಜೆ ಗುರುತುಗಳು ಸ್ವಲ್ಪವೂ ಮಾಸಿರಲಿಲ್ಲ. ಎಚ್ಚರಿಕೆಯಿಂದ ಅಕ್ಕಪಕ್ಕದ ಪೊದರುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಪರಿಶೀಲಿಸುತ್ತಾ ಹೆಜ್ಜೆ ಗುರುತುಗಳನ್ನು ಹಿಂಬಾಲಿಸುತ್ತಾ ಸಾಗಿದೆವು. ತುಸು ದೂರದ ಬಳಿಕ ಹೆಜ್ಜೆಗಳು ಕೆರೆಯತ್ತ ಮುಖ ಮಾಡಿದ್ದವು. ಗಿಡ ಮರಗಳ ಮರೆಯಲ್ಲಿ ಸದ್ದಿಲ್ಲದೆ ಸಾಗಿ ಕೆರೆಯಂಗಳಕ್ಕೆ ಬಂದೆವು. ಕೆರೆಯ ನಡುಭಾಗದಲ್ಲಿ ಹುಲಿ ವಿರಮಿಸಿ ಮಲಗಿತ್ತು. ನಮ್ಮ ಉಪಸ್ಥಿತಿಯ ಸುಳಿವು ಅದಕ್ಕೆ ಸಿಕ್ಕಿರಲಿಲ್ಲ. ಸುಮಾರು ಒಂದೂವರೆ ತಾಸಿನವರೆಗೆ ಸ್ವಲ್ಪ ದೂರದಲ್ಲಿ ಕುಳಿತು ಹುಲಿಯನ್ನು ವೀಕ್ಷಿಸುತ್ತಿದ್ದೆವು. ಇದ್ದಕ್ಕಿದ್ದಂತೆ ನೀರಿನಿಂದ ಮೇಲೆದ್ದ ಹುಲಿ ಮೈಮುರಿದು ಮೆಲ್ಲಗೆ ಹೆಜ್ಜೆಹಾಕುತ್ತಾ ಕಾಡಿನಲ್ಲಿ ಮರೆಯಾಯಿತು.

ಇದಾದ ಹತ್ತು ನಿಮಿಷಗಳ ಬಳಿಕ ಇಲಾಖೆಯ ವಾಹನ ಪ್ರವಾಸಿಗರನ್ನು ಅಲ್ಲಿಗೆ ಕರೆತಂದಿತು. ಆಗಷ್ಟೇ ನಮಗೆ ವಸ್ತುಸ್ಥಿತಿ ಅರ್ಥವಾದದ್ದು. ಕ್ಷೋಭೆಗೊಳಗಾಗಿದ್ದ ಕಾಡಿನಲ್ಲಿ ಹುಲಿಗಳು ಅತಿ ಸೂಕ್ಷ್ಮವಾಗಿ ವರ್ತಿಸುತ್ತಿದ್ದವು. ಹೀಗಾಗಿ ಆ ಹುಲಿ ಪ್ರವಾಸಿಗರು ಆಗಮಿಸುವ ಸೂಚನೆಯನ್ನು ಮುಂಚಿತವಾಗಿ ಗ್ರಹಿಸಿ ಕೆರೆಯಿಂದ ಹೊರನಡೆದಿತ್ತು. ನಿರ್ದೇಶಕರಿಗೆ ಹುಲಿಯ ಸ್ವಭಾವವನ್ನು ವಿವರಿಸಿದಾಗ, 'ಅಯ್ಯೋ, ಇನ್ನೆರಡು ತಿಂಗಳಲ್ಲಿ ನಿವೃತ್ತಿಯಾಗುತ್ತಿದ್ದೇನೆ. ಹುಲಿ ಯೋಜನೆಯ ನಿರ್ದೇಶಕನಾಗಿ ಮೂರು ವರ್ಷ ಕೆಲಸ ಮಾಡಿ ಹುಲಿ ನೋಡಿಲ್ಲವೆಂದರೆ ಜನ ನಗುತ್ತಾರೆ. ನನಗೊಮ್ಮೆ ತೋರಿಸಿ' ಎಂದರು. ಅವರ ಅದೃಷ್ಟಕ್ಕೆ ಮತ್ತೆ ಅದೇ ಘಟನೆ ಮರುಕಳಿಸಿತು.

ಹುಲಿ ಯೋಜನೆ ಘೋಷಿಸಿದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರೊಂದಿಗೆ ಎಸ್.ಜಿ.ನೇಗಿನಹಾಳ್

ಈಗ ಬಂಡೀಪುರದ ಚಿತ್ರ ಬದಲಾಗಿದೆ. ಹುಲಿಗಳ ಸಂಖ್ಯೆ ವೃದ್ಧಿಸಿದೆ. ಅವುಗಳ ವರ್ತನೆಯಲ್ಲೂ ಬದಲಾವಣೆ ಕಂಡಿದೆ. ಪ್ರವಾಸಿಗರನ್ನು ಕಂಡರೆ ಅವುಗಳು ಈಗ ನಾಚಿ ಮರೆಯಾಗುವುದಿಲ್ಲ. ಇದು ಪವಾಡದಂತೆ ಒಮ್ಮೆಲೇ ಬದಲಾವಣೆಯಾದ ದೃಶ್ಯವಲ್ಲ. ಕಾಡನ್ನು ಕಾಡುತ್ತಿದ್ದ ಹಲವು ಸಮಸ್ಯೆಗಳು ಗಣನೀಯವಾಗಿ ಇಳಿಮುಖಗೊಂಡಿವೆ. ಜಾನುವಾರುಗಳ ಸಮಸ್ಯೆ ಕೂಡ ಇಳಿಮುಖವಾಗಿದೆ. ಕಾಡಿನಂಚಿನ 220 ಹಳ್ಳಿಗಳಿಗೆ 'ನಮ್ಮ ಸಂಘ' ಸೇವಾ ಸಂಸ್ಥೆ ವಿತರಿಸುತ್ತಿರುವ ಅಡುಗೆ ಅನಿಲ ಸೌಲಭ್ಯದಿಂದ ಜನರು ಕಾಡಿನೊಳಗೆ ನುಸುಳುತ್ತಿಲ್ಲ. ವನ್ಯಜೀವಿಗಳ ಬೇಟೆಯು ನಿಯಂತ್ರಣದಲ್ಲಿದೆ. ಈ ಎಲ್ಲಾ ಕಾರಣಗಳಿಂದ ಬಂಡೀಪುರ ಚೇತರಿಸಿಕೊಂಡಿದೆ. ಇಲ್ಲಿ ಇಲಾಖೆಯ ಹಲವು ದಕ್ಷ ಅಧಿಕಾರಿಗಳ ಕೊಡುಗೆಯನ್ನು ಸ್ಮರಿಸಬೇಕು. ಹುಲಿ ಯೋಜನೆಯ ಪರಿಕಲ್ಪನೆಯನ್ನು ಚಿಂತಿಸಿ, ಯೋಜನೆ ಅನುಷ್ಠಾನಗೊಳಿಸಿದ ಅಂದಿನ ಪ್ರಧಾನಿ ದಿವಂಗತ ಇಂದಿರಾಗಾಂಧಿ ಅವರ ಕೊಡುಗೆಯೂ ಅನನ್ಯವಾದದ್ದು.

ಈ ಮೇಲಿನ ಟಿಪ್ಪಣಿಗಳಿಂದ 'ಹುಲಿ ಯೋಜನೆ'ಯ ಐವತ್ತು ವರ್ಷಗಳನ್ನು ಪೂರೈಸಿದ ಬಂಡೀಪುರ ಅಪಾಯಗಳಿಂದ ಮುಕ್ತವಾಗಿದೆ ಎಂದು ಹೇಳಲಾಗುವುದಿಲ್ಲ. ಕಾಡಿನಂಚಿನಲ್ಲಿರುವ, ಕಂದಾಯ ಇಲಾಖೆಗೆ ಸೇರಿದ ಕಾಡುಗಳೆಲ್ಲ ಸಾಗುವಳಿ ಭೂಮಿಯಾಗಿ ತ್ವರಿತವಾಗಿ ರೂಪಾಂತರಗೊಳ್ಳುತ್ತಿವೆ. ಬೆಳೆ ಸಂರಕ್ಷಿಸಿಕೊಳ್ಳಲು ರೈತರು ಪರದಾಡುತ್ತಿದ್ದಾರೆ. ಮಾನವ–ವನ್ಯಜೀವಿ ಸಂಘರ್ಷ ದಿನದಿಂದ ದಿನಕ್ಕೆ ಉಲ್ಬಣಿಸುತ್ತಿದೆ. ಆನೆಗಳಿಗೆ ನಾವು ನೀಡಿರುವ ಕಾಡಿನ ವಿಸ್ತೀರ್ಣ ಅತ್ಯಲ್ಪ. ಬೆಳೆದ ಹುಲಿ ಮರಿಗಳು ಹೊಸ ನೆಲೆಯನ್ನು ಹುಡುಕುತ್ತಾ ಕಾಫಿ ತೋಟಗಳಲ್ಲಿ, ಜಮೀನುಗಳಲ್ಲಿ ಅಸಹಾಯಕವಾಗಿ ನಿಂತಿವೆ.

ಇದೆಲ್ಲಕ್ಕಿಂತ ಕಾಡನ್ನು ಬೆಂಕಿಯಂತೆ ಆವರಿಸುತ್ತಿರುವ ಲಂಟಾನಾ ಕಳೆ. ಹೇಗೋ ಕಾಡು ಹೊಕ್ಕಿದ ಈ ಕಳೆಯ ಪ್ರಾಬಲ್ಯದೆದುರು ಸ್ಥಳೀಯ ಸಸ್ಯಪ್ರಭೇದಗಳು ಧೃತಿಗೆಟ್ಟಿವೆ. ಮುಂದೊಂದು ದಿನ ಇವು ಸೃಷ್ಟಿಸಬಹುದಾದ ಅಪಾಯವನ್ನು ಅಂದಾಜಿಸುವುದು ಕಷ್ಟ. ಇದು ಇಡೀ ಜೀವ ಪರಿಸರವನ್ನು ಅಸ್ತವ್ಯಸ್ತಗೊಳಿಸುವ ಸೂಚನೆಗಳನ್ನು ಈಗಾಗಲೇ ನಮೂದಿಸಿದೆ. ಇದೇ ರೀತಿ ಸೆನ್ನಾ ಸ್ಪೆಕ್ಟಾಬಿಲಿಸ್ ಎಂಬ ಅಮೆರಿಕ ಮೂಲದ ಸಸ್ಯಗಳು ಕಾಡನ್ನು ಆಕ್ರಮಿಸುತ್ತಿರುವ ಸುದ್ದಿ ಸಹ ಆತಂಕಕಾರಿಯಾಗಿದೆ. ಹಾಗಾಗಿ ಹುಲಿಗಳ ಸಂಖ್ಯೆ ವೃದ್ಧಿಸಿತೆಂಬ ಕಾರಣದಿಂದ ಐವತ್ತು ವರ್ಷಗಳ ಸಾಧನೆಯನ್ನು ನೆನೆದು ಹಿಗ್ಗುವಂತಿಲ್ಲ. ವೃದ್ಧಿಸಿದ ಸಂಖ್ಯೆ ಜೀವಿಯ ಭವಿಷ್ಯವನ್ನು ನಿರ್ಧರಿಸುವ ಅಂಶವಾಗುವುದಿಲ್ಲ. ಬದಲಾಗಿ ಅವುಗಳಲ್ಲಿ ಭರವಸೆ ಮೂಡಿಸುವ ಅನುಶಂಗಿಕ ವೈವಿಧ್ಯ ಉಳಿದಿದೆಯೇ ಎಂಬುದನ್ನು ಖಾತರಿ ಮಾಡಿಕೊಳ್ಳಬೇಕು.

ಇಲ್ಲಿ ಬದಲಾಗಬೇಕಿರುವುದು ಆಳುವವರ ಮನಃಸ್ಥಿತಿ. ಅಗಲವಾದ ಎಕ್ಸ್‌ಪ್ರೆಸ್ ರಸ್ತೆಗಳಿಂದ, ಉದ್ದನೆಯ ಸೇತುವೆಗಳಿಂದ, ಬೃಹತ್ ಕಟ್ಟಡಗಳಿಂದ ಸುಭದ್ರ ದೇಶ ಕಟ್ಟಬಹುದೆಂಬ ಅವಿವೇಕ ಚಿಂತನೆಗಳಿಂದ ಹೊರಬರಬೇಕು. ಅಂದಗೆಡದ ವೃಕ್ಷ ಸಂಪತ್ತು ಆಯಾ ದೇಶಗಳ, ಪ್ರದೇಶಗಳ, ಸಂಸ್ಕೃತಿಯನ್ನು, ಪ್ರಗತಿಯನ್ನು ಪ್ರತಿನಿಧಿಸುವ ಪ್ರತಿಬಿಂಬಗಳಾಗಿರುತ್ತವೆ. ಅಭಿವೃದ್ಧಿ ಹಾಗೂ ವಿಕಾಸದ ಹಾದಿಯನ್ನು, ಅರ್ಥವ್ಯಾಪ್ತಿಯನ್ನು ಮತ್ತೆ ಪರಿಶೀಲಿಸಿ ಪುನರ್‌ವ್ಯಾಖ್ಯಾನಿಸುವುದು ಇಂದಿನ ಅಗತ್ಯ. ಈ ಮೂಲತತ್ವವನ್ನು ಅಳವಡಿಸಿಕೊಂಡಾಗ ಕಾಡು ಇನ್ನಷ್ಟು ಕಾಲ ನಿಶ್ಚಿಂತೆಯಿಂದ ಮುಂದುವರಿಯುತ್ತದೆ.

ಕಥೆ
ಸ್ಮಿತಾ ಮೈಸೂರ ಅವರ
ಮೌನ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2022
ತೀರ್ಪುಗಾರರ ಮೆಚ್ಚುಗೆ ಪಡೆದ ಕವನ
ಶಿವ ವಿಷ್ಣುವಲ್ಲಭ ಅವರ
ಶಿವಜಂಗಮನ ಘೋರ ಹಸಿವು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಮೊದಲ ಓದು

ಪೊಲೀಸ್ ಬದುಕಿನ ಸ್ವಾಭಿಮಾನಿ ಕಥನ

ಪೊಲೀಸರ ಕಥೆಗಳು ಕೇಳಿದಷ್ಟೂ, ಓದಿದಷ್ಟೂ ರೋಚಕ. ಅವರ ವೃತ್ತಿ ಹಾಗೂ ವೈಯಕ್ತಿಕ ಬದುಕಿನ ಕಥನ ಒಂದೆಡೆ ತೆರೆದುಕೊಂಡರೆ ಹೇಗೆ? ಅಂತಹ ಕಥೆಯನ್ನು ಒಂದೆಡೆ ಪೇರಿಸಿಕೊಟ್ಟಿದೆ ಶಂಕರ ಬಿದರಿ ಅವರ ಆತ್ಮಚರಿತ್ರೆ 'ಸತ್ಯಮೇವ ಜಯತೇ'.

ಬದುಕಿನಲ್ಲಿ ಪರಿಶ್ರಮದಿಂದ ಸ್ಥಾನ, ಅಧಿಕಾರ ಪಡೆದರೂ ಅದಕ್ಕೂ ಮೀರಿದ ಆತ್ಮಗೌರವವನ್ನು ಉಳಿಸಿಕೊಳ್ಳಲೂ ಕಾನೂನು ಹೋರಾಟ ಮಾಡಬೇಕಾದ ಅನಿವಾರ್ಯ ಸನ್ನಿವೇಶ ಸೃಷ್ಟಿಸಿದ ವ್ಯವಸ್ಥೆಯ ಮುಖವನ್ನು ತೆರೆದಿಡುತ್ತಲೇ ಪೊಲೀಸ್ ಮತ್ತು ತಮ್ಮ ವೈಯಕ್ತಿಕ ಬದುಕನ್ನು ಹೇಳಿಕೊಂಡಿದ್ದಾರೆ ಬಿದರಿ ಅವರು.

42 ವರ್ಷಗಳ ಪೊಲೀಸ್ ಬದುಕಿನ ಸಾಹಸಗಾಥೆಗಳನ್ನು ಹೆಚ್ಚು ವಿವರಿಸಿದ ಈ ಕೃತಿಯನ್ನು ತಮಗಾಗಿ ಜೀವಕೊಟ್ಟು ಹುತಾತ್ಮರಾದ ಇಬ್ಬರು ಹೆಡ್ ಕಾನ್‌ಸ್ಟೆಬಲ್‌ಗಳಿಗೆ ಅರ್ಪಿಸಿದ್ದಾರೆ. ಮೊದಲ ಪುಟದಿಂದ ಕೊನೆಯ ಪುಟದವರೆಗೂ ಬಿದರಿ ಬದುಕಿನ ಹಲವು ಮಜಲುಗಳು, ಸಂಭ್ರಮ, ಸಂಕಷ್ಟಗಳು ಇಲ್ಲಿ ತೆರೆದುಕೊಂಡಿವೆ.

ಹೆಚ್ಚು ರೋಚಕತೆ ಮತ್ತು ಕುತೂಹಲಕರ ವಿಷಯಗಳಿಂದ ಕೂಡಿರುವುದು ವೀರಪ್ಪನ್ ಮತ್ತು ಅವನ ತಂಡದ ವಿರುದ್ಧದ ಕಾರ್ಯಾಚರಣೆ. ಆ ಪ್ರದೇಶದ ಚಿತ್ರಣ, ವೀರಪ್ಪನ್ ಸಹಚರರ ನಿಖರವಾದ ಸಂಖ್ಯೆಗಳು, ಅವನ ಸಹಚರರ ತಂಡವನ್ನು ದುರ್ಬಲಗೊಳಿಸಿದ ಕತೆಗಳು ಇಲ್ಲಿವೆ. ಇಷ್ಟೇ ಪ್ರಾಮುಖ್ಯವನ್ನು ಪಡೆದದ್ದು ಬಳ್ಳಾರಿ ಜಿಲ್ಲಾ ಎಸ್‌ಪಿ ಆಗಿದ್ದಾಗ ಕುಖ್ಯಾತ ಅಪರಾಧಿ ಭೀಮ್ಲಾ ನಾಯ್ಕನ ಹತ್ಯೆ ಪ್ರಕರಣ. ಇದಕ್ಕಾಗಿ ಬಿದರಿ ಅವರು ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳಿಂದ ಗೌರವ ಪಡೆದ ಸಂಗತಿಯೂ ಕೃತಿಯಲ್ಲಿದೆ. ಬಾಲ್ಯ, ವಿದ್ಯಾರ್ಥಿ ಜೀವನ, ಬದುಕಿನ ವಿವಿಧ ಮಜಲುಗಳು, ಕಾನೂನು ಸುವ್ಯವಸ್ಥೆಯಲ್ಲಿ ನಿರ್ವಹಿಸಿದ ಮಹತ್ವದ ಘಟನೆ, ವೈಯಕ್ತಿಕ ಬದುಕು ಎಲ್ಲವನ್ನೂ ಹದವಾಗಿ ವಿವರಿಸಿದ್ದಾರೆ. ದೇವರು, ಧರ್ಮದ ಬಗೆಗಿನ ಅವರ ನಂಬಿಕೆಗಳು, ಅವರು ಪ್ರೀತಿಸುವ, ಪೂಜಿಸುವ ವ್ಯಕ್ತಿಗಳೂ ಈ ಕೃತಿಯಲ್ಲಿ ಹಾದು ಹೋಗಿದ್ದಾರೆ. ಗುರುಲಿಂಗ ಕಾಪಸೆ ಅವರ ಸುದೀರ್ಘ ಮುನ್ನುಡಿ ಈ ಕೃತಿಗಿದೆ. ಪೊಲೀಸ್ ಬದುಕಿನ ಸಾಧನೆಯ ಆಕಾಂಕ್ಷಿಗಳು, ಸ್ಫೂರ್ತಿ ಪಡೆಯಬಯಸುವ ಕುತೂಹಲಿಗಳು ಓದಬೇಕಾದ ಕೃತಿ.



ಪು:746 ₹850

ಕೃತಿ: ಸತ್ಯಮೇವ ಜಯತೇ
(ಶಂಕರ ಮಹಾದೇವ ಬಿದರಿ ಅವರ ಆತ್ಮಚರಿತ್ರೆ)
ಲೇ: ಶಂಕರ ಮಹಾದೇವ ಬಿದರಿ
ಪ್ರ: ಮೆ.ಶಂಕರ ಬಿದರಿ ಆ್ಯಂಡ್ ಅಸೋಸಿಯೇಟ್ಸ್, ಬೆಂಗಳೂರು
ಸಂಪರ್ಕ: 080 49735305

ವಿದುಷಿ ಆರ್‌.ಎನ್‌. ಶ್ರೀಲತಾ

‘ದಿಗ್ಗಜರ ಒಡನಾಟ ನನ್ನ ಸುಯೋಗ’

ರಾಜ್ಯದ ಪ್ರತಿಷ್ಠಿತ ಸಂಗೀತ ಸಂಸ್ಥೆ ‘ಕರ್ನಾಟಕ ಗಾನಕಲಾ ಪರಿಷತ್ತು’ ತನ್ನ ಐವತ್ತೊಂದನೇ ರಾಜ್ಯಮಟ್ಟದ ಸಂಗೀತ ಸಮ್ಮೇಳನವನ್ನು ಬೆಂಗಳೂರಿನ ಎನ್‌.ಆರ್‌. ಕಾಲೊನಿಯಲ್ಲಿ ನಡೆಸುತ್ತಿದ್ದು ಇಂದು (ನ. 20) ಸಮಾರೋಪ. ಈ ಬಾರಿ ಹಿರಿಯ ಸಂಗೀತಗಾರ್ತಿ ಡಾ. ಆರ್‌.ಎನ್‌. ಶ್ರೀಲತಾ ಅವರಿಗೆ ‘ಗಾನಕಲಾಭೂಷಣ’ ಹಾಗೂ ಯುವ ಹಾಡುಗಾರ್ತಿ ಮಾನಸಿ ಪ್ರಸಾದ್ ಅವರಿಗೆ ‘ಗಾನ ಕಲಾಶ್ರೀ’ ಬಿರುದು ಪ್ರದಾನ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗಾನಕಲಾಭೂಷಣ ಪ್ರಶಸ್ತಿಗೆ ಭಾಜನರಾಗುತ್ತಿರುವ ಮೈಸೂರಿನ ವಿದುಷಿ ಆರ್‌.ಎನ್‌. ಶ್ರೀಲತಾ ಅವರು ‘ಪ್ರಜಾವಾಣಿ’ಯೊಂದಿಗೆ ನಡೆಸಿದ ಮಾತುಕತೆ.

ಸಂದರ್ಶನ: ಉಮಾ ಅನಂತ್

• ಸಂಗೀತ ಸಾಮ್ರಾಜ್ಞಿ ಎಂ.ಎಸ್. ಸುಬ್ಬುಲಕ್ಷ್ಮಿ, ಡಿ.ಕೆ. ಪಟ್ಟಮ್ಮಾಳ್ ಅವರೊಂದಿಗೆ ಅತ್ಯಂತ ಸನಿಹದಿಂದ ಒಡನಾಡಿದವರು ನೀವು. ಈ ಘಟಾನುಘಟಿ ಸಂಗೀತಗಾರ್ತಿಯರ ಜೊತೆಗಿನ ನಿಮ್ಮ ಅನುಬಂಧ ತಿಳಿಸಿ.

ಚೆನ್ನೈನ ಮ್ಯೂಸಿಕ್ ಅಕಾಡೆಮಿ ಮತ್ತು ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯಲ್ಲಿ ನಡೆಸುವ ಸಂಗೀತ ಸ್ಪರ್ಧೆಗಳಿಗೆ ನಾನು ಹೋಗುತ್ತಿದ್ದೆ. ಪ್ರತಿ ಬಾರಿಯೂ ಪ್ರಥಮ ಬಹುಮಾನ ಬರುತಿತ್ತು. ಒಮ್ಮೆ ಸೊಸೈಟಿ ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ಮೂರು ಪ್ರಥಮ ಬಹುಮಾನ ಎರಡು ದ್ವಿತೀಯ ಬಹುಮಾನ ಬಂದವು. ಆ ವರ್ಷದ ಸಂಗೀತೋತ್ಸವದಲ್ಲಿ ನಾನೇ ಪ್ರಾರ್ಥನೆಯನ್ನೂ ಹಾಡಿದೆ. ಅಲ್ಲಿಗೆ ಸುಬ್ಬುಲಕ್ಷ್ಮಿ, ಪಟ್ಟಮ್ಮಾಳ್, ಎಂ.ಡಿ. ರಾಮನಾಥನ್ ಮುಂತಾದ ವಿದ್ವಾಂಸರು ಬಂದಿದ್ದರು. ನಾನು ಹಾಡಿದ ಮೇಲೆ ಎಲ್ಲರೂ ‘ತುಂಬಾ ಭಾವಪೂರ್ಣವಾಗಿ ಹಾಡಿದೆ, ಸಂಗೀತ ಬಿಡಬೇಡ, ಮುಂದುವರಿಸು’ ಎಂದು ಆಶೀರ್ವದಿಸಿದರು. ಅಲ್ಲಿ ನನಗೆ ಎಮ್‌.ಡಿ.ರಾಮನಾಥನ್ ಅವರು ತಂಬೂರಿಯನ್ನು ಬಹುಮಾನವಾಗಿ ಕೊಟ್ಟರು. ಸುಬ್ಬುಲಕ್ಷ್ಮಿ ಅವರು ಮನೆಗೆ ಕರೆದರು. ಇಂಥ ಸಂಗೀತಗಾರರ ಒಡನಾಟ ನನಗೆ ಸಿಕ್ಕಿದ್ದು ನನ್ನ ಸುಯೋಗವೇ ಸರಿ.

• ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ‘ಮನೋಧರ್ಮ ಸಂಗೀತ’ಕ್ಕೆ (ಕಲ್ಪನಾ ಸ್ವರ) ವಿಶಿಷ್ಟ ಸ್ಥಾನವಿದೆ. ಈ ವಿಚಾರದ ಬಗ್ಗೆ ನೀವು ಮಹಾಪ್ರಬಂಧವನ್ನೇ ಬರೆದಿದ್ದೀರಿ. ಈಗ ನಿಮ್ಮ ಮನೋಧರ್ಮದ ಬಗ್ಗೆ ತಿಳಿಸಿ.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹಾಡುಗಾರರ ಸೃಜನಶೀಲತೆಗೆ ಪೂರ್ಣ ಅವಕಾಶವಿದೆ. ನಮ್ಮ ಸಂಗೀತ ಕಛೇರಿಯ ಅವಧಿಯಲ್ಲಿ ಸಿಂಹಪಾಲು ಮನೋಧರ್ಮ ಸಂಗೀತಕ್ಕೇ ಮೀಸಲು. ಅಲ್ಲದೆ ಮನೋಧರ್ಮ ಸಂಗೀತವೆಂಬುದು ಗುರುಗಳಿಂದ ಹೇಳಿಸಿಕೊಂಡೇ ಬರುವಂತಹುದಲ್ಲ. ಇದು ಹಾಡುಗಾರರ ಕಲ್ಪನೆ, ಸೃಜನಶೀಲತೆಯಿಂದ ಅಭಿವ್ಯಕ್ತವಾಗುವಂತಹುದು. ಇದಕ್ಕಾಗಿ ಒಳ್ಳೆಯ ಗುರುಗಳ ಮಾರ್ಗದರ್ಶನ, ಕೇಳ್ಮೆ, ಮನನ, ಅಭ್ಯಾಸ, ಸಾಧನೆ, ಚಿಂತನೆ, ಶ್ರದ್ಧೆ ಎಲ್ಲವೂ ಬಹಳ ಮುಖ್ಯ. ನನಗೆ ತಾಯಿ ಸಾವಿತ್ರಮ್ಮವರು ಚಿಕ್ಕಂದಿನಿಂದಲೇ ಪ್ರೋತ್ಸಾಹ ನೀಡಿದರು. ನಮ್ಮ ತಂದೆ ಹಾಗೂ ಗುರುಗಳಾದ ಆರ್‌.ಕೆ. ನಾರಾಯಣಸ್ವಾಮಿ ಅವರು ಸಂಗೀತ ಕಲಿಕೆ ಆರಂಭಿಸಿದರು. ನನ್ನ ಹಿರಿಯ ಅಣ್ಣ ಪದ್ಮಶ್ರೀ ಪುರಸ್ಕೃತ ಆರ್‌.ಎನ್‌. ತ್ಯಾಗರಾಜನ್ ಅವರು ಸಂಗೀತ ಹೇಳಿಕೊಡುತ್ತಿದ್ದರು. ನಾನು ಅಭ್ಯಾಸ ಮಾಡುವಾಗ ಒಂದೇ ರಾಗವನ್ನು ಹತ್ತಾರು ಸಲ ಆಲಾಪನೆ ಮಾಡುತ್ತಿದ್ದೆ. ಪ್ರತಿಬಾರಿಯು ಹೊಸಹೊಸ ಸಂಗತಿಗಳು ಸ್ಫುರಿಸುತ್ತಿದ್ದವು. ಹೀಗೆ ನಮ್ಮ ಮನೋಧರ್ಮವನ್ನು ವೃದ್ಧಿಸಿಕೊಳ್ಳುವುದು. ಜೊತೆಗೆ ಆ ಕಾಲದ ಅನೇಕ ಹಿರಿಯ ವಿದ್ವಾಂಸರ/ ವಿದುಷಿಯರ ಸಂಗಿತ ಕಛೇರಿಗೆ ಹೋಗಿ ಕೇಳುತ್ತಿದ್ದೆ. ನಮ್ಮ ತಾತ, ಮುತ್ತಾತ ಎಲ್ಲರೂ ಸಂಗೀತ ವಿದ್ವಾಂಸರೇ, ಜೊತೆಗೆ ಮನೋಧರ್ಮ ಸಂಗೀತಕ್ಕೆ ಶಾಸ್ತ್ರದಲ್ಲಿ ಏನು ಇರಬಹುದು ಎಂಬ ಕುತೂಹಲದಿಂದ ಪ್ರಯೋಗಾತ್ಮಕ ವಿಷಯ ಆರಿಸಿಕೊಂಡು ಮಹಾಪ್ರಬಂಧ (ಪಿಎಚ್‌ಡಿ) ವನ್ನೂ ಬರೆದೆ.

• ಸಂಗೀತ ಕಛೇರಿ ನೀಡುವ ನಿಟ್ಟಿನಲ್ಲಿ ಸಂಗೀತದ ಅಕಡೆಮಿಕ್ ಅಧ್ಯಯನ ಅಗತ್ಯವಿದೆಯೆ?

ಸಂಗೀತ ಕಲಾವಿದರು ಕಛೇರಿಯನ್ನೇ ವೃತ್ತಿಯಾಗಿ ತೆಗೆದುಕೊಂಡರೆ ಅಕಡೆಮಿಕ್ ಅಧ್ಯಯನದ ಅಗತ್ಯವಿರುವುದಿಲ್ಲ. ಸಂಗೀತದ ಶಾಸ್ತ್ರವನ್ನು ಸ್ವಲ್ಪಮಟ್ಟಿಗೆ ಮನೆಯಲ್ಲೇ ಅಧ್ಯಯನ ಮಾಡಬಹುದು. ‘ಲಕ್ಷ್ಯ ಪ್ರಧಾನಮ್ ಖಲು ಶಾಸ್ತ್ರಮ್’ ಎಂಬಂತೆ ಲಕ್ಷ್ಯವೇ ಪ್ರಧಾನ, ನಂತರ ಶಾಸ್ತ್ರವು ಬಂದಿದ್ದು. ಆದರೆ ಇದರಲ್ಲೇ ಸಂಶೋಧನೆ ಮಾಡಬೇಕೆಂದಿದ್ದರೆ ಶಾಲಾ ಕಾಲೇಜಿನಲ್ಲಿ ಸಂಗೀತದ ಆಳವಾದ ಅಧ್ಯಯನದ ಅಗತ್ಯವಿರುತ್ತದೆ.

• ನಮ್ಮಲ್ಲಿ ಪಾರಂಪರಿಕ ಸಂಗೀತಕ್ಕೆ ಭದ್ರ ಬುನಾದಿ ಇದೆ. ಆದರೆ ಈಗೀಗ ಈ ಪರಂಪರೆ ಕೊಂಚ ಹಾದಿ ತಪ್ಪುತ್ತಿದೆ ಅನಿಸುತ್ತಿದೆ. ನಿಮ್ಮ ಅನಿಸಿಕೆ ಏನು?

ನಿಜವಾಗಿ ಪರಂಪರೆಗೆ ಭದ್ರಬುನಾದಿ ಇದೆ. ಈಗ ರುದ್ರಪಟ್ಟಣಮ್ ಸಂಗೀತ ಪರಂಪರೆ ಅಂದರೆ ಸಂಪ್ರದಾಯ ಶುದ್ಧ ಎಂದು ಹೇಳುತ್ತಾರೆ. ಹಾಗೆ ಸಂಗೀತ ಕ್ಷೇತ್ರದಲ್ಲಿ ಅನೇಕ ಪರಂಪರೆಗಳಿವೆ. ಶೋತೃಗಳು ಬದಲಾವಣೆಯನ್ನು ಇಷ್ಟಪಡುತ್ತಾರೆ. ಕೆಲವರು ತಮ್ಮ ಪ್ರಸ್ತುತಿಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಮಾಡಿಕೊಂಡಿರುತ್ತಾರೆ..ಅದು ಕಾರಣವಾಗುತ್ತದೆ. ಇದನ್ನು ಸರಿ ಎನ್ನಲು, ತಪ್ಪು ಎನ್ನಲು ಬರುವುದಿಲ್ಲ. ಅವರವರ ಮನಃಸ್ಥಿತಿಗೆ ಬಿಟ್ಟಿದ್ದು.

• ಪ್ರತಿಷ್ಠಿತ ಗಾನಕಲಾ ಭೂಷಣ ಪ್ರಶಸ್ತಿಗೆ ಭಾಜನರಾಗಿದ್ದೀರಿ. ಇದು ಸಂಸ್ಥೆಯ ಹೆಮ್ಮೆಯ ಪ್ರಶಸ್ತಿ. ನಿಮಗೆ ಏನನಿಸುತ್ತಿದೆ?

ಪ್ರತಿಯೊಬ್ಬ ಸಂಗೀತಗಾರನಿಗೂ ‘ಗಾನಕಲಾಭೂಷಣ’ ಪುರಸ್ಕಾರ ಪಡೆಯುವುದು ಒಂದು ಕನಸು. ಇದು ಸಂಗೀತ ಜೀವನದ ಮೈಲಿಗಲ್ಲು. ನಿಜಕ್ಕೂ ಈ ಸಂಸ್ಥೆಯಿಂದ ನಾನು ಈ ಬಾರಿ ಪ್ರಶಸ್ತಿ ಪಡೆಯುತ್ತಿರುವುದು ಬಹಳ ಹೆಮ್ಮೆಯಾಗುತ್ತಿದೆ. ಈ ವೇದಿಕೆಯಲ್ಲಿ ಕಛೇರಿ ನೀಡುವುದೂ ಒಂದು ದೊಡ್ಡ ಗೌರವ ಎಂದೇ ಭಾವಿಸುತ್ತೇನೆ. ಸಂಗೀತ ವಿದ್ವಾಂಸ ಆರ್‌.ಕೆ. ಪದ್ಮನಾಭ ಅವರು ಅನೇಕ ವರ್ಷಗಳಿಂದ ಈ ಸಂಸ್ಥೆಯನ್ನು ಮುನ್ನಡೆಸುತ್ತಾ ಬರುತ್ತಿದ್ದು, ಹಲವಾರು ಕಲಾವಿದರಿಗೆ ಅವಕಾಶ ನೀಡಿ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ಇದು ಎಲ್ಲ ಸಂಗೀತಗಾರರ ಸೌಭಾಗ್ಯ ಎಂದೇ ಹೇಳಬೇಕು. ❖

ಮಾನಸಿ ಗಾನ ಕಲಾಶ್ರೀ...

ಗಾನಕಲಾ ಪರಿಷತ್ತಿನ ಯುವ ವಿದ್ವಾಂಸರ ಸಮ್ಮೇಳನಕ್ಕೆ ವಿದುಷಿ ಮಾನಸಿ ಪ್ರಸಾದ್ ಅಧ್ಯಕ್ಷೆ. ಮಾನಸಿ ಪ್ರಸಾದ್ ಎಂಜಿನಿಯರಿಂಗ್ ಪದವೀಧರೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಜೊತೆಗೆ ಭರತನಾಟ್ಯವನ್ನೂ ಕಲಿತಿದ್ದಾರೆ. ದೇಶದ ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ಅಲ್ಲದೆ ಅಮೆರಿಕ, ಸಿಂಗಪುರ ಮುಂತಾದ ದೇಶಗಳಲ್ಲೂ ಸಂಗೀತ ಕಛೇರಿ ನೀಡಿದವರು. ಈ ಬಹುಮುಖ ಪ್ರತಿಭಾವಂತೆಗೆ ‘ಗಾನ ಕಲಾಶ್ರೀ’ ಗೌರವ ಸಂದಿದೆ.

ರಂಗದಲ್ಲಿ ‘ಮಿನುಗಿದ’ ತಾರೆ

ಸಮತಾ ಬಿ. ದೇಶಮಾನೆ

ನಾಟಕ: ‘ಮಿನುಗು ತಾರೆಯ ಕಡೆಯ ದಿನಗಳು’
ಮೂಲ ರಚನೆ: ರವಿ ಬೆಳಗೆರೆ ರೂಪಾಂತರ: ಮನ್ವ ಖುಷಿ ನವಲಗುಂದ ನಿರ್ದೇಶನ: ಜಿತೇಶ್ ಲಗಳಿ
ಅಭಿನಯ: ಶ್ರೀ ಆದಿಶಕ್ತಿ ಶೈಕ್ಷಣಿಕ ಸಾಮಾಜಿಕ ಕಲಾ ಸಂಸ್ಥೆ ಹುಬ್ಬಳ್ಳಿ, ರಂಗ ಬದುಕು ಟ್ರಸ್ಟ್
ನೇತೃತ್ವ: ಸುಮತಿಶ್ರೀ ಹಿರೇಮಠ, ಅನಂತು, ಹೆಲನ್ ಮೈಸೂರು

ಮಿನುಗುತಾರೆ ಕಲ್ಪನಾ ಮತ್ತೊಮ್ಮೆ ನಮ್ಮ ಮುಂದೆ ಬಂದರೆ ಹೇಗಿರಬಹುದು? ಅದನ್ನು ಅರಿಯುವ ಪ್ರಯತ್ನ ನಡೆದದ್ದು ರವೀಂದ್ರ ಕಲಾಕ್ಷೇತ್ರದಲ್ಲಿ. ರಂಗರೂಪದಲ್ಲಿ ಕಲ್ಪನಾ ಪ್ರತ್ಯಕ್ಷರಾದರು. ತಮ್ಮ ಕಥೆಯನ್ನು ತಾವೇ ಹೇಳಿದರು. ಎಷ್ಟೋ ಗೊಂದಲಗಳನ್ನು ದೂರ ಮಾಡಿದರು. ಹೌದು, ‘ಮಿನುಗು ತಾರೆಯ ಕಡೆಯ ದಿನಗಳು’ ನಾಟಕ ಕಲ್ಪನಾ ಬದುಕನ್ನು ಕಲ್ಪನೆಯಾಚೆಗೂ ಕಟ್ಟಿಕೊಟ್ಟಿಕೊಟ್ಟಿತು.

ಕಲ್ಪನಾ ಅವರು ನಡೆ ನುಡಿಯ ಮಾಧುರ್ಯಕ್ಕೆ ಹೆಸರಾದವರು. ವಿಭಿನ್ನ ಉಡುಗೆ-ತೊಡುಗೆ, ಮೈಮಾಟ, ಕಣ್ಣೋಟದಿಂದ ಪ್ರೇಕ್ಷಕರ ಮನ ಗೆದ್ದವರು. ತಮ್ಮನ್ನು ಸಂಪೂರ್ಣವಾಗಿ ಪಾತ್ರದಲ್ಲೇ ವಿಲೀನವಾಗಿಸಿಕೊಂಡು ತನ್ಮಯತೆಯಿಂದ ಅಭಿನಯಿಸಿದವರು. ಮೂವತ್ತೈದನೆಯ ವಯಸ್ಸಿನಲ್ಲಿ ಅವರಿಗೆ ಸರಿಸಾಟಿಯೇ ಇಲ್ಲ ಎಂಬಂತೆ ಛಾಪು ಮೂಡಿಸಿ ‘ಬೆಳ್ಳಿಮೋಡ’, ‘ಶರಪಂಜರ’, ‘ಗೆಜ್ಜೆಪೂಜೆ’, ‘ಎರಡು ಕನಸು’, ‘ಕಪ್ಪು ಬಿಳುಪು’, ‘ಬಯಲುದಾರಿ’, ‘ಬಂಗಾರದ ಹೂ’ ತರಹದ ಚಿತ್ರಗಳಲ್ಲಿ ನಟಿಸಿ ಸೈ ಎನಿಸಿಕೊಂಡವರು. ಸಹಜವಾಗಿಯೇ ಅವರ ಬದುಕಿನ ಕುರಿತು ಕುತೂಹಲ ಇದ್ದದ್ದೇ. ಅಂತಹ ಕುತೂಹಲವನ್ನು ತಣಿಸುವಲ್ಲಿ ಈ ಪ್ರಯೋಗ ಯಶಸ್ವಿಯಾಯಿತು.

ಮೊದಲು ಕಲ್ಪನಾ ಅಭಿನಯಿಸಿದ ಚಲನಚಿತ್ರಗೀತೆಗಳ ನೃತ್ಯ ಪ್ರದರ್ಶನ ನಡೆಯಿತು. ನಂತರ ಭಾವನಾ ರಾಮಣ್ಣ ಅವರ ಮೂಲಕ ಪ್ರವೇಶಿಸಿದ್ದು ಮಿನುಗುತಾರೆ ಕಲ್ಪನಾ. ಕಲ್ಪನಾ ಪ್ರವೇಶ ಹೇಗಿತ್ತು ಗೊತ್ತೇ? ಪ್ರಥಮ ದೃಶ್ಯವೇ ಅದ್ಭುತವಾದ ಪರಿಕಲ್ಪನೆ. ಪಂಜರದಲ್ಲಿ ಕಲ್ಪನಾ ಅವರು ಜನರ ಮುಂದೆ ಬಂದರು. ಬಣ್ಣದ ಲೋಕದಲ್ಲಿ ಪ್ರವೇಶಿಸಿ ಆ ಪಂಜರದಿಂದ ಹೊರಗೆ ಬಂದು ವಿಮೋಚನೆಗೊಳ್ಳುತ್ತಾ ಹೋದರು. ಈ ಪ್ರವೇಶಿಕೆಯೇ ವಿಶಿಷ್ಟ ಅನುಭವವನ್ನು ನೀಡಿತು.

ಮಿನುಗುತಾರೆಯ ನಟನೆ ಎಲ್ಲಾ ವರ್ಗದವರಿಗೂ ಪ್ರಿಯವಾಗುತ್ತಿತ್ತು. ಅವರನ್ನು ಆವಾಹಿಸಿಕೊಂಡ ಭಾವನಾ ಅವರು ಮೊದಲ ಬಾರಿ ರಂಗಭೂಮಿಯಲ್ಲಿ ಅಭಿನಯಿಸಿದರೂ ಪ್ರಬುದ್ಧವಾಗಿ ಪಾತ್ರವನ್ನು ನಿಭಾಯಿಸುವ ಮೂಲಕ ಸೈ ಎನಿಸಿಕೊಂಡರು.

ಭಾವನಾ ಅವರು ಯಾವತ್ತೂ ಕಲ್ಪನಾ ಅವರನ್ನು ನೋಡಿಲ್ಲ, ಮಾತನಾಡಿಸಿಲ್ಲ. ಆದರೆ, ತೆರೆಯ ಮೇಲೆ ಅವರ ಎಲ್ಲಾ ಸಿನಿಮಾಗಳನ್ನು ನೋಡಿ ಮಿನುಗುತಾರೆಯ ಪಾತ್ರವನ್ನು ನಿಭಾಯಿಸಿದ ರೀತಿ ಮನಸೂರೆಗೊಂಡಿತು. ಕಲ್ಪನಾ ಅವರ ಬದುಕಿನ ದುರಂತ ಕಥೆಯನ್ನು ನಾಟಕ ತೆರೆದಿಡುತ್ತಾ ಹೋದಂತೆ ನಿಬ್ಬೆರಗಾಗುವ ಸರದಿ ಪ್ರೇಕ್ಷಕರದಾಗಿತ್ತು. ರಾಜು ಪಾತ್ರಧಾರಿ ಪ್ರಭಾಕರ್ ಅವರು ಪಾತ್ರದಲ್ಲಿರುವ ಗೌಡಿಕೆಯ ಗಮ್ಮತ್ತನ್ನು ತೋರಿಸಿ ಸೈ ಎನಿಸಿಕೊಂಡರು. ಈ ಪ್ರಯೋಗದ ಯಶಸ್ಸು ಹಿರಿಯ ರಂಗ ಕಲಾವಿದೆ ಹೆಲನ್ ಮತ್ತು ಅವರ ತಂಡಕ್ಕೆ ಸಲ್ಲಬೇಕು.

ಪ್ರತೀ ದೃಶ್ಯದಲ್ಲಿ ಪ್ರೇಕ್ಷಕರು ಕಲ್ಪನಾ ಅವರ ಬದುಕು-ಸಾವಿನ ಕುರಿತು ಹುತ್ತದಂತೆ ಬೆಳೆದಿರುವ ಅನುಮಾನ, ಪ್ರೀತಿ, ಚಡಪಡಿಕೆಗೆ ಉತ್ತರ ಕಂಡುಕೊಂಡಂತಿತ್ತು. ರಂಗ ವೇದಿಕೆಯಲ್ಲಿ ಬಳಕೆಯಾದ ತೂಗುಯ್ಯಾಲೆ, ಟೆಲಿಫೋನ್, ಬಿದಿರಿನ ಕುರ್ಚಿ, ಗುಂಟೂರು ಪ್ರವಾಸಿ ಮಂದಿರ, ಕೊನೆಯ ದಿನದಲ್ಲಿ ಬಳಸಲಾದ ಮಂಚ, ದಿಂಬು, ಹಾಸಿಗೆ, ಸುತ್ತಿಗೆ, ಕಾರು, ಉತ್ತರ ಕರ್ನಾಟಕದ ಉಡುಗೆ, ಆಭರಣ ಎಲ್ಲ ಪರಿಕರಗಳು ಕಲ್ಪನಾ ಎಂಬ ಮಿನುಗುತಾರೆಯ ನೆನಪಿಗೆ ಮೆರುಗು ಹೆಚ್ಚಿಸಿದವು. ಪ್ರತೀ ದೃಶ್ಯದಲ್ಲೂ ಪ್ರೇಕ್ಷಕರಿಗೆ ಕುತೂಹಲ ಕೆರಳುತ್ತಿತ್ತು. ಇನ್ನೇನು ಮಾರಿ ಕಣಿವೆಯ ರಹಸ್ಯದ ಬುತ್ತಿಯನ್ನು ತೆರೆದಿಡುತ್ತಾರೆ ಎಂದು ಕೌತುಕದಿಂದ ಕಣ್ಣುಗಳು ಕಾತರಿಸುವಂತೆ ಮಾಡಿತ್ತು ಈ ಪ್ರಯೋಗ.

ಜನರ ಊಹಾಪೋಹಗಳಿಗೆ ತೆರೆ ಎಳೆದು ಕಲಾವಿದರ, ನಟರ ಬದುಕು, ಕಷ್ಟ, ನಷ್ಟ, ನೋವು ಎಲ್ಲರಂತೆಯೇ ಇದ್ದರೂ ಅದನ್ನು ಸಾರ್ವಜನಿಕರು ಅರಿತುಕೊಂಡು, ಅವರ ಜೀವನ ಬಯಕೆ, ಕನಸುಗಳನ್ನು ಗೌರವಿಸಬೇಕೆಂಬ ಸಂದೇಶ ಸಮಾಜಕ್ಕೆ ತಲುಪಿತು. ಈ ನಾಟಕದ ಅಭಿನಯದಿಂದ ಭಾವನಾ ಅವರು ತಮ್ಮ ಮುಡಿಗೆ ಇನ್ನೊಂದು ಗರಿ ಸೇರಿಸಿಕೊಂಡರು. ರಂಗನಾಯಕಿಯ ಸತ್ಯಕಥೆ ಅನಾವರಣಗೊಳಿಸಿದರು.

ಕಲ್ಪನಾ ಅವರ ಸುತ್ತ ಸುಳ್ಳು ಸೃಷ್ಟಿಯ ಜಾಲಕ್ಕೆ ತೆರೆ ಹಾಕಿ ನ್ಯಾಯ ದೊರಕಬೇಕು ಎಂಬ ಆಶಯ ಈ ಪ್ರಯೋಗದ್ದಾಗಿತ್ತು. ಅತ್ತ, ಇತ್ತ, ಸುತ್ತಮುತ್ತ ಹರಡಿಕೊಂಡಿರುವ ಅಸತ್ಯಕ್ಕೆ ಸಾಕ್ಷಿ ಸಮೇತವಾಗಿ ಹೆಲನ್ ಅವರ ಒಡನಾಟ, ಆಪ್ತತೆ, ಗೌರವ, ಕಲಾ ಅಭಿನಯದಲ್ಲಿ ಇದ್ದ ಆತ್ಮೀಯತೆ ಕಲ್ಪನಾ ಅವರ ವ್ಯಕ್ತಿ, ವ್ಯಕ್ತಿತ್ವವನ್ನು ರಂಗದ ಮೇಲೆ ತೋರಿಸಲಾಯಿತು. ❖

ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಂಡ ‘ಮಿನುಗು ತಾರೆಯ ಕಡೆಯ ದಿನಗಳು’ ನಾಟಕದ ದೃಶ್ಯ

ಪ್ರಜಾವಾಣಿ ಚಿತ್ರ: ರಂಜು ಪಿ.

ಕಾಣದಂತೆ ಮಾಯವಾದನೋ

ನಮ್ಮ ಮಕ್ಕಳ ಆಟಗಳು

ಹಳ್ಳಿಗಳಲ್ಲಿ ಮಕ್ಕಳ ಆಟಗಳು ಸಾಕಷ್ಟು ಬಳಕೆಯಲ್ಲಿದ್ದವು. ಅವು ಸುಲಭವಾಗಿ ಆಡಬಹುದಾದ, ದುಬಾರಿಯಲ್ಲದ, ಮನೋರಂಜನೆ ನೀಡುವದೇಹಕ್ಕೂ, ಬುದ್ಧಿಗೂ ವ್ಯಾಯಾಮ ಕೊಡಬಲ್ಲಂಥ ಆಟಗಳಾಗಿದ್ದವು. ಈಗ ಅವು ಮಾಯವಾಗಿವೆ. ಈಗಿನ ಮಕ್ಕಳಿಗೆ ಇಂಥ ಆಟಗಳು ಇದ್ದವು ಎಂಬ ನೆನಪಿಗೆ ಈ ಆಟಗಳ ಪಟ್ಟಿ

ವಿಶೇಷ ಸೂಚನೆ: ಆಟಗಳ ಬಗ್ಗೆ ಹೆಚ್ಚಿನ ವಿವರಣೆ ಬೇಕಿದ್ದಲ್ಲಿ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಧಾರವಾಡ ಇವರ ಮಕ್ಕಳ ಜನಪದ ಆಟಗಳು ಪುಸ್ತಕ ನೋಡಿ.

ಆಟದ ಹೆಸರುಗಳು

1 ಅಗಣೆ ಅಗಣೆ ಅಪ್ಪಯ್ಯ
2 ಅಜ್ಜಿ ಮುಟ್ಟಾಟ
3 ಅಜ್ಜಿ ಗುಡ್ಡೆ
4 ಅಣ್ಣಾ ಎಲ್ಲಿದ್ದಿ?
5 ಅಪ್ಪಾಳೆ ತಿಪ್ಪಾಳೆ/ ಸಕ್ಕಾ ಸರಗಿ ಆಟ/ ಬಗಾಟಿ ಬುಗುರಿ/ ಪುಗುಡಿ ಆಟ
6 ಅವಲಕ್ಕಿ ಪವಲಕ್ಕಿ ಆಟ
7 ಅಂತ್ಯಾಕ್ಷರಿ ಆಟ
8 ಆಣಿ ಕಲ್ಲಾಟ
9 ಆನೆ ಕಿರ್/ ಕಿರ್‌ಕಿರ್ ಆಟ
10 ಇಟ್ಟಗೆ ಪಾದರಕ್ಷೆ ಆಟ
11 ಉಪ್ಪು ಉಪ್ಪು ಕಡ್ಡಿ
12 ಉಪ್ಪು ಮನೆ ಆಟ
13 ಎಡೆ ಮಟ್ಟೆ ಆಟ/ ಚಿಪ್ಪಿನ ಮೇಲೆ ಕಾಲಿಟ್ಟು ಆಮೆ ನಡಿಗೆ ಆಟ
14 ಎಲ್ಲಿಗೆ ಬಂತ ಬಸವ್ವ/ ಎಲ್ಲಿಗೆ ಬಂತ ಸಂಗಯ್ಯ ಆಟ
15 ವಿಟು ಗೋಲಿಯಾಟ
16 ಐಸ್ ಪೈಸ್
17 ಒಟ್ಟಪ್ಪದಾಟ/ ಕಂಚಿ ಆಟ
18 ಕಡ್ಡಿ ಬಿಡಿಸಿ ತೆಗೆಯೋ ಆಟ
19 ಕಡುಬು ಗಣೇಶ
20 ಕಣ್ಣಾ ಮುಚ್ಚಾಲೆ ಆಟ

ಗಣಿತದಲ್ಲಿ ಗರ್ದಿಗಮ್ಮತ್ತು

ಹನ್ನೊಂದರ ಹಕೀಕತ್ತು

11 ಎಂಬುದು ಒಂದು ಬೆಸ ಸಂಖ್ಯೆ. ಅವಿಭಾಜ್ಯ ಸಂಖ್ಯೆ. ಮಾತ್ರವಲ್ಲ, ಅದೊಂದು ಅತಿ ಸಣ್ಣ ಉಗ್ಗು ಸಂಖ್ಯೆಗಳಲ್ಲಿ ಅತಿ ಸಣ್ಣ ಸಂಖ್ಯೆ (ಉಗ್ಗು ಸಂಖ್ಯೆ ಎಂದರೆ ಸಂಖ್ಯೆಯಲ್ಲಿ ಒಂದೇ ಅಂಕಿ ಮತ್ತೆ ಮತ್ತೆ ಬರುವುದು). ಇಂಥ 11ರ ಬಗ್ಗೆ ಒಂದಿಷ್ಟು ಆಟಗಳು. ಯಾವುದೇ ನೂರರೊಳಗಿನ ಒಂದು ಸಂಖ್ಯೆಗೆ 11ರಿಂದ ಗುಣಿಸುವುದು ಅತಿ ಸುಲಭ. ಉದಾ: 87X11. ಇಲ್ಲಿ 87ರ ಮೂಲ ಸಂಖ್ಯೆಗೆ ದಶಕದ 8ನ್ನು ಸೇರಿಸಿಬಿಡಿ. 7ನ್ನು ಅದಕ್ಕೆ ಜೋಡಿಸಿ ಹೇಳಿದರೆ ಉತ್ತರ ಸಿದ್ಧ.

ಹೀಗೆ 87 + 8 (ದಶಕ ಸಂಖ್ಯೆ) = 95ರ
ಮುಂದೆ 7 ಜೋಡಿಸಿದರೆ = 957

2.
68X11 =
68 + 6 = 74
74ಕ್ಕೆ 8 ಜೋಡಿಸಿದರೆ
= 748 ಉತ್ತರ

3.
28X11 =
28 + 2 = 30
30ಕ್ಕೆ 8 ಜೋಡಿಸಿದರೆ
= 308 ಉತ್ತರ

ಪದ ಸಂಕಲನ

- ಇಲ್ಲಿ ಕೊಟ್ಟಿರುವ ಎರಡೂ ಪದಗಳ ಐದು ಅಕ್ಷರಗಳನ್ನು ಬಳಸಿಕೊಂಡು ಬೇರೊಂದು ಪದ ರಚಿಸಿ

1ನರಿ + ಸಮಾಸ =
2 ಹುಳಿ + ಕಂಬಳ =
3 ಲಾಭ + ಕವನ =
4 ಮಾವ + ನಕುಲ =
5 ಮಗ + ಕುಟಿರ =
6 ಅವನ + ಲೋಕ =
7 ಜಲ + ಗದಗ =
8 ವನ + ಕರಿಕೆ =



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿ ಕೊಡಲಾಗಿರುವ ಸುಳಿವು ಆಧರಿಸಿ ಮೂರು ಅಕ್ಷರಗಳ ಹೊಸ ಪದ ರಚಿಸಿ.

ಕ	ವ	ಸುಳಿವು
		ಪಂಚೇಂದ್ರಿಯಗಳಲ್ಲಿ ಒಂದು
		ಗಾಯದ ರಸಿಕೆ
		ಪದ್ಯ ಬರೆಯುವವ
		ಬಂದೂಕು
		ಬಿಸಿ

ಅದಲು ಬದಲು ಕಂಚಿ ಕದಲು

1 ಯಮನಕರ = ____
2 ಬರಿ ಸಮರ = ____
3 ಸೋವಿ ಸರ = ____
4 ಯಾರಪದ = ____

ಕಳೆದ ಸಂಚಿಕೆಯ ಸರಿ ಉತ್ತರಗಳು

ಆಟ 1



ಆಟ 2

1	ಕರಗ	ತ
2	ಪ್ರಭಾವ	ಳಿ
3	ಕನ್ನಡ	ಕ
4	ಕರಣಿ	ಕ
5	ಕನ್ನಡಿ	ಗ
6	ಸಮರ	ಸ
7	ಕಟಕ	ಟೆ

ಆಟ 3

		3		
		2		
4	1	9	7	6
		5		
		8		

ಆಟ 6



ಆಟ 7



ಆಟ 8

1 ಇರೋಣ
2 ಊರೋಣ
3 ಏರೋಣ
4 ಕೂರೋಣ
5 ಕೋರೋಣ
6 ತರೋಣ
7 ತೋರೋಣ
8 ಬೀರೋಣ
9 ಮಾರೋಣ
10 ಹೀರೋಣ
11 ಸೇರೋಣ
12 ಏರೋಣ
13 ಸಾರೋಣ
14 ದೂರೋಣ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪತ್ರಕರ್ತರಿಗೆ ಉಗ್ರರ ಬೆದರಿಕೆ: 10 ಸ್ಥಳಗಳಲ್ಲಿ ಪೊಲೀಸ್ ಶೋಧ

ಶ್ರೀನಗರ: ಪತ್ರಕರ್ತರಿಗೆ ಉಗ್ರರು ಬೆದರಿಕೆಯೊಡ್ಡಿರುವ ಪ್ರಕರಣದ ತನಿಖೆಯ ಸಂಬಂಧ ಕೆಲವು ಪತ್ರಕರ್ತರ ಮನೆಗಳು ಸೇರಿದಂತೆ ಕಾಶ್ಮೀರದಾದ್ಯಂತ 10 ಸ್ಥಳಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಶನಿವಾರ ಶೋಧ ಕಾರ್ಯ ನಡೆಸಿದರು.

'ಪ್ರಕರಣಕ್ಕೆ ಸಂಬಂಧಿಸಿ ಶ್ರೀನಗರ, ಅನಂತನಾಗ್ ಮತ್ತು ಕುಲ್ಗಾಂನ ಹತ್ತು ಸ್ಥಳಗಳಲ್ಲಿ ಶೋಧ ನಡೆಸಿದ್ದೇವೆ' ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವಿಡಿಯೊ ಸೋರಿಕೆ • ಎಎಪಿ ವಿರುದ್ಧ ಬಿಜೆಪಿ, ಕಾಂಗ್ರೆಸ್ ವಾಗ್ದಾಳಿ

ಜೈಲಿನಲ್ಲಿ ಸತ್ಯೇಂದ್ರ ಜೈನ್‌ಗೆ ಮಸಾಜ್?

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಸತ್ಯೇಂದ್ರ ಜೈನ್ ಅವರು ತಿಹಾರ್ ಜೈಲಿನಲ್ಲಿ ತಮ್ಮ ಪಾದಗಳಿಗೆ ಮಸಾಜ್ ಮಾಡಿಸಿಕೊಳ್ಳುತ್ತಿದ್ದಾರೆ ಎನ್ನಲಾದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಅವರ ಪಾದಗಳಿಗೆ ಅಪರಿಚಿತ ವ್ಯಕ್ತಿಯೊಬ್ಬರು ಮಸಾಜ್ ಮಾಡುತ್ತಿರುವ ದೃಶ್ಯ ಈ ವಿಡಿಯೊದಲ್ಲಿದೆ.

ಕಾರಾಗೃಹ ಇಲಾಖೆಯು ದೆಹಲಿ ಎಎಪಿ ಸರ್ಕಾರದ ಸುಪರ್ದಿಯಲ್ಲಿದೆ. ಜೈನ್ ಅವರಿಗೆ ಜೈಲಿನಲ್ಲಿ ವಿಶೇಷ ಸೌಲಭ್ಯ ನೀಡಲಾಗುತ್ತಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಕೋರ್ಟ್‌ನಲ್ಲಿ ಆರೋಪಿಸಿತ್ತು. ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಈ ಆರೋಪಕ್ಕೆ ಸಂಬಂಧಿಸಿದ ವಿಡಿಯೊವೊಂದನ್ನು ಕೋರ್ಟ್‌ಗೆ ಸಲ್ಲಿಸಿದ್ದರು. ಜೈಲು ಅಧೀಕ್ಷಕರನ್ನು ಕಳೆದ ವಾರ ಅಮಾನತು ಮಾಡಲಾಗಿತ್ತು. ವಿಡಿಯೊ ಸೋರಿಕೆ ಮಾಡಿದ ಆರೋಪದಲ್ಲಿ ಇ.ಡಿ. ವಿರುದ್ಧ ಕೋರ್ಟ್ ಮೊರೆ ಹೋಗಲು ಜೈನ್ ಮುಂದಾಗಿದ್ದಾರೆ.

ಎಎಪಿಯನ್ನು 'ಸ್ಪಾ ಮಸಾಜ್ ಪಾರ್ಟಿ' ಎಂದು ಕರೆದ ಬಿಜೆಪಿ

ಸತ್ಯೇಂದ್ರ ಜೈನ್ ಅವರು ಜೈಲಿನಲ್ಲಿ ಪಾದದ ಮಸಾಜ್ ಮಾಡಿಸಿಕೊಳ್ಳುತ್ತಿದ್ದಾರೆ ಎನ್ನಲಾದ ವಿಡಿಯೊ ಬಗ್ಗೆ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಮೌನ ವಹಿಸಿರುವುದನ್ನು ಪ್ರತಿಪಕ್ಷ ಬಿಜೆಪಿ ಪ್ರಶ್ನಿಸಿದೆ. ಜೈಲಿನಲ್ಲಿ ಜೈನ್ ಅವರ ವರ್ತನೆಯ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಜ್ರಿವಾಲ್ ಅವರಿಗೆ ಸವಾಲು ಹಾಕಿದೆ.

'ಆಮ್ ಆದ್ಮಿ ಪಕ್ಷವು ಸ್ಪಾ ಅಂಡ್ ಮಸಾಜ್ ಪಾರ್ಟಿಯಾಗಿ ಬದಲಾಗಿದೆ' ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಅವರು ಆರೋಪಿಸಿದ್ದಾರೆ. 'ಕೇಜ್ರಿವಾಲ್ ಎಲ್ಲಿ ಅವಿತುಕೊಂಡಿದ್ದಾರೆ. ಜೈನ್ ಅವರಿಗೆ ಜೈಲಿನಲ್ಲಿ ಸಂದರ್ಶಕರ ಭೇಟಿಗೆ ಅವಕಾಶ ನೀಡುವ ಮೂಲಕ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಎಎಪಿಯು ಗಣ್ಯರನ್ನು (ವಿವಿಐಪಿ) ನಡೆಸಿಕೊಳ್ಳುತ್ತಿರುವ ಈ ಸಂಸ್ಕೃತಿಯು ಪ್ರಜಾಪ್ರಭುತ್ವಕ್ಕೆ ಮಾರಕ' ಎಂದು ಭಾಟಿಯಾ ಆರೋಪಿಸಿದ್ದಾರೆ.

ಜೈಲಿನಲ್ಲಿ ಫಿಸಿಯೊಥೆರಪಿ: ಸಿಸೋಡಿಯಾ ಸಮರ್ಥನೆ

ಸತ್ಯೇಂದ್ರ ಜೈನ್ ಅವರು ಜೈಲಿನಲ್ಲಿರುವ ವಿಡಿಯೊವನ್ನು ಬಿಜೆಪಿ ಸೋರಿಕೆ ಮಾಡಿದೆ ಎಂದು ಆರೋಪಿಸಿರುವ ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, ಜೈನ್ ಅವರು ಬೆನ್ನುಹುರಿ ಗಾಯಕ್ಕೆ ಫಿಸಿಯೊಥೆರಪಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಹೇಳಿದ್ದಾರೆ.

ದೆಹಲಿ ಪಾಲಿಕೆ ಚುನಾವಣೆ ಹಾಗೂ ಗುಜರಾತ್ ವಿಧಾನಸಭಾ ಚುನಾವಣೆಯ ಸೋಲಿನ ಭೀತಿಯಲ್ಲಿರುವ ಬಿಜೆಪಿ, ಜೈನ್ ಅವರ ವಿಡಿಯೊ ಸೋರಿಕೆ ಮಾಡುವ ಮೂಲಕ ಕೀಳುಮಟ್ಟದ ತಂತ್ರಗಾರಿಕೆ ಪ್ರಯೋಗಿಸುತ್ತಿದೆ ಎಂದು ಸಿಸೋಡಿಯಾ ಕಿಡಿಕಾರಿದ್ದಾರೆ. 'ಜೈನ್ ಅವರಿಗೆ ಬೆನ್ನುಹುರಿಯಲ್ಲಿ ಗಾಯವಾಗಿದ್ದು, ಎರಡು ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಫಿಸಿಯೊಥೆರಪಿ ಚಿಕಿತ್ಸೆಗೆ ವೈದ್ಯರು ಶಿಫಾರಸು ಮಾಡಿದ್ದಾರೆ. ಸೋರಿಕೆಯಾಗಿರುವ ವಿಡಿಯೊ ದಲ್ಲಿ ಅವರಿಗೆ ಚಿಕಿತ್ಸೆ ನೀಡುತ್ತಿರುವ ದೃಶ್ಯವಿದೆ' ಎಂದು ಸಮರ್ಥಿಸಿಕೊಂಡಿದ್ದಾರೆ.

ಎಎಪಿ ವಿರುದ್ಧ ಕಾಂಗ್ರೆಸ್ ಕಿಡಿ

ಸತ್ಯೇಂದ್ರ ಜೈನ್ ಅವರ ಮಸಾಜ್ ವಿಡಿಯೊ ಬಗ್ಗೆ ಎಎಪಿ ವಿರುದ್ಧ ಕಿಡಿಕಾರಿರುವ ಕಾಂಗ್ರೆಸ್‌ನ ರಾಷ್ಟ್ರೀಯ ವಕ್ತಾರೆ ಅಲಕಾ ಲಂಬಾ, ಕೇಜ್ರಿವಾಲ್ ಅವರು ಜೈನ್ ಅವರನ್ನು ಏಕೆ ಸಂಪುಟದಿಂದ ಇನ್ನೂ ಕಿತ್ತುಹಾಕಿಲ್ಲ ಎಂದು ಪ್ರಶ್ನಿಸಿದ್ದಾರೆ.

ವಿಡಿಯೊದಲ್ಲಿರುವ ದೃಶ್ಯವನ್ನು ಗಮನಿಸಿದರೆ, ಅದು ಜೈಲು ಕೊಠಡಿಯ ಬದಲಾಗಿ ಹೋಟೆಲ್ ಕೊಠಡಿಯಂತೆ ಭಾಸವಾಗುತ್ತಿದೆ ಎಂದು ಲಂಬಾ ಹೇಳಿದ್ದಾರೆ. ಈಗ ಮುಂಬೈ ಜೈಲಿನಲ್ಲಿರುವ ಸುಕೇಶ್ ಚಂದ್ರಶೇಖರ್‌ನಂತಹ ಆರೋಪಿಗಳು ಮಾಡಿರುವ ಆರೋಪಗಳು ನಿಜವೆಂದು ತೋರು ತ್ತಿದ್ದು, ಈ ಬಗ್ಗೆ ತನಿಖೆ ನಡೆಸಬೇಕು ಎಂದಿದ್ದಾರೆ.

'ನನಗೆ ಜೈಲಿನಲ್ಲಿ ಸುರಕ್ಷತೆ ಕಲ್ಪಿಸುವ ಭರವಸೆ ನೀಡಿ, ಸತ್ಯೇಂದ್ರ ಜೈನ್ ಅವರು 2019ರಲ್ಲಿ ನನ್ನಿಂದ ₹10 ಕೋಟಿ ಹಣ ವಸೂಲಿ ಮಾಡಿದ್ದರು' ಎಂದು ಆರೋಪಿಸಿ ಸುಕೇಶ್ ಚಂದ್ರಶೇಖರ್ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಪತ್ರ ಬರೆದಿದ್ದರು. ಸುಕೇಶ್ ಬರೆದಿದ್ದ ಪತ್ರವನ್ನು ಇದೇ ಅ.8ರಂದು ಸಕ್ಸೇನಾ ಅವರಿಗೆ ತಲುಪಿಸಲಾಗಿದೆ.

ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತೋಟದ ಕೆಲಸಕ್ಕೆ, ಹಸು, ಮೇಕೆ ಸಾಕಲು ಫ್ಯಾಮಿಲಿ ಕಾರ್ಮಿಕರು, ಟ್ರ್ಯಾಕ್ಟರ್ ಡ್ರೈವರ್ ಬೇಕಾಗಿದ್ದಾರೆ. ಊಟ-ವಸತಿ ಸೌಲಭ್ಯವಿದೆ. ಕುಣಿಗಲ್: 7259578999, 9141519186

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

Columbia Pacific communities

ಭಾರತದ ಅತಿ ದೊಡ್ಡ ಹಾಗೂ ಅತ್ಯಂತ ಬೇಡಿಕೆಯುಳ್ಳ ಸೀನಿಯರ್ ಲಿವಿಂಗ್ ಆಪರೇಟರ್, ಈ ಕೆಳಗಿನ ಖಾಲಿ ಹುದ್ದೆಗಳ ನೇಮಕಾತಿಗೆ ಅರ್ಜಿಗಳನ್ನು ಆಮಂತ್ರಿಸುತ್ತಿದೆ:

- ಅಡಿಗೆ ಮನೆ ಶೆಫ್ ಮತ್ತು ಕುಕ್
- ಹೌಸ್‌ಕೀಪಿಂಗ್ ಕ್ಲೀನರ್
- ರೆಸ್ಟೋರೆಂಟ್ ವೇಟರ್
- ಎಲೆಕ್ಟ್ರಿಷಿಯನ್
- ಪ್ಲಂಬರ್

ನೌಕರಿಯ ಸ್ಥಳ
ದ ವರ್ಚ್ಯುವೊಸೊ
ಕೊಲಂಬಿಯಾ ಪೆಸಿಫಿಕ್ ಕಮ್ಯುನಿಟೀಸ್
ಸರ್ವೇ ನಂ. 120/2 ಬೊಮ್ಮೆನಹಳ್ಳಿ ಗ್ರಾಮ, ಮಂಡುರ್ ಪೋಸ್ಟ್,
ಬಿದರಹಳ್ಳಿ ಹೋಬಳಿ ಈಸ್ಟ್, ತಾಲೂಕು
ಮಂಡುರ್, ಬೆಂಗಳೂರು-562129
ಕರ್ನಾಟಕ

ಇಂಟರ್‌ವ್ಯೂ ತಾರೀಖು – ನವೆಂಬರ್ 23, 24 ಮತ್ತು 25, 2022.

ವೇತನದಲ್ಲಿ ಪ್ರೊವಿಡೆಂಟ್ ಫಂಡ್ (PF) ಮತ್ತು ಎಂಪ್ಲಾಯೀ ಸ್ಟೇಟ್ ಇನ್ಶುರೆನ್ಸ್(ESI) ಸೇರಿದೆ.

ಆಸಕ್ತಿಯುಳ್ಳವರು ಈ ಕೆಳಗಿನ ನಂಬರ್‌ಗೆ ಕರೆ ನೀಡಿರಿ
+91 97410 00796

ತಕ್ಷಣ ಬೇಕಾಗಿದ್ದಾರೆ: ಗೋಬಿ ಮಂಚೂರಿ, ಪಾನಿಪೂರಿ ಮಾಡಲು ಮತ್ತು ಬೇಕರಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಸತಿ ಮತ್ತು ಊಟದ ಸೌಲಭ್ಯವಿರುತ್ತದೆ. ಸ್ಥಳ: ಊಟಿ/ಗುಡಲೂರು. ಸಂಪರ್ಕಿಸಿ: 9159914859, 9738413559

Drivers

ಬೇಕಾಗಿದ್ದಾರೆ! ಬೈಕ್ ಚಾಲಕರು
(Full Time & Part Time)
ಬೇಕಾಗಿರುವ ದಾಖಲೆಗಳು – Bike, Valid DL, RC ಹಾಗು Android Phone
ನೀವು ಬೈಕ್ ಹೊಂದಿದ್ದೀರಾ? ಕೆಲಸ ಹುಡುಕುತ್ತಿದ್ದೀರಾ? ಸಮಯ ಸಿಕ್ಕಾಗ ಬೈಕ್ ಚಲಾಯಿಸಿ ಹಾಗು
4 ಗಂಟೆಗಳಲ್ಲಿ Rs.1000/- ಸಂಪಾದಿಸಿ! ಈಗಲೇ ಕರೆ ಮಾಡಿ:
080-45686913

ಬೈರತಿ ಬೆಂಗಳೂರಿನಲ್ಲಿ ಭಾರಿ ವಾಹನಗಳ ಡ್ರೈವರ್‌ಗಳು ಬೇಕಾಗಿದ್ದಾರೆ, ಗಾಯಿತ್ರಿ ಅಸೋಷಿಯೇಟ್ಸ್, ಗವಿಗುಡಿ ಎದುರುಗಡೆ. ಸಂಪರ್ಕಿಸಿ: 9448488536

Engg/ Production Technical

ಬೆಂಗಳೂರಿನ ಒಂದು ಪ್ರತಿಷ್ಠಿತ ಮ್ಯಾನುಫ್ಯಾಕ್ಚರಿಂಗ್ ಕಂಪನಿಗೆ ಮೆಕ್ಯಾನಿಕಲ್, ಆಟೋಮೊಬೈಲ್ ಇಂಜಿನಿಯರ್, ಫಿಟ್ಟರ್ ಬೇಕಾಗಿದ್ದಾರೆ. ವಿದ್ಯಾರ್ಹತೆ: ಐಟಿಐ, ಡಿಪ್ಲೋಮ. ವೇತನ: ರೂ. 15,000 - 18,000/- ಜೊತೆಗೆ ಇಎಸ್‌ಐ/ಪಿಎಫ್ ಸೌಲಭ್ಯ. ವಯೋಮಿತಿ: 25-30. ಕನಿಷ್ಠ 6 ತಿಂಗಳ ಅನುಭವ ಹೊಂದಿರಬೇಕು. (ಹೊಸಬರಿಗೂ ಅವಕಾಶ ಕಲ್ಪಿಸಲಾಗಿದೆ). ಸಂಪರ್ಕಿಸಿ: 9361282450, 9611354734, 9566858444.

Wanted

'**ರಾಜಕೀಯ ವಿಶ್ಲೇಷಕ** ಸಂಸ್ಥೆಯಲ್ಲಿ ಗ್ಯೂಗಲ್ ಸೂಟ್ ತಂತ್ರಜ್ಞಾನದಲ್ಲಿ ಅನುಭವವಿರುವ ಕ್ಷೇತ್ರ ಸಹವರ್ತಿಗಳ (Field Associates) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಕನ್ನಡ ಮತ್ತು ಇಂಗ್ಲೀಷ್ ಜ್ಞಾನವಿರುವವರಿಗೆ ಪ್ರಥಮ ಆದ್ಯತೆ. ಆಕರ್ಷಕ ಸಂಬಳವಿದೆ. ನಿಮ್ಮ ಸಂಪೂರ್ಣ ವಿವರಗಳನ್ನು 88679 80874ಗೆ ಕಳುಹಿಸಿ.'

WANTED SALES Executive Throughout Karnataka Fresher/ Experienced Male Candidates Needed Minimum Qualification: Any Degree Two wheeler Must Interested Can Send Their Resume to bangalore@agsar.net: 9840691864

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Mysore

COMMERCIAL PLOT for Sale. 37000 Sft. Commercial Plot for Sale. Next to Central Mall, City Centre, Mysuru. 9945535398

Sites

Anjanapura

BDASITE SALE Anjanapura 5G block 2400 sqft SF Rs.160Lakhs brokers excuse. Contact: 9591490644

DH DECCAN HERALD — ಪ್ರಜಾವಾಣಿ

BOOK YOUR CLASSIFIEDS ONLINE

5 EASY STEP

5 Easy steps to book your ads

LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY

TO BOOK YOUR CLASSIFIEDS ADS ONLINE

JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL

*conditions apply

WWW.DHCLASSIFIEDS.COM
For more information Contact: 9731810277 9901641752
9845114560 9886213331 080 - 45557163 / 164
Email: dhclassifieds@deccanherald.co.in

CONNECT

70ನೇ ಹುಟ್ಟುಹಬ್ಬದ ಶುಭಾಷಯಗಳು

ದಿ|| ಶ್ರೀಮತಿ ಜಯಮ್ಮ ಹಾಗೂ
ದಿ|| ಈ. ಶಂಕರಪ್ಪರೆಡ್ಡಿಯವರ ಸುಪುತ್ರರಾದ
ಗೌರವ ಡಾಕ್ಟರೇಟ್,
ಶ್ರೀ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ,
ಸಮಾಜ ಸೇವಾ ತಿಲಕ,
ಸಮಾಜದ ಆಶಾ ಕಿರಣ,
ಬಸವ ಸೇವಾರತ್ನ ಹಾಗೂ ಸುವರ್ಣ
ಕರ್ನಾಟಕ ಮಾಣಿಕ್ಯ ಪ್ರಶಸ್ತಿ
ಪುರಸ್ಕೃತರಾದ ಶ್ರೀಯುತ
ಡಾ|| ಎಸ್. ನಾಗರಾಜರೆಡ್ಡಿ
ಇವರಿಗೆ
ಜನ್ಮ ದಿನದ ಶುಭಾಷಯಗಳು.
HAPPY BIRTHDAY
ಶುಭ ಕೋರುವವರು:
ಸ್ನೇಹಿತರು ಹಾಗೂ ಕುಟುಂಬವರ್ಗ
ಅನ್ನಸಂದ್ರಪಾಳ್ಯ, ಬಸವ ನಗರ, ಹೆಚ್.ಎ.ಎಲ್. ಬೆಂಗಳೂರು–17
ಮೊ: 9341228084 / 9035336466

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರೆಂಟಲ್ ಪ್ರಾಪರ್ಟೀಸ್

Accommodation Available

General

ತರಕಾರಿ ಅಂಗಡಿ ಬಾಡಿಗೆಗೆ ಇದೆ, ಬಿಎಂಟಿಸಿ ಡಿಪೋ ಹತ್ತಿರ ಆರ್.ಟಿ. ನಗರ, ಬೆಂಗಳೂರು:560032 ಯಶಸ್ವಿಯಾಗಿ ನಡೆಯುತ್ತಿದೆ. Call : 9972098277

ವ್ಯಾಪಾರ

Business Offers

Finance

ಎಲ್ಲಾ ರೀತಿಯ ಅಡಮಾನ/ಟಾಪ್ ಅಪ್/ವ್ಯಾಪಾರ ಸಾಲವನ್ನು 'ಎ'/'ಬಿ' ಖಾತಾ ಆಸ್ತಿಗಳ ಭದ್ರತೆಯ ಆಧಾರದ ಮೇಲೆ ಪಡೆಯಲು ದಯವಿಟ್ಟು ಶ್ರೀನಿವಾಸ ಮೂರ್ತಿ ಮೊಬೈಲ್ ಸಂಖ್ಯೆ 9448142641 ಅನ್ನು ಸಂಪರ್ಕಿಸಿ.

ಭವಿಷ್ಯ

Astrology

ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ 600ವರ್ಷ ಹಳೆಯ 108ಜ್ಯೋತಿಷ್ಯ ತಂತ್ರಗಳಿಂದ ವಶೀಕರಣ, ಪ್ರೇಮವಿಚಾರ, ದಾಂಪತ್ಯ, ಹಣಕಾಸು, ಇನ್ಯಾವುದೇ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ. ಪಂಡಿತ್ ಗಣೇಶ್‌ಕುಮಾರ್ 9880444450

ಶ್ರೀ ದುರ್ಗಾದೇವಿ ಆರಾಧನೆಯಿಂದ ಆರೋಗ್ಯ, ಸಂತಾನ, ಶತ್ರುಕಾಟ, ಲೈಂಗಿಕ ಸಮಸ್ಯೆ ಹಾಗೂ ಸ್ತ್ರೀ ಪುರುಷ ವಶೀಕರಣ 3 ದಿನದಲ್ಲಿ ಮಾಡಿಕೊಡುತ್ತಾರೆ. ಫೋನಿನ ಮೂಲಕ ನೇರ ಪರಿಹಾರ. ಶ್ರೀ ಆಚಾರ್ಯ: 9945995681

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ವೈಯಕ್ತಿಕ

Lost

ಪ್ರಕಟಣೆ

ವಿಕ್ರಂ ಕೃಪಾಕರ್ ಗೌತಂ, ವಯಸ್ಸು: 43 ವರ್ಷ, ವಾಸ: ಹೆಚ್ 129, ಪೂರ್ಣಪ್ರಜ್ಞ ಲೇಔಟ್, ಬನಶಂಕರಿ 3ನೇ ಸ್ಟೇಜ್, 3ನೇ ಫೇಸ್, ಬೆಂಗಳೂರು – 560 085. ಆದ ನಾನು, ಪ್ರಚುರಪಡಿಸುವುದೇನೆಂದರೆ, ನನ್ನ ತಾಯಿ ಶ್ರೀಮತಿ ಕಾಮಾಕ್ಷಿ ಕೃಪಾಕರ್‌ರವರಿಂದ ನನಗೆ ದಾನವಾಗಿ ಬಂದಿರುವ ಖಾಲಿ ನಿವೇಶನ ಸಂಖ್ಯೆ: 416, ಅಳತೆ: 40x64+60/2 ಅಡಿ ಇರುವ, ಉತ್ತರಹಳ್ಳಿಯಲ್ಲಿರುವ ಸ್ವತ್ತಿನ ಹಿಂದಿನ ಮಾಲೀಕರು ಆದ ಎಂ.ಎಸ್. ಆರತಿ ಕಿರಣ್ ಇವರು ತಮ್ಮ ತಂದೆಯವರಾದ ಸಂಪತ್ ಕುಮಾರ್ ಎಂ.ವಿ ಇವರ ಹೆಸರಿಗೆ ಪವರ್ ಆಫ್ ಅಟಾರ್ನಿ ಮಾಡಿಕೊಟ್ಟಿದ್ದು, ಸದರಿ ಪತ್ರವು ಕಳೆದು ಹೋಗಿರುತ್ತದೆ. ಈ ಬಗ್ಗೆ ಪೊಲೀಸ್ ಇಲಾಖೆಗೆ ದೂರು ಸಹ ದಾಖಲಾಗಿರುತ್ತೆ. ಯಾರಿಗಾದರೂ ಸದರಿ ಪತ್ರವು ಸಿಕ್ಕಲ್ಲಿ ದಯಮಾಡಿ ನಮಗಾಗಲೀ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಕೊಡಬೇಕೆಂದು ಕೋರುತ್ತೇನೆ.

ವೈವಾಹಿಕ

Brides Wanted

Second Marriage

ಎರಡನೇ ವಿವಾಹದ ವರನಿಗೆ ವಧು ಬೇಕಾಗಿದೆ. 9019976891

Grooms Wanted

Telugu

ALLIANCE INVITED from qualified, employed, unmarried Bangalore settled boy for telugu yadava bangalore girl 42 yrs/5'4' MCA nw, nv' whatsapp 9380397152, vijaykumarn2000@rediffmail.com.

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ, ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916544057,

ಪ್ರವಾಸ

Travel

ಶ್ರೀ ಶಿವನಂದಿ ಟೂರ್ 8792104518,8147311578 ಗುಜರಾತ್ 12ದಿನ20-12-2022, ವೈಷ್ಣದೇವಿ 12ದಿನ10-01-2023, ಕಾಶಿ, ಗಯಾ 6 ದಿನ28-01-2023, ಮದ್ಯಪ್ರದೇಶ 6 ದಿನ09-02-2023 ಅಸ್ಸಾಂ, ಅರುಣಾಚಲ,ಮೇಘಾಲಯ 12ದಿನ 22-02-2023ಮತ್ತು 15-03-2023

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್ 21/12/22 ರಾಯಲ್ ರಾಜಸ್ಥಾನ್ ಪ್ಯಾಕೇಜ್ 9 ದಿನಗಳು. 14/12/22 ಕಾಶಿ, ಬುದ್ಧಗಯ, ಪ್ರಯಾಗರಾಜ್, ಅಯೋಧ್ಯ. 9591017782, 9964527782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಠೇವಣಿ ಮೊತ್ತವನ್ನು ₹1 ನಾಣ್ಯಗಳಲ್ಲಿ ಕೊಟ್ಟ ಅಭ್ಯರ್ಥಿ!

ಪ್ರಜಾ ಮತ — ಜನತಂತ್ರದ ಹಬ್ಬ 2022

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ದಿನಗೂಲಿ ಕಾರ್ಮಿಕ ಮಹೇಂದ್ರ ಪಾಟನಿ ಎಂಬುವರು ಸ್ಪರ್ಧಿಸಿದ್ದು, ₹1 ಮುಖ ಬೆಲೆಯ 10,000 ನಾಣ್ಯಗಳನ್ನು ಠೇವಣಿಯಾಗಿ ನೀಡಿದ್ದಾರೆ. ಪಾಟನಿ ಅವರು ಗಾಂಧಿನಗರ ಉತ್ತರ ಕ್ಷೇತ್ರದಿಂದ ಸ್ಪರ್ಧೆ ಬಯಸಿ ಕಳೆದ ವಾರ ನಾಮಪತ್ರ ಸಲ್ಲಿಸಿದ್ದಾರೆ.

2019ರಲ್ಲಿ ರಾಜಧಾನಿ ಗಾಂಧಿನಗರದಲ್ಲಿ ಹೋಟೆಲ್ ನಿರ್ಮಿಸಲು ಪಾಟನಿ ಅವರು ವಾಸಿಸುತ್ತಿದ್ದ ಕೊಳೆಗೇರಿ ಕಾಲೊನಿಯನ್ನು ಸರ್ಕಾರ ತೆರವುಗೊಳಿಸಿತ್ತು.

ಮೂರು ವರ್ಷಗಳ ಹಿಂದೆ ನೆಲೆ ಕಳೆದುಕೊಂಡ 521 ಗುಡಿಸಲು ವಾಸಿಗಳು ಚುನಾವಣೆಯಲ್ಲಿ ಸ್ಪರ್ಧಿಸಲು ತಮ್ಮ ಪ್ರತಿನಿಧಿಯಾಗಿ ಪಾಟನಿ ಅವರನ್ನು ಆಯ್ಕೆ ಮಾಡಿದ್ದಾರೆ.

ಪಾಟನಿ ಅವರು ವಾಸಿಸುತ್ತಿದ್ದ ಕೊಳೆಗೇರಿಯನ್ನು ಸರ್ಕಾರ ಎರಡು ಬಾರಿ ತೆರವು ಮಾಡಿದೆ. 2010ರಲ್ಲಿ ದಂಡಿ ಕುಟೀರ ವಸ್ತುಸಂಗ್ರಹಾಲಯ ನಿರ್ಮಿಸಲು ತೆರವು ಮಾಡಲಾಗಿತ್ತು. 2019ರಲ್ಲಿ ಹೋಟೆಲ್ ನಿರ್ಮಿಸುವ ಉದ್ದೇಶದಿಂದ ಮತ್ತೊಂದು ಸ್ಥಳಕ್ಕೆ ಕೊಳೆಗೇರಿ ನಿವಾಸಿಗಳನ್ನು ಸ್ಥಳಾಂತರ ಮಾಡಲಾಗಿದೆ.

'ನಮ್ಮ ಕೊಳೆಗೇರಿಯನ್ನು ತೆರವು ಮಾಡಿದ್ದರಿಂದ ದಿನಗೂಲಿ ಕೆಲಸ ಮಾಡುತ್ತಿದ್ದ ಬಹುತೇಕರು ನಿರುದ್ಯೋಗಿಗಳಾದರು. ಹತ್ತಿರದ ಸ್ಥಳಕ್ಕೆ ನಮ್ಮನ್ನು ಸ್ಥಳಾಂತರಿಸಿದರೂ, ಅಲ್ಲಿ ಸೂಕ್ತ ವಿದ್ಯುತ್ ಹಾಗೂ ನೀರಿನ ಸೌಲಭ್ಯ ಇಲ್ಲ. ಸರ್ಕಾರದ ನಿರಾಸಕ್ತಿಯಿಂದ ನೊಂದು, ಚುನಾವಣಾ ಠೇವಣಿ ಹಣವಾಗಿ 10,000 ರೂಪಾಯಿಯನ್ನು ದಿನಗೂಲಿ ಕಾರ್ಮಿಕರು ಒಟ್ಟುಗೂಡಿಸಿದ್ದಾರೆ. ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಿದ್ದಿದ್ದರೆ, ನಾನು ಚುನಾವಣೆಗೆ ಸ್ಪರ್ಧಿಸುವ ಪ್ರಮೇಯ ಬರುತ್ತಿರಲಿಲ್ಲ' ಎಂದು ಪಾಟನಿ ವಿವರಿಸಿದ್ದಾರೆ.

> ಸ್ಥಳೀಯ ಪ್ರಾಧಿಕಾರಗಳಿಂದ ಎದುರಾಗುತ್ತಿರುವ ದೌರ್ಜನ್ಯ ನಿಲ್ಲಬೇಕು. ಮತ್ತೊಂದು ತೆರವು ಕಾರ್ಯಾಚರಣೆಗೆ ಅವಕಾಶ ನೀಡದೇ, ವಾಸಿಸಲು ಕಾಯಂ ನೆಲೆ ಒದಗಿಸಬೇಕು
>
> **ಮಹೇಂದ್ರ ಪಾಟನಿ**, ಪಕ್ಷೇತರ ಅಭ್ಯರ್ಥಿ

'ರಾಹುಲ್‌ಗೆ ಭದ್ರತೆ ನೀಡುವುದು ಕರ್ತವ್ಯ'

ಭೋಪಾಲ್(ಪಿಟಿಐ): 'ಭಾರತ್ ಜೋಡೊ ಯಾತ್ರೆ ಕೈಗೊಂಡಿರುವ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರಿಗೆ ರಾಜ್ಯದಲ್ಲಿ ಪೂರ್ಣ ಭದ್ರತೆ ಒದಗಿಸಲಾಗುವುದು' ಎಂದು ಮಧ್ಯಪ್ರದೇಶದ ಗೃಹ ಸಚಿವ ನರೋತ್ತಮ್ ಮಿಶ್ರಾ ಹೇಳಿದರು.

ಯಾತ್ರೆ ರಾಜ್ಯದಲ್ಲಿ ಹಾದುಹೋಗುವಾಗ ಬಾಂಬ್ ಸ್ಫೋಟಿಸುವ ಬೆದರಿಕೆ ಕುರಿತ ಅನಾಮಧೇಯ ಪತ್ರದ ಹಿನ್ನೆಲೆಯಲ್ಲಿ ಈ ಹೇಳಿಕೆ ನೀಡಿದ್ದಾರೆ. 'ಯಾತ್ರೆ ಅವಧಿಯಲ್ಲಿ ಪೂರ್ಣ ಭದ್ರತೆ ಒದಗಿಸುವುದು ರಾಜ್ಯ ಸರ್ಕಾರದ ಬದ್ಧತೆ ಎಂದಷ್ಟೇ ನಾನು ಭರವಸೆ ನೀಡಲು ಬಯಸುತ್ತೇನೆ' ಎಂದು ಮಿಶ್ರಾ ಹೇಳಿದರು.

ಯಾತ್ರೆ ಅವಧಿಯಲ್ಲಿ ರಾಹುಲ್ ಗಾಂಧಿ ಮತ್ತು ಇತರರು ನ.28ರ ರಾತ್ರಿ ನಿಗದಿಯಂತೆ ಇಲ್ಲಿನ ಖಾಲ್ಸಾ ಕ್ರೀಡಾಂಗಣದಲ್ಲಿ ವಾಸ್ತವ್ಯ ಹೂಡುವರು. ಆಗ ಬಾಂಬ್ ಸ್ಫೋಟಿಸಲಾಗುವುದು ಎಂದು ಬೆದರಿಕೆ ಪತ್ರ ಬಂದಿತ್ತು.

1984ರ ಸಿಖ್ ವಿರೋಧಿ ಗಲಭೆ ಯನ್ನು ಪತ್ರದಲ್ಲಿ ಉಲ್ಲೇಖಿಸಲಾಗಿದ್ದು, ರಾಹುಲ್‌ಗಾಂಧಿ ಮತ್ತು ಮಧ್ಯಪ್ರದೇಶ ಕಾಂಗ್ರೆಸ್ ಘಟಕದ ಮುಖ್ಯಸ್ಥ ಕಮಲ್‌ನಾಥ್ ಅವರನ್ನು ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಲಾಗಿತ್ತು.

ಗುಜರಾತ್: ರಾಹುಲ್ ರ‍್ಯಾಲಿ ನಾಳೆ

ರಾಜ್‌ಕೋಟ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಗುಜರಾತ್ ವಿಧಾನಸಭಾ ಚುನಾವಣಾ ಪ್ರಚಾರ ಕಣಕ್ಕೆ ಧುಮುಕಲಿದ್ದು, ರಾಜ್‌ಕೋಟ್ ಹಾಗೂ ಸೂರತ್‌ನ ಮಹುವಾದಲ್ಲಿ ಸೋಮವಾರ ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗಲಿದ್ದಾರೆ.

ರಾಹುಲ್ ನೇತೃತ್ವದ 'ಭಾರತ್ ಜೋಡೊ ಯಾತ್ರೆ' ಮಹಾರಾಷ್ಟ್ರದಿಂದ ಮಧ್ಯಪ್ರದೇಶಕ್ಕೆ ಭಾನುವಾರ ಅಡಿಯಿಡಲಿದೆ. ಮರುದಿನ ಅವರು ಗುಜರಾತ್‌ಗೆ ತೆರಳಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಜಿಲ್ಲಾಡಳಿತದ ವಿರುದ್ಧ ಗುವಾಹಟಿ ಹೈಕೋರ್ಟ್ ಕಿಡಿ

'ಆರೋಪಿಗಳ ಮನೆ ಕೆಡವುವಂತಿಲ್ಲ'

ಗುವಾಹಟಿ (ಪಿಟಿಐ): 'ನಾಳೆ ನಿಮಗೆ ಏನಾದರೂ ಬೇಕಾದಲ್ಲಿ ನ್ಯಾಯಾಲಯದ ಸಂಕೀರ್ಣದಲ್ಲಿರುವ ನನ್ನ ಕೋಣೆಯನ್ನೇ ಕೆಡವುತ್ತೀರಾ' ಎಂದು ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆರ್.ಎಂ.ಛಾಯಾ ಅವರು ಜಿಲ್ಲಾಡಳಿತದ ವಿರುದ್ಧ ಕಿಡಿಕಾರಿದ್ದಾರೆ.

ಪೊಲೀಸ್ ವಶದಲ್ಲಿದ್ದ ಸ್ಥಳೀಯ ಮೀನು ವ್ಯಾಪಾರಿ ಸಫೀಕುಲ್ ಇಸ್ಲಾಂ (39) ಕಸ್ಟಡಿ ಸಾವು ಖಂಡಿಸಿ ಉದ್ರಿಕ್ತರ ಗುಂಪೊಂದು ಮೇ 21ರಂದು ಬಟಾದ್ರವಾ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿತ್ತು. ಪಾಯದಲ್ಲಿ ಶಸ್ತ್ರಾಸ್ತ್ರ ಮತ್ತು ಮಾದಕ ವಸ್ತು ಸಂಗ್ರಹಿಸಿಟ್ಟಿರುವ ಅನುಮಾನದ ಮೇಲೆ ಜಿಲ್ಲಾಡಳಿತವು ಘಟನೆ ನಡೆದ ಮರುದಿನ ಇಸ್ಲಾಂ ಸೇರಿದಂತೆ ಒಟ್ಟು ಆರು ಮಂದಿ ಆರೋಪಿಗಳ ಮನೆಗಳನ್ನು ಬುಲ್ಡೋಜರ್ ನೆರವಿನಿಂದ ನೆಲಸಮಗೊಳಿಸಿತ್ತು.

ಈ ಸಂಬಂಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಶನಿವಾರ ವಿಚಾರಣೆ ನಡೆಸಿರುವ ನ್ಯಾಯಾಲಯ, 'ತನಿಖಾ ಸಂಸ್ಥೆಯು ಎಷ್ಟೇ ಗಂಭೀರವಾದ ಪ್ರಕರಣದ ತನಿಖೆ ನಡೆಸುತ್ತಿದ್ದರೂ ಕೂಡ ಆರೋಪಿಗಳ ಮನೆ ಕೆಡವುವಂತಿಲ್ಲ. ಅದಕ್ಕೆ ಯಾವ ಕ್ರಿಮಿನಲ್ ಕಾನೂನಿನಲ್ಲೂ ಅವಕಾಶವಿಲ್ಲ' ಎಂದು ಚಾಟಿ ಬೀಸಿದೆ.

'ಯಾರದ್ದಾದರೂ ನಿವಾಸದಲ್ಲಿ ಶೋಧ ನಡೆಸಬೇಕಿದ್ದರೆ ಅದಕ್ಕೆ ಸಂಬಂಧಪಟ್ಟವರಿಂದ ಅನುಮತಿ ಪಡೆದಿರಬೇಕು. ತನಿಖೆಯ ಹೆಸರಿನಲ್ಲಿ ಯಾರೂ, ಯಾರ ಮನೆಯನ್ನೂ ಕೆಡವಿಹಾಕುವಂತಿಲ್ಲ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂಬುದು ಎಲ್ಲರಿಗೂ ತಿಳಿದಿರಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ.

ಮನೆ ಧ್ವಂಸಗೊಳಿಸಿದ ಜಾಗದಲ್ಲಿ 0.9 ಎಂ.ಎಂ ಪಿಸ್ತೂಲ್ ಜಪ್ತಿ ಮಾಡಲಾಗಿದೆ ಎಂದು ಸರ್ಕಾರವು ತನ್ನ ಅಫಿಡವಿಟ್‌ನಲ್ಲಿ ತಿಳಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿರುವ ನ್ಯಾಯಾಮೂರ್ತಿಯವರು, 'ಅದನ್ನು ಯಾರಾದರೂ ಅಲ್ಲಿ ಇಟ್ಟಿರಬಹುದು' ಎಂದಿದ್ದಾರೆ.

'ಬುಲ್ಡೋಜರ್‌ನಿಂದ ಮನೆ ಧ್ವಂಸಗೊಳಿಸುವ ದೃಶ್ಯವನ್ನು ಸಿನಿಮಾಗಳಲ್ಲಿ ನೋಡಿದ್ದೇವೆ. ಅಲ್ಲಿ ಅಧಿಕಾರಿಗಳು ಕಾರ್ಯಾಚರಣೆಗೂ ಮುನ್ನ ಸಂಬಂಧಪಟ್ಟವರಿಗೆ 'ಸರ್ಚ್ ವಾರಂಟ್' ತೋರಿಸುತ್ತಾರೆ. ಆದರೆ, ಈ ಪ್ರಕರಣದಲ್ಲಿ ಅದನ್ನೂ ಮಾಡಿಲ್ಲ' ಎಂದು ಅಧಿಕಾರಿಗಳ ವಿರುದ್ಧ ಹರಿಹಾಯ್ದಿದ್ದಾರೆ.

ಮನೆ ನೆಲಸಮಗೊಳಿಸಿರುವುದನ್ನು ಗುಂಪು ಘರ್ಷಣೆಗೆ ಹೋಲಿಸಿರುವ ಅವರು ಇನ್ನು ಮುಂದೆ ಸೂಕ್ತ ತನಿಖಾ ವಿಧಾನ ಅನುಸರಿಸುವಂತೆ ಗೃಹ ಇಲಾಖೆಗೆ ನಿರ್ದೇಶಿಸಿದ್ದಾರೆ. ಪ್ರಕರಣದ ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಿದ್ದಾರೆ.

ಶ್ರದ್ಧಾ ವಾಲಕರ್ ಹತ್ಯೆ: ತನಿಖೆ ಚುರುಕು

ನವದೆಹಲಿ/ ಮುಂಬೈ (ಪಿಟಿಐ): ಶ್ರದ್ಧಾ ವಾಲಕರ್ ಹತ್ಯೆ ಬಳಿಕ ಶವವನ್ನು ಕತ್ತರಿಸಿ, ಮೃತದೇಹದ ಭಾಗಗಳನ್ನು ಹಲವೆಡೆ ಎಸೆದಿರುವ ಹಿನ್ನೆಲೆಯಲ್ಲಿ ಆರೋಪಿ ಅಫ್ತಾಬ್ ಅಮಿನ್ ಪೂನಾವಾಲಾನನ್ನು ಶನಿವಾರ ದಕ್ಷಿಣ ದೆಹಲಿಯ ವಿವಿಧ ಪ್ರದೇಶಗಳಿಗೆ ಕರೆದೊಯ್ದು ಪೊಲೀಸರು ತನಿಖೆ ನಡೆಸಿದರು.

ಪೊಲೀಸರು ಈವರೆಗೆ ಮೃತ ದೇಹದ 13 ತುಂಡುಗಳು ಅಥವಾ ಮೂಳೆಗಳನ್ನು ಪತ್ತೆಹಚ್ಚಿ ವಶಕ್ಕೆ ಪಡೆದಿದ್ದಾರೆ. ಅವುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗುತ್ತದೆ. ಶ್ರದ್ಧಾಳ ತಲೆಯ ಭಾಗ ಇನ್ನೂ ಪತ್ತೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

'ಅಫ್ತಾಬ್ ಮನೆಯಲ್ಲಿದ್ದ ಹರಿತವಾದ ವಸ್ತುವನ್ನು ವಶಕ್ಕೆ ಪಡೆಯಲಾಗಿದೆ. ಇದರಿಂದಲೇ ಮೃತದೇಹವನ್ನು 35 ಭಾಗಗಳಾಗಿ ಕತ್ತರಿಸಲಾಗಿತ್ತೇ ಎಂಬ ಬಗ್ಗೆ ಪರೀಕ್ಷೆ ನಡೆಸಲಾಗುತ್ತಿದೆ. ಹಾಗೆಯೇ ಕಳೇಬರದ ಭಾಗಗಳು ಶ್ರದ್ಧಾಳದ್ದೇ ಎಂಬುದನ್ನು ಪತ್ತೆ ಹಚ್ಚಲು ಆಕೆಯ ತಂದೆ ಮತ್ತು ಸಹೋದರನ ರಕ್ತದ ಮಾದರಿಯನ್ನು ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೆ ಬಳಸಿದ ಆಯುಧ ಪತ್ತೆಗೆ ಶೋಧ: ಶ್ರದ್ಧಾ ಹತ್ಯೆಗೆ ಬಳಸಿರುವ ಆಯುಧ ಪತ್ತೆಗೆ ಶನಿವಾರ ಪೊಲೀಸರು ಗುರುಗ್ರಾಮದ ಅರಣ್ಯದಲ್ಲಿ ಲೋಹ ಶೋಧಕದೊಂದಿಗೆ ಕಾರ್ಯಾಚರಣೆ ನಡೆಸಿದರು. ಎರಡು ದಿನದಿಂದ ಹುಡುಕಾಟ ನಡೆಸಿದರೂ ಆಯುಧ ಪತ್ತೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಸೋಮವಾರ ಮಂಪರು ಪರೀಕ್ಷೆ?: ಅಫ್ತಾಬ್‌ನನ್ನು ದೆಹಲಿಯ ರೋಹಿಣಿಯಲ್ಲಿರುವ ಅಂಬೇಡ್ಕರ್ ಆಸ್ಪತ್ರೆಯಲ್ಲಿ ಸೋಮವಾರ ಮಂಪರು ಪರೀಕ್ಷೆಗೆ ಒಳಪಡಿಸುವ ಸಾಧ್ಯತೆ ಇದೆ.

ಶ್ರದ್ಧಾ ಮೇಲೆ 2020ರಲ್ಲೇ ಹಲ್ಲೆ: ಅಫ್ತಾಬ್, ಶ್ರದ್ಧಾ ಮೇಲೆ ಮೊದಲಿಗೆ 2020ರ ನವೆಂಬರ್‌ನಲ್ಲಿ ಹಲ್ಲೆ ನಡೆಸಿದ್ದ ಎಂಬುದು ತಿಳಿದುಬಂದಿದೆ.

ಅಫ್ತಾಬ್ ವಿರುದ್ಧ ಪೊಲೀಸರಿಗೆ ದೂರು ನೀಡಲು ಆಗ ಶ್ರದ್ಧಾ ಮುಂದಾಗಿದ್ದರು. ಅಫ್ತಾಬ್‌ನ ಪೋಷಕರ ಮಧ್ಯಪ್ರವೇಶದಿಂದಾಗಿ ಹಿಂದೆ ಸರಿದಿದ್ದರು ಎಂದು ಆಕೆಯ ಮಾಜಿ ಸಹೋದ್ಯೋಗಿ ಕರಣ್ ಹೇಳಿದ್ದಾರೆ.

ಹಲ್ಲೆ ನಡೆಸಿದ ಸಂದರ್ಭದಲ್ಲಿ ಶ್ರದ್ಧಾಗೆ ನೆರವು ನೀಡಿದ್ದ ಆಕೆಯ ಇಬ್ಬರು ಸ್ನೇಹಿತರ ಹೇಳಿಕೆಯನ್ನು ದೆಹಲಿ ಪೊಲೀಸರು ದಾಖಲಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಕತಾರ್‌ಗೆ ಜಯದ ನಿರೀಕ್ಷೆ

‘ಎ’ ಗುಂಪು: ಇಂದು ಈಕ್ವೆಡಾರ್ ತಂಡದ ವಿರುದ್ಧ ಸೆಣಸು

ದೋಹಾ (ರಾಯಿಟರ್ಸ್): ಫಿಫಾ ವಿಶ್ವಕಪ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಕತಾರ್ ಮತ್ತು ಈಕ್ವೆಡಾರ್ ಎದುರಾಗಲಿದ್ದು, ಉಭಯ ತಂಡಗಳು ಶುಭಾರಂಭದ ನಿರೀಕ್ಷೆಯಲ್ಲಿವೆ.

ಅಲ್ ಬೈತ್ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ‘ಎ’ ಗುಂಪಿನ ಪಂದ್ಯದಲ್ಲಿ ಗೆದ್ದರಷ್ಟೇ, ನಾಕೌಟ್ ಹಂತ ಪ್ರವೇಶಿಸುವ ಸಾಧ್ಯತೆಗೆ ಬಲ ಬರಲಿದೆ ಎಂಬುದರ ಅರಿವು ಎರಡೂ ತಂಡಗಳಿಗೆ ಇವೆ.

ಏಕೆಂದರೆ ಆಫ್ರಿಕನ್ ಚಾಂಪಿಯನ್ ಸೆನೆಗಲ್ ಮತ್ತು ನೆದರ್ಲೆಂಡ್ಸ್ ತಂಡಗಳು ‘ಎ’ ಗುಂಪಿನಲ್ಲಿವೆ. ಅವುಗಳ ಸವಾಲು ಮೀರಿ ನಿಲ್ಲುವುದು ಅಷ್ಟು ಸುಲಭವಲ್ಲ. ಪ್ರತಿ ಗುಂಪಿನಿಂದ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಮಾತ್ರ ನಾಕೌಟ್ ಹಂತ ಪ್ರವೇಶಿಸಲಿವೆ.

ಭಾನುವಾರ ಗೆದ್ದು ಪಾಯಿಂಟ್ಸ್ ಖಾತೆ ತೆರೆಯುವುದು ಉಭಯ ತಂಡಗಳ ಗುರಿ. ಇವೆರಡು ತಂಡಗಳು ಫಿಫಾ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ 50 ಹಾಗೂ 44ನೇ ಸ್ಥಾನದಲ್ಲಿವೆ. ಈಕ್ವೆಡಾರ್ ಗೆಲ್ಲುವ ನೆಚ್ಚಿನ ತಂಡ ಎನಿಸಿಕೊಂಡಿದೆಯಾದರೂ, ಕತಾರ್ ಅಚ್ಚರಿಯ ಫಲಿತಾಂಶವನ್ನು ಎದುರುನೋಡುತ್ತಿದೆ.

ವಿಶ್ವಕಪ್‌ಗೆ ಆತಿಥ್ಯ ವಹಿಸಿದ್ದ ಯಾವುದೇ ದೇಶಗಳು ಮೊದಲ ಪಂದ್ಯವನ್ನು ಸೋತಿಲ್ಲ. ಆ ಸಂಪ್ರದಾಯವನ್ನು ಮುಂದುವರಿಸಬೇಕಾದ ಸವಾಲು ಕತಾರ್ ಮುಂದಿದೆ. ಟೂರ್ನಿಗೆ ಆತಿಥ್ಯ ವಹಿಸಿರುವುದರಿಂದ ಕತಾರ್, ವಿಶ್ವಕಪ್‌ಗೆ ನೇರ ಅರ್ಹತೆ ಪಡೆದುಕೊಂಡಿದೆ. ಆದರೆ ಈಕ್ವೆಡಾರ್ ತಂಡ, ದಕ್ಷಿಣ ಅಮೆರಿಕದ ಅತ್ಯಂತ ಕಠಿಣ ಅರ್ಹತಾ ಹಂತವನ್ನು ದಾಟಿ ಬಂದಿದೆ.

ತವರು ನೆಲದ ಪ್ರೇಕ್ಷಕರ ಬೆಂಬಲದೊಂದಿಗೆ ಆಡಲಿರುವುದು ಕತಾರ್‌ಗೆ ನೆರವಾಗಬಹುದು. 2019ರ ಏಷ್ಯಾ ಕಪ್ ಚಾಂಪಿಯನ್ ಆಗಿರುವ ಈ ತಂಡ, ಸ್ಟ್ರೈಕರ್‌ಗಳಾದ ಅಕ್ರಮ್ ಅಫೀಫ್ ಮತ್ತು ಅಲ್ಮೋಜ್ ಅಲಿ ಅವರನ್ನು ನೆಚ್ಚಿಕೊಂಡಿದೆ.

‘ಕತಾರ್ ವಿಶ್ವಕಪ್ ಗೆಲ್ಲುವ ಬಗ್ಗೆ ನಾನು ಮಾತನಾಡುತ್ತಿಲ್ಲ. ಲೀಗ್ ಹಂತದ ಮೂರೂ ಪಂದ್ಯಗಳಲ್ಲಿ ಎದುರಾಳಿಗಳಿಗೆ ಪ್ರಬಲ ಪೈಪೋಟಿ ನೀಡುವುದು ನಮ್ಮ ಗುರಿ’ ಎಂದು ಕೋಚ್ ಫೆಲಿಕ್ಸ್ ಸ್ಯಾಂಚೆಜ್ ಹೇಳಿದ್ದಾರೆ.

ಮಿಡ್‌ಫೀಲ್ಡರ್ ಮೊಯಿಸೆಸ್ ಕೈಸೆಡೊ, ಸ್ಟ್ರೈಕರ್‌ಗಳಾದ ಮೈಕಲ್ ಎಸ್ಟ್ರಾಡ ಮತ್ತು ಎನೆರ್ ವಲೆನ್ಸಿಯಾ ಅವರು ಈಕ್ವೆಡಾರ್‌ನ ಬಲ ಎನಿಸಿಕೊಂಡಿದ್ದಾರೆ. ಕೈಸೆಡೊ ಅವರು ಇಂಗ್ಲಿಷ್ ಪ್ರೀಮಿಯರ್ ಲೀಗ್ ಕ್ಲಬ್ ಬ್ರೈಟನ್ ಪರ ಆಡುತ್ತಿದ್ದಾರೆ.

‘ನಮ್ಮ ಮೇಲೆ ನಂಬಿಕೆಯಿಡಿ. ಕಠಿಣ ತರಬೇತಿ ನಡೆಸಿ ವಿಶ್ವಕಪ್‌ಗೆ ಬಂದಿದ್ದೇವೆ. ಇಡೀ ದೇಶದ ಜನರಿಗೆ ಸಂತಸ ಕೊಡುವ ಸಾಮರ್ಥ್ಯ ಹೊಂದಿದ್ದೇವೆ’ ಎಂಬುದು ವಲೆನ್ಸಿಯಾ ಅವರ ಆತ್ಮವಿಶ್ವಾಸದ ನುಡಿ.

ಈಕ್ವೆಡಾರ್ ತಂಡಕ್ಕೆ ಇದು ನಾಲ್ಕನೇ ವಿಶ್ವಕಪ್ ಟೂರ್ನಿ. ಒಮ್ಮೆ ಮಾತ್ರ ನಾಕೌಟ್ ಹಂತ ಪ್ರವೇಶಿಸಿದೆ. 2006ರ ಟೂರ್ನಿಯಲ್ಲಿ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿತ್ತು.

ಕತಾರ್ ತಂಡದ ಅಕ್ರಮ್ ಅಫೀಫ್ –ಎಎಫ್‌ಪಿ ಚಿತ್ರ

ಈಕ್ವೆಡಾರ್ ತಂಡದ ಮೈಕಲ್ ಎಸ್ಟ್ರಾಡ –ಎಎಫ್‌ಪಿ ಚಿತ್ರ

ಬಲಾಬಲ

ಉಭಯ ತಂಡಗಳು ಇದುವರೆಗೆ ಮೂರು ಸಲ ಎದುರಾಗಿದ್ದು, ತಲಾ ಒಂದರಲ್ಲಿ ಗೆದ್ದು ಸಮಬಲ ಸಾಧಿಸಿವೆ. ಇನ್ನೊಂದು ಪಂದ್ಯ ಡ್ರಾದಲ್ಲಿ ಕೊನೆಗೊಂಡಿದೆ. 2018 ರಲ್ಲಿ ದೋಹಾದಲ್ಲಿ ಕೊನೆಯ ಬಾರಿ ಎದುರಾಗಿದ್ದಾಗ ಕತಾರ್ 4–3 ಗೋಲುಗಳಿಂದ ಜಯಿಸಿತ್ತು.

ಕ್ರೀಡಾಂಗಣಗಳು

ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯಗಳು ದೋಹಾದ ಎಂಟು ಕ್ರೀಡಾಂಗಣಗಳಲ್ಲಿ ನಡೆಯಲಿದ್ದು, ಅವುಗಳ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಅಲ್ ಬೈತ್

- ಆರಂಭಗೊಂಡ ವರ್ಷ; 2021
- ಆಸನ ಸಾಮರ್ಥ್ಯ; 60,000

ಗಲ್ಫ್ ದೇಶದ ಅಲೆಮಾರಿಗಳು ನಿರ್ಮಿಸುತ್ತಿದ್ದ ಟೆಂಟ್‌ಅನ್ನು ಹೋಲುವ ವಿನ್ಯಾಸವನ್ನು ಹೊಂದಿದೆ. ದೋಹಾದ ಕೇಂದ್ರ ಭಾಗದಿಂದ 40 ಕಿ.ಮೀ. ದೂರದಲ್ಲಿದೆ. ಉದ್ಘಾಟನಾ ಸಮಾರಂಭ ಇಲ್ಲಿ ನಡೆಯಲಿದೆ.



ಲುಸೈಲ್

- ಆರಂಭ: 2022
- ಸಾಮರ್ಥ್ಯ: 80,000

ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೆ ಆತಿಥ್ಯ ವಹಿಸಲಿರುವ ಅತಿದೊಡ್ಡ ಕ್ರೀಡಾಂಗಣ ಇದು. 80 ಸಾವಿರ ಆಸನ ಸಾಮರ್ಥ್ಯವನ್ನು ಹೊಂದಿದೆ. ಡಿ.18ರಂದು ಫೈನಲ್ ಇಲ್ಲಿ ನಡೆಯಲಿದೆ.

ಖಲೀಫಾ ಇಂಟರ್‌ನ್ಯಾಷನಲ್

- ಆರಂಭ: 1976
- ಸಾಮರ್ಥ್ಯ: 40,000

ದೋಹಾದಲ್ಲಿರುವ ಅತ್ಯಂತ ಹಳೆಯ ಕ್ರೀಡಾಂಗಣ ಇದು. 1976 ರಲ್ಲಿ ನಿರ್ಮಾಣಗೊಂಡ ಕ್ರೀಡಾಂಗಣವನ್ನು 2017 ರಲ್ಲಿ ನವೀಕರಿಸಲಾಗಿತ್ತು. ಫಿಫಾ ಕ್ಲಬ್ ವಿಶ್ವಕಪ್ ಮತ್ತು 2011ರ ಏಷ್ಯಾಕಪ್ ಟೂರ್ನಿಗೆ ಆತಿಥ್ಯ ವಹಿಸಿತ್ತು.

ಅಲ್ ತುಮಾಮಾ

- ಆರಂಭ: 2021
- ಸಾಮರ್ಥ್ಯ: 40,000

ಮಧ್ಯಪ್ರಾಚ್ಯದ ದೇಶಗಳಲ್ಲಿ ಪುರುಷರು ಧರಿಸುವ ಸಾಂಪ್ರದಾಯಿಕ ಟೋಪಿ ‘ಗಹ್‌ಫಿಯಾ’ವನ್ನು ಹೋಲುವ ವೃತ್ತಾಕಾರದ ವಿನ್ಯಾಸವನ್ನು ಹೊಂದಿದೆ. ದೋಹಾದ ಕೇಂದ್ರ ಭಾಗದಿಂದ 10 ಕಿ.ಮೀ. ದಕ್ಷಿಣಕ್ಕಿದೆ.

ಅಹಮದ್ ಬಿನ್ ಅಲಿ

- ಆರಂಭ: 2020
- ಸಾಮರ್ಥ್ಯ: 40,000

ದೋಹಾದ ಅಲ್ ರಯ್ಯಾನ್ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಕ್ರೀಡಾಂಗಣ 2020ರ ಡಿಸೆಂಬರ್‌ನಲ್ಲಿ ಉದ್ಘಾಟನೆಗೊಂಡಿತ್ತು. ಅಮೀರ್ ಕಪ್ ಮತ್ತು ಕ್ಲಬ್ ವಿಶ್ವಕಪ್ ಟೂರ್ನಿಯ ಪಂದ್ಯಗಳು ಇಲ್ಲಿ ನಡೆದಿವೆ.

ಸ್ಟೇಡಿಯಂ 974

- ಆರಂಭ: 2021
- ಸಾಮರ್ಥ್ಯ: 40,000

ದೋಹಾ ವಿಮಾನ ನಿಲ್ದಾಣದಿಂದ ಕೇವಲ ಐದು ಕಿ.ಮೀ. ದೂರದಲ್ಲಿದೆ. ವಿಶ್ವಕಪ್ ಆಯೋಜನೆಗೆ ನಿರ್ಮಿಸಿರುವ ತಾತ್ಕಾಲಿಕ ಕ್ರೀಡಾಂಗಣ ಇದು. 974 ಸರಕು ಸಾಗಣೆ ಕಂಟೇನರ್‌ಗಳನ್ನು ಬಳಸಿ ನಿರ್ಮಿಸಲಾಗಿದೆ.



ಎಜುಕೇಷನ್ ಸಿಟಿ

- ಆರಂಭ: 2020
- ಸಾಮರ್ಥ್ಯ: 40,000

2020 ರಲ್ಲಿ ಉದ್ಘಾಟನೆಗೊಂಡ ಈ ಕ್ರೀಡಾಂಗಣದಲ್ಲಿ ಕ್ಲಬ್ ಫುಟ್‌ಬಾಲ್ ವಿಶ್ವಕಪ್ ಒಳಗೊಂಡಂತೆ ಹಲವು ಪಂದ್ಯಗಳು ನಡೆದಿವೆ. ವಿಶ್ವದ ಅತ್ಯಂತ ಪರಿಸರಸ್ನೇಹಿ ಕ್ರೀಡಾಂಗಣಗಳಲ್ಲಿ ಇದೂ ಒಂದು.



ಅಲ್ ಜನೂಬ್

- ಆರಂಭ: 2019
- ಸಾಮರ್ಥ್ಯ: 40,000

ಈ ಕ್ರೀಡಾಂಗಣವನ್ನು ಮೀನುಗಾರಿಕಾ ಬೋಟ್‌ಅನ್ನು ಹೋಲುವ ರೀತಿಯಲ್ಲಿ ನಿರ್ಮಿಸಲಾಗಿದೆ. 2019 ರಲ್ಲಿ ಉದ್ಘಾಟನೆಗೊಂಡಿತ್ತು. ಕತಾರ್ ದೇಸಿ ಫುಟ್‌ಬಾಲ್ ಟೂರ್ನಿ ‘ಅಮೀರ್ ಕಪ್’ ಫೈನಲ್ ಪಂದ್ಯ ಇಲ್ಲಿ ನಡೆದಿತ್ತು.

ಗಾಯದ ಕಾಟ; ಇವರಿಗಿಲ್ಲ ಆಟ!

ಫುಟ್‌ಬಾಲ್ ಮಹಾಮೇಳಕ್ಕೆ ವೇದಿಕೆ ಸಿದ್ಧವಾಗಿದೆ. ತಮ್ಮ ನೆಚ್ಚಿನ ತಂಡಗಳ ಆಟವನ್ನು ಕಣ್ತುಂಬಿಕೊಳ್ಳಲು ವಿಶ್ವದಾದ್ಯಂತ ಅಭಿಮಾನಿಗಳೂ ಸಿದ್ಧರಾಗಿದ್ದಾರೆ. ಆದರೆ, ಈ ಬಾರಿ ಕೆಲವು ಖ್ಯಾತನಾಮ ಆಟಗಾರರು ಟೂರ್ನಿಯಲ್ಲಿ ಆಡುತ್ತಿಲ್ಲ.

ಪಾಲ್ ಪೊಗ್ಬಾ (ಫ್ರಾನ್ಸ್)

29 ವರ್ಷದ ಆಟಗಾರ ಪಾಲ್ ಹಾಲಿ ಚಾಂಪಿಯನ್ ತಂಡದ ಮಿಡ್‌ಫೀಲ್ಡರ್. ಎರಡು ತಿಂಗಳ ಹಿಂದೆ ವಿಶ್ವಕಪ್‌ಗಾಗಿ ತರಬೇತಿ ಪಡೆಯುತ್ತಿದ್ದಾಗಲೇ ಮೊಣಕಾಲಿಗೆ ಗಾಯವಾಗಿ ವಿಶ್ರಾಂತಿ ಪಡೆದರು. ಸೆಪ್ಟೆಂಬರ್‌ನಲ್ಲಿ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಆದರೆ ಅವರಿಗೆ ದೀರ್ಘ ಕಾಲದ ವಿಶ್ರಾಂತಿ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದರು. ಆದ್ದರಿಂದ ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿಯುವುದಿಲ್ಲವೆಂದು ಅವರ ಮ್ಯಾನೇಜರ್ ಅ.31ರಂದು ತಿಳಿಸಿದ್ದರು.

ಎನ್ ಗೊಲೊ ಕಾಂಟೆ (ಫ್ರಾನ್ಸ್)

ಚೆಲ್ಸಿ ಕ್ಲಬ್‌ನ ಪ್ರಮುಖ ಆಟಗಾರ. ಆದರೆ, ತೊಡೆಯ ಸ್ನಾಯುವಿನ ಗಾಯದಿಂದ ಕಳೆದೆರಡು ಲೀಗ್‌ಗಳಲ್ಲಿ ಆಡುವ ಅವಕಾಶ ತಪ್ಪಿಸಿಕೊಂಡರು. ಶಸ್ತ್ರಚಿಕಿತ್ಸೆ ನಂತರ ಅವರು ನಾಲ್ಕು ತಿಂಗಳು ಕಣದಿಂದ ದೂರ ಉಳಿದಿದ್ದರು.

ಟೈಮೊ ವೆರ್ನರ್ (ಜರ್ಮನಿ)

ಹಿಮ್ಮಡಿಯ ಗಾಯದಿಂದಾಗಿ ಫಾರ್ವರ್ಡ್ ಆಟಗಾರ ಟೈಮೊ ವಿಶ್ವಕಪ್‌ನಿಂದ ಹೊರಬಿದ್ದಿದ್ದಾರೆ.

ಡಿಯೊಗೊ ಜೋಟಾ (ಪೋರ್ಚುಗಲ್)

ಲಿವರ್‌ಪೂಲ್ ಫಾರ್ವರ್ಡ್ ಆಟಗಾರ ಮೀನಖಂಡದ ಗಾಯಕ್ಕೆ ತುತ್ತಾಗಿದ್ದಾರೆ. ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಅವರು ಗಾಯಗೊಂಡಿದ್ದರು.

ಸ್ಯಾಡಿಯೊ ಮಾನಿ (ಸೆನೆಗಲ್)



ಬೇರನ್ ಮ್ಯೂನಿಕ್ ತಂಡದಲ್ಲಿ ಆಡುವಾಗ ಗಾಯಗೊಂಡಿದ್ದರು. ಆದರೂ ಅವರನ್ನು ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡಕ್ಕೆ ಆಯ್ಕೆ ಮಾಡಲಾಗಿತ್ತು. ಆದರೆ ಅವರ ಗಾಯಕ್ಕೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದ ಕಾರಣ ತಂಡದಿಂದ ಕೈಬಿಡಲಾಯಿತು.

ಜಿಯೊವನಿ ಲೊ ಸೆಲ್ಸೊ (ಅರ್ಜೆಂಟಿನಾ)

ಮಿಡ್‌ಫೀಲ್ಡರ್ ಆಗಿರುವ ಆಟಗಾರ ಸ್ನಾಯುಸೆಳೆತದಿಂದ ಬಳಲಿದ್ದಾರೆ. ತಂಡದಲ್ಲಿ ಅವರು ಪ್ರಮುಖ ಆಟಗಾರರಾಗಿದ್ದರು. ಅವರ ಸ್ಥಾನವನ್ನು ತುಂಬಬಲ್ಲವರು ಯಾರೂ ಇಲ್ಲ ಎಂದು ಕೋಚ್ ಲಯೊನೆಲ್ ಸ್ಕಲೊನಿ ಹೇಳಿದ್ದಾರೆ.

- **ರೀಸ್ ಜೇಮ್ಸ್ (ಇಂಗ್ಲೆಂಡ್)** 22ವರ್ಷದ ರೈಟ್ ಬ್ಯಾಕ್ ಆಟಗಾರ. ಚಾಂಪಿಯನ್ಸ್ ಲೀಗ್ ಟೂರ್ನಿಯಲ್ಲಿ ಚೆಲ್ಸಿಸ್ ಮತ್ತು ಎ.ಸಿ. ಮಿಲಾನ್ ನಡುವಣ ಪಂದ್ಯದಲ್ಲಿ ಅವರ ಮೊಣಕಾಲಿಗೆ ಪೆಟ್ಟಾಗಿತ್ತು.
- **ಆರ್ಥರ್ ಮೆಲೊ (ಬ್ರೆಜಿಲ್)** ಮಿಡ್‌ಫೀಲ್ಡರ್ ಆಗಿರುವ ಆರ್ಥರ್ ಚಾಂಪಿಯನ್ಸ್ ಲೀಗ್‌ನಲ್ಲಿ ಆಡುವಾಗ ಮಾಂಸಖಂಡದ ಗಾಯದಿಂದ ಬಳಲಿದರು. ಅವರು ಲಿವರ್‌ಪೂಲ್ ತಂಡವನ್ನು ಪ್ರತಿನಿಧಿಸಿದ್ದರು.

ಯುಟಾ ನಕಾಯಾಮ (ಜಪಾನ್)

ಸ್ನಾಯುರಜ್ಜುವಿನ ಗಾಯದಿಂದಾಗಿ ಟೂರ್ನಿಯಿಂದ ಹೊರಗುಳಿಯಲಿದ್ದಾರೆ. ಜಪಾನ್ ತಂಡಕ್ಕೆ ಇವರು ಪ್ರಮುಖ ಡಿಫೆಂಡರ್.

ಟಿಕೆಟ್‌ಗಾಗಿ ಮೊಸಳೆಗಳಿದ್ದ ನದಿಗೆ ಜಿಗಿದಿದ್ದ!

ಬ್ಯೂನಸ್ ಐರಿಸ್ (ರಾಯಿಟರ್ಸ್): ಅಭಿಮಾನಿಯೊಬ್ಬ 2010ರ ವಿಶ್ವಕಪ್ ಟೂರ್ನಿಯ ಪಂದ್ಯಗಳ ಟಿಕೆಟ್‌ಗಾಗಿ ಮೊಸಳೆಗಳೇ ತುಂಬಿದ್ದ ನದಿಗೆ ಹಾರಿ ಈಜಿದ್ದನಂತೆ!

ಉರುಗ್ವೆಯ ಆಟಗಾರನೊಬ್ಬ ಹೃದಯಾಘಾತ ಅನುಭವಿಸಿದ ನಂತರವೂ ಪಂದ್ಯಕ್ಕೆ ಮರಳಿದ್ದ. ಇನ್ನೊಂದು ಪ್ರಕರಣದಲ್ಲಿ ಲಯೊನೆಲ್ ಮೆಸ್ಸಿ ಹಾಗೂ ಕ್ರಿಸ್ಟಿಯಾನೊ ರೊನಾಲ್ಡೊ ಅವರಲ್ಲಿ ಯಾರು ಶ್ರೇಷ್ಠರು ಎಂದು ವಾದ, ಪ್ರತಿವಾದ ಮಾಡಿದ್ದ ದಂಪತಿಯು ವಿಚ್ಛೇದನ ಪಡೆದಿತ್ತು.

ಹೌದು; ಈ ಹಿಂದಿನ ವಿಶ್ವಕಪ್ ಟೂರ್ನಿಗಳಲ್ಲಿ ನಡೆದ ಇಂತಹ ವಿಚಿತ್ರ ಘಟನೆಗಳು ತುಂಬಿರುವ ‘ಇನ್‌ಕ್ರೆಡಿಬಲ್ ವರ್ಲ್ಡ್‌ಕಪ್ ಸ್ಟೋರಿಸ್’ ಪುಸ್ತಕವನ್ನು ಅರ್ಜೆಂಟಿನಾದ ಲುಸಿಯಾನೊ ವೆರ್ನಿಕ್ ಬರೆದಿದ್ದಾರೆ. ಇದು 20 ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದು ಭಾನುವಾರ ನಡೆಯುವ ಉದ್ಘಾಟನೆ ಪಂದ್ಯದ ಸಂದರ್ಭದಲ್ಲಿ ಬಿಡುಗಡೆಯಾಗಲಿದೆ.

‘ವಿಶ್ವದ ಅತ್ಯಂತ ಮಹತ್ವದ ಟೂರ್ನಿ ಆಗಿದೆ. ಇದನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಿದ್ದೇನೆ’ ಎಂದು ಲುಸಿಯಾನೊ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

1994 ರಲ್ಲಿ ಅಲ್ಬೆನಿಯಾದ ವ್ಯಕ್ತಿಯೊಬ್ಬ ಬೆಟ್ಟಿಂಗ್ ಕೇಂದ್ರಕ್ಕೆ ತೆರಳಿ ಬಲ್ಗೆರಿಯಾ ಎದುರಿನ ಪಂದ್ಯದಲ್ಲಿ ಅರ್ಜೆಂಟಿನಾ ಜಯಿಸಲಿದೆ ಎಂದು ತನ್ನ ಪತ್ನಿಯನ್ನೇ ಪಣಕ್ಕಿಟ್ಟ. ಅದರಲ್ಲಿ ಸೋತು ಹೆಂಡತಿಯನ್ನು ಕಳೆದುಕೊಂಡ.

2010ರ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾದ ಬಾನುಲಿ ಕೇಂದ್ರವೊಂದು ಫೈನಲ್ ಪಂದ್ಯದ ಎರಡು ಟಿಕೆಟ್‌ಗಳನ್ನು ಉಚಿತವಾಗಿ ನೀಡುವುದಾಗಿ ಹೇಳಿತು. ಆದರೆ ಬಹಳಷ್ಟು ಮೊಸಳೆಗಳಿದ್ದ ನದಿಯಲ್ಲಿ ಹಾರಿ ಈಜಿ ಮರಳಿಬರಬೇಕೆಂದು ಷರತ್ತು ಒಡ್ಡಿತು. ಅದಕ್ಕಾಗಿ ಅಭಿಮಾನಿಯೊಬ್ಬ ಜಿಗಿದಿದ್ದ.

‘ಇದು ನನ್ನ ಮೂರನೇ ಆವೃತ್ತಿಯ ಕೃತಿಯಾಗಿದೆ. ಕತಾರ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಸುತ್ತಮುತ್ತಲಿನ ವಿಚಿತ್ರ ಘಟನೆಗಳನ್ನು ಪಟ್ಟಿ ಮಾಡಲು ಆರಂಭಿಸಿದ್ದೇನೆ’ ಎಂದು 52 ವರ್ಷದ ಲುಸಿಯಾನೊ ತಿಳಿಸಿದ್ದಾರೆ.

ಭಾರತದಲ್ಲಿ ಇಂಗ್ಲಿಷ್, ಹಿಂದಿ, ತಮಿಳು, ಮಲಯಾಳಂ ಮತ್ತು ಬಂಗಾಳಿ ಭಾಷೆಗಳಲ್ಲಿ, ವಯಾಕಾಮ್18 ಸ್ಪೋರ್ಟ್ಸ್ ವಾಹಿನಿಯಲ್ಲಿ ವಿಶ್ವಕಪ್ ಪಂದ್ಯಗಳ ನೇರಪ್ರಸಾರ ಇರಲಿದೆ.

ಸ್ಪೋರ್ಟ್ಸ್ 18–1 ಚಾನೆಲ್ ಲಭ್ಯ

ಅಪರೇಟರ್ಸ್	ಎಸ್‌ಡಿ	ಎಚ್‌ಡಿ
ಟಾಟಾ ಪ್ಲೇ	488	487
ಏರ್‌ಟೆಲ್ ಡಿಜಿಟಲ್	293	294
ಜಿಯೊ ಟಿವಿ+	262	261
ಸನ್‌ಡೈರೆಕ್ಟ್	505	983
ಡಿಶ್ ಟಿವಿ	644	643
ಡಿ2ಎಚ್	-	666

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹545

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1550)
ಸೋಯಾ (ರಿಫೈನ್ಡ್)	₹1335 (1330)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹950 (937)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹131

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800
ಸಣ್ಣ	₹500-1000

ಅಕ್ಟೋಬರ್‌ನಲ್ಲಿ ತಗ್ಗಿದ ಹರಳು, ಆಭರಣ ರಫ್ತು

ಮುಂಬೈ (ಪಿಟಿಐ): ಹರಳು ಮತ್ತು ಆಭರಣ ರಫ್ತು 2022ರ ಅಕ್ಟೋಬರ್ ತಿಂಗಳಿನಲ್ಲಿ ಶೇ 14.64ರಷ್ಟು ಇಳಿಕೆ ಕಂಡಿದ್ದು ₹ 25,843 ಕೋಟಿಗೆ ತಲುಪಿದೆ.

2021ರ ಅಕ್ಟೋಬರ್‌ನಲ್ಲಿ ರಫ್ತು ಮೌಲ್ಯವು ₹30,274 ಕೋಟಿಯಷ್ಟು ಆಗಿತ್ತು ಎಂದು ಹರಳು ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿಯು (ಜಿಜೆಇಪಿಸಿ) ಪ್ರಕಟಣೆಯಲ್ಲಿ ತಿಳಿಸಿದೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ತಯಾರಿಕಾ ಘಟಕಗಳು ತಾತ್ಕಾಲಿವಾಗಿ ಬಾಗಿಲು ಮುಚ್ಚುವುದು ಹಾಗೂ ಕಾರ್ಮಿಕರು ಲಭ್ಯವಾಗದೇ ಇರುವುದು ಸಾಮಾನ್ಯ ಸಂಗತಿ. ಈ ಕಾರಣಗಳಿಂದಾಗಿ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಿನಲ್ಲಿ ರಫ್ತು ವಹಿವಾಟು ಕಡಿಮೆ ಆಗುತ್ತದೆ ಎಂದು ಮಂಡಳಿಯು ಶನಿವಾರ ಹೇಳಿದೆ.

‘ಪಾಶ್ಚಿಮಾತ್ಯ ದೇಶಗಳಲ್ಲಿ ಹಬ್ಬದ ಋತು ಆರಂಭ ಆಗಲಿರುವುದು ಮತ್ತು ಚೀನಾದಲ್ಲಿ ಹೊಸ ವರ್ಷದ ಆಚರಣೆಯಿಂದಾಗಿ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಹರಳು ಮತ್ತು ಆಭರಣ ರಫ್ತು ವಹಿವಾಟು ಹೆಚ್ಚಾಗಲಿದೆ’ ಎಂದು ಮಂಡಳಿಯ ಅಧ್ಯಕ್ಷ ವಿಪುಲ್ ಶಾ ಅವರು ಹೇಳಿದ್ದಾರೆ.

ವಿದೇಶಿ ವಿನಿಮಯ ಮೀಸಲು ಸಂಗ್ರಹ ₹1.20 ಲಕ್ಷ ಕೋಟಿ ಹೆಚ್ಚಳ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ನವೆಂಬರ್ 11ಕ್ಕೆ ಕೊನೆಗೊಂಡ ವಾರದಲ್ಲಿ ₹1.20 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. 2021ರ ಆಗಸ್ಟ್ ತಿಂಗಳ ನಂತರ ವಾರವೊಂದರಲ್ಲಿ ಆಗಿರುವ ಗರಿಷ್ಠ ಏರಿಕೆ ಇದಾಗಿದೆ. ಈ ಹಿಂದೆ 2021ರ ಆಗಸ್ಟ್ 27ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹವು ₹1.36 ಲಕ್ಷ ಕೋಟಿ ಹೆಚ್ಚಾಗಿತ್ತು.

ಆದರೆ, ಜಾಗತಿಕ ಅಸ್ಥಿರತೆಯ ಮಧ್ಯೆ ರೂಪಾಯಿ ಮೌಲ್ಯ ಕುಸಿಯುವುದನ್ನು ತಡೆಯಲು ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಧ್ಯಪ್ರವೇಶ ಮಾಡುತ್ತಿರುವುದರಿಂದ ಮಾರ್ಚ್ ತಿಂಗಳಿನಿಂದ ಈಚೆಗೆ ಮೀಸಲು ಸಂಗ್ರಹದಲ್ಲಿ ₹9.02 ಲಕ್ಷ ಕೋಟಿ ಕರಗಿದೆ.

ಆರ್‌ಬಿಐ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ನವೆಂಬರ್ 11ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹವು ₹44.66 ಲಕ್ಷ ಕೋಟಿಗೆ ಏರಿಕೆ ಆಗಿದೆ. ನವೆಂಬರ್ 4ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹವು ₹43.45 ಲಕ್ಷ ಕೋಟಿ ಇತ್ತು.

ಒಟ್ಟು ಮೊತ್ತದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹದ ಪಾಲು ದೊಡ್ಡ ಮಟ್ಟದಲ್ಲಿ ಇದೆ. ನವೆಂಬರ್ 11ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹವು ₹96,760 ಕೋಟಿಯಷ್ಟು ಏರಿಕೆ ಆಗಿದ್ದು, ₹39.56 ಲಕ್ಷ ಕೋಟಿಗೆ ತಲುಪಿದೆ. ಇದರಿಂದಾಗಿ ಒಟ್ಟು ಮೀಸಲು ಸಂಗ್ರಹದಲ್ಲಿ ಭಾರಿ ಏರಿಕೆ ಕಂಡುಬಂದಿದೆ.

ಚಿನ್ನದ ಮೀಸಲು ಸಂಗ್ರಹದಲ್ಲಿ ₹21,648 ಕೋಟಿ ಹೆಚ್ಚಾಗಿ ₹3.25 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಅಕ್ಟೋಬರ್ 21ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹವು ₹9.67 ಲಕ್ಷ ಕೋಟಿ ಇಳಿಕೆ ಕಂಡು ₹43.45 ಲಕ್ಷ ಕೋಟಿಗೆ ತಲುಪಿತ್ತು.

ಟ್ರಷರಿ ಮುಖ್ಯಸ್ಥರ ಪ್ರಕಾರ, ಆರ್‌ಬಿಐ ಈಚೆಗಷ್ಟೇ ₹65,600 ಕೋಟಿ ಮೌಲ್ಯದ ವಿದೇಶಿ ಕರೆನ್ಸಿಯನ್ನು ಖರೀದಿ ಮಾಡಿರುವುದೇ ಮೀಸಲು ಸಂಗ್ರಹದಲ್ಲಿ ಭಾರಿ ಏರಿಕೆಗೆ ಪ್ರಮುಖ ಕಾರಣ.

ಉಕ್ರೇನ್ ಸಮರ ಆರಂಭ ಆದಾಗಿನಿಂದ ರೂಪಾಯಿ ಮೌಲ್ಯ ಭಾರಿ ಕುಸಿತ ಕಾಣುವುದನ್ನು ತಡೆಯಲು ಆರ್‌ಬಿಐ ಮೀಸಲು ಸಂಗ್ರಹದಲ್ಲಿ ಒಂದು ಭಾಗವನ್ನು ಮಾರಾಟ ಮಾಡಿದೆ.

ಅಂಕಿ-ಅಂಶಗಳು

₹84,952 ಕೋಟಿ ಸೆಪ್ಟೆಂಬರ್‌ನಲ್ಲಿ ಆರ್‌ಬಿಐ ಮಾರಾಟ ಮಾಡಿರುವ ವಿದೇಶಿ ಕರೆನ್ಸಿಗಳ ಮೌಲ್ಯ

₹55.64 ಲಕ್ಷ ಕೋಟಿ 2021ರ ಸೆಪ್ಟೆಂಬರ್‌ನಲ್ಲಿ ಮೀಸಲು ಸಂಗ್ರಹದ ಸಾರ್ವಕಾಲಿಕ ಗರಿಷ್ಠ ಮಟ್ಟ

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹202-680
ದ್ವಿತಳಿ (ಬಿ.ವಿ)	₹225-865

ಯಾತ್ರಾ ಆನ್‌ಲೈನ್ ಐಪಿಒಗೆ ‘ಸೆಬಿ’ ಒಪ್ಪಿಗೆ

ನವದೆಹಲಿ (ಪಿಟಿಐ): ಯಾತ್ರಾ ಆನ್‌ಲೈನ್ ಲಿಮಿಟೆಡ್‌ನ ಷೇರುಗಳನ್ನು ಸಾರ್ವಜನಿಕ ಖರೀದಿಗೆ ಮುಕ್ತವಾಗಿಸಲು (ಐಪಿಒ) ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಒಪ್ಪಿಗೆ ನೀಡಿದೆ ಎಂದು ಅದರ ಮಾತೃಸಂಸ್ಥೆ ಯಾತ್ರಾ ಆನ್‌ಲೈನ್ ಶನಿವಾರ ತಿಳಿಸಿದೆ.

ಸೆಬಿಗೆ ಸಲ್ಲಿಸಿರುವ ಕರಡು ದಾಖಲೆಪತ್ರದ (ಡಿಆರ್‌ಎಚ್‌ಪಿ) ಪ್ರಕಾರ, ಐಪಿಒ ಮೂಲಕ ಹೊಸದಾಗಿ ₹ 750 ಕೋಟಿ ಮೌಲ್ಯದ ಈಕ್ವಿಟಿ ಷೇರುಗಳು ಹಾಗೂ ಆಫರ್ ಫಾರ್ ಸೇಲ್ (ಒಎಫ್‌ಎಸ್) ಅಡಿ 93.28 ಲಕ್ಷ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲು ಕಂಪನಿ ಉದ್ದೇಶಿಸಿದೆ.

ಸೆಬಿ ಒಪ್ಪಿಗೆ ಪಡೆದ 12 ತಿಂಗಳ ಒಳಗಾಗಿ ಐಪಿಒಗೆ ಬರಲು ಕಂಪನಿಗೆ ಅವಕಾಶ ಇರುತ್ತದೆ. ಐಪಿಒ ಮೂಲಕ ಸಂಗ್ರಹ ಆಗಲಿರುವ ಮೊತ್ತವನ್ನು ಯೋಜನಬದ್ಧ ಹೂಡಿಕೆ, ಸ್ವಾಧೀನ ವಹಿವಾಟು ಮತ್ತು ಕಂಪನಿಯ ಬೆಳವಣಿಗೆಗೆ ಸಂಬಂಧಿಸಿದ ಇನ್ನಿತರ ಕಾರ್ಪೊರೇಟ್ ಉದ್ದೇಶಗಳಿಗೆ ಬಳಸಿಕೊಳ್ಳಲು ಕಂಪನಿ ನಿರ್ಧರಿಸಿದೆ.

ಮುಂಬೈ ಧಾರಣೆ

ಶೇಂಗಾ

19–11-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1560)
ಒಂದು ವಾರದ ಡೆಲಿವರಿ	1535 (1555)
ಸೋಯಾ ಕಚ್ಚಾ	1310 (1310)
ಪಾಮ್ ವಾರದ ಡೆಲಿವರಿ	948 (935)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 52,425 (52,650)

ಬೆಳ್ಳಿ ಕೆ.ಜಿ 61,000 (61,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-55000
ಪುತ್ತೂರು	
ಕೋಕ	11000-26000
ಹೊಸತು	32000-38000
ಸಿದ್ದಾಪುರ	
ಬಿಳಿಗೋಟು	26609-33099
ಚಾಲಿ	35899-38699
ಕೋಕ	26119-30819
ಕೆಂಪುಗೋಟು	26099-33889
ರಾಶಿ	43699-46029
ತಟ್ಟಿಬೆಟ್ಟೆ	43769-43769
ಶಿರಸಿ	
ಬೆಟ್ಟೆ	35609-44699
ಬಿಳಿಗೋಟು	16241-35509
ಚಾಲಿ	27366-40619
ರಾಶಿ	32099-46800
ತುಮಕೂರು	
ರಾಶಿ	45400-46800

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	13000	13500	155.10 ಸೆಂಟ್ಸ್
ಎಸಿ	6720	6500	6900	
ಆರ್‌ಪಿ	8500	8000	8400	ಲಂಡನ್
ಆರ್‌ಸಿ	4530	4000	4000	1811 ಡಾಲರ್ಸ್

ಅಡಗಿದ ಮದ್ದು–ಗುಂಡುಗಳ ಸದ್ದು: ಸ್ಥಳೀಯರ ಮೊಗದಲ್ಲಿ ಮಂದಹಾಸ

ಕೆರ್ಸಾನ್ ನಗರಕ್ಕೆ ಮತ್ತೆ ಜೀವಕಳೆ

ಕೆರ್ಸಾನ್, ಉಕ್ರೇನ್ (ಎಪಿ): ರಷ್ಯಾ ಸೈನಿಕರ ಆಕ್ರಮಣದಿಂದ ನಲುಗಿದ್ದ ಕೆರ್ಸಾನ್ ನಗರಕ್ಕೆ ಮತ್ತೆ ಜೀವಕಳೆ ಬಂದಿದೆ. ಹಗಲು ರಾತ್ರಿ ಮದ್ದು-ಗುಂಡುಗಳ ಸದ್ದಿನಿಂದ ಬೆಚ್ಚಿ ಬೀಳುತ್ತಿದ್ದ ಸ್ಥಳೀಯರು ಈಗ ನಿಟ್ಟುಸಿರು ಬಿಟ್ಟಿದ್ದಾರೆ.

ರಷ್ಯಾವು ಕೆರ್ಸಾನ್‌ನಿಂದ ತನ್ನ ಸೇನಾಪಡೆ ಹಿಂದಕ್ಕೆ ಕರೆಸಿಕೊಂಡ ಬಳಿಕ ಈ ಪ್ರದೇಶಕ್ಕೆ ಮರಳಿರುವ ಸ್ಥಳೀಯರ ಮೊಗದಲ್ಲಿ ಸಂತಸ ಮನೆ ಮಾಡಿದೆ.

‘ಮನಸ್ಸು ಹಗುರಾಗಿದೆ. ಉಸಿರಾಟವೂ ಸರಾಗವಾಗಿ. ಈಗ ಎಲ್ಲವೂ ಭಿನ್ನವಾಗಿದೆ’ ಎಂದು ಒಲೆನಾ ಸ್ಮೋಲಿಯಾನ ಎಂಬುವರು ಖುಷಿ ವ್ಯಕ್ತಪಡಿಸಿದ್ದಾರೆ.

‘ಕೆರ್ಸಾನ್‌ನಲ್ಲಿ ಇದ್ದವರು ರಷ್ಯಾ ಭಾಷೆಯಲ್ಲೇ ಸಂವಹನ ನಡೆಸಬೇಕಿತ್ತು. ಅವರ ಭಾಷೆಯಲ್ಲಿ ಮಾತನಾಡುವುದಕ್ಕೆ ನಾನು ನಾಚಿಕೆಪಡುತ್ತಿದ್ದೆ. ಅವರು ದೈಹಿಕ ಮತ್ತು ಮಾನಸಿಕವಾಗಿ ನಮ್ಮ ಮೇಲೆ ದಬ್ಬಾಳಿಕೆ ನಡೆಸಿದರು. ಅವರ ಕಿರುಕುಳ ತಾಳಲಾರದೆ ಕೆಲವರು ನಗರ ಬಿಟ್ಟು ಓಡಿಹೋದರು’ ಎಂದು ತಿಳಿಸಿದ್ದಾರೆ.

ಕೆರ್ಸಾನ್ ನಿವಾಸಿಗಳು ಅಗತ್ಯ ವಸ್ತುಗಳನ್ನು ಪಡೆದುಕೊಳ್ಳಲು ಶನಿವಾರ ಮುಗಿ ಬಿದ್ದರು –ಎಪಿ/ಪಿಟಿಐ ಚಿತ್ರ

ರಷ್ಯಾ ಆಕ್ರಮಣಕ್ಕೂ ಮುನ್ನ 3 ಲಕ್ಷದಷ್ಟಿದ್ದ ಕೆರ್ಸಾನ್‌ನ ಜನಸಂಖ್ಯೆ ಸದ್ಯ 80 ಸಾವಿರಕ್ಕೆ ತಗ್ಗಿದೆ. ಕೀವ್‌ನಿಂದ ಕೆರ್ಸಾನ್‌ಗೆ ರೈಲು ಸಂಚಾರ ಆರಂಭವಾಗಿದ್ದು, ನಾಗರಿಕರು ನಿಧಾನವಾಗಿ ನಗರಕ್ಕೆ ವಾಪಸ್ಸಾಗುತ್ತಿದ್ದಾರೆ.

‘ರಷ್ಯಾ ಸೈನಿಕರು ನಗರವನ್ನು ಆಕ್ರಮಿಸಿಕೊಂಡ ನಂತರ ನಮ್ಮ ಸ್ಥಿತಿ ಶೋಚನೀಯವಾಗಿತ್ತು. ಜೋರಾಗಿ ಏನನ್ನೂ ಹೇಳುವಂತಿರಲಿಲ್ಲ. ಉಕ್ರೇನ್ ಭಾಷೆಯಲ್ಲಿ ಮಾತನಾಡುವಂತಿರಲಿಲ್ಲ. ರಷ್ಯಾ ಸೈನಿಕರ ನಿಗಾ ಸದಾ ನಮ್ಮ ಮೇಲೆ ಇರುತ್ತಿತ್ತು. ಹೀಗಾಗಿ ಅತ್ತ ಇತ್ತ ತಿರುಗಿ ನೋಡುವುದಕ್ಕೂ ಭಯಪಡುವಂತಾಗಿತ್ತು’ ಎಂದು 57 ವರ್ಷದ ಒಲೆಕ್ಸಾಂಡ್ರಾ ನೆನಾಡಿಸುಕ್ ಎಂಬುವರು 8 ತಿಂಗಳ ಕಾಲ ಅನುಭವಿಸಿದ ಯಾತನೆ ಬಿಚ್ಚಿಟ್ಟಿದ್ದಾರೆ.

‘ನಗರ ಬಿಟ್ಟು ಓಡಿಹೋಗಲು ಮೂರು ಬಾರಿ ಪ್ರಯತ್ನಿಸಿದ್ದೆವು. ಆದರೆ ರಷ್ಯಾ ಸೈನಿಕರು ಇದಕ್ಕೆ ಅವಕಾಶ ನೀಡಲಿಲ್ಲ. ನಗರದಿಂದ ಹೊರ ಹೋಗಲು ಇದ್ದ ಎಲ್ಲಾ ಮಾರ್ಗಗಳನ್ನೂ ಅವರು ಮುಚ್ಚಿದ್ದರು’ ಎಂದು 37 ವರ್ಷದ ತೆತಿಯಾನ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಸ್ಥಾನ: ಫ್ರಾನ್ಸ್ ಬೆಂಬಲ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ, ಜರ್ಮನಿ, ಬ್ರೆಜಿಲ್ ಮತ್ತು ಜಪಾನ್‌ಗೆ ಕಾಯಂ ಸದಸ್ಯ ರಾಷ್ಟ್ರ ಸ್ಥಾನಮಾನ ನೀಡುವುದಕ್ಕೆ ಸಂಬಂಧಿಸಿ ಫ್ರಾನ್ಸ್ ತನ್ನ ಬೆಂಬಲವನ್ನು ಪುನರುಚ್ಚರಿಸಿದೆ.

‘ಈ ವಿಷಯದಲ್ಲಿ ಫ್ರಾನ್ಸ್‌ನ ನಿಲುವು ಅಚಲ. ಮಂಡಳಿಯು ಹೆಚ್ಚು ಪ್ರಾತಿನಿಧಿಕವಾಗಬೇಕು ಹಾಗೂ ಆ ಮೂಲಕ ಮತ್ತಷ್ಟು ಸದೃಢವಾಗಬೇಕು ಎಂದು ಫ್ರಾನ್ಸ್ ಬಯಸುತ್ತದೆ’ ಎಂದು ವಿಶ್ವಸಂಸ್ಥೆಯಲ್ಲಿ ಫ್ರಾನ್ಸ್‌ನ ಉಪ ಕಾಯಂ ಪ್ರತಿನಿಧಿ ನಥಾಲಿ ಬ್ರಾಡ್‌ಹರ್ಸ್ಟ್ ಹೇಳಿದ್ದಾರೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಸರ್ವಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ದಕ್ಷಿಣ ಕೊರಿಯಾಕ್ಕೆ ಅಮೆರಿಕದ ಬಾಂಬರ್ ವಿಮಾನ

ಸೋಲ್ (ರಾಯಿಟರ್ಸ್): ಉತ್ತರ ಕೊರಿಯಾವು ಪೂರ್ವ ಕರಾವಳಿಯೆಡೆಗೆ ಖಂಡಾಂತರ ಕ್ಷಿಪಣಿ ಉಡಾವಣೆ ಮಾಡಿರುವ ಬೆನ್ನಲ್ಲೇ ಅಮೆರಿಕವು ತನ್ನ ಬಿ-1ಬಿ ಬಾಂಬರ್ ವಿಮಾನವನ್ನು ದಕ್ಷಿಣ ಕೊರಿಯಾದ ಪರ್ಯಾಯ ದ್ವೀಪಕ್ಕೆ ಶನಿವಾರ ಮರು ನಿಯೋಜನೆಗೊಳಿಸಿದೆ.

‘ದಕ್ಷಿಣ ಕೊರಿಯಾ ಮತ್ತು ಅಮೆರಿಕದ ವಾಯುಪಡೆಗಳು ಶನಿವಾರ ಆಗಸದಲ್ಲಿ ಜಂಟಿ ಅಭ್ಯಾಸ ನಡೆಸಿವೆ. ಬಿ-1ಬಿ ಬಾಂಬರ್, ಎಫ್-35 ಸ್ಟೀಲ್ತ್ ಫೈಟರ್ ಹಾಗೂ ಉಭಯ ರಾಷ್ಟ್ರಗಳ ವಾಯುಪಡೆಗಳು ಹೊಂದಿರುವ ಅತ್ಯಾಧುನಿಕ ವಿಮಾನಗಳು ಕವಾಯತಿನಲ್ಲಿ ಪಾಲ್ಗೊಂಡಿದ್ದವು’ ಎಂದು ದಕ್ಷಿಣ ಕೊರಿಯಾ ಸೇನೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೇಪಾಳ: ಇಂದು ಮತದಾನ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಭಾನುವಾರ (ನ.20) ಸಂಸತ್ತು ಮತ್ತು ಪ್ರಾಂತೀಯ ವಿಧಾನಸಭೆಗಳಿಗೆ ಮತದಾನ ನಡೆಯಲಿದೆ.

ಭಾನುವಾರ ಸ್ಥಳೀಯ ಕಾಲಮಾನ ಬೆಳಿಗ್ಗೆ 7ಗಂಟೆಯಿಂದ ಸಂಜೆ 5ರ ವರೆಗೆ ಮತದಾನ ಪ್ರಕ್ರಿಯೆ ನಡೆಯಲಿದೆ. ಏಳು ಪ್ರಾಂತ್ಯಗಳಲ್ಲಿ ಸುಮಾರು 1.79 ಕೋಟಿ ಮಂದಿ ಮತದಾನದ ಅರ್ಹತೆ ಪಡೆದಿದ್ದಾರೆ.

ಸಂಸತ್‌ನ ಸದಸ್ಯ ಬಲ 275 ಹಾಗೂ ಪ್ರಾಂತೀಯ ವಿಧಾನಸಭೆಗಳ ಸದಸ್ಯ ಬಲ 550 ಇದೆ.

ಇಸ್ರೇಲ್ ವೈಮಾನಿಕ ದಾಳಿ: ಸಿರಿಯಾದ 4 ಸೈನಿಕರ ಸಾವು

ಬೈರೂತ್ (ಎಪಿ): ಸಿರಿಯಾದ ಕೇಂದ್ರ ಮತ್ತು ಕರಾವಳಿ ಪ್ರದೇಶದ ಮೇಲೆ ಶನಿವಾರ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ನಾಲ್ವರು ಸೈನಿಕರು ಸಾವನ್ನಪ್ಪಿದ್ದು, ಒಬ್ಬರು ಗಾಯಗೊಂಡಿದ್ದಾರೆಂದು ಸಿರಿಯಾದ ಸೇನೆ ತಿಳಿಸಿದೆ.

ಮೆಡಿಟರೇನಿಯನ್ ಸಮುದ್ರದ ಮೂಲಕ ಹಾರಾಟ ನಡೆಸಿದ ಇಸ್ರೇಲ್‌ನ ಯುದ್ಧ ವಿಮಾನಗಳು ಈ ದಾಳಿ ನಡೆಸಿವೆ ಎಂದು ತಿಳಿಸಿದೆ.

ಕೈದಿಗಳ ಕಾದಾಟ: 10 ಮಂದಿ ಸಾವು

ಕ್ವಿಟೊ (ಪಿಟಿಐ): ಈಕ್ವೆಡಾರ್‌ನ ರಾಜಧಾನಿ ಕ್ವಿಟೊ ನಗರದ ಜೈಲಿನಲ್ಲಿ ಶುಕ್ರವಾರ ಕೈದಿಗಳ ನಡುವೆ ಸಂಭವಿಸಿದ ಘರ್ಷಣೆಯಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೂವರು ಕುಖ್ಯಾತ ಅಪರಾಧಿಗಳನ್ನು ಹೆಚ್ಚಿನ ಭದ್ರತಾ ಸೆಲ್‌ಗೆ ಸ್ಥಳಾಂತರಿಸುವ ಸರ್ಕಾರದ ನಿರ್ಧಾರದ ಪರಿಣಾಮವಾಗಿ ಈ ಘರ್ಷಣೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೀಜಿಂಗ್‌ನಲ್ಲಿ ಭಾಗಶಃ ಲಾಕ್‌ಡೌನ್

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಏರಿಕೆಯಾಗಿದ್ದು, ವಾರಾಂತ್ಯದಲ್ಲಿ ಜನರು ಮನೆಗಳಿಂದ ಹೊರಬಾರದಂತೆ ಹಾಗೂ ದೈನಂದಿನ ರೋಗ ಪತ್ತೆ ಪರೀಕ್ಷೆಗೆ ಒಳಗಾಗುವಂತೆ ಬೀಜಿಂಗ್‌ನ ಅಧಿಕಾರಿಗಳು ಸೂಚಿಸಿದ್ದಾರೆ.

ಬೀಜಿಂಗ್‌ನಲ್ಲಿ 500 ಪ್ರಕರಣಗಳು ಸೇರಿದಂತೆ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 25 ಸಾವಿರಕ್ಕೇರಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಜನರು ಮನೆಗಳಿಂದ ಹೊರಬಾರದ ಕಾರಣ ಬೀಜಿಂಗ್ ನಗರದ ಹಲವೆಡೆ ರಸ್ತೆಗಳು ಹಾಗೂ ಮಾರುಕಟ್ಟೆ ಪ್ರದೇಶಗಳು ಶನಿವಾರ ಬಿಕೊ ಅನ್ನುತ್ತಿದ್ದವು ಎಂದು ಮೂಲಗಳು ತಿಳಿಸಿವೆ.

ಚಾಯಾಂಗ್ ಜಿಲ್ಲೆಯ ನಿವಾಸಿಗಳು ಬೇರೆ ಸ್ಥಳಗಳಿಗೆ ತೆರಳಬಾರದು, ತೆರಳುವುದಿದ್ದರೆ 48 ಗಂಟೆಗಳೊಳಗೆ ಮಾಡಿಸಿರುವ ಕೋವಿಡ್ ಪರೀಕ್ಷೆಯ ವರದಿಯನ್ನು ಹಾಜರುಪಡಿಸಬೇಕೆಂದು ಅಲ್ಲಿನ ಅಧಿಕಾರಿಗಳು ಸೂಚಿಸಿದ್ದಾರೆ.

ನೈಸ್ ಡಿಎಚ್ ಕಪ್: ವಿಸೆನ್ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಸೆನ್ ತಂಡವು 'ನೈಸ್ ಡಿಎಚ್ ಕಪ್ ಕಾರ್ಪೊರೇಟ್ ಫೈವ್ ಎ ಸೈಡ್ ಫುಟ್‌ಬಾಲ್ ಟೂರ್ನಿ'ಯಲ್ಲಿ ಭರ್ಜರಿ ಆರಂಭ ಮಾಡಿತು.

ಇಲ್ಲಿಯ ಸರ್ಜಾಪುರ ರಸ್ತೆಯ ಪ್ಲೇ ಅರಿನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ವಿಸೆನ್ 14–1 ಗೋಲುಗಳಿಂದ ಎಚ್‌ಎಲ್ ಕ್ಲೆಮೊವ್ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಆಕಾಶ್ ಮಾಲಿ ಆರು, ಸಿದ್ಧಾರ್ಥ್ ಮಾವಿಲಾ ನಾಲ್ಕು ಗಳಿಸಿ ಮಿಂಚಿದರು. ಶೈಲೇಶ್ ತಿಲಗಾರ ಮತ್ತು ಶುಭಂ ಪವಾರ್ ತಲಾ ಎರಡು ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ತವಂತ್ 7–0ರಿಂದ ಪುರವಂಕರ ಎದುರು, ಬಾಷ್ 5–2ರಿಂದ ಐಕ್ವಿಯಾ ವಿರುದ್ಧ ಜಯ ಸಾಧಿಸಿದವು. ದಿನದ ಮೊದಲ ಪಂದ್ಯದಲ್ಲಿ ಟೈಟನ್ 2–2ರಿಂದ ಎಪ್ಸಿಲಾನ್ ತಂಡದೊಂದಿಗೆ ಡ್ರಾ ಸಾಧಿಸಿತು.

ಏಷ್ಯಾಕಪ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ

ಮಣಿಕಾ ಬಾತ್ರಾ ಐತಿಹಾಸಿಕ ಸಾಧನೆ

ಬ್ಯಾಂಕಾಕ್ (ಪಿಟಿಐ): ಒಲಿಂಪಿಯನ್ ಮಣಿಕಾ ಬಾತ್ರಾ ಅವರು ಐಟಿಟಿಎಫ್–ಎಟಿಟಿಯು ಏಷ್ಯಾಕಪ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪದಕ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಸಾಧನೆಗೆ ಭಾಜನರಾದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ ಅವರು ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕ ಜಯಿಸುವ ಮೂಲಕ ಈ ಶ್ರೇಯ ಪಡೆದರು.

ಶರತ್ ಕಮಲ್ ಮತ್ತು ಜಿ.ಸತ್ಯನ್ ಅವರು ಕ್ರಮವಾಗಿ 2015 ಮತ್ತು 2019ರಲ್ಲಿ ಸಿಂಗಲ್ಸ್ ವಿಭಾಗದಲ್ಲಿ ಆರನೇ ಸ್ಥಾನ ಗಳಿಸಿದ್ದೇ ಭಾರತದ ಆಟಗಾರರ ಇದುವರೆಗಿನ ಶ್ರೇಷ್ಠ ಸಾಧನೆಯಾಗಿತ್ತು.

ಮಣಿಕಾ ಬಾತ್ರಾ– ಪಿಟಿಐ ಚಿತ್ರ

ವಿಶ್ವ ರ‍್ಯಾಂಕಿಂಗ್‌ನಲ್ಲಿ 44ನೇ ಸ್ಥಾನದಲ್ಲಿರುವ ಮಣಿಕಾ, ಪದಕದ ಸುತ್ತಿನಲ್ಲಿ 11-6, 6-11, 11-7, 12-10, 4-11, 11-2ರಿಂದ ಜಪಾನ್ ಆಟಗಾರ್ತಿ, ಆರನೇ ರ‍್ಯಾಂಕಿನ ಹೀನಾ ಹಯಾತಾ ಅವರನ್ನು ಪರಾಭವಗೊಳಿಸಿದರು. ಇದರೊಂದಿಗೆ ₹ 8.15 ಲಕ್ಷ ಬಹುಮಾನವನ್ನು ತಮ್ಮದಾಗಿಸಿಕೊಂಡರು.

'ಅಗ್ರ ಕ್ರಮಾಂಕದ ಆಟಗಾರ್ತಿಯರನ್ನು ಮಣಿಸಿ ಪದಕ ಜಯಿಸಿದ್ದು ದೊಡ್ಡ ಸಾಧನೆ. ಅವರ ವಿರುದ್ಧ ಆಟ ಮತ್ತು ಹೋರಾಟವನ್ನು ಆನಂದಿಸಿದೆ. ಮುಂಬರುವ ಎಲ್ಲ ಟೂರ್ನಿಗಳಲ್ಲೂ ಇದೇ ರೀತಿಯ ಪ್ರಯತ್ನ ನಡೆಸುವೆ' ಎಂದು ಮಣಿಕಾ ಪಂದ್ಯದ ಬಳಿಕ ಭಾವುಕರಾಗಿ ನುಡಿದರು.

ದಿನದ ಆರಂಭದಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಮಣಿಕಾ 8-11, 11-7, 7-11, 6-11, 11-8, 7-11ರಿಂದ ಎರಡನೇ ಶ್ರೇಯಾಂಕದ ಜಪಾನ್ ಆಟಗಾರ್ತಿ ಮಿಮಾ ಇಟೊ ವಿರುದ್ಧ ಸೋತಿದ್ದರು.

ಕಂಚಿನ ಪದಕದ ಸುತ್ತಿನ ಹಣಾಹಣಿಯಲ್ಲಿ ತಮ್ಮ ಅನುಭವವನ್ನು ಪಣಕ್ಕಿಟ್ಟು ಆಡಿದ ಮಣಿಕಾ, ಫೋರ್‌ಹ್ಯಾಂಡ್ ಹೊಡೆತಗಳಲ್ಲಿ ಪಾರಮ್ಯ ಮೆರೆದರು. ಜಪಾನ್ ಆಟಗಾರ್ತಿಯ ಕೆಲವು ಸ್ವಯಂಕೃತ ತಪ್ಪುಗಳು ಮಣಿಕಾ ಗೆಲುವಿಗೆ ಕೊಡುಗೆ ನೀಡಿದವು.

ಕಂಚು ಗೆಲ್ಲುವ ಹಾದಿಯಲ್ಲಿ ಮಣಿಕಾ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ, ಚೀನಾದ ಚೆನ್ ಷಿಂಗ್‌ಟಾಂಗ್, 23ನೇ ರ‍್ಯಾಂಕಿನ ಚೆನ್ ಜು ಯು (ಚೀನಾ ತೈಪೆ) ಅವರನ್ನು ಪರಾಭವಗೊಳಿಸಿದ್ದರು.

FIFA ವರ್ಲ್ಡ್ ಕಪ್ 2022 ಸುಲಭಗೊಳಿಸುತ್ತದೆ...

ಪ್ರೊ ಕಬಡ್ಡಿ: ಅರ್ಜುನ್ ದೇಸ್ವಾಲ್ ಮಿಂಚು

ಹೈದರಾಬಾದ್ (ಪಿಟಿಐ): ಅರ್ಜುನ್ ದೇಸ್ವಾಲ್ ಗಳಿಸಿದ ಅಮೋಘ 19 ಪಾಯಿಂಟ್ಸ್ ಬಲದಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ಇಲ್ಲಿನ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಜೈಪುರ 42–29ರಿಂದ ಯುಪಿ ಯೋಧಾಸ್ ತಂಡವನ್ನು ಸೋಲಿಸಿತು.

ಪಂದ್ಯದ ಮೊದಲಾರ್ಧದ ವೇಳೆಗೆ ಜೈಪುರ 22–10ರಿಂದ ಮುಂದಿತ್ತು. ಅದೇ ಲಯದೊಂದಿಗೆ ಮುನ್ನುಗ್ಗಿ ಜಯ ಒಲಿಸಿಕೊಂಡಿತು. ಯೋಧಾ ಪರ ಪ್ರದೀಪ್ ನರ್ವಾಲ್ ಗಳಿಸಿದ 14 ಪಾಯಿಂಟ್ಸ್ ವ್ಯರ್ಥವಾದವು.

ಎರಡನೇ ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವು 32-26ರಿಂದ ಯು ಮುಂಬಾ ವಿರುದ್ಧ ಗೆದ್ದಿತು.

ದಿನದ ಕೊನೆಯ ಪಂದ್ಯದಲ್ಲಿ ದಬಾಂಗ್ ಡೆಲ್ಲಿ ತಂಡ 30–27 ರಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಬೆಂಗಳೂರು	15	10	4	1	56
ಪುಣೇರಿ	15	9	4	2	54
ಜೈಪುರ	15	10	5	0	53
ಯುಪಿ	15	7	6	2	45
ಮುಂಬಾ	15	8	7	0	44
ಬೆಂಗಾಲ್	14	7	5	2	42

ಇಂದಿನ ಪಂದ್ಯಗಳು
ಹರಿಯಾಣ ಸ್ಟೀಲರ್ಸ್– ದಬಂಗ್
ಬೆಂಗಳೂರು ಬುಲ್ಸ್– ಪುಣೇರಿ ಪಲ್ಟನ್

ಸಂಕ್ಷಿಪ್ತ ಸುದ್ದಿ

ಚೆಸ್: ಅರ್ಜುನ್‌ಗೆ ಮಣಿದ ಅನೀಶ್ ಗಿರಿ

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು ಇಲ್ಲಿ ನಡೆಯುತ್ತಿರುವ ಮೆಲ್ಟ್‌ವಾಟರ್ ಚಾಂಪಿಯನ್ಸ್ ಟೂರ್ ಫೈನಲ್ಸ್ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಅವರನ್ನು ಪರಾಭವಗೊಳಿಸಿದರು.

ಶನಿವಾರ ನಡೆದ ಪಂದ್ಯದಲ್ಲಿ ಅರ್ಜುನ್ 2.5–1.5ರಿಂದ ನೆದರ್ಲೆಂಡ್ಸ್‌ನ ಗ್ರ್ಯಾಂಡ್‌ಮಾಸ್ಟರ್ ವಿರುದ್ಧ ಗೆದ್ದರು. ಭಾರತದ ಇನ್ನೋರ್ವ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಗ್ನಾನಂದ ಅವರು ಜಿದ್ದಾಜಿದ್ದಿನ ಸೆಣಸಾಟದಲ್ಲಿ ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ಡುಡಾ 3.5–3.5ರಿಂದ ಡ್ರಾ ಸಾಧಿಸಿದರು.

ಅರ್ಜುನ್ ಅವರಿಗೆ ಇದು ಟೂರ್ನಿಯಲ್ಲಿ ಎರಡನೇ ಜಯವಾಗಿದೆ. ಸದ್ಯ ಅವರು ಮತ್ತು 17 ವರ್ಷದ ಪ್ರಗ್ನಾನಂದ ತಲಾ ಆರು ಪಾಯಿಂಟ್ಸ್ ಗಳಿಸಿದ್ದಾರೆ.

ಕರ್ನಾಟಕಕ್ಕೆ ಮೊದಲ ದಿನವೇ ಇನಿಂಗ್ಸ್ ಮುನ್ನಡೆ

ಹುಬ್ಬಳ್ಳಿ: ವಿಶಾಲ್ ಒನತ್ (50 ರನ್, 7x4, 2x6) ಹಾಗೂ ವಿಜಯರಾಜ (53 ರನ್, 10x4) ಅವರ ಸುಂದರ ಅರ್ಧ ಶತಕಗಳು ಮತ್ತು ಮೊಹಸಿನ್ ಖಾನ್ (14ಕ್ಕೆ4) ಹಾಗೂ ಹಾರ್ದಿಕ ರಾಜ್(44ಕ್ಕೆ3) ಮಾರಕ ಸ್ಪಿನ್ ದಾಳಿಯ ಬಲದಿಂದ ಕರ್ನಾಟಕ ತಂಡವು ಮೊದಲ ದಿನವೇ ಇನಿಂಗ್ಸ್ ಮುನ್ನಡೆ ಪಡೆದಿದೆ.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶನಿವಾರ ಆರಂಭಗೊಂಡ ಕೂಚ್ ಬಿಹಾರ್ ಟ್ರೋಫಿಯ 19 ವರ್ಷದೊಳಗಿನವರ ವಿಭಾಗದ ಪಂದ್ಯದಲ್ಲಿ ಟಾಸ್ ಗೆದ್ದ ಹಿಮಾಚಲ ಪ್ರದೇಶ ಬ್ಯಾಟಿಂಗ್ ಆಯ್ದುಕೊಂಡಿತು. ಆತಿಥೇಯ ತಂಡದ ಬೌಲಿಂಗ್ ದಾಳಿಗೆ ತತ್ತರಿಸಿ, ಮೊದಲ ಇನಿಂಗ್ಸ್‌ನಲ್ಲಿ 59.4 ಓವರ್‌ಗಳಲ್ಲಿ 106 ರನ್‌ಗಳಿಗೆ ಆಲೌಟ್ ಆಯಿತು.

ಕರ್ನಾಟಕ ದಿನದಾಟದ ಅಂತ್ಯಕ್ಕೆ ಮೊದಲ ಇನಿಂಗ್ಸ್‌ನಲ್ಲಿ 29 ಓವರ್‌ಗಳಲ್ಲಿ 3 ವಿಕೆಟ್‌ಗೆ 132 ರನ್ ಕಲೆಹಾಕಿದೆ. ಪ್ರಖರ್ ಚತುರ್ವೇದಿ (11 ರನ್) ಹಾಗೂ ಧ್ರುವ ಪ್ರಭಾಕರ (7) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಹಿಮಾಚಲ ಪ್ರದೇಶ: ಮೊದಲ ಇನಿಂಗ್ಸ್ 59.4 ಓವರ್‌ಗಳಲ್ಲಿ 106 ರನ್(ಇನ್ನೇಶ್ ಮಹಾಜನ್ 22, ಅನಿಮೇಶ್ ಠಾಕೂರ್ 15, ಗಂಗಾಸಿಂಗ್ 16, ಮೊಹಸಿನ್ ಖಾನ್14ಕ್ಕೆ4, ಹಾರ್ದಿಕ್‌ರಾಜ್ 44ಕ್ಕೆ3). ಕರ್ನಾಟಕ: ಮೊದಲ ಇನಿಂಗ್ಸ್ 29 ಓವರ್‌ಗಳಲ್ಲಿ 3 ವಿಕೆಟ್‌ಗೆ 132 ರನ್(ವಿಶಾಲ್ ಒನತ್ 50, ವಿಜಯರಾಜ 53, ಪಿಯೂಶ್ ಠಾಕೂರ್ 35ಕ್ಕೆ2, ಪ್ರವಲ್ ಸಿಂಗ್ 36ಕ್ಕೆ1).

ಸ್ಮಿತ್, ಸ್ಟಾರ್ಕ್ ಮಿಂಚು: ಆಸ್ಟ್ರೇಲಿಯಾಕ್ಕೆ ಸರಣಿ

ಸಿಡ್ನಿ (ಎಪಿ): ಸ್ಟೀವನ್ ಸ್ಮಿತ್ (94) ಸುಂದರ ಬ್ಯಾಟಿಂಗ್ ಹಾಗೂ ವೇಗಿ ಮಿಚೆಲ್ ಸ್ಟಾರ್ಕ್ (47ಕ್ಕೆ 4) ಮತ್ತು ಸ್ಪಿನ್ನರ್ ಆ್ಯಡಂ ಜಂಪಾ (45ಕ್ಕೆ 4) ಅವರ ಬೌಲಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಭರ್ಜರಿ ಗೆಲುವು ಸಾಧಿಸಿತು.

ಇಂಗ್ಲೆಂಡ್ ತಂಡದ ವಿರುದ್ಧ ಇಲ್ಲಿ ನಡೆದ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 72 ರನ್‌ಗಳಿಂದ ಗೆದ್ದ ಆಸ್ಟ್ರೇಲಿಯಾ, ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 280 ರನ್ ಗಳಿಸಿತು. ಬಳಿಕ ಇಂಗ್ಲೆಂಡ್ ತಂಡವನ್ನು 38.5 ಓವರ್‌ಗಳಲ್ಲಿ 208 ರನ್‌ಗಳಿಗೆ ನಿಯಂತ್ರಿಸಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 280 (ಟ್ರಾವಿಸ್ ಹೆಡ್ 19, ಸ್ಟೀವನ್ ಸ್ಮಿತ್ 94, ಮಾರ್ನಸ್ ಲಾಬುಶೇನ್ 58, ಮಿಚೆಲ್ ಮಾರ್ಷ್ 50; ಕ್ರಿಸ್ ವೋಕ್ಸ್ 42ಕ್ಕೆ 2, ಡೇವಿಡ್ ವಿಲಿ 44ಕ್ಕೆ 2, ಮೋಯಿನ್ ಅಲಿ 24ಕ್ಕೆ 1, ಆದಿಲ್ ರಶೀದ್ 57ಕ್ಕೆ 3). ಇಂಗ್ಲೆಂಡ್: 38.5 ಓವರ್‌ಗಳಲ್ಲಿ 208 (ಫಿಲ್ ಸಾಲ್ಟ್ 23, ಜೇಮ್ಸ್ ವಿನ್ಸ್ 60, ಸ್ಯಾಮ್ ಬಿಲಿಂಗ್ಸ್ 71, ಲಿಯಾಮ್ ಡಾಸನ್ 20; ಮಿಚೆಲ್ ಸ್ಟಾರ್ಕ್ 47ಕ್ಕೆ 4, ಜೋಷ್ ಹ್ಯಾಜಲ್‌ವುಡ್ 33ಕ್ಕೆ 2, ಆ್ಯಡಂ ಜಂಪಾ 45ಕ್ಕೆ 4). ಫಲಿತಾಂಶ: ಆಸ್ಟ್ರೇಲಿಯಾಗೆ 72 ರನ್‌ಗಳ ಜಯ.

ರಾಜ್ಯಮಟ್ಟದ ಹಾಕಿ: ಕೊಡಗು ಬಾಲಕಿಯರಿಗೆ ಪ್ರಶಸ್ತಿ

ಬೆಂಗಳೂರು ದಕ್ಷಿಣ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಬೆಂಗಳೂರು ದಕ್ಷಿಣ ಬಾಲಕರ ತಂಡ ಹಾಗೂ ಕೊಡಗು ಬಾಲಕಿಯರ ತಂಡವು ನಗರದಲ್ಲಿ ಶನಿವಾರ ಕೊನೆಗೊಂಡ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆದವು.

ಬಾಲಕರ ಫೈನಲ್‌ನಲ್ಲಿ ಬೆಂಗಳೂರು ದಕ್ಷಿಣ ತಂಡ 6–0 ಗೋಲುಗಳಿಂದ ಕೊಡಗು ತಂಡವನ್ನು ಮಣಿಸಿದರೆ, ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಕೊಡಗು 2–1 ರಲ್ಲಿ ಮೈಸೂರು ತಂಡವನ್ನು ಸೋಲಿಸಿತು.

ನಗರದ ನೂತನ ವಿದ್ಯಾಲಯದ ಕ್ರೀಡಾಂಗಣದಲ್ಲಿ ನಡೆದ ಬಾಲಕರ ಪಂದ್ಯದಲ್ಲಿ ಬೆಂಗಳೂರು ದಕ್ಷಿಣ ತಂಡದ ಆಟಗಾರರು ಆರಂಭದಿಂದ ಕೊನೆಯವರೆಗೂ ಮೇಲುಗೈ ಸಾಧಿಸಿದರು.

ಧನುಷ್ ಕಾವೇರಿಯಪ್ಪ ಎರಡು ಗೋಲುಗಳನ್ನು ಗಳಿಸಿದರೆ, ಆರ್ಯನ್ ಉತ್ತಪ್ಪ, ಧ್ರುವ, ಕಿರಣ್ ರೆಡ್ಡಿ ಮತ್ತು ನಕುಲ್ ಮಲ್ನಾಡ್ ತಲಾ ಒಂದು ಗೋಲು ತಂದಿತ್ತರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ರಕ್ಷಿತಾ ಮತ್ತು ಸೌಮ್ಯಾ ಅವರು ಗೋಲು ಗಳಿಸಿ ಕೊಡಗು ತಂಡದ ಗೆಲುವಿಗೆ ಕಾರಣರಾದರು. ಮೈಸೂರು ತಂಡದ ಏಕೈಕ ಗೋಲನ್ನು ಮಾನಸಾ ಗಳಿಸಿದರು.

ಫೈನಲ್ ಪಂದ್ಯದಲ್ಲಿ ಕೊಡಗು ಹಾಗೂ ಬೆಂಗಳೂರು ದಕ್ಷಿಣ ತಂಡದ ಆಟಗಾರರ ನಡುವಿನ ಪೈಪೋಟಿ ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಶುಭಾರಂಭದ ಮೇಲೆ ಹಾರ್ದಿಕ್ ಬಳಗದ ಚಿತ್ತ

ಮೌಂಟ್ ಮಾಂಗನೆ (ಪಿಟಿಐ): ಹಾರ್ದಿಕ್ ಪಾಂಡ್ಯ ನಾಯಕತ್ವದ ಭಾರತ ತಂಡವು ಭಾನುವಾರ ಇಲ್ಲಿ ನಡೆಯಲಿರುವ ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಎರಡು ದಿನಗಳ ಹಿಂದೆ ವೆಲ್ಲಿಂಗ್ಟನ್‌ನಲ್ಲಿ ನಡೆಯಬೇಕಿದ್ದ ಮೊದಲ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಆದ್ದರಿಂದ ಇನ್ನುಳಿದ ಎರಡು ಪಂದ್ಯಗಳಲ್ಲಿ ಸರಣಿ ಜಯ ಸಾಧಿಸುವ ಸವಾಲು ಉಭಯ ತಂಡಗಳಿಗೆ ಇದೆ. ಭಾನುವಾರದ ಪಂದ್ಯದಲ್ಲಿ ಗೆದ್ದವರಿಗೆ ಸರಣಿ ಕಿರೀಟ ಒಲಿಸಿಕೊಳ್ಳುವ ಅವಕಾಶ ಹೆಚ್ಚು. ಆದ್ದರಿಂದ ಈ ಪಂದ್ಯ ಮಹತ್ವದ್ದಾಗಲಿದೆ.

ಭಾರತ ತಂಡವು ತನ್ನ ಬೌಲಿಂಗ್ ವಿಭಾಗದಲ್ಲಿ ಕೆಲವು ಪ್ರಯೋಗಗಳಿಗೆ ಮುಂದಾಗುವ ಸಾಧ್ಯತೆ ಇದೆ. ಅನುಭವಿ ಬೌಲರ್ ಭುವನೇಶ್ವರ್ ಕುಮಾರ್ ಅವರು ಕಳೆದ ಕೆಲವು ದಿನಗಳಿಂದ ಸತತ ವೈಫಲ್ಯ ಅನುಭವಿಸುತ್ತಿದ್ದಾರೆ. ಇಲ್ಲಿ ಅವರಿಗೆ ತಮ್ಮ ಲಯ ಕಂಡುಕೊಳ್ಳಲು ಮತ್ತೊಂದು ಅವಕಾಶ ಸಿಗುವುದೇ ಕಾದು ನೋಡಬೇಕು.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಸೇರಿದಂತೆ ಕೆಲವು ಅನುಭವಿ ಆಟಗಾರರು ವಿಶ್ರಾಂತಿ ಪಡೆದಿರುವುದರಿಂದ ಯುವ ಆಟಗಾರರಿಗೆ ಮಿಂಚಲು ಇದು ಸದವಕಾಶವಾಗಿದೆ. ಆರಂಭಿಕ ಬ್ಯಾಟಿಂಗ್ ಜೋಡಿಯನ್ನು ಸಿದ್ಧಗೊಳಿಸುವ ಪ್ರಯೋಗಕ್ಕೂ ಈ ಸರಣಿ ವೇದಿಕೆಯಾಗಲಿದೆ.

ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಸೆಮಿಫೈನಲ್ ಹಂತದಲ್ಲಿ ಸೋತಿದ್ದವು. ಚುಟುಕು ಕ್ರಿಕೆಟ್ ವಿಭಾಗದಲ್ಲಿ ಹೊಸದಾಗಿ ತಂಡವನ್ನು ಕಟ್ಟುವತ್ತ ಎರಡೂ ದೇಶಗಳು ಈ ಸರಣಿಯನ್ನು ವೇದಿಕೆಯಾಗಿ ಮಾಡಿಕೊಂಡಿವೆ.

ಹಾರ್ದಿಕ್ ಪಾಂಡ್ಯ

ಪಂದ್ಯ ಆರಂಭ: ಮಧ್ಯಾಹ್ನ 12ರಿಂದ
ನೇರಪ್ರಸಾರ: ಅಮೆಜಾನ್ ಪ್ರೈಮ್

ಬಾಕ್ಸಿಂಗ್: ಕ್ವಾರ್ಟರ್‌ಗೆ ರವೀನಾ

ನವದೆಹಲಿ (ಪಿಟಿಐ): ಹಾಲಿ ಏಷ್ಯಾ ಚಾಂಪಿಯನ್, ಭಾರತದ ರವೀನಾ ಅವರು ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 63 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ರವೀನಾ, ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಹಂಗರಿಯ ವಾರ್ಗಾ ಫ್ರಾನ್ಸಿಸ್ಕಾ ರೋಜಿ ಅವರನ್ನು ಆರ್‌ಎಸ್‌ಸಿ (ರೆಫರಿಯಿಂದ ಪಂದ್ಯ ಸ್ಥಗಿತ) ಆಧಾರದಲ್ಲಿ ಸೋಲಿಸಿದರು.

ಮಹಿಳೆಯರ 60 ಕೆಜಿ ವಿಭಾಗದಲ್ಲಿ ಕುಂಜರಾಣಿ ದೇವಿ ಥೋಂಗಮ್ ಮತ್ತು ಪುರುಷರ 86 ಕೆಜಿ ವಿಭಾಗದಲ್ಲಿ ಮೋಹಿತ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. 71 ಕೆಜಿ ವಿಭಾಗದಲ್ಲಿ ಸಾಹಿಲ್ ಚೌಹಾನ್ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ನಿಕಿನ್ ಶತಕ ವ್ಯರ್ಥ; ಸ್ವರೂಪಂ ಅಬ್ಬರದ ಬ್ಯಾಟಿಂಗ್

ಕರ್ನಾಟಕ ಜಯದ ಓಟಕ್ಕೆ ಅಸ್ಸಾಂ ತಡೆ

ಕೋಲ್ಕತ್ತ: ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಬಿ ಗುಂಪಿನಲ್ಲಿ ಸತತ ನಾಲ್ಕು ಪಂದ್ಯಗಳಲ್ಲಿ ಜಯಿಸಿದ್ದ ಕರ್ನಾಟಕದ ಓಟಕ್ಕೆ ಶನಿವಾರ ಅಸ್ಸಾಂ ತಡೆಯೊಡ್ಡಿತು.

22 ಯಾರ್ಡ್ಸ್ ಸಾಲ್ಟ್ ಲೇಕ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕದ ನಿಕಿನ್ ಜೋಸ್ (100; 106ಎ) ಗಳಿಸಿದ ಚೆಂದದ ಶತಕ ವ್ಯರ್ಥವಾಯಿತು. ಕರ್ನಾಟಕ ತಂಡವು 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 296 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಅಸ್ಸಾಂ ತಂಡದ ಸ್ವರೂಪಂ ಪುರಕಾಯಸ್ಥ (ಔಟಾಗದೆ 112) ಅವರ ಅಮೋಘ ಶತಕ ಬಲದಿಂದ 48.2 ಓವರ್‌ಗಳಲ್ಲಿ 4 ವಿಕೆಟ್‌ಕಳೆದುಕೊಂಡು ಗುರಿ ಮುಟ್ಟಿತು.

ಕರ್ನಾಟಕದ ಅನುಭವಿ ಬೌಲರ್ ರೋನಿತ್ ಮೋರೆ, ವಾಸುಕಿ ಕೌಶಿಕ್ ಮತ್ತು ಗೌತಮ್ ವಿಕೆಟ್ ಕಬಳಿಸುವಲ್ಲಿ ವಿಫಲರಾದರು. ಮೈಸೂರಿನ ನಿಕಿನ್ ಜೋಸ್ ಅವರಿಗೆ ಇದು ಮೊದಲ ಟೂರ್ನಿಯಾಗಿದೆ. ಕಳೆದ ಪಂದ್ಯದಲ್ಲಿ ಅಲ್ಪ ಅಂತರದಲ್ಲಿ ಶತಕ ತಪ್ಪಿಸಿಕೊಂಡಿದ್ದರು. ಆದರೆ ಇಲ್ಲಿ ಒಂಬತ್ತು ಬೌಂಡರಿ ಹಾಗೂ ಒಂದು ಸಿಕ್ಸರ್ ಇದ್ದ ಶತಕ ಗಳಿಸಿದರು.

ನಿಕಿನ್ ಜೋಸ್

ನಾಯಕ ಮಯಂಕ್ ಅಗರವಾಲ್ ಹಾಗೂ ಮನೀಷ್ ಪಾಂಡೆ ಅರ್ಧಶತಕಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 296 (ಮಯಂಕ್ ಅಗರವಾಲ್ 64, ನಿಕಿನ್ ಜೋಸ್ 100, ಮನೀಷ್ ಪಾಂಡೆ ಔಟಾಗದೆ 58, ಮನೋಜ್ ಬಾಂಡಗೆ ಔಟಾಗದೆ 35, ರಿಯಾನ್ ಪರಾಗ್ 76ಕ್ಕೆ2) ಅಸ್ಸಾಂ: 48.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 297 (ರಾಹುಲ್ ಹಜಾರಿಕಾ 50, ಸ್ವರೂಪಂ ಪುರಕಾಯಸ್ಥ ಔಟಾಗದೆ 112, ಶಿಬಶಂಕರ್ ರಾಯ್ ಔಟಾಗದೆ 66, ಮುರಳೀಧರ್ ವೆಂಕಟೇಶ್ 46ಕ್ಕೆ2) ಫಲಿತಾಂಶ: ಅಸ್ಸಾಂ ತಂಡಕ್ಕೆ 6 ವಿಕೆಟ್‌ಗಳ ಜಯ.

ಜಿಮ್ನಾಸ್ಟಿಕ್ಸ್: ಬೆಂಗಳೂರು ದಕ್ಷಿಣ ಪಾರಮ್ಯ

ತುಮಕೂರು: ಬೆಂಗಳೂರು ದಕ್ಷಿಣ ಜಿಲ್ಲೆಯ ಕ್ರೀಡಾಪಟುಗಳು, ನಗರದ ಮಹಾತ್ಮ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಎರಡು ದಿನಗಳ ರಾಜ್ಯ ಮಟ್ಟದ ಜಿಮ್ನಾಸ್ಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಪಾರಮ್ಯ ಮೆರೆದರು.

ಶನಿವಾರ ಕೊನೆಗೊಂಡ ಕೂಟದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಮ್ನಾಸ್ಟ್‌ಗಳು ಎಂಟು ವಿಭಾಗದಲ್ಲಿ ಪ್ರಥಮ, ಐದು ದ್ವಿತೀಯ ಮತ್ತು ಒಂದರಲ್ಲಿ ತೃತೀಯ ಬಹುಮಾನ ಪಡೆದರು.